ಭಾನುವಾರ, ಮಾರ್ಚ್ 14, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂದಹಾಸ

ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ದೇಶೀಯ ಕಾರ್ಮಿಕರ ಹಕ್ಕುಗಳ ಒಕ್ಕೂಟವು ಶನಿವಾರ ಬೆಂಗಳೂರಿನಲ್ಲಿ ಆಯೋಜಿಸಿದ್ದ ಸಾರ್ವಜನಿಕ ಸಭೆಯಲ್ಲಿ ಮಹಿಳೆಯೊಬ್ಬರು ನಗೆ ಬೀರಿದ್ದು ಹೀಗೆ



ದೊಡ್ಡಕಲ್ಲಸಂದ್ರ ಕೆರೆ ಅಭಿವೃದ್ಧಿ ಕಾಮಗಾರಿ– ನ್ಯಾಯಮೂರ್ತಿ ಎನ್‌.ಕೆ. ಪಾಟೀಲ ವರದಿ ಶಿಫಾರಸು ಕಡೆಗಣನೆ

ಜೀವ ವೈವಿಧ್ಯ ರಕ್ಷಣೆಗೆ ಪೂರಕವಾಗಿಲ್ಲ ಕಾಮಗಾರಿ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ದೊಡ್ಡಕಲ್ಲಸಂದ್ರ ಕೆರೆಯನ್ನು ಬಿಬಿಎಂಪಿ ಪುನರುಜ್ಜೀವನಗೊಳಿಸುತ್ತಿದ್ದು, ಈ ಕಾಮಗಾರಿಯು ನ್ಯಾಯಮೂರ್ತಿ ಎನ್.ಕೆ. ಪಾಟೀಲ ನೇತೃತ್ವದ ತಜ್ಞರ ಸಮಿತಿಯ ವರದಿಯ ಶಿಫಾರಸುಗಳಿಗೆ ಅನುಗುಣವಾಗಿಲ್ಲ. ಕೆರೆ ಪುನರುಜ್ಜೀವನದ ಸಂದರ್ಭದಲ್ಲಿ ಜೀವ ವೈವಿಧ್ಯ ಸಂರಕ್ಷಣೆಗೂ ಮಹತ್ವ ನೀಡುವ ಸಲುವಾಗಿ ಸಮಿತಿಯು ಕೆಲವೊಂದು ಮಾರ್ಗಸೂಚಿಗಳನ್ನು ನೀಡಿತ್ತು. ಅವುಗಳನ್ನೆಲ್ಲ ಕಾಮಗಾರಿ ಸಂದರ್ಭದಲ್ಲಿ ಕಡೆಗಣಿಸಲಾಗಿದೆ.

ಒಂದು ಕಾಲದಲ್ಲಿ ಸಮೃದ್ಧ ಜೀವ ವೈವಿಧ್ಯ ತಾಣವಾಗಿದ್ದ ಈ ಕೆರೆ ತ್ಯಾಜ್ಯ ನೀರು ಸೇರಿ ಕಲುಷಿತಗೊಂಡಿತ್ತು. ಸ್ಥಳೀಯ ನಿವಾಸಿಗಳು ಸೇರಿ ದೊಡ್ಡಕಲ್ಲಸಂದ್ರ ಕೆರೆ ಸಂರಕ್ಷಣಾ ಸಮಿತಿಯನ್ನು ರಚಿಸಿಕೊಂಡು ಇದರ ಪುನರುಜ್ಜೀವನಕ್ಕಾಗಿ ಹೋರಾಡಿದ್ದರು. ಇದರ ಫಲವಾಗಿ ಬಿಬಿಎಂಪಿ ಈ ಕೆರೆಯ ಪುನರುಜ್ಜೀವನ ಯೋಜನೆ ರೂಪಿಸಿತ್ತು.

ಹೈಕೋರ್ಟ್ ನೇಮಿಸಿದ್ದ ನ್ಯಾ.ಎನ್.ಕೆ.ಪಾಟೀಲ ನೇತೃತ್ವದ ಸಮಿತಿ 2011ರಲ್ಲಿ ಸಲ್ಲಿಸಿದ್ದ ವರದಿಯಲ್ಲಿ ನಗರದ ಕೆರೆಗಳ ಸಂರಕ್ಷಣೆಗೆ ಅನೇಕ ಶಿಫಾರಸುಗಳನ್ನು ಮಾಡಿದೆ. ಪುನರುಜ್ಜೀವನದ ಸಂದರ್ಭದಲ್ಲಿ ಕೆರೆಯು ಬಟ್ಟಲ ಆಕಾರದಲ್ಲಿರುವಂತೆಯೇ ನೋಡಿಕೊಳ್ಳುವ ಪರಿಪಾಠ ಒಳ್ಳೆಯದಲ್ಲ. ಇದಕ್ಕೆ ವೆಚ್ಚ ಜಾಸ್ತಿಯಾಗುತ್ತದೆ. ಇದರ ದಂಡೆ ನಿರ್ಮಿಸುವುದಕ್ಕೂ ಹೆಚ್ಚು ಜಾಗ ಬೇಕು. ಕೆರೆಯಂಚಿನಲ್ಲಿ ಜೌಗು ಪ್ರದೇಶ ಸೃಷ್ಟಿಯಾಗುವುದಕ್ಕೆ ಹಾಗೂ ಕೆರೆಯನ್ನು ಸೇರುವ ಮಳೆನೀರು ಶೋಧಿಸುವಿಕೆಗೂ ಇದರಿಂದ ಧಕ್ಕೆ ಉಂಟಾಗುತ್ತದೆ. ಕೆರೆಯ ಜೀವಿಗಳ ದೃಷ್ಟಿಯಿಂದಲೂ ಈ ಮಾದರಿ ಸೂಕ್ತವಲ್ಲ ಎಂದು ತಜ್ಞರ ಸಮಿತಿಯ ಅಭಿಪ್ರಾಯಪಟ್ಟಿತ್ತು.

‘ಪುನರುಜ್ಜೀವನದ ವೇಳೆ ಕೆರೆಗೆ ಮಳೆಗಾಲದಲ್ಲಿ ಸಾಕಷ್ಟು ನೀರು ಹರಿದು ಬರುವಂತೆ ನೋಡಿಕೊಂಡು, ಅಗತ್ಯವಿರುವಲ್ಲಿ ಮಾತ್ರ ಆಳ ಹೆಚ್ಚಿಸಬೇಕು. ಈ ಮಾರ್ಪಾಡು ಮಾಡುವಾಗ ಭೂಮಿಗೆ ನೀರಿಂಗಿಸುವುದಕ್ಕೆ ಹಾಗೂ ಪ್ರವಾಹ ನಿಯಂತ್ರಣಕ್ಕೆ ಆದ್ಯತೆ ನೀಡಬೇಕು. ನೀರು ಒಳಗೆ ಹರಿದು ಬರುವಲ್ಲಿ ಕೆರೆಯ ಇಳಿಜಾರು ಹಾಗೂ ನೀರು ಸಂಗ್ರಹಗೊಳ್ಳುವಲ್ಲಿ ದಂಡೆ ಇರಬೇಕು. ದಂಡೆಯ ಬಳಿ ಆಳವಾಗಿ ಹೂಳೆತ್ತಿ, ಇಳಿಜಾರು ಇರುವಲ್ಲಿ ಕಡಿಮೆ ಆಳ ಇರುವಂತೆ ನೋಡಿಕೊಳ್ಳಬೇಕು’ ಎಂದೂ ಸಮಿತಿ ಹೇಳಿತ್ತು.

‘ಕೆರೆಯ ಇಳಿಜಾರಿನಲ್ಲಿ ನೀರು ನಿಲ್ಲುವಂತೆ ನೋಡಿಕೊಂಡರೆ ಅಲ್ಲಿ ಸಸ್ಯಗಳು ಬೇಗನೇ ಬೆಳೆಯುತ್ತವೆ. ಈ ನೈಸರ್ಗಿಕ ವ್ಯವಸ್ಥೆಯು ಕೆರೆಯ ನೀರು ಆವಿಯಾಗುವುದನ್ನೂ ತಡೆಯುತ್ತದೆ. ಭೂಮಿಗೆ ನೀರಿಂಗಿಸುತ್ತದೆ. ತೇವಾಂಶ ಭರಿತ ಮಣ್ಣಿನಲ್ಲಿರುವ ಹಾಗೂ ಇಲ್ಲಿನ ಸಸ್ಯಗಳನ್ನು ಅವಲಂಬಿಸಿರುವ ಕೀಟಗಳು ಹಕ್ಕಿಗಳನ್ನು ಆಕರ್ಷಿಸುತ್ತವೆ. ಹಕ್ಕಿಗಳಿಗೆ ನೀರಿನಲ್ಲಿ ಯಥೇಚ್ಛ ಆಹಾರ ಸಿಗುತ್ತದೆ’ ಎಂದು ಸಮಿತಿ ವಿವರಿಸಿತ್ತು.

2020ರ ಜುಲೈನಿಂದ ಈ ಕಾಮಗಾರಿಯೂ ನಡೆಯುತ್ತಿದೆ. ಕೆರೆ ಸಂರಕ್ಷಣಾ ಸಮಿತಿಯವರು ಬಿಬಿಎಂಪಿಯ ಕೆರೆ ವಿಭಾಗದ ಅಧಿಕಾರಿಗಳನ್ನು ಭೇಟಿಯಾಗಿ ನ್ಯಾ.ಎನ್.ಕೆ.ಪಾಟೀಲ ಸಮಿತಿಯ ಶಿಫಾರಸುಗಳಿಗೆ ಅನುಗುಣವಾಗಿಯೇ ಕಾಮಗಾರಿ ಅನುಷ್ಠಾನಗೊಳಿಸುವಂತೆ ಆರಂಭದಲ್ಲೇ ಕೋರಿದ್ದರು. ಆ್ಯಕ್ಷನ್ ಏಯ್ಡ್ ಸಂಸ್ಥೆಯು ಸ್ಥಳೀಯ ಪ್ರಮುಖರಾದ ಸೌಂದರಾಜನ್ ನೇತೃತ್ವದಲ್ಲಿ 10 ವಿದ್ಯಾರ್ಥಿ ಸ್ವಯಂ ಸೇವಕರ ನೆರವಿನಿಂದ ಈ ಕೆರೆಯ ಕಾಮಗಾರಿಯನ್ನು ಪರಿಶೀಲಿಸಿದೆ.

‘ಕೆರೆಯ ಅಂಚುಗಳಲ್ಲೂ 6– 8 ಅಡಿ ಆಳದಷ್ಟು ಹೂಳೆತ್ತಿದ್ದು, ಅಲ್ಲಿ ಸ್ತರ ವ್ಯವಸ್ಥೆ ಹೊಂದಿಲ್ಲ. ಹಾಗಾಗಿ ಕೆರೆ ಯನ್ನು ನೆಚ್ಚಿಕೊಂಡಿದ್ದ ಶೇ 70ರಷ್ಟು ಹಕ್ಕಿಗಳು ಮತ್ತೆ ಮರಳುವುದು ಅನುಮಾನ. ಹೂಳೆತ್ತುವಾಗ ಇಳಿಜಾರನ್ನು ಸಮರ್ಪಕವಾಗಿ ಕಾಯ್ದುಕೊಂಡಿಲ್ಲ. ಕೆರೆಯ ಅಂಚುಗಳಲ್ಲಿ ಹಾಗೂ ದ್ವೀಪವಿರುವ ಕಡೆ ಹೆಚ್ಚೂ ಕಡಿಮೆ ಒಂದೇ ರೀತಿಯ ಆಳವನ್ನು ಕಾಯ್ದುಕೊಳ್ಳಲಾಗಿದೆ’ ಎಂದು ದೂರುತ್ತಾರೆ ಆ್ಯಕ್ಷನ್ ಏಯ್ಡ್ ಸಂಸ್ಥೆಯ ರಾಘವೇಂದ್ರ ಬಿ. ಪಚ್ಚಾಪುರ.

21.16 ಎಕರೆ
ದೊಡ್ಡಕಲ್ಲಸಂದ್ರ ಕೆರೆ ವಿಸ್ತೀರ್ಣ

₹ 5.93 ಕೋಟಿ
ಕೆರೆ ಪುನರುಜ್ಜೀವನ ಕಾಮಗಾರಿಯ ಅಂದಾಜು ವೆಚ್ಚ

42
ಪ್ರಭೇದಗಳ 354 ಮರಗಳು ಈ ಕೆರೆ ಪರಿಸರದಲ್ಲಿವೆ

37
ಪ್ರಭೇದಗಳ ಚಿಟ್ಟೆಗಳು ಇಲ್ಲಿ ಕಂಡು ಬಂದಿವೆ

71
ಪ್ರಭೇಧಗಳ ಹಕ್ಕಿಗಳನ್ನು ಈ ಪರಿಸರದಲ್ಲಿ ಗುರುತಿಸಲಾಗಿದೆ

ದೊಡ್ಡಕಲ್ಲಸಂದ್ರ ಕೆರೆಯ ಹೂಳೆತ್ತುವ ಕಾಮಗಾರಿ

ಕೆರೆಯ ಸಂಚರನೆ ಹೇಗಿರಬೇಕು?



ಪ್ರಜಾವಾಣಿ ಗ್ರಾಫಿಕ್ಸ್ | ಮಂಜುನಾಥ ಹುಲಕೊಪ್ಪದ

‘ದಶಕದ ಬಳಿಕವೂ ಜಾರಿಯಾಗುತ್ತಿಲ್ಲ ಶಿಫಾರಸು’

‘ನ್ಯಾ.ಎನ್.ಕೆ.ಪಾಟೀಲ ಸಮಿತಿಯ ವರದಿಯು ಕೆರೆ ಉಳಿಸುವ ಬಗ್ಗೆ ಕಾಳಜಿ ಇದ್ದ ಪರಿಸರವಾದಿಗಳ ಕಾನೂನು ಹೋರಾಟದ ಫಲಶ್ರುತಿ. ಪರಿಸರ ಸಂಬಂಧಿ ಅಂಶಗಳ ಹಾಗೂ ಜನರ ಆಶೋತ್ತರಗಳ ಸಮಪಾಕದಂತಿರುವ ಈ ವರದಿ. ಕೆರೆಯ ಪುನರುಜ್ಜೀವನವು ಜೀವವೈವಿಧ್ಯ ಸಂರಕ್ಷಣೆಗೆ ಪೂರಕವಾಗಿರಬೇಕು ಎಂಬ ಅಂಶಗಳಿಗೆ ಅಧಿಕಾರಿಗಳು ಈಗಲೂ ಮಹತ್ವನೀಡುತ್ತಿಲ್ಲ. ಕೆರೆಗಳು 2011ಕ್ಕಿಂತ ಮುಂಚೆಯೂ ಬಟ್ಟಲುಗಳ ಆಕಾರದಲ್ಲೇ ಇದ್ದವು. 2021ರಲ್ಲೂ ಹಾಗೆಯೇ ಮುಂದುವರಿಸಲಾಗುತ್ತಿದೆ. ಎನ್.ಕೆ. ಪಾಟೀಲ ಸಮಿತಿಯ ಅಂಶಗಳನ್ನು ಪಾಲಿಸುವ ಡಿಪಿಆರ್‌ಗಳಿಗೆ ಮಾತ್ರ ಅನುಮೋದನೆ ಸಿಗುತ್ತದೆ. ಆದರೂ ಕಾಮಗಾರಿ ಅನುಷ್ಠಾನದ ಹಂತದಲ್ಲಿ ಬೇರೆಯೇ ನಡೆಯುತ್ತಿರುವುದು ಬೇಸರದ ವಿಷಯ’ ಎಂದು ರಾಘವೇಂದ್ರ ಬಿ.ಪಚ್ಚಾಪುರ ಬೇಸರ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

ಪೌರಕಾರ್ಮಿಕರ ಕುಟುಂಬಕ್ಕೆ ₹10 ಲಕ್ಷ ಪರಿಹಾರ

ಬೆಂಗಳೂರು: ಅಪಘಾತದಲ್ಲಿ ಮೃತಪಟ್ಟದ್ದ ಪೌರಕಾರ್ಮಿಕರ ಕುಟುಂಬದವರಿಗೆ ಶನಿವಾರ ₹10 ಲಕ್ಷ ಪರಿಹಾರದ ಚೆಕ್ ವಿತರಣೆ ಮಾಡಲಾಯಿತು.

ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ವೆಂಕಟೇಶನ್ ಹಾಗೂ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಶಿವಣ್ಣ ಅವರು ಈ ಚೆಕ್ ವಿತರಿಸಿದರು.

ಬಿಬಿಎಂಪಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಗೌರಮ್ಮ ಮತ್ತು ಮರಿಯಮ್ಮ ಅವರು ಮೂರು ದಿನಗಳ ಹಿಂದೆ ಅಪಘಾತದಲ್ಲಿ ಮೃತಪಟ್ಟಿದ್ದರು. ಅವರ ಅವಲಂಬಿತರ ಮನೆಗೆ ತೆರಳಿ ಚೆಕ್ ನೀಡಲಾಯಿತು.

‘ಅವಲಂಬಿತ ಕುಟುಂಬದ ಸದಸ್ಯರಿಗೆ ಪಾಲಿಕೆಯು ನೇರವಾಗಿ ಪರಿಹಾರ ನೀಡುತ್ತಿದೆ. ಯಾರಾದರೂ ಮಧ್ಯವರ್ತಿಗಳು ಬಂದು ಹಣ ಕೇಳಿದರೆ ಅಥವಾ ಪೀಡಿಸಿದರೆ ನೇರವಾಗಿ ಪಾಲಿಕೆಯ ಜಂಟಿ ಆಯುಕ್ತರಿಗೆ ದೂರು ನೀಡಿ’ ಎಂದು ಕುಟುಂಬದ ಸದಸ್ಯರಿಗೆ ವೆಂಕಟೇಶನ್ ತಿಳಿ ಹೇಳಿದರು.

ಶಿವಣ್ಣ, ‘ಮೃತರ ಅವಲಂಬಿತ ಕುಟುಂಬದ ಸದಸ್ಯರುಗಳಿಗೆ ಹಣಕಾಸಿನ ನೆರವಿನ ಜೊತೆಗೆ ಉದ್ಯೋಗ ನೀಡಬೇಕು’ ಜಂಟಿ ಆಯುಕ್ತರಿಗೆ ಸೂಚಿಸಿದರು.

‘ಪರಿಹಾರದ ಮೊತ್ತವನ್ನು ಮೃತರ ಕುಟುಂಬದ ಮಕ್ಕಳ ಹೆಸರಿನಲ್ಲಿ ಠೇವಣಿ ಇಟ್ಟು ಅವರ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಬಳಸಿಕೊಳ್ಳಿ’ ಎಂದು ಅವರು ಸಲಹೆ ನೀಡಿದರು.

225 ಅಭ್ಯರ್ಥಿಗಳಿಗೆ ಉದ್ಯೋಗ ಭಾಗ್ಯ

ಬೆಂಗಳೂರು: ಕಾಲೇಜು ಶಿಕ್ಷಣ ಇಲಾಖೆ ಮತ್ತು ಉದ್ಯೋಗ ಇಲಾಖೆ ವತಿಯಿಂದ ಎಚ್‌ಎಸ್‌ಆರ್ ಬಡಾವಣೆಯಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಉದ್ಯೋಗ ಮೇಳದಲ್ಲಿ 225ಕ್ಕೂ ಹೆಚ್ಚು ಅಭ್ಯರ್ಥಿಗಳು ಉದ್ಯೋಗಾವಕಾಶ ಪಡೆದರು.

ನಗರದ ಉಪಪ್ರಾದೇಶಿಕ ಉದ್ಯೋಗ ವಿನಿಮಯ ಕೇಂದ್ರದ ಸಹಯೋಗದಲ್ಲಿ ನಡೆದ ಈ ಉದ್ಯೋಗ ಮೇಳದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಬೊಮ್ಮನಹಳ್ಳಿ ಶಾಸಕ ಸತೀಶ್ ರೆಡ್ಡಿಯವರು ಸಾಂಕೇತಿಕವಾಗಿ ನೇಮಕಾತಿ ಪತ್ರ ವಿತರಿಸಿದರು.

650ಕ್ಕೂ ಹೆಚ್ಚು ಅಭ್ಯರ್ಥಿಗಳು ಹೆಸರು ನೋಂದಾಯಿಸಿದ್ದರು. 42ಕ್ಕೂ ಹೆಚ್ಚು ಕಂಪನಿಗಳು ಅಭ್ಯರ್ಥಿಗಳ ಸಂದರ್ಶನ ನಡೆಸಿ, ಅರ್ಹರನ್ನು ನೇಮಕ ಮಾಡಿಕೊಂಡರು.

ಉದ್ಯೋಗ ವಿನಿಮಯ ಕೇಂದ್ರದ ಜಂಟಿ ನಿರ್ದೇಶಕ ಕೆ. ಶ್ರೀನಿವಾಸ್, ಕಾಲೇಜಿನ ಪ್ರಾಚಾರ್ಯ ಡಾ.ಎಂ. ವೆಂಕಟರಮಣರೆಡ್ಡಿ, ಉದ್ಯೋಗ ಮಾಹಿತಿ ಕೋಶದ ಅಧಿಕಾರಿ ಡಾ.ಆರ್. ನರ್ಮದಾ ಹಾಗೂ ಕಾಲೇಜಿನ ಉಪನ್ಯಾಸಕರು ಮಾರ್ಗದರ್ಶನ ಮಾಡಿದರು.

ಮಾರತ್ತಹಳ್ಳಿಯ ಸರ್ಜಾಪುರ ರಸ್ತೆಯಲ್ಲಿ ಅನಧಿಕೃತವಾಗಿ ಹಾಕಲಾಗಿದ್ದ ಕೇಬಲ್‌ಗಳನ್ನು ತೆರವುಗೊಳಿಸಲಾಯಿತು

ಅನಧಿಕೃತ ಒಎಫ್‌ಸಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ ವಲಯದಲ್ಲಿ ಅನಧಿಕೃತವಾಗಿ ಹಾಕಲಾಗಿದ್ದ ಆಪ್ಟಿಕ್ ಫೈಬರ್ ಕೇಬಲ್‌ಗಳನ್ನು (ಒಎಫ್‌ಸಿ) ಶನಿವಾರ ತೆರವುಗೊಳಿಸಲಾಯಿತು.

ಮಹದೇವಪುರ ವಲಯ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಪಾದಚಾರಿ ಮಾರ್ಗ, ವಿದ್ಯುತ್ ಕಂಬಗಳ ಮೇಲೆ ನೇತಾಡುತ್ತಿದ್ದ ಹಾಗೂ ಮರಗಳಿಗೆ ಸುತ್ತಿದ್ದ ಒಟ್ಟು 32.40 ಕಿ.ಮೀ. ಉದ್ದದ ಕೇಬಲ್‌ಗಳನ್ನು ಬಿಬಿಎಂಪಿ ಅಧಿಕಾರಿಗಳ ನೇತೃತ್ವದಲ್ಲಿ ತೆಗೆದು ಹಾಕಲಾಯಿತು.

‘ಕೇಬಲ್‌ಗಳನ್ನು ಸಾರ್ವಜನಿಕರ ಮತ್ತು ವಾಹನ ಸವಾರರ ಹಿತದೃಷ್ಟಿಯಿಂದ ತೆರವುಗೊಳಿಸಲಾಗಿದೆ. ಯಾವುದೇ ಸಂಸ್ಥೆ ಅನಧಿಕೃತವಾಗಿ ಇಂತಹ ಕೇಬಲ್‌ಗಳನ್ನು ಅಳವಡಿಸಿದರೆ ಅವುಗಳನ್ನು ಮುಲಾಜಿಲ್ಲದೇ ತೆರವುಗೊಳಿಸಲಿದ್ದೇವೆ. ಸಂಬಂಧಪಟ್ಟ ಸಂಸ್ಥೆಗಳ ವಿರುದ್ಧ ಕ್ರಮವನ್ನೂ ಜರುಗಿಸುತ್ತೇವೆ’ ಎಂದು ಮಹದೇವಪುರ ವಲಯದ ಬಿಬಿಎಂಪಿ ಮುಖ್ಯ ಎಂಜಿನಿಯರ್ ಆರ್.ಎಲ್.ಪರಮೇಶ್ವರಯ್ಯ ಹೇಳಿದರು.

ಒಕ್ಕಲಿಗರ ಸಮಾವೇಶದಲ್ಲಿ ನಿರ್ಮಲಾನಂದ ಸ್ವಾಮೀಜಿ

‘ನ್ಯಾಯಯುತ ಹಕ್ಕು ಕೇಳುತ್ತಿದ್ದೇವೆ’

ಪ್ರಜಾವಾಣಿ ವಾರ್ತೆ

ಆದಿಚುಂಚನಗಿರಿ ನಿರ್ಮಲಾನಂದ ಶ್ರೀಗಳು ಮಾತನಾಡಿದರು. ಇ.ಕೃಷ್ಣಪ್ಪ, ಎಸ್‌.ಆರ್‌.ವಿಶ್ವನಾಥ್, ರಮಣಾನಂದ ಶ್ರೀ, ನಂಜಾವಧೂತ ಶ್ರೀ, ಕುಮಾರ ಚಂದ್ರಶೇಖರ ಶ್ರೀ, ಸೌಮ್ಯನಾಥ ಶ್ರೀಗಳು ಇದ್ದಾರೆ

ನೆಲಮಂಗಲ: ‘ಒಕ್ಕಲಿಗರ ಅಭಿವೃದ್ಧಿ ಪ್ರಾಧಿಕಾರವನ್ನು ಸಕಾಲದಲ್ಲಿ ರಚಿಸಿರುವ ರಾಜ್ಯ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಒಕ್ಕಲಿಗರು ತಮಗೆ ನ್ಯಾಯಯುತವಾಗಿ ಸಿಗಬೇಕಾಗಿದ್ದನ್ನು ಕೇಳುತ್ತಿದ್ದಾರೆ’ ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದ ಸ್ವಾಮೀಜಿ ತಿಳಿಸಿದರು.

ಇಲ್ಲಿಗೆ ಸಮೀಪದ ನಗರೂರಿನ ಬಿಜಿಎಸ್ ವರ್ಲ್ಡ್ ಸ್ಕೂಲ್ ಆವರಣದಲ್ಲಿ ಅಖಿಲ ಕರ್ನಾಟಕ ಒಕ್ಕಲಿಗರ ಒಕ್ಕೂಟ ಹಮ್ಮಿಕೊಂಡಿದ್ದ ಸಮಾವೇಶದಲ್ಲಿ ಮಾತನಾಡಿದ ಅವರು, ‘ರಾಜಧಾನಿಯಲ್ಲಿ ಬಹುತೇಕ ಒಕ್ಕಲಿಗರು ತಮ್ಮ ಜಮೀನುಗಳನ್ನು ಕಳೆದುಕೊಂಡು ಕೊಳೆಗೇರಿಗಳಲ್ಲಿ ವಾಸಿಸುತ್ತಿದ್ದಾರೆ’ ಎಂದರು.

‘ನಗರ ಪ್ರದೇಶದ ಬಡ ಒಕ್ಕಲಿಗರನ್ನು ಒಬಿಸಿ ಪಟ್ಟಿಗೆ ಸೇರಿಸಬೇಕು. ಉತ್ತರ ಕರ್ನಾಟಕದ ಭಾಗದ ಕುಡು ಒಕ್ಕಲಿಗರನ್ನು ಒಕ್ಕಲಿಗರ ಜಾತಿ ಪಟ್ಟಿಗೆ ಸೇರಿಸಬೇಕು. ಒಕ್ಕಲಿಗರಿಗೆ ಈಗಾಗಲೇ 3ಎ ಪ್ರವರ್ಗದಲ್ಲಿ ಶೇ 4 ಮೀಸಲಾತಿ ಕಲ್ಪಿಸಲಾಗಿದೆ. ಆದರೆ, ಒಕ್ಕಲಿಗರ ಸಮುದಾಯದಲ್ಲಿ 100ಕ್ಕೂ ಹೆಚ್ಚು ಒಳಪಂಗಡಗಳಿರುವುದರಿಂದ ಮೀಸಲಾತಿ ಪ್ರಮಾಣವನ್ನು ಶೇ 9ಕ್ಕೆ ಹೆಚ್ಚಿಸಬೇಕು’ ಎಂದರು.

ಸ್ಫಟಿಕಪುರಿ ಮಹಾಸಂಸ್ಥಾನ ಮಠದ ನಂಜಾವಧೂತ ಶ್ರೀ ಮಾತನಾಡಿ, ‘ವೀರಶೈವ ಅಭಿವೃದ್ಧಿ ನಿಗಮ ಘೋಷಣೆಯಾಗುತ್ತಿದ್ದಂತೆ, ಶಾಸಕ ಎಸ್.ಆರ್. ವಿಶ್ವನಾಥ್ ಅವರು ಒಕ್ಕಲಿಗ ಸಮುದಾಯಕ್ಕೂ ಪ್ರಾಧಿಕಾರ ಬೇಕು ಎಂದು ಧ್ವನಿ ಎತ್ತಿದ್ದರಿಂದ, ಮುಖ್ಯಮಂತ್ರಿ ಯಡಿಯೂರಪ್ಪ ಶೀಘ್ರವಾಗಿ ಸ್ಪಂದಿಸಿದ್ದಾರೆ. ಅದರಂತೆಯೇ ಮೀಸಲಾತಿ ಪ್ರಮಾಣ ಹೆಚ್ಚಿಸುವಂತೆಯೂ ವಿಶ್ವನಾಥ್ ಕೋರಬೇಕು’ ಎಂದರು.

‘ಎಲ್ಲ ರೈತರ ಪರವಾಗಿ ಧ್ವನಿ ಎತ್ತಿ ಹೋರಾಟ ಮಾಡಿರುವ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರಿಗೆ ಭಾರತ ರತ್ನ ಪುರಸ್ಕಾರ ನೀಡಿ ಗೌರವಿಸಬೇಕು’ ಎಂದು ಮನವಿ ಮಾಡಿದರು.

ವಿಶ್ವ ಒಕ್ಕಲಿಗ ಮಹಾ ಸಂಸ್ಥಾನ ಮಠದ ಕುಮಾರ ಚಂದ್ರಶೇಖರ ಸ್ವಾಮೀಜಿ, ಶಾಸಕ ಎಸ್.ಆರ್. ವಿಶ್ವನಾಥ್, ವಿಧಾನಪರಿಷತ್ ಮಾಜಿ ಸದಸ್ಯ ಇ.ಕೃಷ್ಣಪ್ಪ ಮಾತನಾಡಿದರು. ಶಿವಾನಂದ ಆಶ್ರಮದ ರಮಣಾನಂದ ಶ್ರೀ, ಮಂಗಳೂರು ಧರ್ಮಪಾಲನಾಥ ಶ್ರೀ, ಒಕ್ಕೂಟದ ಅಧ್ಯಕ್ಷ ನಾಗಣ್ಣ ಬಾಣಸವಾಡಿ, ಕೋಲಾರ ಲಕ್ಷ್ಮಣ ಗೌಡ ಇದ್ದರು.

ಪುಸ್ತಕ ಸಲ್ಲಿಕೆಗೆ ಅವಧಿ ವಿಸ್ತರಣೆ

ಬೆಂಗಳೂರು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು 2020ನೇ ಸಾಲಿನ ಪುಸ್ತಕ ಬಹುಮಾನ ಯೋಜನೆಗೆ ಪುಸ್ತಕಗಳನ್ನು ಸ್ವೀಕರಿಸುವ ಅವಧಿ ವಿಸ್ತರಿಸಿದ್ದು, ಅನುವಾದಕರು ಹಾಗೂ ಪ್ರಕಾಶಕರಿಗೆ ಪುಸ್ತಕಗಳನ್ನು ಸಲ್ಲಿಸಲು ಮಾ.30ರವರೆಗೆ ಅವಕಾಶ ನೀಡಿದೆ.

2020ರ ಜ.1ರಿಂದ ಡಿ.31ರ ಅವಧಿಯಲ್ಲಿ ಪ್ರಥಮಾವೃತ್ತಿಯಲ್ಲಿ ಪ್ರಕಟಗೊಂಡ ಅನುವಾದಿತ ಕೃತಿಗಳು ಹಾಗೂ ಅನುವಾದ ಅಧ್ಯಯನ ಕುರಿತ ಪುಸ್ತಕಗಳನ್ನು ಪರಿಗಣಿಸಲಾಗುತ್ತದೆ. ಕನ್ನಡದಿಂದ ಇತರ ಭಾಷೆಗೆ ಅಥವಾ ಇತರ ಭಾಷೆಯಿಂದ ಕನ್ನಡಕ್ಕೆ ಅನುವಾದಗೊಂಡ ಕೃತಿಗಳನ್ನು ಕಳುಹಿಸಬಹುದಾಗಿದೆ. ಪ್ರತಿ ಪುಸ್ತಕದ ನಾಲ್ಕು ಪ್ರತಿಗಳನ್ನು ರಿಜಿಸ್ಟ್ರಾರ್, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಜ್ಞಾನಭಾರತಿ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು–560056 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಅಕಾಡೆಮಿಯ ರಿಜಿಸ್ಟ್ರಾರ್ ಈಶ್ವರ್ ಕು. ಮಿರ್ಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ ದೂ.: 080 23183311

ಕೊಂಡಕ್ಕೆ ಬಿದ್ದಿದ್ದ ಅರ್ಚಕ ಸಾವು

ಚನ್ನಪಟ್ಟಣ: ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಗುಡಿಸರಗೂರು ಬಸವೇಶ್ವರ ಕೊಂಡ ಹಾಯುವಾಗ ಕೆಂಡದ ಮೇಲೆ ಆಯತಪ್ಪಿ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದ ಪ್ರಧಾನ ಅರ್ಚಕ ದೊಡ್ಡಸ್ವಾಮಯ್ಯ (55) ಚಿಕಿತ್ಸೆಗೆ ಸ್ಪಂದಿಸದೆ ಶನಿವಾರ ಮೃತಪಟ್ಟಿದ್ದಾರೆ.

ಫೆ.23 ರಂದು ಬೆಳಿಗ್ಗೆ ಕೊಂಡ ಹಾಯುವಾಗ ಆಯತಪ್ಪಿ ಅವರು ಕೊಂಡಕ್ಕೆ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದರು. ಕೈ, ಕಾಲು, ಶರೀರ ಹಾಗೂ ಮುಖಕ್ಕೆ ಸುಟ್ಟ ಗಾಯಗಳಾಗಿ ಪ್ರಜ್ಞಾಹೀನರಾಗಿದ್ದ ಅವರನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿತ್ತು. ಕೆಲವು ದಿನಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಅವರನ್ನು ಮನೆಗೆ ಕರೆದೊಯ್ಯಲಾಗಿತ್ತು. ಮನೆಯಲ್ಲಿಯೇ ಇದ್ದುಕೊಂಡು ಚಿಕಿತ್ಸೆ ಪಡೆಯುತ್ತಿದ್ದ ಅವರು ಮೃತಪಟ್ಟಿದ್ದಾರೆ. ಅಂತ್ಯಕ್ರಿಯೆ ಶನಿವಾರ ಸಂಜೆ ಗ್ರಾಮದಲ್ಲಿ ನಡೆಯಿತು.

‘ಸಾಮಾನ್ಯ ಜನರ ಕಣ್ಣಲ್ಲಿನ ಇತಿಹಾಸ ರಚನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಾವುದೇ ಕಾಲಘಟ್ಟದಲ್ಲಿನ ಇತಿಹಾಸ ರಚನೆಯು ಎಲ್ಲ ಆಯಾಮಗಳನ್ನೂ ಒಳಗೊಂಡಿರಬೇಕು. ಹೊಸದಾಗಿ ಬಿಡುಗಡೆಯಾಗುತ್ತಿರುವ ಕೃತಿಗಳಲ್ಲಿ ಜನಸಾಮಾನ್ಯರ ಕಣ್ಣಲ್ಲಿ ಕಂಡಂತಹ ಇತಿಹಾಸವನ್ನು ರಚಿಸಲಾಗಿದೆ’ ಎಂದು ಖ್ಯಾತ ಇತಿಹಾಸಕಾರ ಪ್ರೊ. ಇರ್ಫಾನ್ ಹಬೀಬ್ ಹೇಳಿದರು.

ತಮ್ಮ ಸಂಪಾದಕತ್ವದ ‘ಭಾರತದ ಆರ್ಥಿಕತೆ’ ಹಾಗೂ ‘ಮೌರ್ಯರ ನಂತರದ ಭಾರತ’ ಹಾಗೂ ’ಮೌರ್ಯರ ನಂತರದ ಭಾರತದಲ್ಲಿ ಸಮಾಜ ಮತ್ತು ಸಂಸ್ಕೃತಿ’ ಎಂಬ ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬೆಂಗಳೂರು ಹಿಸ್ಟೋರಿಯನ್ಸ್ ಸೊಸೈಟಿ, ಇತಿಹಾಸ ದರ್ಪಣ ಹಾಗೂ ಋತುಮಾನ.ಕಾಮ್ ಸಹಯೋಗದಲ್ಲಿ ಪುಸ್ತಕ ಬಿಡುಗಡೆ ಕಾರ್ಯಕ್ರಮ ಶುಕ್ರವಾರ ಆನ್‌ಲೈನ್‌ನಲ್ಲಿ ನಡೆಯಿತು.

‘ಮೌರ್ಯರ ನಂತರದ ಸುಮಾರು 500 ವರ್ಷಗಳಲ್ಲಿ ಜನರ ಜೀವನ, ಧಾರ್ಮಿಕ ದೃಷ್ಟಿಕೋನ, ವಿಜ್ಞಾನ, ರಾಷ್ಟ್ರೀಯತೆ, ಜಾತಿ ವ್ಯವಸ್ಥೆಯ ಅಂಶಗಳನ್ನು ಈ ಕೃತಿಯಲ್ಲಿ ದಾಖಲಿಸಲಾಗಿದೆ. ತಂತ್ರಜ್ಞಾನ ಉಗಮದ ಇತಿಹಾಸವನ್ನೂ ಈ ಪುಸ್ತಕಗಳು ಒಳಗೊಂಡಿವೆ. ಯಾವುದೇ ಮಾಹಿತಿ ಅಥವಾ ಉಲ್ಲೇಖಕ್ಕೆ ಸಂಬಂಧಿಸಿದ ಆಕರಗಳನ್ನೂ ಉಲ್ಲೇಖಿಸಲಾಗಿದೆ’ ಎಂದು ಪ್ರೊ. ಇರ್ಫಾನ್ ಹಬೀಬ್ ತಿಳಿಸಿದರು.

‘ಭಾರತದ ಆರ್ಥಿಕತೆ’ ಕೃತಿಯು ಬ್ರಿಟಿಷ್ ಆಡಳಿತದ ಪ್ರಾರಂಭಿಕ ಹಂತಕ್ಕೆ (1757–1857) ಸಂಬಂಧಿಸಿದ್ದು. ಈ ಕೃತಿಯನ್ನು ಕೆ.ಎಂ. ಲೋಕೇಶ್ ಕನ್ನಡಕ್ಕೆ ಅನುವಾದಿಸಿದ್ದಾರೆ. ಮೌರ್ಯ ನಂತರದ ಭಾರತದಲ್ಲಿ ಸಮಾಜ ಮತ್ತು ಸಂಸ್ಕೃತಿ ಕೃತಿಯ ಮೂಲ ಲೇಖಕರು ಪ್ರೊ. ಭೈರಬಿ ಪ್ರಸಾದ ಸಾಹು, ಪ್ರೊ. ಕೇಶವನ್ ವೇಲುತಾಟ್. ಈ ಕೃತಿಯನ್ನು ಡಾ. ಟಿ. ವೆಂಕಟೇಶಮೂರ್ತಿ ಕನ್ನಡಕ್ಕೆ ಅನುವಾದಿಸಿದರೆ, ಮೌರ್ಯರ ನಂತರದ ಭಾರತ – ರಾಜಕೀಯ ಮತ್ತು ಆರ್ಥಿಕ ಇತಿಹಾಸ ಕೃತಿಯನ್ನು ಎಸ್.ಎನ್. ಸ್ವಾಮಿ ಕನ್ನಡಕ್ಕೆ ತಂದಿದ್ದಾರೆ. ಈ ಮೂರೂ ಕೃತಿಗಳನ್ನು ‘ಚಿಂತನ ಪುಸ್ತಕ’ ಪ್ರಕಟಿಸಿದೆ.

‘ಭಾರತದ ಇತಿಹಾಸದ ಹೊಸ ಆಯಾಮಗಳನ್ನು ಕನ್ನಡಿಗರಿಗೆ ಪರಿಚಯಿಸುವ ಕೃತಿಗಳು ಇವು. ವಾಯವ್ಯಗಡಿ ಪ್ರದೇಶ, ಗಂಗಾ–ಕೃಷ್ಣಾ ನದಿ ಬಯಲು ಪ್ರದೇಶ, ಕಾವೇರಿ ಸೀಮೆಯ ರಾಜಕೀಯ ಸ್ಥಿತ್ಯಂತರಗಳು ಇದರಲ್ಲಿ ಅಚ್ಚುಕಟ್ಟಾಗಿ ದಾಖಲಾಗಿವೆ’ ಎಂದು ಡಾ.ಎಸ್. ಚಂದ್ರಶೇಖರ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಡಾ.ಎಸ್.ಕೆ. ಅರುಣಿ, ಡಾ.ಎಸ್.ಪಿ. ವಾಗೀಶ್ವರಿ ಕೃತಿಗಳ ಬಗ್ಗೆ ಮಾತನಾಡಿದರು.

‘ಮುಖ್ಯಮಂತ್ರಿ ಮಾಡಬೇಕಿತ್ತು’

ಹುಣಸೂರು (ಮೈಸೂರು): ‘ಮುಖ್ಯಮಂತ್ರಿಯನ್ನು ಸೋಲಿಸಿದವರನ್ನೇ ಮುಖ್ಯಮಂತ್ರಿ ಮಾಡಬೇಕಿತ್ತು! ಈ ವಿಷಯದಲ್ಲಿ ನಾವು ತಪ್ಪು ಮಾಡಿದ್ದೇವೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ, ಸ್ವಪಕ್ಷೀಯ ಶಾಸಕ ಜಿ.ಟಿ.ದೇವೇಗೌಡ ಹೆಸರು ಪ್ರಸ್ತಾಪಿಸದೇ ಶನಿವಾರ ಇಲ್ಲಿ ವ್ಯಂಗ್ಯವಾಡಿದರು.

‘ಜಿಲ್ಲೆಯಲ್ಲಿ ಆಲದ ಮರವಾಗಿರುವವರನ್ನು (ಜಿ.ಟಿ.ದೇವೇಗೌಡ) ಪಕ್ಷದಿಂದ ಹೊರ ಹಾಕುವ ಕೆಲಸ ಸರಿಯಾದ ಸಮಯಕ್ಕೆ ನಡೆಯಲಿದೆ. 18 ತಿಂಗಳಿಂದ ಅವರಿಂದ ದೂರ ಉಳಿದಿದ್ದೇನೆ. ಸದನದಲ್ಲೂ ಪಕ್ಷದವರೆಂದು ಗುರುತಿಸಿಲ್ಲ. ಜೆಡಿಎಸ್‌ಗೆ ಸಂಖ್ಯಾಬಲದ ಅವಶ್ಯಕತೆಯಿಲ್ಲ. ಹೀಗಾಗಿ ಅವರನ್ನು ಈಗಾಗಲೇ ಕೈ ಬಿಟ್ಟಿದ್ದೇವೆ’ ಎಂದು ತಮ್ಮನ್ನು ಭೇಟಿಯಾದ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದರು.

‘ಮೈಮುಲ್‌ನಲ್ಲಿ ಅಕ್ರಮ ಚಟುವಟಿಕೆ ನಡೆದಿವೆ. ಈ ಕುರಿತಂತೆ ಸಾರ್ವಜನಿಕರು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ನಾವು ಮೌನಕ್ಕೆ ಶರಣಾದಲ್ಲಿ ಅಕ್ರಮದ ಕಪ್ಪು ಮಸಿ ಪಕ್ಷಕ್ಕೆ ಅಂಟಲಿದೆ. ಆದ್ದರಿಂದ ಅಂತಿಮ ಹಂತದಲ್ಲಿ ಕಣಕ್ಕಿಳಿದಿದ್ದೇವೆ’ ಎಂದು ಕುಮಾರಸ್ವಾಮಿ ತಿಳಿಸಿದರು.

‘ಪಿರಿಯಾಪಟ್ಟಣದ ಶಾಸಕ ಕೆ.ಮಹದೇವ್ ಅವರ ಪುತ್ರ ಪಕ್ಷದ ಬೆಂಬಲಿತರ ವಿರೋಧಿ ಬಣದಲ್ಲಿ ಗುರುತಿಸಿಕೊಂಡಿದ್ದಾರೆ. ಈ ಬಗ್ಗೆ ಅವರಿಗೆ ಎಚ್ಚರಿಕೆ ನೀಡಲಾಗಿದೆ’ ಎಂದರು.

ಅಕ್ರಮ ಜಿಲೆಟಿನ್ ದಾಸ್ತಾನು: ದಾಳಿ

ಮಾಲೂರು: ಅಕ್ರಮವಾಗಿ ಜಿಲೆಟಿನ್ ಹಾಗೂ ಸ್ಫೋಟಕ ದಾಸ್ತಾನು ಮೇಲೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ ನೇತೃತ್ವದಲ್ಲಿ ಪೊಲೀಸರು ತಾಲ್ಲೂಕಿನ ಮಾಸ್ತಿ ವ್ಯಾಪ್ತಿಯಲ್ಲಿ ಶನಿವಾರ ದಾಳಿ ನಡೆಸಿ ಅಕ್ರಮವಾಗಿ ಶೇಖರಣೆ ಮಾಡಿಟ್ಟಿದ್ದ ಜಿಲೆಟಿನ್ ಕಡ್ಡಿಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಪೊಲೀಸರು ತಾಲ್ಲೂಕಿನ ಟೇಕಲ್ ಹೋಬಳಿಯ ಮುಟ್ಟಗಾನಹಳ್ಳಿ ಬಳಿ ಇರುವ ಜಲ್ಲಿ ಕ್ರಷರ್ ಮೇಲೆ ದಾಳಿ ನಡೆಸಿದ್ದಾರೆ. ತಮಿಳುನಾಡಿನಿಂದ ತರಿಸಿರುವ ಜಿಲೆಟಿನ್ ಕಡ್ಡಿಗಳನ್ನು ಸುಮಾರು 50 ಕಡೆಗಳಲ್ಲಿ ಕಲ್ಲು ಗುಂಡಿಯಲ್ಲಿ ಇಟ್ಟು ಸ್ಫೋಟಕ್ಕೆ ಸಿದ್ಧಗೊಳಿಸಲಾಗಿತ್ತು. ಖಚಿತ ಮಾಹಿತಿ ಮೇರೆಗೆ ಭೂ ಮತ್ತು ಗಣಿ ಇಲಾಖೆ ಅಧಿಕಾರಿಗಳೊಂದಿಗೆ ಪೊಲೀಸರು ದಾಳಿ ನಡೆಸಿ ಸ್ಫೋಟಿಸುವುದನ್ನು ತಡೆದಿದ್ದಾರೆ. ಸ್ಫೋಟಕಗಳನ್ನು ಗುಂಡಿಗಳಲ್ಲಿ ಇಟ್ಟಿದ್ದ ನಾಲ್ವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಕೋವಿಡ್ ಆರೈಕೆ ಕೇಂದ್ರಗಳು ಸಜ್ಜು’

ಪ್ರಜಾವಾಣಿ ವಾರ್ತೆ

ನಗರದಲ್ಲಿ ಶನಿವಾರ ಮಾಸ್ಕ್ ಧರಿಸದೇ ಇದ್ದುದಕ್ಕೆ ದಂಡ ಹಾಕಲು ಮುಂದಾದ ಬಿಬಿಎಂಪಿ ಮಾರ್ಷಲ್‌ಗಳು ಮತ್ತು ಪೊಲೀಸರೊಂದಿಗೆ ವ್ಯಕ್ತಿಯೊಬ್ಬರು ವಾಗ್ವಾದ ನಡೆಸಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಕಾರಣ, ಕೋವಿಡ್ ಸೋಂಕಿತರ ಆರೈಕೆ ಕೇಂದ್ರಗಳನ್ನು (ಸಿಸಿಸಿ) ಸನ್ನದ್ಧ ಸ್ಥಿತಿಯಲ್ಲಿ ಇಡಲು ಬಿಬಿಎಂಪಿ ನಿರ್ಧರಿಸಿದೆ.

ನಗರದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ಈ ನಿರ್ಧಾರ ಪ್ರಕಟಿಸಿದರು.

‘ಕೋವಿಡ್ ಪ್ರಕರಣಗಳು ಕಡಿಮೆಯಾಗಿದ್ದರಿಂದ ಕೆಲವು ಆರೈಕೆ ಕೇಂದ್ರಗಳನ್ನು ಸ್ಥಗಿತಗೊಳಿಸಲಾಗಿತ್ತು. ಈಗ ಅವುಗಳಲ್ಲಿ ಕೆಲವನ್ನು ಸನ್ನದ್ಧ ಸ್ಥಿತಿಗೆ ತಂದು, ಅಗತ್ಯವಿದ್ದರೆ ಅವುಗಳನ್ನು ರೋಗಿಗಳ ಸೇವೆಗೆ ಮುಕ್ತಗೊಳಿಸಲಾಗುವುದು. ಎಷ್ಟು ಕೇಂದ್ರಗಳನ್ನು ಸನ್ನದ್ಧವಾಗಿಟ್ಟುಕೊಳ್ಳಬೇಕು ಎಂಬುದು ಇನ್ನೂ ಅಂತಿಮವಾಗಿಲ್ಲ’ ಎಂದೂ ಆಯುಕ್ತರು ಹೇಳಿದರು.

‘ಕೋವಿಡ್ ಪ್ರಕರಣಗಳು ತೀವ್ರವಾಗಿದ್ದಾಗ ಬಿಬಿಎಂಪಿಯ ಸಿಸಿಸಿಗಳಲ್ಲಿ ಏಕಕಾಲಕ್ಕೆ 5 ಸಾವಿರ ಜನ ಚಿಕಿತ್ಸೆ ಪಡೆಯುತ್ತಿದ್ದರು. ಒಟ್ಟಾರೆ 16 ಸಾವಿರ ಜನ ಚಿಕಿತ್ಸೆ ಪಡೆದಿದ್ದರು’ ಎಂದರು.

‘ಒಂದು ಆರೈಕೆ ಕೇಂದ್ರದಲ್ಲಿ ರೋಗಿಯೊಬ್ಬರಿಗೆ ದಿನಕ್ಕೆ ₹1000 ಖರ್ಚು ಮಾಡಬೇಕಾಗುತ್ತದೆ. ರೋಗಿಗಳನ್ನು ಈ ಕೇಂದ್ರಗಳಿಗೆ ಸ್ಥಳಾಂತರಿಸುವ ಮುನ್ನ ಎಲ್ಲ ಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ. ವೈದ್ಯರು, ಶುಶ್ರೂಷಕರು ಮತ್ತು ಸಿಬ್ಬಂದಿ ನಿಯೋಜನೆಯ ಕೆಲಸ ಪೂರ್ಣಗೊಳಿಸಬೇಕಾಗುತ್ತದೆ’ ಎಂದೂ ಅವರು ತಿಳಿಸಿದರು.

ನಗರದ ಕೋವಿಡ್ ಪ್ರಕರಣಗಳು

4,10,811 ಒಟ್ಟು ಸೋಂಕಿತರು

4,00,441 ಗುಣಮುಖರಾದವರು

5,853 ಸಕ್ರಿಯ ಪ್ರಕರಣ

4,516 ಸಾವು

ಶನಿವಾರದ ಏರಿಕೆ

630 ದೃಢಪಟ್ಟ ಪ್ರಕರಣ

785 ಗುಣಮುಖ

0 ಸಾವು



ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಬೇಸರ

‘ಜಾತ್ರೆ ಹೆಸರಿನಲ್ಲಿ ಪ್ರಾಣಿ ಬಲಿ ಅಮಾನುಷ’

ಪ್ರಜಾವಾಣಿ ವಾರ್ತೆ

ಮುತ್ಯಾಲನಗರದ ಶ್ರೀ ಲಕ್ಷ್ಮಿವೆಂಕಟೇಶ್ವರಸ್ವಾಮಿ ದೇವಸ್ಥಾನದ ರಾಜಗೋಪುರ ಕಳಸಾರೋಹಣ ಸಮಾರಂಭದಲ್ಲಿ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಪೂಜೆ ನೆರವೇರಿತು

ರಾಜರಾಜೇಶ್ವರಿನಗರ: ‘ಜಾತ್ರೆಗಳ ಹೆಸರಿನಲ್ಲಿ ಪ್ರಾಣಿ ಬಲಿ ಕೊಡುವ ಮೂಢನಂಬಿಕೆ ಈಗಲೂ ಮುಂದುವರಿಯುತ್ತಿರುವುದು ನಿಜಕ್ಕೂ ಅಮಾನುಷ’ ಎಂದು ಚಿತ್ರದುರ್ಗದ ಸಿದ್ಧರಾಮೇಶ್ವರ ಮಹಾಸಂಸ್ಥಾನ ಭೋವಿ ಗುರುಪೀಠದ ಜಗದ್ಗುರು ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ಮುತ್ಯಾಲನಗರದ ಶ್ರೀ ಲಕ್ಷ್ಮಿವೆಂಕಟೇಶ್ವರಸ್ವಾಮಿ ದೇವಸ್ಥಾನದ ರಾಜಗೋಪುರ ಕಳಸಾರೋಹಣ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

‘ನಂಬಿಕೆಗಳು ಉಳಿಯಬೇಕು. ಆದರೆ, ಮೂಢನಂಬಿಕೆಗಳು ಕೊನೆಯಾಗಬೇಕು. ಜಾತ್ರೆಗಳು ಜಾಗೃತಿಯ ಕೇಂದ್ರಗಳಾಗಬೇಕು. ಜಾತ್ರೆಗಳಲ್ಲಿ ಸಂಸ್ಕಾರ, ಸಂಸ್ಕೃತಿಯ ಉನ್ನತೀಕರಣವಾಗಬೇಕೇ ವಿನಃ ವಿನಾಶವಾಗಬಾರದು. ವೈಜ್ಞಾನಿಕ ಯುಗದಲ್ಲಿ ವೈಚಾರಿಕ ಧರ್ಮವನ್ನು ಒಪ್ಪಿಕೊಳ್ಳದಿದ್ದರೆ ಮತಾಂತರದ ಪಿಡುಗನ್ನು ಎದುರಿಸುವ ಅನಿವಾರ್ಯ ಎದುರಾಗುತ್ತದೆ’ ಎಂದು ಎಚ್ಚರಿಸಿದರು.

‘ನಂಬಿಕೆಗಳು ನಮ್ಮನ್ನು ಕಾಯುತ್ತವೆ ಹಾಗೂ ಬೆಳೆಸುತ್ತವೆ. ನಂಬಿಕೆ ಮತ್ತು ಮೂಢನಂಬಿಕೆ ನಡುವೆ ಸತ್ಯ ಮತ್ತು ಅಸತ್ಯಗಳ ನಡುವೆ ಇರುವಷ್ಟು ಅಂತರವಿದೆ. ಭಾರತದಂತಹ ಬಹುಸಂಸ್ಕೃತಿಯ ದೇಶದಲ್ಲಿ ದೈವ, ಧರ್ಮದ ನಂಬಿಕೆಗಳು ಹೆಚ್ಚು. ಆದರೆ ಮೂಢನಂಬಿಕೆಗಳನ್ನು ನೈಜ ನಂಬಿಕೆಯೆಂದು ಒಪ್ಪಿಕೊಳ್ಳುವುದು ದುರದೃಷ್ಟಕರ’ ಎಂದರು.

ಕಾಂಗ್ರೆಸ್ ಮುಖಂಡ ಎಂ.ಆರ್. ಸೀತಾರಾಂ, ಮುಖಂಡರಾದ ಬಿ.ಆರ್. ನಂಜುಂಡಪ್ಪ, ಮಮತಾ ವಾಸುದೇವ, ಸೂರ್ಯನಾರಾಯಣ್, ಮುರಳೀಧರ ಬಂಡೆ, ಮುನಿಯಪ್ಪ, ಶ್ರೀಲಕ್ಷ್ಮೀವೆಂಕಟೇಶ್ವರಸ್ವಾಮಿ ದೇವಸ್ಥಾನ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಎನ್.ವೆಂಕಟಪ್ಪ, ಕಾರ್ಯದರ್ಶಿ ಎಂ.ನಾಗರಾಜು, ಸಂಘಟನಾ ಕಾರ್ಯದರ್ಶಿ ವಿ.ರಾಮು, ಖಜಾಂಚಿ ನಾರಾಯಣ ಜಿ.ಎಂ.ನಾರಾಯಣ, ಮುನಿಯಪ್ಪ ಎಂ, ಸುಧಾಕರ್, ಬಿ.ಆರ್. ಪುಷ್ಪಾ ಶಿವಶಂಕರ್ ಇದ್ದರು.

ಲಕ್ಷ್ಮೀವೆಂಕಟೇಶ್ವರ ಸ್ವಾಮಿಯ ಸ್ಮರಣೆ, ಆರಾಧನೆ, ಪ್ರಸಾದ ವಿನಿಯೋಗಗಳು ನಡೆದವು.

ಭಾನುವಾರ, ಮಾರ್ಚ್ 14, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 73 | ಪುಟ 22
www.prajavani.net /prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಅಧಿಕಾರದ ಗದ್ದುಗೆ ಏರಿ ಕುಳಿತವರನ್ನೇ ಲೈಂಗಿಕ ಹಗರಣಗಳು ಸುತ್ತಿಕೊಳ್ಳುವುದೇಕೆ? ವಿಷಕನ್ಯೆ, ಮೋಹಿನಿ, ಮಾಯೆ, ಅನಾಮಿಕೆ... ಹೀಗೆ ವಿವಿಧ ಪಾತ್ರ ರೂಪಕಗಳು ಹೇಳುವ ಕಥೆಗಳೇನು? ಒಂದು ಹೊರಳು ನೋಟ



ಟಿಎಂಸಿ ಸೇರಿದ ಯಶವಂತ್ ಸಿನ್ಹಾ 7
ಟಿಕ್ರಿ ಗಡಿಯಲ್ಲಿ ಕಿಸಾನ್ ಸೋಶಿಯಲ್ ಆರ್ಮಿಯಿಂದ ಮನೆ ನಿರ್ಮಾಣ
ಗಣಿಗಾರಿಕೆಗೆ ನಿರ್ಬಂಧ: ಹೆಚ್ಚಿದ ಕರಡಿ ಸಂತತಿ 5
25 ಶಾಶ್ವತ ಮನೆ ಕಟ್ಟಿಕೊಂಡು ರೈತರ ಹೋರಾಟ 7

₹196.2 ಕೋಟಿ ಪರಿಹಾರಕ್ಕೆ ಒಪ್ಪಿದ ಫ್ಲಾಯ್ಡ್ ಕುಟುಂಬ

ಮಿನಿಯಾಪೊಲಿಸ್ (ಎಪಿ): ಅಮೆರಿಕದಲ್ಲಿ ಪೊಲೀಸರ ವಶದಲ್ಲಿದ್ದಾಗಲೇ ಸಾವಿಗೀಡಾಗಿದ್ದ ಕಪ್ಪು ವರ್ಣೀಯ ಜಾರ್ಜ್ ಫ್ಲಾಯ್ಡ್ ಅವರ ಕುಟುಂಬಕ್ಕೆ ಸುಮಾರು ₹196 ಕೋಟಿ (27 ದಶಲಕ್ಷ ಡಾಲರ್) ಪಾವತಿಸಲು ಮಿನಿಯಾಪೊಲಿಸ್ ನಗರ ಕೌನ್ಸಿಲ್ ಒಪ್ಪಿಕೊಂಡಿದೆ.

ಶುಕ್ರವಾರ, ಕೌನ್ಸಿಲ್ ಸದಸ್ಯರು ಮೊದಲು ಖಾಸಗಿಯಾಗಿ ಚರ್ಚೆ ನಡೆಸಿದರು. ನಂತರ ಬಹಿರಂಗ ಅಧಿವೇಶನದಲ್ಲಿ ಈ ದೊಡ್ಡ ಮೊತ್ತದ ಪರಿಹಾರ ನೀಡುವುದಕ್ಕೆ ಸರ್ವಾನುಮತದ ಬೆಂಬಲ ಸೂಚಿಸಿದರು.

ಇದು ವಿಚಾರಣೆಯ ಪೂರ್ವದಲ್ಲೇ ಇತ್ಯರ್ಥಗೊಂಡ ಅತಿ ಹೆಚ್ಚಿನ ಪರಿಹಾರ ಮೊತ್ತವಾಗಿದೆ ಎಂದು ಫ್ಲಾಯ್ಡ್ ಕುಟುಂಬದ ಅಟಾರ್ನಿ ಬೆನ್ ಕ್ರಂಪ್ ಹೇಳಿದರು. ಫ್ಲಾಯ್ಡ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸ್ ಅಧಿಕಾರಿಗಳ ವಿಚಾರಣೆಯೂ ಮುಂದುವರಿಯಲಿದೆ.

‘ನನ್ನ ಸೋದರ ಈಗ ಇಲ್ಲ. ಆದರೆ ಆತ ನನ್ನ ಹೃದಯದಲ್ಲಿದ್ದಾನೆ. ಅವನನ್ನು ಪಡೆಯಲು ಸಾಧ್ಯವಾದರೆ ಪರಿಹಾರ ಮೊತ್ತವನ್ನೆಲ್ಲಾ ವಾಪಸು ಕೊಡುತ್ತೇನೆ’ ಎಂದು ಜಾರ್ಜ್ ಫ್ಲಾಯ್ಡ್ ಸೋದರ ಫಿಲೊನೈಸ್ ಹೇಳಿದರು.

ಕಳೆದ ವರ್ಷದ ಮೇ 25ರಂದು, ಫ್ಲಾಯ್ಡ್ ಸಾವಿಗೀಡಾಗುವ ಮೊದಲು ಅವರ ಕತ್ತನ್ನು ಬಿಳಿಯ ಪೊಲೀಸ್ ಅಧಿಕಾರಿ ಡೆರೆಕ್ ಚೌವಿನ್ 9 ನಿಮಿಷ ಮೊಣಕಾಲಿನಿಂದ ಅದುಮಿದ್ದರು.

ಬಹುಗ್ರಾಮ ಕುಡಿಯುವ ನೀರಿನ ಯೋಜನೆ: 35ಕ್ಕೂ ಅಧಿಕ ಕಡೆ ವಿಫಲ

ದಾಹ ಇಂಗಿಸದ ಯೋಜನೆ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಸರ್ಕಾರ ಜಾರಿಗೊಳಿಸುತ್ತಿರುವ ಮಹತ್ವಾಕಾಂಕ್ಷಿ ಕಾರ್ಯಕ್ರಮವೇ ಬಹುಗ್ರಾಮ ಕುಡಿಯುವ ನೀರು ಪೂರೈಕೆ ಯೋಜನೆ. ಆದರೆ ಈ ಕಾರ್ಯಕ್ರಮದಡಿ ಅನುಷ್ಠಾನಗೊಂಡ 35ಕ್ಕೂ ಅಧಿಕ ಯೋಜನೆಗಳು ಇದುವರೆಗೆ ವಿಫಲಗೊಂಡಿವೆ. ಕೆಲವು ಕಡೆ ಈ ಯೋಜನೆ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿ ನೀರಿನ ಸಮಸ್ಯೆ ಪರಿಹಾರವಾಗಿದೆ.

ರಾಜ್ಯದಲ್ಲಿ 2003ರಿಂದಲೇ ಬಹುಗ್ರಾಮ ಕುಡಿಯುವ ನೀರು ಪೂರೈಕೆ ಯೋಜನೆಗಳು ಆರಂಭವಾದವಾಗಿದ್ದರೂ, ಈ ಕಾರ್ಯಕ್ರಮ ವ್ಯಾಪಕವಾಗಿ ಜಾರಿಯಾಗಿದ್ದು 2008ರ ಬಳಿಕ. ಇದುವರೆಗೆ 465 ಯೋಜನೆಗಳು ಪೂರ್ಣಗೊಂಡಿದ್ದು, 30 ಯೋಜನೆಗಳು ಅನುಷ್ಠಾನದ ಹಂತದಲ್ಲಿವೆ. ಪೂರ್ಣಗೊಂಡಿರುವ 35ಕ್ಕೂ ಅಧಿಕ ಯೋಜನೆಗಳ ವ್ಯಾಪ್ತಿಯ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತತ್ವಾರ ಈಗಲೂ ಮುಂದುವರಿದಿದೆ. ವರ್ಷ ಪೂರ್ತಿ ಕುಡಿಯುವ ನೀರನ್ನು ಪೂರೈಸಬಲ್ಲ ಸುಸ್ಥಿರ ಜಲಮೂಲಗಳನ್ನು ಗುರುತಿಸುವಲ್ಲಿ ಆಗಿರುವ ಲೋಪ, ಭ್ರಷ್ಟಾಚಾರ ಹಾಗೂ ಕಳಪೆ ಕಾಮಗಾರಿ ಹಾಗೂ ಅನುಷ್ಠಾನ ಹಂತದಲ್ಲಿನ ತಾಂತ್ರಿಕ ದೋಷಗಳು ಈ ವೈಫಲ್ಯದ ಹಿಂದಿರುವ ಪ್ರಮುಖ ಕಾರಣಗಳು.

ಉದಾಹರಣೆಗೆ, ಕೊಪ್ಪಳ ಜಿಲ್ಲೆಯಲ್ಲಿ ಈ ಯೋಜನೆಯಡಿ ನಿಯಂತ್ರಿತ ಜಲಾಶಯಗಳರೂಪದಲ್ಲಿ ನಿರ್ಮಿಸಿರುವ

ಒಳನೋಟ
ನೀಗದ ನೀರಿನ ಬವಣೆ
ಪ್ರತಿಕ್ರಿಯಿಸಿ: 9606038256

> **ಯೋಜನೆಯ ವೈಫಲ್ಯಕ್ಕೆ ಕಾರಣರಾದ ಅಧಿಕಾರಿಗಳನ್ನು ಶಿಕ್ಷೆಗೆ ಗುರಿಪಡಿಸುತ್ತಿದ್ದೇವೆ. ಭ್ರಷ್ಟಾಚಾರಕ್ಕೆ ಅವಕಾಶ ಆಗದಂತೆ ಕಠಿಣ ಕ್ರಮ ಕೈಗೊಂಡಿದ್ದೇವೆ**
> **ಎಲ್.ಕೆ.ಅತೀಕ್,** ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಕೆರೆಗಳಲ್ಲಿ ನೀರೇ ನಿಲ್ಲುತ್ತಿಲ್ಲ. ಇದಕ್ಕೆ ಯೋಜನೆ ರೂಪುರೇಷೆಯಲ್ಲಿದ್ದ ದೋಷದ ಜೊತೆಗೆ ಕಳಪೆ ಕಾಮಗಾರಿಯೂ ಕಾರಣ ಎಂಬುದು ಮೇಲ್ನೋಟಕ್ಕೆ ಸಾಬೀತಾಗಿದ್ದರಿಂದ ಇದರ ಅನುಷ್ಠಾನದ ಹೊಣೆ ಹೊತ್ತಿದ್ದ ಎಂಜಿನಿಯರ್‌ಗಳ ವಿರುದ್ಧ ಇಲಾಖಾ ವಿಚಾರಣೆ ನಡೆದಿದೆ. ಈ ಜಿಲ್ಲೆಯ ಮುಂಡರಗಿ ಹಂತ–1 ಮತ್ತು ಹಂತ–2ರಲ್ಲಿ ಅಳವಡಿಸಿದ್ದ ಕೊಳವೆಗಳೇ ಕಿತ್ತುಹೋಗಿವೆ. ಬಾಗಲಕೋಟೆ ಜಿಲ್ಲೆಯಲ್ಲೂ ಈ ಯೋಜನೆಯಡಿ ನಿರ್ಮಿಸಿದ ಕೆರೆಗಳಲ್ಲಿ ನೀರು ನಿಂತಿಲ್ಲ.

‘ಎಲ್ಲೆಲ್ಲ ಯೋಜನೆ ವಿಫಲವಾಗಿವೆಯೋ ಅವುಗಳಿಗೆ ಕಾರಣ ಪತ್ತೆಹಚ್ಚಲು ಇಲಾಖೆ ತನಿಖೆ ನಡೆಸಲಾಗಿದೆ. ಇದುವರೆಗೆ 15ಕ್ಕೂ ಅಧಿಕ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಗುತ್ತಿಗೆದಾರರಿಂದ ನಷ್ಟ ವಸೂಲಿಗೂ ಕ್ರಮ ಕೈಗೊಳ್ಳಲಾಗಿದೆ’ ಎನ್ನುತ್ತಾರೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಲ್.ಕೆ. ಅತೀಕ್.

ಈ ಯೋಜನೆಯ ಆರಂಭದ ವರ್ಷಗಳಲ್ಲಿ ನೀರು ಪೂರೈಸಲು ಗ್ಲಾಸ್ ರಿಇನ್‌ಫೋರ್ಸ್‌ಡ್ ಪೈಪ್‌ಗಳನ್ನು (ಜಿಆರ್‌ಪಿ) ಬಳಸಲಾಗುತ್ತಿತ್ತು. ಈ ಪೈಪ್ ಬಳಸಿರುವಲ್ಲೆಲ್ಲಾ ಸಮಸ್ಯೆಗಳು ಕಾಣಿಸಿಕೊಂಡಿದ್ದು ಜಾಸ್ತಿ. ಈ ಕೊಳವೆಗಳ ಗುಣಮಟ್ಟ ಕಳಪೆಯಾಗಿತ್ತು. ಈಗ ಇಂತಹ ಪೈಪ್‌ಗಳ ಬಳಕೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸ್ಥಗಿತಗೊಳಿಸಿದೆ.

ಕಲಬುರ್ಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನಲ್ಲಿ ಭೀಮಾ ನದಿಗೆ ನಿರ್ಮಿಸಿರುವ ಜಾಕ್ ವೆಲ್ –ಪ್ರಜಾವಾಣಿ ಚಿತ್ರ

ಅಂಕಿ ಅಂಶ

- **465** ರಾಜ್ಯದಾದ್ಯಂತ ಅನುಷ್ಠಾನಗೊಂಡಿರುವ ಬಹುಗ್ರಾಮ ಕುಡಿಯುವ ನೀರು ಪೂರೈಕೆ ಯೋಜನೆಗಳು
- **430** ಯಶಸ್ವಿಯಾಗಿ ನೀರು ಪೂರೈಕೆ ಮಾಡುತ್ತಿರುವ ಯೋಜನೆಗಳು
- **30** ಅನುಷ್ಠಾನದ ಹಂತದ ಯೋಜನೆಗಳು

(ಯೋಜನೆಗಳಿಗೆ ಇದುವರೆಗೆ ತಗಲಿರುವ ಒಟ್ಟು ವೆಚ್ಚದ ಮಾಹಿತಿ ಲಭ್ಯ ಇಲ್ಲ. ಯೋಜನೆಯ ವ್ಯಾಪ್ತಿ ಹಾಗೂ ಗಾತ್ರಕ್ಕೆ ಅನುಗುಣವಾಗಿ ಅವುಗಳಿಗೆ ನೀಡುವ ಅನುದಾನದ ಪ್ರಮಾಣವೂ ವ್ಯತ್ಯಾಸವಾಗುತ್ತದೆ)

6ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 6

ಗಡಿ ವಿಚಾರ ಕೆದಕಿದ ಶಿವಸೇನಾ

ಬೆಳಗಾವಿಗೆ ಸರ್ವಪಕ್ಷ ನಿಯೋಗ ಕಳುಹಿಸಲು ಸಲಹೆ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ಆಡಳಿತಾರೂಢ ಶಿವಸೇನಾ ಪಕ್ಷವು ಕರ್ನಾಟಕ–ಮಹಾರಾಷ್ಟ್ರ ಗಡಿ ವಿಚಾರವನ್ನು ಮತ್ತೊಮ್ಮೆ ಕೆದಕಿದೆ. ‘ಬೆಳಗಾವಿಯಲ್ಲಿ ನೆಲೆಸಿರುವ ಮರಾಠಿಗರನ್ನು ಅಪರಾಧಿಗಳಂತೆ ನೋಡಲಾಗುತ್ತಿದೆ. ಮಹಾರಾಷ್ಟ್ರದಿಂದ ಸರ್ವಪಕ್ಷಗಳ ನಿಯೋಗವೊಂದನ್ನು ಅಲ್ಲಿಗೆ ಕಳುಹಿಸಿ, ಅಲ್ಲಿ ನೆಲೆಸಿರುವ ಮರಾಠಿ ಭಾಷಿಗರಿಗೆ ಬೆಂಬಲ ನೀಡಬೇಕು’ ಎಂದು ಪಕ್ಷದ ವಕ್ತಾರ, ರಾಜ್ಯಸಭೆಯ ಸದಸ್ಯ ಸಂಜಯ್ ರಾವುತ್ ಶನಿವಾರ ಒತ್ತಾಯಿಸಿದ್ದಾರೆ.

‘ಕಳೆದ ಎಂಟು ದಿನಗಳಲ್ಲಿ ಬೆಳಗಾವಿಯಲ್ಲಿ ಶಿವಸೇನಾದ ನಾಯಕರು ಹಾಗೂ ಪಕ್ಷದ ಕಚೇರಿಯ ಮೇಲೆ ಕನ್ನಡಪರ ಸಂಘಟನೆಗಳವರು ದಾಳಿ ನಡೆಸಿದ್ದಾರೆ. ಇದರ ಹಿಂದೆ ಬಿಜೆಪಿಯ ಕುಮ್ಮಕ್ಕು ಇದೆ ಎಂದು ಅವರು ಆರೋಪಿಸಿದರು.

‘ಮಹಾರಾಷ್ಟ್ರ ಮತ್ತು ಕರ್ನಾಟಕದ ಮಧ್ಯೆ ಇರುವುದು ಭಾಷೆಯ ಸಮಸ್ಯೆಯೇ ವಿನಾ ಭಾರತ– ಪಾಕಿಸ್ತಾನ ಸಮಸ್ಯೆಯಲ್ಲ. ಅದನ್ನು ತುಂಬ ದೀರ್ಘ ಎಳೆಯಬಾರದು. ಅದು ಕರ್ನಾಟಕ ಸರ್ಕಾರದ ಹೊಣೆಯೂ ಆಗಿದೆ. ಅಲ್ಲಿ ಪರಿಸ್ಥಿತಿ ಕೈಮೀರಿ ಹೋದರೆ, ಶಿವಸೇನಾ ಅಥವಾ ಮಹಾರಾಷ್ಟ್ರ ಸರ್ಕಾರವನ್ನು ದೂಷಿಸಬಾರದು’ ಎಂದು ಅವರು ಶನಿವಾರ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

ಬೆಳಗಾವಿಯ ಸ್ಥಿತಿಗೆ ಕೇಂದ್ರ ಸರ್ಕಾರವೇ ಕಾರಣ ಎಂದು ಆರೋಪಿಸಿರುವ ಅವರು, ‘ಚುನಾವಣೆ ಎದುರಿಸುತ್ತಿರುವ ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ಹಿಂಸಾಚಾರಗಳು ಕೇಂದ್ರ ಸರ್ಕಾರಕ್ಕೆ ಕಾಣಿಸುತ್ತಿವೆ. ಆದರೆ, ಬೆಳಗಾವಿಯ ಬೆಳವಣಿಗೆಯ ಬಗ್ಗೆ ಕುರುಡಾಗಿದೆ. ಈ ವಿಚಾರದಲ್ಲಿ ಮಹಾರಾಷ್ಟ್ರ ಸರ್ಕಾರ ಕಠಿಣ ನಿಲುವನ್ನು ತಳೆಯಬೇಕಾಗಿದೆ’ ಎಂದು ಹೇಳಿದರು.

4ನೇ ಪುಟ ನೋಡಿ

ಮೋದಿ ಮಧ್ಯಪ್ರವೇಶಕ್ಕೆ ಮನವಿ

‘ಗಡಿ ವಿವಾದ ಬಗೆಹರಿಸಲು ಪ್ರಧಾನಿ ನರೇಂದ್ರ ಮೋದಿ ಮಧ್ಯಪ್ರವೇಶಿಸಬೇಕು’ ಎಂದು ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಕೋರಿದರು.

‘ಕೊಲ್ಹಾಪುರದಲ್ಲಿ ಶಿವಸೇನಾದ ಕಾರ್ಯಕರ್ತರ ಪುಂಡಾಟಿಕೆ ಮಿತಿ ಮೀರಿದೆ. ಮಿತ್ರಪಕ್ಷಗಳ ಅಸಹಕಾರದಿಂದ ಬೇಸತ್ತಿರುವ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಜನರ ಗಮನ ಬೇರೆಡೆ ಸೆಳೆಯಲು ಗಡಿ ಖ್ಯಾತೆ ತೆಗೆಯುತ್ತಿದ್ದಾರೆ’ ಎಂದು ಅವರು ಅಥಣಿಯಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡುತ್ತಾ ಹೇಳಿದರು.

ಸಾಸಿವೆ ಕಾಳಷ್ಟೂ ಜಾಗ ಬಿಡೆವು

‘ಮರಾಠಿಗರ ಪುಂಡಾಟಿಕೆ ಸಹಿಸುವುದಿಲ್ಲ. ಸಾಸಿವೆ ಕಾಳಿನಷ್ಟು ಜಾಗವನ್ನೂ ಮಹಾರಾಷ್ಟ್ರಕ್ಕೆ ಬಿಟ್ಟುಕೊಡುವುದಿಲ್ಲ’ ಎಂದು ಸಮಾಜ ಕಲ್ಯಾಣ ಸಚಿವ ಬಿ. ಶ್ರೀರಾಮುಲು ಹೇಳಿದರು. ಚಿತ್ರದುರ್ಗ ತಾಲ್ಲೂಕಿನ ಬೆಳಗಟ್ಟ ಗ್ರಾಮದಲ್ಲಿ ಶನಿವಾರ ಮಾತನಾಡಿದ ಅವರು, ‘ನಾಡು–ನುಡಿಯ ವಿಚಾರದಲ್ಲಿ ಪಕ್ಷಭೇದ ಮರೆತು ಹೋರಾಟಕ್ಕೆ ಸಿದ್ಧನಿದ್ದೇನೆ. ಯಾವ ಕಾರಣಕ್ಕೂ ಭೂಮಿ ಬಿಟ್ಟುಕೊಡುವುದಿಲ್ಲ’ ಎಂದರು.

ಕೊಲ್ಹಾಪುರಕ್ಕೆ ಬಸ್ ಸ್ಥಗಿತ

ಬೆಳಗಾವಿ: ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಶಿವಸೇನಾ ಕಾರ್ಯಕರ್ತರು ಕರ್ನಾಟಕದ ಬಸ್‌ಗಳಿಗೆ ಮಸಿ ಬಳಿಯುವ ಕೃತ್ಯ ಆರಂಭಿಸಿದ್ದರಿಂದ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು (ಎನ್‌ಡಬ್ಲ್ಯುಕೆಆರ್‌ಟಿಸಿ) ಅಲ್ಲಿಗೆ ಬಸ್‌ಗಳ ಕಾರ್ಯಾಚರಣೆಯನ್ನು ಶನಿವಾರ ಬೆಳಿಗ್ಗೆಯಿಂದ ಸ್ಥಗಿತಗೊಳಿಸಿದೆ.

ಕೊಲ್ಹಾಪುರದಲ್ಲಿ ಶಿವಸೇನಾ ಕಾರ್ಯಕರ್ತರು ಕನ್ನಡದ ನಾಮಫಲಕಗಳಿಗೆ ಮಸಿ ಬಳಿದಿದ್ದರು. ಇದಕ್ಕೆ ಪ್ರತೀಕಾರ ಎನ್ನುವಂತೆ, ಕನ್ನಡಪರ ಹೋರಾಟಗಾರರು ನಗರದ ಹೊರವಲಯದಲ್ಲಿ ಮರಾಠಿ ಫಲಕಗಳಿಗೆ ಮಸಿ ಬಳಿದಿದ್ದರು. ಇದಕ್ಕೆ ಪ್ರತಿಯಾಗಿ ಕೊಲ್ಹಾಪುರ ಬಸ್ ನಿಲ್ದಾಣದಲ್ಲಿ ಶುಕ್ರವಾರ ರಾತ್ರಿ ರಾಜ್ಯದ ಬಸ್‌ಗಳ ಮುಂದಿನ ಗಾಜುಗಳಿಗೆ, ಪೊಲೀಸರ ಸಮ್ಮುಖದಲ್ಲೇ ಮಸಿ ಬಳಿದಿದ್ದಾರೆ. ಇದರಿಂದ, ಉದ್ವಿಗ್ನ ಪರಿಸ್ಥಿತಿ ಉಂಟಾಗಿದ್ದು, ಬಸ್‌ಗಳ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿದೆ.

4ನೇ ಪುಟ ನೋಡಿ

ಬರೆಯದ ಕಥೆಗಳು

ಬಸ್ ಬಿಡಿಸಿದರು, ಪತ್ರಿಕೆ ತರಿಸಿದರು ನೋಡಿ...!
ಪತ್ರಕರ್ತರು ಕಂಡು ಕೇಳಿದ, ಆದರೆ ಬರೆಯದ ಕೌತುಕಗಳು ನಿಮ್ಮ Prajavani.net ನಲ್ಲಿ ವಿಶೇಷ ಸರಣಿ

ವಿಡಿಯೊ ನೋಡಲು QR ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಇಂದಿನ ಪಾಡ್‌ಕಾಸ್ಟ್ ವಿಶೇಷ

ಪ್ರಜಾವಾಣಿ ಕನ್ನಡ ಧ್ವನಿ
ವೈದ್ಯ ಮಿತ್ರ ಕಥಾ ಸಾಗರ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ

ಜಾರಕಿಹೊಳಿ ಸಿ.ಡಿ. ಪ್ರಕರಣಕ್ಕೆ ಮತ್ತೊಂದು ತಿರುವು

ವಿಡಿಯೊ ಹರಿಬಿಟ್ಟ ಯುವತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಮ್ಮ ತೇಜೋವಧೆ ಮಾಡಲು ಸಿ.ಡಿ ಷಡ್ಯಂತ್ರ ರೂಪಿಸಿರುವವರ ಬಗ್ಗೆ ತನಿಖೆ ನಡೆಸಬೇಕು’ ಎಂದು ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ದೂರು ನೀಡಿರುವ ಬೆನ್ನಲ್ಲೇ, ಸಂತ್ರಸ್ತೆ ಎನ್ನಲಾಗಿರುವ ಯುವತಿ ರಕ್ಷಣೆ ಕೋರಿ ವಿಡಿಯೊ ಬಿಡುಗಡೆ ಮಾಡಿದ್ದಾರೆ.

‘ತಮ್ಮನ್ನು ರಾಜಕೀಯವಾಗಿ ಮುಗಿಸಲು ‘ಮಹಾನಾಯಕ’ ಷಡ್ಯಂತ್ರ ರೂಪಿಸಿದ್ದಾರೆ. ದೂರಿನಲ್ಲಿ ಎಲ್ಲ ವಿವರ ನೀಡುವೆ’ ಎಂದು ಹೇಳಿದ್ದ ರಮೇಶ ಜಾರಕಿಹೊಳಿ, ದೂರಿನಲ್ಲಿ ಯಾವುದನ್ನೂ ಉಲ್ಲೇಖಿಸಿಲ್ಲ. ಇದರ ಹಿಂದೆ ಹಲವರಿದ್ದಾರೆ ಎಂದಷ್ಟೇ ಹೇಳಿದ್ದಾರೆ. ದೂರು ಆಧರಿಸಿ ಎಫ್‌ಐಆರ್ ದಾಖಲಾಗಿದೆ.

ದೂರು ದಾಖಲಿಸಿದ ಮಹಿಳಾ ಆಯೋಗ

ಸಂತ್ರಸ್ತ ಯುವತಿಯು ರಕ್ಷಣೆ ಕೋರಿ ವಿಡಿಯೊ ಬಿಡುಗಡೆ ಮಾಡುತ್ತಿದ್ದಂತೆ, ರಾಜ್ಯ ಮಹಿಳಾ ಆಯೋಗವು ಶನಿವಾರ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದೆ. ‘ಯುವತಿಯು ಭಯಗೊಂಡಿರುವುದು ಮತ್ತು ಆತಂಕದಲ್ಲಿರುವುದು ಅವರ ಹೇಳಿಕೆಯಿಂದ ಸ್ಪಷ್ಟವಾಗುತ್ತಿದೆ. ಅವರಿಗೆ ರಕ್ಷಣೆ ಒದಗಿಸುವುದು ಸರ್ಕಾರದ ಜವಾಬ್ದಾರಿ. ಗೃಹ ಸಚಿವರು ಮತ್ತು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಸೇರಿದಂತೆ ಸಂಬಂಧಪಟ್ಟ ಎಲ್ಲರಿಗೂ ಈ ಬಗ್ಗೆ ಆಯೋಗದಿಂದ ಪತ್ರ ಬರೆಯಲಾಗುವುದು’ ಎಂದು ಆಯೋಗದ ಅಧ್ಯಕ್ಷೆ ಪ್ರಮೀಳಾ ನಾಯ್ಡು ತಿಳಿಸಿದರು.

ಈ ಬೆಳವಣಿಗೆ ಮಧ್ಯೆಯೇ 34 ಸೆಕೆಂಡ್ ಅವಧಿಯ ವಿಡಿಯೊ ಬಿಡುಗಡೆ ಮಾಡಿರುವ ಸಂತ್ರಸ್ತೆ, ತನಗೆ ಹಾಗೂ ತನ್ನ ಕುಟುಂಬಕ್ಕೆ ರಕ್ಷಣೆ ನೀಡುವಂತೆ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರನ್ನು ಕೋರಿದ್ದಾರೆ.

4ನೇ ಪುಟ ನೋಡಿ

> **ಪ್ರಕರಣದ ವಿಚಾರಣೆಯನ್ನು ಎಸ್‌ಐಟಿಗೆ ವಹಿಸಿದ ಬಳಿಕ ನಾನು ಯಾವುದೇ ರೀತಿಯ ಹೇಳಿಕೆ ಕೊಡುವುದು ಸರಿಯಲ್ಲ. ವಿಚಾರಣೆ ಬಳಿಕ ಎಲ್ಲವೂ ಹೊರಗೆ ಬರುತ್ತದೆ**
> **ಬಸವರಾಜ ಬೊಮ್ಮಾಯಿ**
> ಗೃಹ ಸಚಿವ

ಏ.1ರಿಂದ ಹಳೆಯ ಸರ್ಕಾರಿ ವಾಹನ ನೋಂದಣಿ ನವೀಕರಣ ಇಲ್ಲ

ನವದೆಹಲಿ(ಪಿಟಿಐ): ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ನೀಡಿರುವ ಪ್ರಸ್ತಾವನೆಯು ಅಂತಿಮಗೊಂಡರೆ, 15 ವರ್ಷಕ್ಕಿಂತ ಹಳೆಯ ಸರ್ಕಾರಿವಾಹನಗಳ ನೋಂದಣಿ ನವೀಕರಣವು ಏಪ್ರಿಲ್ 1ರ ಬಳಿಕ ಸಾಧ್ಯವಾಗುವುದಿಲ್ಲ.

ಸರ್ಕಾರದ ಎಲ್ಲಾ ವಾಹನಗಳಿಗೆ; ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಕೇಂದ್ರಾಡಳಿತ ಪ್ರದೇಶಗಳು, ಕೇಂದ್ರೋದ್ಯಮಗಳು, ಮಹಾನಗರ ಪಾಲಿಕೆ ಮತ್ತು ಸ್ವಾಯತ್ತ ಸಂಸ್ಥೆಗಳ ಎಲ್ಲಾ ವಾಹನಗಳಿಗೂ ಇದು ಅನ್ವಯವಾಗಲಿದೆ.

ಈ ಕುರಿತು ಸಚಿವಾಲಯವು ಶನಿವಾರ ಟ್ವೀಟ್ ಮಾಡಿದೆ.

ಕರಡು ನಿಯಮಗಳ ಕುರಿತು ಪ್ರತಿಕ್ರಿಯೆ, ಸಲಹೆ, ಆಕ್ಷೇಪ ಇದ್ದಲ್ಲಿ 30 ದಿನಗಳ ಒಳಗೆ ತಿಳಿಸುವಂತೆ ಶುಕ್ರವಾರ ಅಧಿಸೂಚನೆ ಹೊರಡಿಸಲಾಗಿದೆ.

ಹಳೆಯ ವಾಹನಗಳನ್ನು ಸ್ವಯಂಪ್ರೇರಿತರಾಗಿ ಗುಜರಿಗೆ ಹಾಕುವ ನೀತಿ ಕೇಂದ್ರ ಬಜೆಟ್‌ನಲ್ಲಿ ಘೋಷಿಸಿದ ನಂತರ ಈ ಬೆಳವಣಿಗೆ ನಡೆದಿದೆ.ಹೊಸ ಗುಜರಿ ನೀತಿಯಿಂದಾಗಿ ₹ 10 ಸಾವಿರ ಕೋಟಿಗಳಷ್ಟು ಹೂಡಿಕೆ ಆಗಲಿದ್ದು, 50 ಸಾವಿರ ಉದ್ಯೋಗ ಸೃಷ್ಟಿ ಆಗುವ ಅಂದಾಜು ಮಾಡಲಾಗಿದೆ.

ಸೋಮವಾರ, ಮಂಗಳವಾರ ಬ್ಯಾಂಕ್ ಮುಷ್ಕರ: ವಹಿವಾಟಿಗೆ ಧಕ್ಕೆ ಸಂಭವ

ಬೆಂಗಳೂರು: ಕೇಂದ್ರ ಸರ್ಕಾರಿ ಸ್ವಾಮ್ಯದ ಎರಡು ಬ್ಯಾಂಕ್‌ಗಳ ಖಾಸಗೀಕರಣ ವಿರೋಧಿಸಿ ಬ್ಯಾಂಕ್ ಒಕ್ಕೂಟಗಳು ಸೋಮವಾರ ಮತ್ತು ಮಂಗಳವಾರ ಮುಷ್ಕರಕ್ಕೆ ಕರೆ ನೀಡಿವೆ.

ಒಂಬತ್ತು ಬ್ಯಾಂಕ್ ಒಕ್ಕೂಟಗಳ ಸಂಯುಕ್ತ ವೇದಿಕೆಯು (ಯುಎಫ್‌ಬಿಯು) ಈ ಮುಷ್ಕರಕ್ಕೆ ಕರೆ ನೀಡಿದ್ದು, ಬ್ಯಾಂಕ್‌ಗಳ 10 ಲಕ್ಷ ಸಿಬ್ಬಂದಿ ಮತ್ತು ಅಧಿಕಾರಿಗಳು ಮುಷ್ಕರದಲ್ಲಿ ಭಾಗವಹಿಸಲಿದ್ದಾರೆ. ಇದರಿಂದ ಬ್ಯಾಂಕಿಂಗ್ ಸೇವೆಗಳ ಮೇಲೆ ಪರಿಣಾಮ ಉಂಟಾಗುವ ಸಾಧ್ಯತೆ ಇದೆ. ಮುಷ್ಕರದ ದಿನಗಳಲ್ಲಿ ಕಚೇರಿಗಳು ಮತ್ತು ಶಾಖೆಗಳ ಕಾರ್ಯಾಚರಣೆಯಲ್ಲಿ ಯಾವುದೇ ವ್ಯತ್ಯಯ ಆಗದಂತೆ ಮಾಡಲು ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಹೀಗಿದ್ದರೂ ಸೇವೆಗಳ ಮೇಲೆ ಪರಿಣಾಮ ಉಂಟಾಗುವ ಸಾಧ್ಯತೆ ಇದೆ ಎಂದು ಎಸ್‌ಬಿಐ, ಕೆನರಾ ಬ್ಯಾಂಕ್ ಸೇರಿದಂತೆ ಹಲವು ಬ್ಯಾಂಕ್‌ಗಳು ಈಗಾಗಲೇ ಗ್ರಾಹಕರಿಗೆ ಸೂಚನೆ ನೀಡಿವೆ.

ಕೋವಿಡ್ ಪ್ರಕರಣಗಳ ಏರುಗತಿ: ಹೆಚ್ಚಿದ ಆತಂಕ

ಮಹಾರಾಷ್ಟ್ರ, ಪಂಜಾಬ್‌ನಲ್ಲಿ ರಾತ್ರಿ ಕರ್ಫ್ಯೂ

ನವದೆಹಲಿ (ಪಿಟಿಐ): ಕೋವಿಡ್ ಪ್ರಕರಣಗಳು ಏರುಗತಿಯಲ್ಲಿದ್ದು, ಆತಂಕ ಹೆಚ್ಚಿಸಿದೆ. 24ಗಂಟೆಗಳಲ್ಲಿ 24,882 ಹೊಸ ಪ್ರಕರಣ ದಾಖಲಾಗಿದೆ. ಇವು ಕಳೆದ 83 ದಿನಗಳ ಅವಧಿಯಲ್ಲಿ ದಾಖಲಾದ ಗರಿಷ್ಠ ಸಂಖ್ಯೆಯ ಪ್ರಕರಣಗಳು.

ಮಹಾರಾಷ್ಟ್ರ, ಕೇರಳ, ಪಂಜಾಬ್, ಕರ್ನಾಟಕ, ಗುಜರಾತ್ ಹಾಗೂ ತಮಿಳುನಾಡಿನಲ್ಲಿ ಪ್ರಕರಣಗಳು ಹೆಚ್ಚುತ್ತಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಪ್ರಕಟಿಸಿದೆ. ಇದರ ಬೆನ್ನಲ್ಲೇ ಕಟ್ಟೆಚ್ಚರ ವಹಿಸಲು ಸರ್ಕಾರಗಳು ಒತ್ತು ನೀಡಿದೆ.

ಮಹಾರಾಷ್ಟ್ರ, ಪಂಜಾಬ್ ಮತ್ತು ಮಧ್ಯಪ್ರದೇಶ ರಾಜ್ಯ ಸರ್ಕಾರಗಳು ಸೋಂಕು ಹೆಚ್ಚಿರುವ ಕೆಲ ಜಿಲ್ಲೆಗಳಲ್ಲಿ ಲಾಕ್‌ಡೌನ್ ಮತ್ತು ರಾತ್ರಿ ಕರ್ಫ್ಯೂ ಕ್ರಮಗಳಿಗೆ ಮುಂದಾಗಿವೆ.

ಕಳೆದ 24 ಗಂಟೆಗಳಲ್ಲಿ 24,882 ಪ್ರಕರಣ ದಾಖಲಾಗಿದ್ದು, 140 ಮಂದಿ ಮೃತಪಟ್ಟಿದ್ದಾರೆ. ಈ ಹಿಂದೆ ಗರಿಷ್ಠ ಸಂಖ್ಯೆಯಲ್ಲಿ ಅಂದರೆ 26,624 ಪ್ರಕರಣಗಳು ಕಳೆದ 2020ರ ಡಿಸೆಂಬರ್ 20ರಂದು ವರದಿಯಾಗಿದ್ದವು.

ಮಹಾರಾಷ್ಟ್ರ ಸರ್ಕಾರ ನಾಗಪುರ, ಠಾಣೆ ಸೇರಿ ಹಲವು ಜಿಲ್ಲೆಗಳಲ್ಲಿ ನಿರ್ಬಂಧ ಹೇರಿದೆ. ಪುಣೆಯಲ್ಲಿ ರಾತ್ರಿ ಕರ್ಫ್ಯೂ ವಿಧಿಸಲಾಗಿದೆ. 15ರಿಂದ ನಾಗ್ಪುರದಲ್ಲಿ ಲಾಕ್‌ಡೌನ್ ಜಾರಿಗೆ ಬರಲಿದೆ. ಪಂಜಾಬ್ ಸರ್ಕಾರ 8 ಜಿಲ್ಲೆಗಳಲ್ಲಿ ರಾತ್ರಿ ಕರ್ಫ್ಯೂ ವಿಧಿಸಿದ್ದು, ಮುಂಜಾಗ್ರತೆ ಕ್ರಮವಾಗಿ ಶಾಲೆಗಳಿಗೆ ರಜೆಯನ್ನು ಘೋಷಿಸಿದೆ.

ಮಧ್ಯಪ್ರದೇಶ ಸರ್ಕಾರವೂ ರಾತ್ರಿ ಕರ್ಫ್ಯೂ ವಿಧಿಸಲು ಮುಂದಾಗಿದೆ. ಇಂದೋರ್ ಮತ್ತು ಭೋಪಾಲ್‌ನಲ್ಲಿ ಭಾನುವಾರ ಅಥವಾ ಸೋಮವಾರದಿಂದ ರಾತ್ರಿ ಕರ್ಫ್ಯೂ ಜಾರಿಗೆ ಬರಲಿದೆ ಎಂದು ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಹೇಳಿದರು.

ಇನ್ನಷ್ಟು ಸುದ್ದಿಗಳು 12

ಮನೆಯ ಮೇಲೆ ಸೌರವಿದ್ಯುತ್ ಘಟಕ ಅಳವಡಿಕೆ

ಶುಲ್ಕದ ಭಾರ: ಉತ್ಪಾದನೆಯ ದಾರಿ

• ಗುರು ಪಿ. ಎಸ್.

ಬೆಂಗಳೂರು: ತಿಂಗಳಿಗೆ ₹9 ಸಾವಿರಕ್ಕಿಂತಲೂ ಹೆಚ್ಚು ವಿದ್ಯುತ್ ಶುಲ್ಕದ ಹೊರೆ ತಾಳಲಾಗದೇ ತಾವೇ ವಿದ್ಯುತ್ ಉತ್ಪಾದನೆಗೆ ತೊಡಗಿ, ಅದರಲ್ಲೇ ಲಾಭ ಗಳಿಸಲಾರಂಭಿಸಿದವರ ಕಥನವೊಂದು ಇಲ್ಲಿದೆ.

ಬ್ರೆಡ್ ಅಂಡ್ ಜಾಮ್ ಸ್ಟುಡಿಯೊ ಮಾಲೀಕ, ಡ್ರಮ್ ವಾದಕ ಪೃಥ್ವಿ ಮಾಂಗಿರಿ ಅವರು, ಬನ್ನೇರುಘಟ್ಟದ ಅರೆಕೆರೆ ಹತ್ತಿರವಿರುವ ತಮ್ಮ ಮನೆಯ ಮೇಲೆ ಸೌರವಿದ್ಯುತ್ ಘಟಕ ನಿರ್ಮಿಸಿಕೊಂಡು ಹೊಸ ಮಾದರಿ ಹಾಕಿಕೊಟ್ಟಿದ್ದಾರೆ.

‘ನನ್ನ ಡ್ರಮ್ ವಾದನ ಅಭ್ಯಾಸದಿಂದ ತೊಂದರೆಯಾಗುತ್ತಿದೆ ಎಂದು ನೆರೆ–ಹೊರೆಯವರು ಪದೇ ಪದೇ ತಕರಾರು ಎತ್ತುತ್ತಿದ್ದರು. ಪೊಲೀಸರಿಗೆ ದೂರು ಕೊಡುವ ಮಟ್ಟಕ್ಕೂ ಹೋಗಿದ್ದರು. ಕೋಣೆಯಿಂದ ಶಬ್ದ ಆಚೆ ಹೋಗದಿರುವ ವ್ಯವಸ್ಥೆ (ಸೌಂಡ್ ಪ್ರೂಫ್) ಅಳವಡಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ಇದಕ್ಕಾಗಿ ಎಸಿ ಸೇರಿದಂತೆ ಇನ್ನಿತರ ವ್ಯವಸ್ಥೆಗೆ ಹೆಚ್ಚು ಖರ್ಚು ಮಾಡಬೇಕಾಯಿತು. ಮೊದಲು ತಿಂಗಳಿಗೆ ₹1,500ದಷ್ಟು ಬರುತ್ತಿದ್ದ ವಿದ್ಯುತ್ ಶುಲ್ಕ ಒಂದೆರಡು ತಿಂಗಳು ₹9000ದವರೆಗೆ ಬಂದಿತು’ ಎಂದು ಪೃಥ್ವಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ದುಬಾರಿ ಶುಲ್ಕದ ಸಮಸ್ಯೆ ತಪ್ಪಿಸಿಕೊಳ್ಳುವ ಉದ್ದೇಶದಿಂದ ಮನೆಯ ಮೇಲೆ ಸೌರವಿದ್ಯುತ್ ಘಟಕವನ್ನು ಅಳವಡಿಸಿಕೊಂಡೆವು’ ಎಂದು ಅವರು ಹೇಳಿದರು.

ಪೃಥ್ವಿ ಮಾಂಗಿರಿ ಅವರ ಮನೆಯ ಮೇಲೆ ಅಳವಡಿಸಲಾಗಿರುವ ಸೌರ ಫಲಕಗಳು

ಪ್ರಜಾವಾಣಿ ವಿಶೇಷ

5B ಪುಟ ನೋಡಿ

ಸೌರವಿದ್ಯುತ್ ಘಟಕ: ಅಳವಡಿಕೆ ಪ್ರಕ್ರಿಯೆ ಹೇಗೆ?

- ನಿಮ್ಮ ಮನೆಯ ಆರ್.ಆರ್. ಸಂಖ್ಯೆ ನಮೂದಿಸಿ ಬೆಸ್ಕಾಂ ವೆಬ್‌ಸೈಟ್‌ನಲ್ಲಿ (https://bescom.karnataka.gov.in) ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕು
- ಆರ್.ಆರ್. ಸಂಖ್ಯೆ ನಂತರ ಮೊಬೈಲ್ ಸಂಖ್ಯೆ ನಮೂದಿಸಿ, ಉಪವಿಭಾಗ ಆಯ್ಕೆ ಮಾಡಿ ಸೌರಘಟಕಕ್ಕೆ ಅರ್ಜಿ ಸಲ್ಲಿಸಬೇಕು
- ಬೆಸ್ಕಾಂ ಹಾಗೂ ಮನೆಯ ಮಾಲೀಕರ ಮಧ್ಯೆ ವಿದ್ಯುತ್ ಖರೀದಿ ಒಪ್ಪಂದ ನಡೆಯುತ್ತದೆ.
- ಗ್ರಿಡ್‌ಗೆ ಪೂರೈಕೆಯಾಗುವ ವಿದ್ಯುತ್ ಆಧಾರದ ಮೇಲೆ ಮನೆಯ ಮಾಲೀಕರಿಗೆ ಬೆಸ್ಕಾಂ ಹಣ ಪಾವತಿಸುತ್ತದೆ.

ಮಾಹಿತಿಗೆ–080–22340816.

ಭಾರತೀಯ ಸ್ಟೇಟ್ ಬ್ಯಾಂಕ್

ಬೆಂಗಳೂರು ನಗರ ಶಾಖೆ (00814), ಬೆಂಗಳೂರು

ಅಧಿಕೃತ ಅಧಿಕಾರಿಗಳ ವಿವರ :
ಹೆಸರು : ಶ್ರೀ ದಿಲೀಪ್ ಎ ಕೆಂಭಾವಿ,
ಮುಖ್ಯ ಪ್ರಬಂಧಕರು
ಮೊಬೈಲ್ : +91 9448993310
ದೂರವಾಣಿ (ಕಚೇರಿ): 080-22232929
E-mail ID: sbi.00814@sbi.co.in

ಶಾಖೆಯ ವಿಳಾಸ : ನಂ. 22, ಜೆ.ಸಿ.ರಸ್ತೆ, ಬೆಂಗಳೂರು - 560 002
ಫೋನ್ : 080-22232929
RMSME :ಶ್ರೀ ರಾಜನ್ ಜಾಕೋಬ್, 8970334407
ಟೆಲಿ ಫ್ಯಾಕ್ಸ್: 080- 22216699,
E-mail Id: sbi.00814@sbi.co.in

ಅಪೆಂಡಿಕ್ಸ್ - IV ಎ

[ನಿಯಮ 8(6)ರ ನಿಬಂಧನೆಯ ಅನ್ವಯ]

ದಿನಾಂಕ 30.03.2021ರಂದು ಇ-ಹರಾಜು

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟ ಸೂಚನೆ

ಸೆಕ್ಯುರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002 ಮತ್ತು ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ನಿಯಮ 8(6) ಮತ್ತು 9(1)ರ ನಿಬಂಧನೆಗಳನ್ನು ಓದಿಕೊಂಡಂತೆ ಇದರ ಅನ್ವಯ ಬ್ಯಾಂಕಿಗೆ ಅಡಮಾನ/ಚಾರ್ಜ್ ಮಾಡಿರುವ ಸ್ಥಿರಾಸ್ತಿಗಳ (ಆರವಣದಲ್ಲಿರುವ ಚರಾಸ್ತಿಗಳನ್ನು ಹೊರತುಪಡಿಸಿ) ಇ-ಹರಾಜು ಮಾರಾಟ ಸೂಚನೆ

ನಿರ್ದಿಷ್ಟವಾಗಿ ಸಾಲಗಾರರಿಗೆ/ಅಡಮಾನುದಾರರಿಗೆ /ಜಾಮೀನುದಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರ್‌ರಾದ ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು ಇವರಿಗೆ ಅಡಮಾನ/ ಚಾರ್ಜ್ ಮಾಡಿರುವ ಈ ಕೆಳಗೆ ವಿವರಿಸಿರುವ ಆಸ್ತಿಯನ್ನು ಬ್ಯಾಂಕಿನ ಅಧಿಕೃತ ಅಧಿಕಾರಿಯವರು ರಚನಾತ್ಮಕವಾಗಿ ಸ್ವಾಧೀನ್ಯಕ್ಕೆ ಪಡೆದುಕೊಂಡಿದ್ದು ಅದನ್ನು **'ಎಲ್ಲಿ ಹೇಗಿದೆಯೊ ಹಾಗೆ'** ಮತ್ತು **'ಎಲ್ಲಿ ಏನಿದೆಯೋ ಹಾಗೆ'** ಮತ್ತು **'ಅಲ್ಲಿ ಏನಿದೆಯೋ ಹಾಗೆ'** ಆಧಾರದ ಮೇಲೆ ಭಾರತೀಯ ಸ್ಟೇಟ್ ಬ್ಯಾಂಕ್, ಇವರಿಗೆ ಸಾಲಗಾರರಾದ / ಅಡಮಾನುದಾರರಾದ **ನಿರ್ವಾಹಕ ನಿರ್ದೇಶಕರು, ಮೆ।। ವೇದಿಕ್ ಇಸ್ಪಾಟ್ ಪ್ರೈ. ಲಿ., ನೋಂದಾಯಿತ ಕಚೇರಿ :** ನಂ. 503, 5ನೇ ಮಹಡಿ, 'ಪ್ರೈಡ್ ಹುಲ್‌ಕಲ್', ನಂ. 116, ಲಾಲ್‌ಬಾಗ್ ರಸ್ತೆ, ಬೆಂಗಳೂರು – 560 027, **ಪ್ರಸ್ತುತ ನಂ. 707**, 22ನೇ ಅಡ್ಡ ರಸ್ತೆ, 19ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070 , **ಕಾರ್ಖಾನೆ ವಿಳಾಸ** :ಪ್ಲಾಟ್ ನಂ. 30, ಎಪಿಐಐಸಿ, ಗೊಲ್ಲಪುರಂ ಇಂಡಸ್ಟ್ರಿಯಲ್ ಪಾರ್ಕ್, ಹಿಂದುಪುರ ಮಂಡಲ್, ಅನಂತಪುರ ಜಿಲ್ಲೆ (ಆಂಧ್ರಪ್ರದೇಶ) ಮತ್ತು ಜಾಮೀನುದಾರರಾದ (1) **ಶ್ರೀ ನರೇಂದ್ರ ಕುಮಾರ್ ಭುತಾರ** S/o. ಶ್ರೀ ಸುಗನ್ ಚಂದ್ ಭುತಾರ, ನಂ. 707, 22ನೇ ಅಡ್ಡ ರಸ್ತೆ, 19ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070, (2) **ಶ್ರೀ ಶರದ್ ಭುತಾರ** S/o. ಶ್ರೀ ರಾಜಾರಾಮ್ ಭುತಾರ, ನಂ. 555, 'ನ್ಯೂಹೋಪ್', 22ನೇ 'ಎ' ಅಡ್ಡ ರಸ್ತೆ, 13ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070 (3) **ಶ್ರೀ ರಾಮ್‌ಬಿಲಾಸ್ ಭುತಾರ** S/o. ಶ್ರೀ ಸುಗನ್ ಚಂದ್ ಭುತಾರ, ನಂ. 569, 'ಶಾಶ್ವತ್', 23ನೇ ಅಡ್ಡ ರಸ್ತೆ, 14ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070 (4) **ಶ್ರೀ ರಾಜಾರಾಮ್ ಭುತಾರ** S/o. ಶ್ರೀ ಸುಗನ್ ಚಂದ್ ಭುತಾರ, ನಂ. 555, 'ನ್ಯೂಹೋಪ್', 22ನೇ 'ಎ' ಅಡ್ಡ ರಸ್ತೆ, 13ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070, (5) **ಶ್ರೀ ಮಹೇಂದ್ರ ಕುಮಾರ್ ಭುತಾರ** S/o. ಶ್ರೀ ಸುಗನ್ ಚಂದ್ ಭುತಾರ, 'ಭುತಾರ ಭವನ್', ಸೆಂದ್ರ ರಸ್ತೆ, ಬೀವರ್, ರಾಜಸ್ಥಾನ್, (6) **ಶ್ರೀಮತಿ ಸರಳಾ ಭುತಾರ** W/o. ಶ್ರೀ ರಾಜಾರಾಮ್ ಭುತಾರ, ನಂ. 555, 'ನ್ಯೂಹೋಪ್', 22ನೇ 'ಎ' ಅಡ್ಡ ರಸ್ತೆ, 13ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070 (7) **ಶ್ರೀಮತಿ ಸರಿತಾ ಭುತಾರ** W/o. ಶ್ರೀ ನರೇಂದ್ರ ಕುಮಾರ್ ಭುತಾರ, ನಂ. 707, 22ನೇ ಅಡ್ಡ ರಸ್ತೆ, 19ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070, ಇವರಿಂದ ಬರಬೇಕಾದ ಬಾಕಿ ಮೊತ್ತ **ರೂ.47,72,75,919 /-** (ರೂಪಾಯಿ ನಲವತ್ತೇಳು ಕೋಟಿ ಎಪ್ಪತ್ತೆರಡು ಲಕ್ಷದ ಎಪ್ಪತ್ತೈದು ಸಾವಿರದ ಒಂಬೈನೂರ ಹತ್ತೊಂಬತ್ತು ಮಾತ್ರ) ದಿನಾಂಕ 11.03.2021 ರಂತೆ ಮತ್ತು ದಿನಾಂಕ .12.03.2021ರಿಂದ ಒಪ್ಪಂದದ ದರದಲ್ಲಿ ಬಡ್ಡಿ +ಸಾಂದರ್ಭಿಕ ಖರ್ಚು, ವೆಚ್ಚ ಇತ್ಯಾದಿಗಳ ವಸೂಲಿಗಾಗಿ ದಿನಾಂಕ **30.03.2021** ರಂದು ಮಾರಾಟ ಮಾಡಲಾಗುವುದು.

ಮಾರಾಟಕ್ಕಿರುವ ಆಸ್ತಿಯ ಮೀಸಲು ಬೆಲೆ , ಮುಂಗಡ ಠೇವಣಿ (ಇಎಂಡಿ), ಬಿಡ್ ಗುಣಾಂಕ , ಇ-ಹರಾಜು ಮಾರಾಟದ ಸಮಯ ಮತ್ತು ಕೆವೈಸಿ ದಾಖಲೆಗಳೊಂದಿಗೆ ಇಎಂಡಿ ಮೊತ್ತವನ್ನು ಸಲ್ಲಿಸಲು ಕೊನೆಯ ದಿನಾಂಕದ ವಿವರಗಳು ಈ ಕೆಳಗಿನಂತಿವೆ :

ಆಸ್ತಿ ನಂ. 1 ಮತ್ತು 2 ಒಟ್ಟು ಸೇರಿ ಮೀಸಲು ಬೆಲೆ (ಈ ಮೊತ್ತಕ್ಕಿಂತ ಕಡಿಮೆ ಬೆಲೆಗೆ ಆಸ್ತಿಯನ್ನು ಮಾರಾಟಮಾಡಲಾಗುವುದಿಲ್ಲ	ಮುಂಗಡ ಠೇವಣಿ (ಇಎಂಡಿ)	ಬಿಡ್ ಗುಣಾಂಕ	ಆಸ್ತಿಯ ಇ-ಹರಾಜಿನ ಸಮಯ	ಕೆವೈಸಿ ದಾಖಲೆಗಳೊಂದಿಗೆ ಇಎಂಡಿಯನ್ನು ಸಲ್ಲಿಸಲು ಕೊನೆಯ ದಿನಾಂಕ
ರೂ.1,27,00,000/-	ರೂ.12,70,000/-	ರೂ.1,00,000/-	30.03.2021ಮಧ್ಯಾಹ್ನ 2.30 ರಿಂದ ಮಧ್ಯಾಹ್ನ 3.30ರವರೆಗೆ	29.03.2021 ಸಂಜೆ 4.00 ಘಂಟೆಯವರೆಗೆ

ಆಸ್ತಿಗಳ ವಿವರ

TENDER NO: SBI/BCB/GWR/EA/2020-21/07:

ಐಸಿಐಸಿಐ ಬ್ಯಾಂಕಿನೊಂದಿಗೆ ಮೊದಲ ಪಾರಿಪಾಸು ಚಾರ್ಜ್

ಆಸ್ತಿ ನಂ. 1: ಬೆಂಗಳೂರು ದಕ್ಷಿಣ ತಾಲೂಕು, ಉತ್ತರಹಳ್ಳಿ ಹೋಬಳಿ, ದೊಡ್ಡಕಲ್ಲಸಂದ್ರ ಗ್ರಾಮ, ಅಶ್ವತ್ಥಪ್ಪ ಲೇಔಟ್ , ಹಾಲಿ ಗೋಕುಲ್ ನಗರ , 2ನೇ ಮುಖ್ಯ ರಸ್ತೆ , ಇಲ್ಲಿರುವ ಖಾಲಿ ನಿವೇಶನದ ದಕ್ಷಿಣದ ಭಾಗದಲ್ಲಿರುವ ವಾಸಯೋಗ್ಯ ಆಸ್ತಿಯ ನಂ. 240/41(2402/41), ಖಾತಾ ನಂ. 724, ಅಸೆಸ್‌ಮೆಂಟ್ ನಂ. 48/2, ಅಳತೆ ಪೂರ್ವದಿಂದ ಪಶ್ಚಿಮಕ್ಕೆ 60 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 20 ಅಡಿ ಒಟ್ಟು 1200 ಚದರ ಅಡಿ ಇದರಲ್ಲಿರುವ ಸಣ್ಣ ಶೆಡ್ ಸಮೇತ ಈ ಆಸ್ತಿಯು **ಶ್ರೀಮತಿ ಸರಿತಾ ಭುತಾರ** W/o. ಶ್ರೀ ನರೇಂದ್ರ ಕುಮಾರ್ ಭುತಾರ ಇವರ ಹೆಸರಿಗೆ ದಿನಾಂಕ 01.10.2007ರ ಕ್ರಯ ಪತ್ರ ಮತ್ತು ದಾಖಲೆ ನಂ. JPN-1-03453/2007-08 ಮತ್ತು CD No.JPND12 ರಂತೆ ದಿನಾಂಕ 01.10.2007ರಂದು ಎಸ್‌ಆರ್‌ಒ , ಜೆ. ಪಿ. ನಗರ, ಬೆಂಗಳೂರು ಇಲ್ಲಿ ನೊಂದಣಿಯಾಗಿದ್ದು ಈ ಆಸ್ತಿಯ ಚಕ್ಕುಬಂದಿ : ಪೂರ್ವಕ್ಕೆ : ಕೆ. ಅಶ್ವತ್ಥರವರ ಆಸ್ತಿ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಆಸ್ತಿ ನಂ. 41ರ ಉಳಿದ ಭಾಗ. ದಕ್ಷಿಣಕ್ಕೆ : ಆಸ್ತಿ ನಂ. 42.

(ಈ ಆಸ್ತಿಯು ಭಾರತೀಯ ಸ್ಟೇಟ್ ಬ್ಯಾಂಕ್ ಮತ್ತು ಐಸಿಐಸಿಐ ಬ್ಯಾಂಕ್ ಇವರಿಂದ ಕಂಪನಿಯು ಪಡೆದುಕೊಂಡಿರುವ ಸಾಲ ಸೌಲಭ್ಯಗಳಿಗೆ ಸಾಮಾನ್ಯ ಭದ್ರತೆಯಾಗಿದೆ)

ಮೀಸಲು ಬೆಲೆ : ರೂ.64,00,000/-

ಆಸ್ತಿ ನಂ. 2: ಬೆಂಗಳೂರು ದಕ್ಷಿಣ ತಾಲೂಕು, ಉತ್ತರಹಳ್ಳಿ ಹೋಬಳಿ, ದೊಡ್ಡಕಲ್ಲಸಂದ್ರ ಗ್ರಾಮ, ಅಶ್ವತ್ಥಪ್ಪ ಲೇಔಟ್ , ಹಾಲಿ ಗೋಕುಲ್ ನಗರ , 2ನೇ ಮುಖ್ಯ ರಸ್ತೆ , ಇಲ್ಲಿರುವ ಖಾಲಿ ನಿವೇಶನದ ಉತ್ತರದ ಭಾಗದಲ್ಲಿರುವ ವಾಸಯೋಗ್ಯ ಆಸ್ತಿಯ ನಂ. 240/41(2402/41), ಖಾತಾ ನಂ. 724, ಅಸೆಸ್‌ಮೆಂಟ್ ನಂ. 48/2, ಅಳತೆ ಪೂರ್ವದಿಂದ ಪಶ್ಚಿಮಕ್ಕೆ 60 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 20 ಅಡಿ ಒಟ್ಟು 1200 ಚದರ ಅಡಿ ಈ ಆಸ್ತಿಯು **ಶ್ರೀ ನರೇಂದ್ರ ಕುಮಾರ್ ಭುತಾರ** S/o. ಶ್ರೀ ಸುಗನ್ ಚಂದ್ ಭುತಾರ , ಇವರ ಹೆಸರಿಗೆ ದಿನಾಂಕ 01.10.2007ರ ಕ್ರಯ ಪತ್ರ ಮತ್ತು ದಾಖಲೆ ನಂ. JPN-1-03454/2007-08 ಮತ್ತು CD No.JPND12ರಂತೆ ದಿನಾಂಕ 01.10.2007ರಂದು ಎಸ್‌ಆರ್‌ಒ , ಜೆ. ಪಿ. ನಗರ, ಬೆಂಗಳೂರು ಇಲ್ಲಿ ನೊಂದಣಿಯಾಗಿದ್ದು ಈ ಆಸ್ತಿಯ ಚಕ್ಕುಬಂದಿ : ಪೂರ್ವಕ್ಕೆ : ಕೆ. ಅಶ್ವತ್ಥರವರ ಆಸ್ತಿ , ಪಶ್ಚಿಮಕ್ಕೆ : ರಸ್ತೆ , ಉತ್ತರಕ್ಕೆ : ಆಸ್ತಿ ನಂ. 40, ದಕ್ಷಿಣಕ್ಕೆ : ಆಸ್ತಿ ನಂ. 41ರ ಉಳಿದ ಭಾಗ.

(ಈ ಆಸ್ತಿಯು ಭಾರತೀಯ ಸ್ಟೇಟ್ ಬ್ಯಾಂಕ್ ಮತ್ತು ಐಸಿಐಸಿಐ ಬ್ಯಾಂಕ್ ಇವರಿಂದ ಕಂಪನಿಯು ಪಡೆದುಕೊಂಡಿರುವ ಸಾಲ ಸೌಲಭ್ಯಗಳಿಗೆ ಸಾಮಾನ್ಯ ಭದ್ರತೆಯಾಗಿದೆ)

ಮೀಸಲು ಬೆಲೆ : ರೂ.63,00,000/-

ಸೂಚನೆ : ಆಸ್ತಿ ನಂ. 1 ಮತ್ತು ಆಸ್ತಿ ನಂ. 2 ನ್ನು ಒಟ್ಟಾಗಿ ಒಂದೇ ಲಾಟ್‌ನಲ್ಲಿ ಮಾರಾಟ ಮಾಡಲಾಗುವುದು ಅದಕ್ಕನುಗುಣವಾಗಿ
ಮೀಸಲು ಬೆಲೆ : ರೂ. 1,27,00,000/- **ಮುಂಗಡ ಠೇವಣಿ : ರೂ.12,70 000/-**
ಆದ್ದರಿಂದ ಎರಡೂ ಆಸ್ತಿಗಳಿಗೆ ಒಟ್ಟಾಗಿ ಒಂದೇ ಬಿಡ್ಡನ್ನು ಸಲ್ಲಿಸಬೇಕು.

ಮೇಲ್ಕಂಡ ಹರಾಜಿಗೆ ಸಂಬಂಧಿಸಿದ ನಿಯಮ ಮತ್ತು ನಿಬಂಧನೆಗಳ ವಿವರಗಳಿಗೆ ಸೆಕ್ಯೂರ್ಡ್ ಕ್ರೆಡಿಟರ್ ಆದ ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು ನಗರ ಶಾಖೆ, ಬೆಂಗಳೂರು , ಜೆ. ಸಿ. ರಸ್ತೆ ಬೆಂಗಳೂರು ಪ್ರತಿನಿಧಿಸುವ ಇದರ ಅಧಿಕೃತ ಅಧಿಕಾರಿಯವರು ನೀಡಿರುವ ಲಿಂಕ್‌ಗಳಲ್ಲಿ ಅಂದರೆ (1) www.sbi.co.in (2) www.tenders.gov.in and (3) https://bankeauctions.com/Sbi.ನಲ್ಲಿ ವೀಕ್ಷಿಸಬಹುದು

ಆಸ್ತಿಗಳ ಪರಿವೀಕ್ಷಣೆಗೆ ದಯವಿಟ್ಟು ಸಂಪರ್ಕಿಸಿ : 9740367868/9739087288

ಸ್ಥಳ : ಬೆಂಗಳೂರು
ದಿನಾಂಕ : 12.03.2021

ಸಹಿ/-
ಅಧಿಕೃತ ಅಧಿಕಾರಿ

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಆಶಯ

ವಿಭಜಿತ ಮನಸ್ಸುಗಳನ್ನು ಸಾಹಿತ್ಯ ಬೆಸೆಯಿಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇವತ್ತಿನ ವಿಭಜಿತ ಸಮಾಜದಲ್ಲಿ ಸಾಹಿತ್ಯವು ಮನಸ್ಸುಗಳನ್ನು ಒಟ್ಟುಗೂಡಿಸುವ ಸೇತುವೆಯಂತೆ ಕೆಲಸ ಮಾಡಬೇಕಿದೆ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಶನಿವಾರ ಹೇಳಿದರು.

ಸಪ್ನಾ ಬುಕ್ ಹೌಸ್ ಆಯೋಜಿಸಿದ್ದ ಸಾಹಿತಿ ಹಂಪ ನಾಗರಾಜಯ್ಯ ಸಂಪಾದಿಸಿರುವ 'ಕವಿರಾಜಮಾರ್ಗಂ' ಹಾಗೂ 'ವಡ್ಡಾರಾಧನೆ' ಪುಸ್ತಕಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಬಿ.ವಿ.ವಸಂತಕುಮಾರ್ (ಬಲ ತುದಿ) ವಡ್ಡಾರಾಧನೆ ಪುಸ್ತಕ ಬಿಡುಗಡೆ ಮಾಡಿದರು. (ಎಡದಿಂದ) ಲೇಖಕ ಹಂಪ ನಾಗರಾಜಯ್ಯ, ಸಾಹಿತಿಗಳಾದ ಕಮಲಾ ಹಂಪನಾ, ಪಿ.ವಿ.ನಾರಾಯಣ ಮತ್ತು ಟಿ.ಎಸ್.ನಾಗಾಭರಣ ಪ್ರಜಾವಾಣಿ ಚಿತ್ರ

'ಈ ಪುಸ್ತಕಗಳ ಮುಖಾಂತರ ಓದಿನ ಹಸಿವು ಇನ್ನೂ ಹೆಚ್ಚಿಸಿದ್ದೀರಿ. ಇವತ್ತಿನ ಮಕ್ಕಳಿಗೆ ಹಳಗನ್ನಡದ ಪರಿಚಯವಿಲ್ಲ. ಆಯಾ ಕಾಲಘಟ್ಟದಲ್ಲಿ ಅವರಿಗೆ ಹಳಗನ್ನಡ ಹೇಳಿಕೊಡುವ ಕೆಲಸ ಆಗಬೇಕು. ವಿಶ್ವವಿದ್ಯಾಲಯವೊಂದು ಮಾಡಬೇಕಾದ ಕೆಲಸವನ್ನು ಹಂಪನಾ ದಂಪತಿ ಮಾಡಿದ್ದಾರೆ' ಎಂದರು.

ಹಂಪ ನಾಗರಾಜಯ್ಯ, 'ಕವಿರಾಜಮಾರ್ಗ ಹಾಗೂ ವಡ್ಡಾರಾಧನೆ ಹಳಗನ್ನಡ ಸಾಹಿತ್ಯದ ಶ್ವಾಸಕೋಶಗಳು. ಇವು ಕನ್ನಡದಲ್ಲಿ ಉಪಲಬ್ದವಾಗಿರುವ ಮೊಟ್ಟಮೊದಲ ಕೃತಿಗಳು. ಕಥೆಗಳ ಸಂಕಲನ ವಡ್ಡಾರಾಧನೆ ಸೃಜನ ಸಾಹಿತ್ಯವಾದರೆ, ಕವಿರಾಜಮಾರ್ಗ ಸೃಜನೇತರ ಸಾಹಿತ್ಯ. ಎರಡೂ ಕೃತಿಗಳನ್ನು ಸಂಪಾದಿಸಿರುವುದು ಖುಷಿಯ ವಿಚಾರ' ಎಂದರು.

'ಕವಿ ಮಧುರ 1331ರಲ್ಲಿ ಧರ್ಮನಾಥಪುರಾಣವನ್ನು ರಚಿಸಿದ. ಪಂಪನನ್ನು ಆದಿಕವಿ ಎಂದು ಮೊದಲು ಕರೆದಿದ್ದೇ ಆತ. ಕೂಲಯಮಾಲಾ ಎಂಬ ಕಾವ್ಯವು ಕನ್ನಡ ಸಾಹಿತ್ಯಕ್ಕೆ ದೊಡ್ಡ ಪ್ರೇರಣೆ ನೀಡಿತ್ತು. ನಾಗವರ್ಮ ಅದ್ಭುತ ಕವಿ. ಕನ್ನಡ ಭಾಷೆಯನ್ನು ಕನ್ನಡೇತರರಿಗೆ ಪರಿಚಯಿಸುವಲ್ಲಿ ಆತನ ಪಾತ್ರ ಹಿರಿದು' ಎಂದರು.

'ಒಂಬತ್ತನೇ ಶತಮಾನ ಕನ್ನಡ ಸಾಹಿತ್ಯಕ್ಕೆ ದೊಡ್ಡ ಎತ್ತರವನ್ನು ಕೊಟ್ಟ ಕಾಲಘಟ್ಟ. ಇದರ ಬಗ್ಗೆ ಹೆಚ್ಚು ಅಧ್ಯಯನಗಳು ನಡೆಯಬೇಕು. ಈಗಿನ ಯುವಕರು ಈ ನಿಟ್ಟನಲ್ಲಿ ಪ್ರಯತ್ನಿಸಬೇಕು. ಸಂಸ್ಕೃತ ನಮಗೆ ಬೇಕೆ ಬೇಕು. ಪ್ರಾಕೃತ ಭಾಷೆ ಕನ್ನಡಕ್ಕೆ ತುಂಬಾ ಅಗತ್ಯ. ಅದರ ಅಧ್ಯಯನವನ್ನೂ ನಡೆಸಬೇಕು' ಎಂದು ಅಭಿಪ್ರಾಯಪಟ್ಟರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ವಿ.ವಸಂತಕುಮಾರ್, 'ಎಲ್ಲಾ ಕಾಲ, ದೇಶ ಹಾಗೂ ಮತಕ್ಕೂ ಈ ಕೃತಿಗಳು ಪ್ರಸ್ತುತ. ಜೀವನ ಸಿದ್ಧಾಂತವನ್ನು ಕಟ್ಟಿಕೊಡುವ ಈ ಕೃತಿಗಳು ಮತ್ತೆ ಮತ್ತೆ ಪ್ರಕಟಣೆಗೊಳ್ಳಬೇಕು. ವಡ್ಡಾರಾಧನೆಯು ಸಾಹಿತ್ಯಿಕ ಕೃತಿ ಮಾತ್ರವಲ್ಲ, ಅದು ಸಂಸ್ಕೃತಿಯ ಖಜಾನೆ' ಎಂದು ಅಭಿಪ್ರಾಯಪಟ್ಟರು.

ಸಾಹಿತಿ ಪಿ.ವಿ.ನಾರಾಯಣ, 'ಕವಿರಾಜಮಾರ್ಗಕಾರನ ಬಗ್ಗೆ ಹಂಪನಾ ಅವರು ಕೃತಿಯಲ್ಲಿ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಮೂರು ಜನ ಶ್ರೀವಿಜಯರಿದ್ದರು. ಆ ಪೈಕಿ ಕವಿರಾಜಮಾರ್ಗವನ್ನು ಬರೆದಿದ್ದು ಎರಡನೇ ಶ್ರೀವಿಜಯ ಎಂದು ಉಲ್ಲೇಖಿಸಿದ್ದಾರೆ. ಶ್ರೀವಿಜಯ ಅನೇಕ ಪ್ರಥಮಗಳ ಸರದಾರ ಎಂದೂ ಹಂಪನಾ ಬಣ್ಣಿಸಿದ್ದಾರೆ' ಎಂದರು.

ಸಂಕ್ಷಿಪ್ತ ಸುದ್ದಿ

ಏ.2ರಿಂದ ಅನುವಾದ ಕಮ್ಮಟ

ಬೆಂಗಳೂರು: ಕನ್ನಡ ಕಾಯಕ ವರ್ಷದ ಅಂಗವಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಬಿ.ಎಂ.ಶ್ರೀ. ಪ್ರತಿಷ್ಠಾನದ ವತಿಯಿಂದ ಏ. 2 ರಿಂದ 4ರವರೆಗೆ ಅನುವಾದ ಕಮ್ಮಟ ಏರ್ಪಡಿಸಲಾಗಿದೆ.

ಅಭ್ಯರ್ಥಿಗಳು ಕನಿಷ್ಠ ಪದವಿ ವಿದ್ಯಾರ್ಹತೆ ಹಾಗೂ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರೌಢಿಮೆ ಹೊಂದಿರಬೇಕು. ಶಿಬಿರದಲ್ಲಿ 30 ಮಂದಿಗಷ್ಟೇ ಅವಕಾಶವಿದೆ.

ಆಸಕ್ತರು ಇದೇ 22ರೊಳಗೆ ಶಿಬಿರದ ನಿರ್ದೇಶಕರಾದ ಎಂ.ಅಬ್ದುಲ್ ರೆಹಮಾನ್ ಪಾಷ ಅವರ ಬಳಿ ಹೆಸರು ನೋಂದಾಯಿಸಿಕೊಳ್ಳಬಹುದು.

ಸಂಪರ್ಕ: 9845299621ಗೆ

ವಿದ್ಯಾರ್ಥಿಗಳಿಗೆ ಸೈಕಲ್ ವಿತರಣೆ 17ಕ್ಕೆ

ಬೆಂಗಳೂರು: ಸಂತೋಷ್ ಕುಮಾರ್ ಚಾರಿಟಬಲ್ ಟ್ರಸ್ಟ್, ಸಂಪುಟ ಟ್ರಸ್ಟ್ ಹಾಗೂ ಬಯಾಸ್ ಕಾರ್ಪೊರೇಷನ್ ಕಂಪನಿ ವತಿಯಿಂದ ಇದೇ 17ರಂದು ವಿದ್ಯಾರ್ಥಿಗಳಿಗೆ ಉಚಿತವಾಗಿ ಸೈಕಲ್ ವಿತರಿಸಲಾಗುತ್ತಿದೆ. ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ 30 ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ. ಬೇಗೂರು ಬಳಿಯ ಅಕ್ಷಯ ನಗರದ ಸುಬ್ರಹ್ಮಣ್ಯಮಠದಲ್ಲಿ ಅಂದು ಬೆಳಿಗ್ಗೆ 9ಕ್ಕೆ ಕಾರ್ಯಕ್ರಮ ನಡೆಯಲಿದೆ. ಮಾಹಿತಿಗೆ, ಯು. ಪ್ರಭಾಕರ್ ರಾವ್ (98866-89820) ಅವರನ್ನು ಸಂಪರ್ಕಿಸಬಹುದು.

JOCKEY
FACTORY SECONDS
UPTO 50% OFF*
INNERWEAR | LEISUREWEAR | ACTIVEWEAR
KIDSWEAR | SOCKS
• 10 am to 8 pm • Open on Sundays • Master/Visa Card Accepted
* T & C apply

Venues in Bangalore

- Gandhi Bazaar: Sree Nagareshwaraswamy Kalyana Mantapa, No.92/2, East Anjaneya Temple Street, Basavanagudi - 560 004
- Jayanagar: Prema Chandra Kalyana Mahal, #264/266, T.Mariyappa Road, 2nd Block, (Near Ashoka Pillar) - 560 011
- Bannerghatta Road: Santhome Parish Church Hall, Hulimavu, Near Meenakshi Mall - 560 076
- Banashankari: Nagalakshmi Kalyana Mantapa, No.5, II Stage, Near Post Office - 560 070
- Malleswaram: The Canara Union, No.42, 8th Main, Canara Union Road - 560 003
- Vijay Nagar: Five O Gallery, No.50, 17th Cross, M.C. Road, Near Vijay Nagar Bus Stop - 560 040
- Rajajinagar: Raja Rajeshwari Kalyana Mantapa, No. 608/C, 2nd Block, Dr. Rajkumar Road - 560 010
- Rajarajeswari Nagar: Vasavi Mahal Kalyana Mantapa, No.606, Next To Reliance Digital, Ideal Homes I Phase - 560 098
- Koramangala: Apoorva International, #35A, Raheja Arcade, Opp Star Box - 560 095
- Basavanagudi: Amolak Apparels, #104, Bull Temple Road, Near Ramakrishna Ashram - 560 019

Org. by: Surya Agency Pvt. Ltd.

ಟಿಪ್ಪು ಶಸ್ತ್ರಾಗಾರಕ್ಕೆ ಹೊಸ ರೂಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆ, ಗಾಳಿ, ಬಿಸಿಲಿನಿಂದಾಗಿ ತನ್ನ ಮೂಲ ರೂಪವನ್ನೇ ಕಳೆದುಕೊಂಡಿದ್ದ ಟಿಪ್ಪು ಸುಲ್ತಾನ್ ಶಸ್ತ್ರಾಗಾರಕ್ಕೆ ಕೊನೆಗೂ ಜೀವ ಕಳೆ ಲಭಿಸುತ್ತಿದೆ.

ಕಲಾಸಿಪಾಳ್ಯದಲ್ಲಿರುವ ಸುಮಾರು 230 ವರ್ಷಗಳಷ್ಟು ಹಳೆಯದಾದ ಈ ಶಸ್ತ್ರಾಗಾರದ ನವೀಕರಣ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ರಾಜ್ಯ ಪುರಾತತ್ವ ಇಲಾಖೆಯು ಇದಕ್ಕಾಗಿ ₹35 ಲಕ್ಷ ವಿನಿಯೋಗಿಸುತ್ತಿದೆ.

ಬೆಂಗಳೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆಯ ಹಿಂಭಾಗದಲ್ಲಿ ಈ ಶಸ್ತ್ರಾಗಾರವಿದೆ. ಬೆಂಗಳೂರು ಅರಮನೆಯ ರಕ್ಷಣೆಯ ದೃಷ್ಟಿಯಿಂದ ಟಿಪ್ಪು ಇಲ್ಲಿ ಮದ್ದುಗುಂಡುಗಳನ್ನು ಸಂಗ್ರಹಿಸಿಡುತ್ತಿದ್ದ ಎನ್ನಲಾಗಿದೆ. 15 ಅಡಿ ಅಗಲ ಹಾಗೂ 22 ಅಡಿ ಆಳವಿರುವ ಈ ಶಸ್ತ್ರಾಗಾರವನ್ನು ಮಲಗಿರುವ ಆನೆಯ ವಿನ್ಯಾಸದಲ್ಲಿ ನಿರ್ಮಿಸಲಾಗಿದೆ.

ಕಲಾಸಿಪಾಳ್ಯದಲ್ಲಿರುವ ಟಿಪ್ಪು ಶಸ್ತ್ರಾಗಾರದ ನೋಟ –ಪ್ರಜಾವಾಣಿ ಚಿತ್ರ

ಇದಕ್ಕೆ ಎರಡು ಕಿಟಕಿಗಳಿದ್ದು ಮೂರು ಮುಖ್ಯ ದ್ವಾರಗಳಿದ್ದವು. ಕಬ್ಬಿಣದ ಬಾಗಿಲುಗಳನ್ನು ಅಳವಡಿಸಲಾಗಿತ್ತು. ಆದರೆ, ಈಗ ಬಾಗಿಲುಗಳಿಲ್ಲ.

ಕಾರ್ಮಿಕರು ಈಗಾಗಲೇ ಶಸ್ತ್ರಾಗಾರದ ಹೊರ ಗೋಡೆಯ ಮೇಲ್ಪದರದ ಮಣ್ಣು ತೆಗೆದು ವೈಟ್ ಸಿಮೆಂಟ್ ಲೇಪಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಮಳೆಗಾಲ ಆರಂಭಕ್ಕೂ ಮುನ್ನವೇ ಕೆಲಸ ಮುಗಿಯಬಹುದು ಎಂದು ತಿಳಿಸಿದ್ದಾರೆ.

UPDATE YOUR HOME WITH EXCITING DEALS & DISCOUNTS!

MODERN SOFAS | IMPORTED SOFAS
DINING FURNITURE
CROCKERY CUPBOARDS
CARVED WOODEN SOFA
ETHNIC SOFAS
HOME DECOR PRODUCT
PHOTO FRAMES
WATER FOUNTAIN
MASSAGE CHAIR
ACCENT CHAIRS

GIRIAS
THE CONSUMER DURABLE PEOPLE
Since 1971
PRESENTS

LIFESTYLE
AUTOMOBILE
&
FURNITURE
EXPO 2021

ENTRY FREE

TV9 ಕನ್ನಡ

LAST DAY TODAY
TRIPURAVASINI PALACE GROUND,
NEAR MEKHRI CIRCLE, BENGALURU
(TIMING : 10.00 AM TO 8.30 PM)

LED TV | REFRIGERATOR | MICROWAVE OVEN | AIR CONDITIONER
AIR COOLER | WASHING MACHINE | HOME THEATER

CARS | MOTOR BIKES
AUTO COMPONENTS & ACCESSORIES

BEDROOM SETS | BUNK BED
CURTAINS & NIGHT STANDS
LEATHER RECLINER SOFA
MATTRESSES & PILLOWS
CARVED WOOD SWING
GAZEBO TENT | UMBRELLA
OUTDOOR SWING
MOBILES & LAPTOPS

COVID-19 PROTOCOL FOLLOWED INSIDE THE VENUE
AMPLE PARKING SPACE AVAILABLE
FOR DETAILS CONTACT
+91 88846 88894
+91 90080 26117
ASSOCIATE SPONSORS
AMRITH NONI
Jeeni
A Product by Karnataka Farmer
MILLET HEALTH MIX
POWERED BY
iads & events
COMPLETE BUSINESS SOLUTIONS

ಇಬ್ಬರ ಬಂಧನ: ₹ 6.90 ಲಕ್ಷ ಮೌಲ್ಯದ ಚಿನ್ನಾಭರಣ ವಶ

ಕದ್ದ ಬೈಕ್‌ನಲ್ಲಿ ಸರ ಕಳವು

ಪ್ರಜಾವಾಣಿ ವಾರ್ತೆ

ಬಂಧಿತ ಆರೋಪಿಗಳು ಹಾಗೂ ಅವರನ್ನು ಬಂಧಿಸಿದ ಪೊಲೀಸರ ತಂಡ

ಬೆಂಗಳೂರು: ಬೈಕ್‌ಗಳನ್ನು ಕದ್ದು, ಅದೇ ಬೈಕ್‌ನಲ್ಲಿ ನಗರದಲ್ಲಿ ಸುತ್ತಾಡಿ ಸರಗಳವು ಮಾಡುತ್ತಿದ್ದ ಆರೋಪದಡಿ ಇಬ್ಬರನ್ನು ಸಂಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟದ ಆಸಿಫ್ ಪಾಷಾ (28) ಮತ್ತು ಬೆಂಗಳೂರು ಕಾವಲ್ ಭೈರಸಂದ್ರದ ಅರ್ಷದ್ ಖಾನ್ (21) ಬಂಧಿತರು. ಅವರಿಂದ ₹ 6.90 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಬೈಕ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಯುಎಎಸ್ ಲೇಔಟ್ ಬಳಿ ನಿಲ್ಲಿಸಿದ್ದ ಮಗನ ಬೈಕ್ ಕಳುವಾದ ಬಗ್ಗೆ ಮಹಿಳೆಯೊಬ್ಬರು ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಆರೋಪಿಗಾಗಿ ಶೋಧ ನಡೆಸಲಾಗುತ್ತಿತ್ತು. ಫೆ. 28ರಂದು ಭೂಪಸಂದ್ರ ಬಸ್ ತಂಗುದಾಣ ಬಳಿ ಗಸ್ತಿನಲ್ಲಿದ್ದ ಪೊಲೀಸರು, ಆರೋಪಿಯ ಬೈಕ್ ತಡೆದು ಪರಿಶೀಲನೆ ನಡೆಸಿದ್ದರು. ಬೈಕ್‌ಗೆ ಯಾವುದೇ ದಾಖಲೆ ಇರಲಿಲ್ಲ. ಆರೋಪಿಯನ್ನು ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗಲೇ ಕೃತ್ಯ ಬಯಲಾಗಿದೆ’ ಎಂದೂ ತಿಳಿಸಿದರು.

‘ಅಪರಾಧ ಹಿನ್ನೆಲೆಯುಳ್ಳ ಆರೋಪಿಗಳು, ದರೋಡೆ ಪ್ರಕರಣದಲ್ಲೂ ಭಾಗಿಯಾಗಿ ಜೈಲಿಗೂ ಹೋಗಿ ಜಾಮೀನು ಮೇಲೆ ಹೊರ ಬಂದಿದ್ದರು. ಒಟ್ಟಿಗೆ ಸೇರಿ ಸರಗಳವು ಮಾಡಲು ಮುಂದಾಗಿದ್ದರು. ಮನೆ ಮುಂದೆ ಹಾಗೂ ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸುತ್ತಿದ್ದ ಬೈಕ್‌ಗಳನ್ನು ಕದಿಯುತ್ತಿದ್ದ ಆರೋಪಿಗಳು, ಅದೇ ಬೈಕ್‌ನಲ್ಲಿ ನಗರದಲ್ಲಿ ಸುತ್ತಾಡುತ್ತಿದ್ದರು.’

‘ಬೆಳಿಗ್ಗೆ, ಸಂಜೆ ಹಾಗೂ ರಾತ್ರಿ ವೇಳೆ ಒಬ್ಬಂಟಿಯಾಗಿ ರಸ್ತೆಯಲ್ಲಿ ನಡೆದುಕೊಂಡು ಹೋಗುವ ಮಹಿಳೆಯರನ್ನು ಹಿಂಬಾಲಿಸುತ್ತಿದ್ದ ಆರೋಪಿಗಳು, ಅವರ ಸರ ಕಿತ್ತುಕೊಂಡು ಪರಾರಿಯಾಗುತ್ತಿದ್ದರು. ಆರೋಪಿಗಳ ಬಂಧನದಿಂದ ನಾಲ್ಕು ಸರಗಳವು ಪ್ರಕರಣಗಳು ಪತ್ತೆಯಾಗಿವೆ’ ಎಂದೂ ಪೊಲೀಸರು ಹೇಳಿದರು.

ಲಾಡ್ಜ್‌ನಲ್ಲಿದ್ದ ಟಿ.ವಿ, ಮೊಬೈಲ್ ಕದಿಯುತ್ತಿದ್ದ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಲಾಡ್ಜ್‌ಗಳಲ್ಲಿ ವಾಸವಿದ್ದು ಕೊಠಡಿಯಲ್ಲಿರುತ್ತಿದ್ದ ಟಿ.ವಿ ಹಾಗೂ ಮೊಬೈಲ್ ಕದ್ದೊಯ್ಯುತ್ತಿದ್ದ ಆರೋಪದಡಿ ವಿಜಯ್ ಅಶೋಕ್ ಕಾಳೆ (32) ಎಂಬುವರನ್ನು ಬಂಧಿಸಲಾಗಿದೆ.

‘ಹೈದರಾಬಾದ್ ನಿವಾಸಿ ವಿಜಯ್, ಆಗಾಗ ಬೆಂಗಳೂರಿಗೆ ಬಂದು ಕೃತ್ಯ ಎಸಗಿ ಪರಾರಿಯಾಗುತ್ತಿದ್ದರು. ಅವರನ್ನು ಬಂಧಿಸಿ ₹ 2.70 ಲಕ್ಷ ಮೌಲ್ಯದ 9 ಟಿ.ವಿ.ಗಳು ಹಾಗೂ 4 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮೆಜೆಸ್ಟಿಕ್ ಬಳಿಯ ಲಾಡ್ಜ್‌ವೊಂದರಲ್ಲಿ ಇತ್ತೀಚೆಗೆ ವಾಸವಿದ್ದ ಆರೋಪಿ, ತಮ್ಮ ದೊಡ್ಡ ಬ್ಯಾಗ್‌ನಲ್ಲಿ ಟಿ.ವಿ. ಕದ್ದುಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ಲಾಡ್ಜ್ ಮೇಲ್ವಿಚಾರಕ ದೂರು ನೀಡಿದ್ದರು. ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಗಳನ್ನು ಪರಿಶೀಲನೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ’ ಎಂದೂ ತಿಳಿಸಿದರು.

‘ನಗರದ ಹಲವು ಲಾಡ್ಜ್‌ಗಳಲ್ಲಿ ಆರೋಪಿ ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ. ಲಾಡ್ಜ್‌ನ ಅಕ್ಕ–ಪಕ್ಕದ ಕೊಠಡಿಯಲ್ಲಿರುತ್ತಿದ್ದ ಗ್ರಾಹಕರ ಮೊಬೈಲ್‌ಗಳನ್ನೂ ಆರೋಪಿ ಕದ್ದಿದ್ದಾರೆ. ಆದರೆ, ಕೆಲವರು ದೂರು ನೀಡಿಲ್ಲ. ಆರೋಪಿ ನೀಡಿರುವ ಮಾಹಿತಿ ಆಧರಿಸಿ ತನಿಖೆ ಮುಂದುವರಿಸಲಾಗಿದೆ’ ಎಂದೂ ಹೇಳಿದರು.

ಶಿವರಾಮ ಕಾರಂತ ಬಡಾವಣೆ ನಿರ್ಮಾಣ ಕೈಬಿಡಿ: ರೈತ ಸಂಘ

ಬಿಡಿಎ ಕಚೇರಿಗೆ 24ರಂದು ಮುತ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡಾ.ಶಿವರಾಮ ಕಾರಂತ ಬಡಾವಣೆ ನಿರ್ಮಾಣ ಯೋಜನೆಯನ್ನು ಕೈಬಿಡುವಂತೆ ಆಗ್ರಹಿಸಿ ರೈತರು, ನಿವೇಶನದಾರರು ಮತ್ತು ನೊಂದ ಮನೆ ಮಾಲೀಕರು ಸೇರಿ ಇದೇ 24ಕ್ಕೆ ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಕೇಂದ್ರ ಕಚೇರಿಗೆ ಮುತ್ತಿಗೆ ಹಾಕಲಿದ್ದೇವೆ’ ಎಂದು ರಾಜ್ಯ ರೈತಸಂಘ ಹಾಗೂ ಹಸಿರು ಸೇನೆ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದರು.

ಶನಿವಾರ ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಡಾವಣೆಯಲ್ಲಿ ಈಗಾಗಲೇ 20 ಸಾವಿರ ಮನೆಗಳನ್ನು ನಿರ್ಮಿಸಲಾಗಿದೆ. ಬಡವರು, ಮಧ್ಯಮ ವರ್ಗದವರು ಸಾಲ ಮಾಡಿ ನಿವೇಶನ ಖರೀದಿಸಿ, ಮನೆ ನಿರ್ಮಿಸಿದ್ದಾರೆ. ಈಗ ಅವರೆಲ್ಲ ಬೀದಿ ಪಾಲಾಗುವ ಆತಂಕ ಎದುರಿಸುತ್ತಿದ್ದಾರೆ. ಈ ಯೋಜನೆಯನ್ನು ಬಿಡಿಎ ಕೂಡಲೇ ಕೈಬಿಡಬೇಕು. ಈ ಸಂಬಂಧ ಹಮ್ಮಿಕೊಂಡಿರುವ ಪ್ರತಿಭಟನೆಯಲ್ಲಿ 8 ಸಾವಿರಕ್ಕೂ ಅಧಿಕ ಮಂದಿ ಪಾಲ್ಗೊಳ್ಳಲಿದ್ದಾರೆ’ ಎಂದರು.

‘ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವ ಮೊದಲು ಎಸ್. ಆರ್. ವಿಶ್ವನಾಥ್ ಅವರು ಬಡಾವಣೆಯ ಜನರ ಪರವಾಗಿ ನಿಂತಿದ್ದರು. ಹಲವಾರು ಹೋರಾಟಗಳಲ್ಲಿ ಭಾಗವಹಿಸಿ, ಧ್ವನಿ ಎತ್ತಿದ್ದರು. ಆಶ್ರಯ ಯೋಜನೆ ಜಾರಿಗೊಳಿಸಲು ಅಗತ್ಯ ಭೂಮಿ ಲಭ್ಯವಿಲ್ಲ ಎಂದು ಯೋಜನೆ ಕೈಬಿಡುವಂತೆ ಅಂದಿನ ಮೈತ್ರಿ ಸರ್ಕಾರವನ್ನು ಒತ್ತಾಯಿಸಿದ್ದರು. ಆದರೆ, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಬಿಡಿಎ ಅಧ್ಯಕ್ಷರಾಗಿರುವ ಅವರು, ತಮ್ಮ ನಿಲುವನ್ನು ಬದಲಾಯಿಸಿದ್ದಾರೆ. ಕೂಡಲೇ ಹಿಂದಿನ ನಿಲುವಿಗೆ ಬದ್ಧರಾಗಿ ಯೋಜನೆ ಕೈಬಿಡಬೇಕು’ ಎಂದು ಒತ್ತಾಯಿಸಿದರು.

‘ಸುಪ್ರೀಂ ಕೋರ್ಟ್‌ನಿಂದ ನೇಮಕವಾದ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಸಮಿತಿ ನೀಡಿರುವ ನೋಟಿಸ್ ತಲುಪಿದೆ. ಸಮಿತಿ ಎದುರು ಹಾಜರಾಗಿ ಉತ್ತರ ನೀಡುತ್ತೇನೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮರಗಳಿಗೆ ಹಾನಿ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಒತ್ತಾಯ

ಪ್ರಜಾವಾಣಿ ವಾರ್ತೆ

ಗಿಡಗಳಿಗೆ ಅಳವಡಿಸಿದ್ದ ಜಾಹಿರಾತು ಪತ್ರಗಳನ್ನು ಪಿ.ಜೆ.ಅಂತೋಣಿಸ್ವಾಮಿ ನೇತೃತ್ವದಲ್ಲಿ ಶನಿವಾರ ತೆರವುಗೊಳಿಸಲಾಯಿತು. ಪರಿಸರ ಮಂಜು, ವನ್ಯಜೀವಿ ಸಂರಕ್ಷಕ ಸಿಂಹಾದ್ರಿ, ಕರಾಟೆ ಶ್ರೀನಾಥ್, ಮುಖಂಡರಾದ ಭಟ್ಟರಹಳ್ಳಿ ಮಂಜುನಾಥ್, ಕೆ.ಪಿ.ಕೃಷ್ಣ ಇದ್ದರು.

ಕೆ.ಆರ್.ಪುರ: ‘ಕೆಲವರು ದುರಾಸೆಯಿಂದ ಮರಗಳಿಗೆ ಮೊಳೆ ಹೊಡೆದು, ಪಿನ್ನುಗಳನ್ನು ಚುಚ್ಚಿ ಅವುಗಳ ಆರೋಗ್ಯಕ್ಕೆ ಹಾನಿ ಉಂಟುಮಾಡುತ್ತಿದ್ದಾರೆ. ಇಂತಹ ಕೃತ್ಯಗಳು ಮರಗಳ ಅಸ್ತಿತ್ವಕ್ಕೇ ಧಕ್ಕೆ ತರುತ್ತವೆ. ಇಂತಹ ಕೃತ್ಯಗಳಿಗೆ ಸರ್ಕಾರ ಕಡಿವಾಣ ಹಾಕಬೇಕು’ ಎಂದು ಸ್ಥಳೀಯ ಮುಖಂಡ ಪಿ.ಜೆ.ಅಂತೋಣಿಸ್ವಾಮಿ ಒತ್ತಾಯಿಸಿದರು.

ಮರಗಳ ರಕ್ಷಣೆಗಾಗಿ ಪರಿಸರ ಪ್ರೇಮಿಗಳು ಹಮ್ಮಿಕೊಂಡಿರುವ ಆಂದೋಲನಕ್ಕೆ ಕೆ.ಆರ್.ಪುರ ಸಮೀಪದ ಭಟ್ಟರಹಳ್ಳಿಯ ಗಾರ್ಡನ್ ಸಿಟಿ ಕಾಲೇಜು ಬಳಿ ಚಾಲನೆ ನೀಡಿ ಅವರು ಮಾತನಾಡಿದರು.

‘ಮರಗಿಡಗಳು ಮನುಷ್ಯನಿಗೆ ಉಚಿತವಾಗಿ ಆಮ್ಲಜನಕ ನೀಡುತ್ತವೆ. ಸಾರ್ವಜನಿಕರು ಮರಗಳ ಬಗ್ಗೆ ಕಾಳಜಿ ವಹಿಸಿ ರಕ್ಷಿಸುವ ಕೆಲಸ ಮಾಡಬೇಕಿದೆ ಎಂದರು.

ಆಂದೋಲನದ ಮುಂದಾಳು ಪರಿಸರ ಮಂಜು, ‘ಮರಗಳನ್ನು ಕೇವಲ ಲಾಭದ ವಸ್ತುವೆಂದು ತಿಳಿದು ಅವುಗಳಿಗೆ ಅನಧಿಕೃತವಾಗಿ ಜಾಹೀರಾತುಗಳಿರುವ ಫ್ಲೆಕ್ಸ್, ಬ್ಯಾನರ್, ಬಂಟಿಂಗ್ಸ್ ಅಳವಡಿಸಲಾಗುತ್ತಿದೆ. ಇಂತಹ ಕೃತ್ಯ ಮಾಡುವ ಬ್ಯಾಂಕ್‌ಗಳು, ವಿದ್ಯಾಸಂಸ್ಥೆಗಳು, ಸಂಘ ಸಂಸ್ಥೆಗಳು ಹಾಗೂ ವ್ಯಕ್ತಿಗಳ ವಿರುದ್ಧದ ಈ ಹೋರಾಟದಲ್ಲಿ ಎಲ್ಲರೂ ಕೈಜೋಡಿಸಬೇಕು’ ಎಂದರು.

ಗಾರ್ಡನ್ ಸಿಟಿ ಕಾಲೇಜು ರಸ್ತೆಯಲ್ಲಿರುವ 100ರಕ್ಕೂ ಹೆಚ್ಚು ಮರಗಳಿಗೆ ಅಳವಡಿಸಿದ್ದ ಜಾಹಿರಾತು ಫಲಕ, ಮೊಳೆ, ಸ್ಟೇಪಲ್ ಪಿನ್ನುಗಳನ್ನು ವೃಕ್ಷ ಆಂದೋಲನದ ಕಾರ್ಯಕರ್ತರು ತೆರವುಗೊಳಿಸಿದರು. ಮರಗಳಿಗೆ ಜಾಹಿರಾತು ಅಳವಡಿಸಿರುವವರ ವಿರುದ್ಧ ಕೆ.ಆರ್.ಪುರ ಠಾಣೆಯಲ್ಲಿ ದೂರು ದಾಖಲಿಸಿದರು. ಮರಗಳಿಗೆ ರಕ್ಷಣೆ ಮಾಡುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಗೂಂಡಾ ಕಾಯ್ದೆಯಡಿ ರೌಡಿ ರಾಜದೊರೈ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದೇ ಪದೇ ಅಪರಾಧ ಕೃತ್ಯ ಎಸಗುತ್ತ ಸಾರ್ವಜನಿಕರಲ್ಲಿ ಭಯವನ್ನುಂಟು ಮಾಡುತ್ತಿದ್ದ ರೌಡಿ ರಾಜು ಅಲಿಯಾಸ್ ರಾಜದೊರೈಯನ್ನು (25) ಗೂಂಡಾ ಕಾಯ್ದೆಯಡಿ ಬಂಧಿಸಲಾಗಿದೆ.

‘ಹಳೇ ಬೈಯಪ್ಪನಹಳ್ಳಿ ಸಮೀಪದ ಭೈರಪ್ಪ ಗಾರ್ಡನ್ ನಿವಾಸಿ ರಾಜು ವಿರುದ್ಧ ಕೊಲೆಗೆ ಯತ್ನ, ಸುಲಿಗೆ, ಹಲ್ಲೆ, ಜೀವ ಬೆದರಿಕೆ ಹಾಗೂ ಸರ್ಕಾರಿ ಕೆಲಸಕ್ಕೆ ಅಡ್ಡಿ ಸೇರಿದಂತೆ 17 ಪ್ರಕರಣಗಳು ದಾಖಲಾಗಿದ್ದವು. ಜೈಲಿಗೆ ಹೋಗಿ ಜಾಮೀನು ಹೊರಬಂದಿದ್ದ ರೌಡಿ, ಪದೇ ಪದೇ ಅಪರಾಧ ಕೃತ್ಯ ಎಸಗುತ್ತಿದ್ದ’ ಎಂದು ಬೈಯಪ್ಪನಹಳ್ಳಿ ಪೊಲೀಸರು ಹೇಳಿದರು.

‘ಸಹಚರರ ಜೊತೆ ಗ್ಯಾಂಗ್ ಕಟ್ಟಿಕೊಂಡಿದ್ದ ಆರೋಪಿ, ಕೃತ್ಯ ಎಸಗುತ್ತಿದ್ದ. ಆತನನ್ನು ಗೂಂಡಾ ಕಾಯ್ದೆಯಡಿ ಬಂಧಿಸಲಾಗಿದೆ’ ಎಂದೂ ತಿಳಿಸಿದರು.

ವಾಹನ ನಿಲುಗಡೆ ತಾಣ ಆಟದ ಮೈದಾನ

ರಾಜರಾಜೇಶ್ವರಿನಗರ: ಕೆಂಗುಂಟೆಯಲ್ಲಿನ ಬಿಬಿಎಂಪಿ ಆಟದ ಮೈದಾನ ಈಗ ವಾಹನ ನಿಲುಗಡೆಯ ತಾಣವಾಗಿ ಮಾರ್ಪಟ್ಟಿದೆ.

ಅಂಬೇಡ್ಕರ್ ತಾಂತ್ರಿಕ ಕಾಲೇಜು ಎದುರಿನ ಬಿಬಿಎಂಪಿ ಆಟದ ಮೈದಾನ ಅವ್ಯವಸ್ಥೆಯಿಂದ ಕೂಡಿದೆ. ಕೆಂಗುಂಟೆ ಸುತ್ತಮುತ್ತ ಆಟದ ಮೈದಾನ ಇಲ್ಲ ಎಂಬ ಕಾರಣಕ್ಕೆ ಬಿಬಿಎಂಪಿ ಈ ಮೈದಾನ ನಿರ್ಮಿಸಿತ್ತು. ಸುರಕ್ಷತೆಯ ದೃಷ್ಟಿಯಿಂದ ತಂತಿ ಬೇಲಿಯನ್ನೂ ಹಾಕಲಾಗಿತ್ತು.

ಮೈದಾದನಲ್ಲಿ ಭಾರಿ ವಾಹನಗಳನ್ನು ನಿಲ್ಲಿಸಿ ಮಕ್ಕಳ ಆಟದ ಜಾಗವನ್ನೇ ಈಗ ಆಕ್ರಮಿಸಿಕೊಳ್ಳಲಾಗಿದೆ. ಇನ್ನೊಂದೆಡೆ ಅಕ್ಕ–ಪಕ್ಕದ ನಿವಾಸಿಗಳು ಅಳಿದುಳಿದ ವಸ್ತುಗಳು, ತ್ಯಾಜ್ಯಗಳನ್ನು ಶಾಲೆ ಆವರಣದಲ್ಲಿ ಸುರಿದು, ಕಸದ ತೊಟ್ಟಿ ಮಾಡಿದ್ದಾರೆ. ಗಾಜಿನ, ಕಬ್ಬಿಣದ ಚೂರುಗಳು ಬಿಸಾಡಿರುವ ಕಾರಣ ಈ ಜಾಗದಲ್ಲಿ ಆಟವಾಡಲು ಮಕ್ಕಳು ಭಯಪಡುತ್ತಿದ್ದಾರೆ.

ಇರುವ ಜಾಗದಲ್ಲಿ ಆಟವಾಡಲು ಹೋದರೆ ವಾಹನ ಮಾಲೀಕರು ದಬಾಯಿಸುವ ಭಯದಿಂದ ಮಕ್ಕಳು, ಈ ಮೈದಾನದಲ್ಲಿ ಆಟವಾಡುವುದನ್ನೇ ಬಿಟ್ಟಿದ್ದಾರೆ. ಜತೆಗೆ ದನಕರುಗಳು, ಬೀದಿ ನಾಯಿಗಳ ಹಾವಳಿಗೂ ಹೆದರಿ ಮಕ್ಕಳು ಮೈದಾನಕ್ಕೆ ಇಳಿಯುತ್ತಿಲ್ಲ.

ಮೈದಾನಕ್ಕೆ ಹಾಕಿದ್ದ ಗೇಟ್ ಮತ್ತು ತಂತಿಬೇಲಿಯನ್ನೂ ಕಿತ್ತೆಸೆದು ವಾಹನ ನಿಲುಗಡೆಗೆ ಈ ಜಾಗ ಬಳಸಿಕೊಳ್ಳಲಾಗುತ್ತಿದೆ. ಪುಂಡರ ಗುಂಪು, ಮದ್ಯಪಾನ, ಮಾದಕ ವಸ್ತುಗಳ ಸೇವನೆಗೂ ಈ ಜಾಗ ಬಳಿಸಿಕೊಳ್ಳುತ್ತಿದ್ದಾರೆ. ಹೀಗಾಗಿ ಮಕ್ಕಳು, ಮಹಿಳೆಯರು ಆಟದ ಮೈದಾನಕ್ಕೆ ಬರಲು ಹೆದರುತ್ತಾರೆ ಎಂದು ಸಾರ್ವಜನಿಕರು ದೂರಿದ್ದಾರೆ.

ಆಟದ ಮೈದಾನದ ದುಸ್ಥಿತಿ

ಜೊಮ್ಯಾಟೊ ಡೆಲಿವರಿ ಬಾಯ್ ಪ್ರಕರಣ

‘ಹಲ್ಲೆ ಮಾಡಿಲ್ಲ, ಯುವತಿಯ ಉಂಗುರ ತಾಗಿ ಗಾಯ’

ಪ್ರಜಾವಾಣಿ ವಾರ್ತೆ


ಕಾಮರಾಜ್

ಬೆಂಗಳೂರು: ಆಹಾರ ಪೂರೈಕೆ ತಡವಾಗಿದ್ದ ಕಾರಣಕ್ಕೆ ಗ್ರಾಹಕಿ ಮೇಲೆ ಹಲ್ಲೆ ನಡೆಸಿದ್ದ ಆರೋಪದ ಪ್ರಕರಣಕ್ಕೆ ಮತ್ತೊಂದು ಆಯಾಮ ಸಿಕ್ಕಿದ್ದು, ‘ಮಹಿಳೆಯೇ ತಮ್ಮ ಉಂಗುರದಿಂದ ಮುಖಕ್ಕೆ ಹೊಡೆದು ಕೊಂಡಿದ್ದರು’ ಎಂದು ಜೊಮ್ಯಾಟೊ ಕಂಪನಿ ಡೆಲಿವರಿ ಬಾಯ್ ಕಾಮರಾಜ್ ಹೇಳಿದ್ದಾರೆ.

ಎಲೆಕ್ಟ್ರಾನಿಕ್ ಸಿಟಿ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಬಂಧಿತರಾಗಿ ಜಾಮೀನು ಪಡೆದಿರುವ ಕಾಮರಾಜ್, ಸಾಮಾಜಿಕ ಜಾಲತಾಣದಲ್ಲಿ ವಿಡಿಯೊವೊಂದನ್ನು ಹರಿಬಿಟ್ಟಿದ್ದಾರೆ.

‘ಸಂಚಾರ ದಟ್ಟಣೆಯಲ್ಲೂ ಕಷ್ಟಪಟ್ಟು ಯುವತಿಯ ಮನೆಗೆ ಆಹಾರ ತಲುಪಿಸಿದ್ದೆ. ಹಣ ನೀಡಬಹುದೆಂದು ಬಾಗಿಲಲ್ಲಿ ಕಾಯುತ್ತಿದ್ದೆ. ಆಹಾರ ನೀಡಿದ್ದು ತಡವಾಯಿತೆಂದು ಯುವತಿ ಜೋರಾಗಿ ಹೇಳಿದ್ದರು. ದಟ್ಟಣೆ ಹಾಗೂ ರಸ್ತೆಯಲ್ಲಿ ಕಾಮಗಾರಿಗಳು ನಡೆಯುತ್ತಿದ್ದರಿಂದ ತಡವಾಯಿತೆಂದು ಕ್ಷಮೆ ಯಾಚಿಸಿದ್ದೆ’ ಎಂದು ಡೆಲಿವರಿ ಬಾಯ್ ವಿಡಿಯೊದಲ್ಲಿ ಹೇಳಿದ್ದಾರೆ.

‘ಆಹಾರಕ್ಕೆ ಹಣ ನೀಡಲು ಒಪ್ಪದ ಯುವತಿ, ಸಹಾಯವಾಣಿಗೆ ಕರೆ ಮಾಡಿದ್ದರು. ಆಹಾರ ವಾಪಸು ನೀಡುವಂತೆ ಸಹಾಯವಾಣಿ ಸಿಬ್ಬಂದಿ ಯುವತಿಗೆ ಹೇಳಿದ್ದರು. ಹೀಗಾಗಿ, ಆಹಾರದ ಪೊಟ್ಟಣವನ್ನು ಮರಳಿಸುವಂತೆ ಕೋರಿದ್ದೆ. ಅದಕ್ಕೂ ಒಪ್ಪದ ಯುವತಿ, ಬೈಯಲಾರಂಭಿಸಿದ್ದರು.’

‘ಸ್ಥಳದಿಂದ ಮರಳಿ ಹೊರಟಿದ್ದೆ. ಯುವತಿಯೇ ನನ್ನ ಮೇಲೆ ಚಪ್ಪಲಿ ಎಸೆದರು. ತಮ್ಮ ಕೈಯಿಂದ ಹೊಡೆಯಲು ಬಂದರು. ನಾನು ತಪ್ಪಿಸಿಕೊಂಡೆ. ನಂತರ, ಆಕೆಯ ಕೈಯಲ್ಲಿದ್ದ ಉಂಗುರವೇ ಅವರ ಮುಖಕ್ಕೆ ತಾಗಿತ್ತು. ಅವರ ಮುಖದಲ್ಲಿ ರಕ್ತ ಬರಲಾರಂಭಿಸಿತ್ತು. ಭಯಗೊಂಡು ನಾನು ಅಲ್ಲಿಂದ ಹೊರಟೆ’ ಎಂದೂ ಅವರು ವಿವರಿಸಿದ್ದಾರೆ.

ರಾಬರ್ಟ್ ಪೈರಸಿಗೆ ಯತ್ನ; ಯುವಕ ವಶಕ್ಕೆ

ಬೆಂಗಳೂರು: ಪುಟ್ಟೇನಹಳ್ಳಿ ಠಾಣೆ ವ್ಯಾಪ್ತಿಯಲ್ಲಿರುವ ಸಿದ್ದೇಶ್ವರ ಚಿತ್ರಮಂದಿರದಲ್ಲಿ ರಾಬರ್ಟ್ ಸಿನಿಮಾ ಪೈರಸಿ ಮಾಡಲು ಯತ್ನಿಸುತ್ತಿದ್ದ ಆರೋಪದಡಿ ಮಧು ಎಂಬುವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಮೂರು ದಿನಗಳಿಂದ ನಿರಂತರವಾಗಿ ಚಿತ್ರಮಂದಿರಕ್ಕೆ ಬರುತ್ತಿದ್ದ ಮಧು ಅವರನ್ನು ನೋಡಿದ್ದ ಸಿಬ್ಬಂದಿ, ಮಾಲೀಕರಿಗೆ ವಿಷಯ ತಿಳಿಸಿದ್ದರು. ಸಿನಿಮಾವನ್ನು ಕ್ಯಾಮೆರಾದಲ್ಲಿ ರೆಕಾರ್ಡ್ ಮಾಡುವಾಗಲೇ ಮಧುವನ್ನು ಹಿಡಿದುಕೊಂಡಿದ್ದ ಸಿಬ್ಬಂದಿ, ಗಸ್ತು ಸಿಬ್ಬಂದಿಗೆ ಒಪ್ಪಿಸಿದ್ದಾರೆ. ಠಾಣೆಗೆ ಕರೆತಂದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

Ministry of Culture
Government of India

Lalit Kala Akademi
National Academy of Art
Rabindra Bhavan, New Delhi - 110 001

62nd National Exhibition of Art

The 62nd National Exhibition of Art will be held in May, 2021 at Lucknow. The minimum age of participation is 25 years. The Entry Forms can be obtained from Lalit Kala Akademi Head Quarters at New Delhi and Regional Centres at Bhubaneswar (Phone: 0674-2391884), Kolkata (Phone: 033-24641719), Chennai (Phone: 044-28291692), Lucknow (Phone: 0522-2324067), Garhi, New Delhi (Phone: 011-26431849). Forms can also be collected from Akademi's Sub Centres at Shimla (Phone: 09459279179), Patna, Ahmedabad, Agartala and from State Lalit Kala Academies, Zonal Cultural Centres and Art Organisations. Entry Forms can be downloaded from Akademi's website: http://lalitkala.gov.in

The last date for submission of the Entry Form is 7th April, 2021. The duly filled form may be addressed to Secretary I/c, Lalit Kala Akademi, Rabindra Bhavan, 35 Ferozeshah Road, New Delhi-110001. For any further information please contact on phone numbers: 011-23009281/23009200. Email: art.lalitkala@gmail.com

Kala Mela 2021

Kala Mela 2021 (Visual Art Fair) will also be organised at Lucknow during the 62nd National Exhibition of Art. Interested Artists may download the form from Akademi's website: http://lalitkala.gov.in. The last date for submission of application is 10th April, 2021.

Ramakrishna Vedala — Secretary I/c
Uttam Pacharne — Chairman

ADMISSION - 2020-21
K.T.G & ANURADHA COLLEGES
Bengaluru City
B.A.M.S | B.H.M.S
B.P.T | M.P.T | D.PHARM
Nursing-G.N.M | B.Sc.(N)
P.B.B.Sc(N) | M.Sc.(N)
CONTACT : 9611642390
9845051023 | 9980400641

JOB VACANCY for ‘Fresher's’
A leading Multinational is providing job opportunities for fresher's, who have good communication skills and completed HSC and above.
The job entails selling home appliances by effectively communicating the product features and benefits at shop floor.
WALK IN INTERVIEW : 17th March, 2021
from 11:00 hrs. to 18:00 hrs.
BSH Household Appliances Manufacturing Pvt. Ltd.
No. 8, First floor, 15th Cross, 6th Phase, JP Nagar, Bengaluru 560078
Contact +91 9980080333
neelam.Chaudhary@bshg.com / IN_O_Careers@bshg.com

‘ಸಿರಿಧಾನ್ಯಕ್ಕೆ ಜಾಗತಿಕ ಮನ್ನಣೆ: ಕಾಂಗ್ರೆಸ್ ಕಾರಣ’

ಬೆಂಗಳೂರು: ‘ಸಿರಿಧಾನ್ಯಕ್ಕೆ ಜಾಗತಿಕ ಮನ್ನಣೆ ಸಿಗಲು ಕಾಂಗ್ರೆಸ್ ಪಕ್ಷವೇ ಕಾರಣ’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ ಹೇಳಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ‘ಕಡು ಬಡವನ ಆಹಾರ ಸಿರಿಧಾನ್ಯಕ್ಕೆ ಈಗ ಜಾಗತಿಕ ಮನ್ನಣೆ ಸಿಕ್ಕಿದೆ. ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಘಟನೆ 2023ನ್ನು ‘ಅಂತರ-ರಾಷ್ಟ್ರೀಯ ಸಿರಿಧಾನ್ಯಗಳ ವರ್ಷ’ವಾಗಿ ಆಚರಿಸುವುದಾಗಿ ಘೋಷಿಸಿದೆ’ ಎಂದಿದ್ದಾರೆ.

2017-18ರಲ್ಲಿ ಕೃಷಿ ಸಚಿವರಾಗಿದ್ದ ಕೃಷ್ಣಬೈರೇಗೌಡ, ‘ಸಿರಿಧಾನ್ಯಕ್ಕೆ ಮನ್ನಣೆ ನೀಡುವಂತೆ ಕೇಂದ್ರಕ್ಕೆ ಪ್ರಸ್ತಾವ ಕಳುಹಿಸಿದ್ದರು. ಆಹಾರ ಮತ್ತು ಕೃಷಿ ಸಂಘಟನೆಯ ಆಹ್ವಾನದ ಮೇರೆಗೆ ರೋಮ್‌ನಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿ ಸಿರಿಧಾನ್ಯಗಳ ಮಹತ್ವ ವಿವರಿಸಿ, ಸಿರಿಧಾನ್ಯಗಳ ವರ್ಷಾಚರಣೆ ಘೋಷಣೆಗೆ ಮನವಿ ಮಾಡಿದ್ದರು’ ಎಂದು ತಿಳಿಸಿದ್ದಾರೆ.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
ಸರಕು ಖರೀದಿ ಅಧಿಕಾರಿಗಳ ಕಾರ್ಯಾಲಯ,
ಕೃವಿವಿ, ರಾಯಚೂರು ಮಿಂಚಂಚೆ: spo@uasraichur.edu.in
ದೂರವಾಣಿ ಸಂಖ್ಯೆ: 08532 220165
ಇ–ಟೆಂಡರ್ ಪ್ರಕಟಣೆ ಸಂಖ್ಯೆ: SPO/UASR/E-Proc-11/2020-21, Dt: 12-03-2021
:: ಟೆಂಡರ್ ಪ್ರಕಟಣೆ ::
ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿಗೆ ಸಂಬಂಧಪಟ್ಟಂತೆ ವೈಜ್ಞಾನಿಕ ಮತ್ತು ಇನ್ನಿತರ ವಸ್ತುಗಳ ಖರೀದಿಗಾಗಿ ಅಲ್ಪಾವಧಿ ಟೆಂಡರನ್ನು ಕರೆಯಲಾಗಿದ್ದು, ಆಸಕ್ತ ಸರಬರಾಜುದಾರರು ಆನ್‌ಲೈನ್ ಮುಖಾಂತರ ಅಂದರೆ www.eproc.karnataka.gov.in ಜಾಲತಾಣದಲ್ಲಿ (ಬೇಡಿಕೆ ಸಂಖ್ಯೆ: UAS/2019-20/IND3775 to 3778) ಭಾಗವಹಿಸಬಹುದು. ಈ ಟೆಂಡರ್‌ಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಭರ್ತಿಮಾಡಿ ಸಲ್ಲಿಸುವ ಕಡೆ ದಿನಾಂಕ: 26–03–2021 ಆಗಿರುತ್ತದೆ.
ಸಹಿ/– ಸರಕು ಖರೀದಿ ಅಧಿಕಾರಿಗಳು,
ಕೃವಿವಿ., ರಾಯಚೂರು.
ವಾ.ಸಾ.ಸಂ.ಇ/ರಾಯಚೂರು/668/ಎಂ.ಸಿ.&ಎ/2020–21

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಶಿವಮೊಗ್ಗ
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಶಿವಮೊಗ್ಗ
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಸಂ.: EE/RWSS/Dvn/SMG/AE-II/JJM/E-Proc/2866/2020-21 ದಿನಾಂಕ: 10.03.2021
ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಶಿವಮೊಗ್ಗ ಜಿಲ್ಲೆ ವ್ಯಾಪ್ತಿಯ 2020–21ನೇ ಸಾಲಿನ ತೀರ್ಥಹಳ್ಳಿ ತಾಲ್ಲೂಕುಗಳ ಈ ಕೆಳಕಂಡ ಕಾಮಗಾರಿಗಳ ಪ್ರತಿ ಮನೆ ಮನೆಗಳಿಗೆ ಕಾರ್ಯಾತ್ಮಕ ನಲ್ಲಿ ನೀರು ಸಂಪರ್ಕ ಕಲ್ಪಿಸಲು ಜಲ ಜೀವನ್ ಮಿಷನ್ ಅಡಿ ಟೆಂಡರ್ ಅನ್ನು ಕಾಮಗಾರಿ ಅನುಮೋದಿತ ಐಟಂವಾರು ಟೆಂಡರ್‌ನ್ನು ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ 2020–2025 ರವರೆಗೆ ನೋಂದಾಯಿಸಿರುವ (3ನೇ ದರ್ಜೆ ಮತ್ತು ಮೇಲ್ಪಟ್ಟು) ಅಧಿಕೃತ ಗುತ್ತಿಗೆದಾರರಿಂದ STANDARD TENDER DOCUMENTS For E-Procurement of work KW-2&3 ರಲ್ಲಿ ಆಹ್ವಾನಿಸಲಾಗಿದೆ. ಫಾರಂ ಫೀ & ಇ.ಎಂ.ಡಿ.ಯನ್ನು ಇ–ಪೇಮೆಂಟ್‌ನಲ್ಲಿ ಸಲ್ಲಿಸುವವರು ಕ್ರೆಡಿಟ್ /ಡೆಬಿಟ್‌ಕಾರ್ಡ್ ಮುಖಾಂತರ ಸಲ್ಲಿಸಬಹುದು.
(1) ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ (ಇ–ಪ್ರೊಕ್ಯೂರ್‌ಮೆಂಟ್) ಮೂಲಕ ಸಲ್ಲಿಸಲು ಕೊನೆಯ ದಿನಾಂಕ: 25.03.2021 ಸಾಯಂಕಾಲ 17.30 ರವರೆಗೆ, (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27.03.2021 11.30 ಗಂಟೆ, (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 29.03.2021 11.30 ಗಂಟೆ, (4) ಕಾಲಾವಧಿ: 60 ದಿನಗಳು
ಮೇಲ್ಕಾಣಿಸಿದ ದಿನವೇನಾದರು ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನೊಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖಾ ವೆಬ್‌ಸೈಟ್ www.eproc.karnataka.gov.in ರಲ್ಲಿ ಪಡೆಯಬಹುದು.

Sl No.	Indent No
1	RWSSD/2020-21/WS/WORK_INDENT33235

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಗ್ರಾ. ಕು. ನೀ & ನೈ ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ./ಶಿ/ನಂ.73–03/ಝೇಂಕಾರ್/2020–21

ಕರ್ನಾಟಕ ಸರ್ಕಾರ
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
ನಂ. ಎಫ್‌ಡಿ 01 ಬಿಎಂಬಿ 2020 ದಿನಾಂಕ: 12.03.2021
ಕರ್ನಾಟಕ ಸರ್ಕಾರದ ಸ್ಟಾಕ್ (ಸೆಕ್ಯೂರಿಟಿಗಳು)
1. ಅಂದಾಜು ಮೊತ್ತ : ಒಟ್ಟು ರೂ.3000 ಕೋಟಿಗಳು (ರೂ.1000 ಕೋಟಿ -07 ವರ್ಷಗಳಿಗೆ, ರೂ.1000 ಕೋಟಿ-18 ವರ್ಷಗಳಿಗೆ ಮತ್ತು ರೂ.1000 ಕೋಟಿಗಳು-19 ವರ್ಷಗಳಿಗೆ)
2. ನೀಡುವ ವಿಧಾನ : ಪಿಡಿಓ, ಆರ್‌ಬಿಐ, ಮುಂಬಯಿ (ಫೋರ್ಟ್) ಮೂಲಕ ಹರಾಜು
3. ಹರಾಜು ದಿನಾಂಕ : ಮಾರ್ಚ್ 16, 2021.
ಕರ್ನಾಟಕ ಸರ್ಕಾರವು ಮೇಲ್ಕಂಡ ಸೆಕ್ಯೂರಿಟಿಗಳಿಗೆ ಚಂದಾ ಆಹ್ವಾನಿಸುತ್ತಿದೆ. ನೋಟಿಫಿಕೇಷನ್ ಪ್ರತಿಗಳು ಮತ್ತು ಅರ್ಜಿ ನಮೂನೆಗಳನ್ನು ಪಿಡಿಓ, ಆರ್.ಬಿ.ಐ, ಬೆಂಗಳೂರು ಇವರಿಂದ ಪಡೆದುಕೊಳ್ಳಬಹುದು. ರಿಟೇಲ್ ಹೂಡಿಕೆದಾರರನ್ನು ಪ್ರೋತ್ಸಾಹಿಸಲು ಆರ್‌ಬಿಐ ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯವನ್ನು ಕಲ್ಪಿಸಿದೆ. ಪ್ರಕಟಣೆಯಲ್ಲಿ ತಿಳಿಸಿದ ಕರ್ನಾಟಕ ಸರ್ಕಾರದ ಸ್ಟಾಕ್ ಮೊತ್ತದ ಶೇಕಡ 10 ರಷ್ಟು ಮೊತ್ತದ ಸ್ಟಾಕ್‌ಗಳನ್ನು ಅರ್ಹ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗುವುದು. ಮಾದರಿ ಟೆಂಡರ್ ನಮೂನೆಗಳು ಮತ್ತು ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯದ ಪರಿಷ್ಕೃತ ಯೋಜನೆಯ ಮಾಹಿತಿಯು ವೆಬ್‌ಸೈಟ್ www.rbi.org.in ನಲ್ಲಿ ಲಭ್ಯವಿದೆ.
ವಾಸಾಸಂಇ/ಉ.ನಿ.ನ/87/ಎಂಸಿಎ/20–21
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

GOVERNMENT OF KARNATAKA
Rural Drinking Water & Sanitation Department
Office of the Executive Engineer, Rural Drinking Water & Sanitation Division, Karwar. Po:Habbuwada, Karwar, Uttara Kannada Dist.-581 306.
Phone: 08382-229735 E-mail : eerdwsd.uk@gmail.com
NO.: EE/RDWSD/KWR/jjm/2020-21/ DATE: 12.03.2021
SHORT TERM TENDER NOTIFICATION (Through e-Procurement)
Executive Engineer, Rural Drinking Water & Sanitation Division, Karwar invites on behalf of Governor of Karnataka request for proposal tenders from the eligible bidders for the work detailed in the table below. Two cover tender procedure as per rule 28 of the KTTP Act and Standard Tender Document KW-IV shall be followed. The tenders are required to submit through E-procurement portal https://eproc.karnataka.gov.in
(1) Downloading of document through e-proc portal: 12.03.2021 To 29.03.2021 up to 15.00Hrs. (2) Time & date of Pre-Bid Conference : 18.03.2021 Time : 11.30 Hrs. Venue: O/o. Executive Engineer, Rural Drinking Water & Sanitation Division Po: Habbuwada, Karwar-Uttara Kannada Dist. (3) Last Date & Time for Receipt of Bids: 29.03.2021 Time : 16.30 Hrs. (4) Date & Time of Technical Bid Opening : 30.03.2021 Time : 17.00 Hrs. (5) Date & Time of Financial Bid Opening : Will be informed technically qualified bidders after approval of Technical Bid.
Name of the work: (1) Providing FHTC to 692 Households in 17 Habitation of Hiregutti Village Kumta Taluk Uttara Kannada district through MVS to Gokarna And 7 other villages Scheme INDENT29565/Call-2. Amount put to Tender: Rs. 207.47 Lakhs, EMD: Rs.4.15 Lakhs, Period of Completion: 5 months (including rainy season), Class of Contractor: PRED Class-II and above.
(2) Providing FHTC to 452 Households in Hanehalli Habitation of Hanehalli Villege Hanehalli GP Kumta Taluk Uttara Kannada district through MVS to Gokarna And 7 other villeges in Kumta TalukRWSSD/2020-21/WS/WORK_INDENT30358. Amount put to Tender: Rs. 98.93 Lakhs, EMD: Rs. 2.48 Lakhs, Period of Completion: 4 months (including rainy season), Class of Contractor: PRED Class-III and above.
More details can be had from the office of the undersigned (Phone: 08382-229735 E-mail: eerdwsd.uk@gmail.com) and also through website www.eproc.karnataka.gov.in by clicking list of Tenders which will link to all dept works list.
Sd/- Executive Engineer, RDW&S Division, Karwar, Uttara Kannada District
DIPR/ADK/MCA/843/20-21 dt.12.3.2021

ಜನಾಕ್ರೋಶ ಸಮಾವೇಶದಲ್ಲಿ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಎಚ್ಚರಿಕೆ

ಎಲ್ಲ ಠಾಣೆಗಳಿಗೂ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ರಾಜ್ಯದ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರ ಮೇಲೆ ಭದ್ರಾವತಿಯಲ್ಲಿ ನಡೆದಂತಹ ಪೊಲೀಸ್ ದೌರ್ಜನ್ಯ ಮುಂದುವರಿದರೆ ರಾಜ್ಯದ ಎಲ್ಲ ಠಾಣೆಗಳಿಗೆ ಮುತ್ತಿಗೆ ಹಾಕಲಾಗುವುದು ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಎಚ್ಚರಿಸಿದರು.

ನಗರದ ಬಿ.ಎಚ್.ರಸ್ತೆಯ ಸೈನ್ಸ್ ಮೈದಾನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ‘ಶಿವಮೊಗ್ಗ ಚಲೋ-ಜನಾಕ್ರೋಶ’ ಪ್ರತಿಭಟನಾ ಸಮಾವೇಶದಲ್ಲಿ ಅವರು ಮಾತನಾಡಿದರು.

‘ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕೋಟಿಗಟ್ಟಲೆ ದುಡ್ಡು ಕೊಟ್ಟು ಶಾಸಕರನ್ನು ಖರೀದಿಸಿದರು. ಲೂಟಿ ಹೊಡೆದು ಆಸ್ತಿ ಮಾಡಿದರು. ಹಾಗಂತ ಅವರೇ ಪೊಲೀಸರಿಗೆ ಸಂಬಳ ಕೊಡುತ್ತಾರಾ? ಸರ್ಕಾರದ ಸಂಬಳ ಪಡೆದವರಿಗೆ ನಾಚಿಕೆಯಾಗಬೇಕು. ಯಡಿಯೂರಪ್ಪ, ಈಶ್ವರಪ್ಪ ಅಥವಾ ಬಿಜೆಪಿ ಕಚೇರಿಯಿಂದ ವೇತನ ನೀಡುವುದಿಲ್ಲ. ಮಾನ, ಮರ್ಯಾದೆ ಇದ್ದವರು ಇಂತಹ ಸೂಕ್ಷ್ಮಗಳನ್ನು ಅರ್ಥ ಮಾಡಿಕೊಂಡು ಕೆಲಸ ಮಾಡಬೇಕು. ಐಪಿಸಿ ಕಲಂಗಳನ್ನು ಸರಿಯಾಗಿ ಓದಿಕೊಳ್ಳಬೇಕು. ಕಾಂಗ್ರೆಸ್ ಕಾರ್ಯಕರ್ತರು ಬೀದಿಗಿಳಿದರೆ ಯಾವ ಪೊಲೀಸರೂ ತಡೆಯಲು ಸಾಧ್ಯವಿಲ್ಲ. ಸುಳ್ಳು ಕೇಸ್ ಹಾಕ್ತೀರಾ? ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತೆ, ಬಿ ಕೇರ್‌ಫುಲ್’ ಎಂದು ಪೊಲೀಸ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ‘ಕೊರೊನಾ ಸಮಯದಲ್ಲೂ ಸರ್ಕಾರ ಜನರಿಗೆ ಉಪಕಾರ ಮಾಡಲಿಲ್ಲ. ಹಾಸಿಗೆ, ದಿಂಬಿನಲ್ಲೇ ಸಾವಿರಾರು ಕೋಟಿ ಲೂಟಿ ಹೊಡೆದರು. ಅವರ ಮಾತು ಕೇಳದವರನ್ನು ಐಟಿ, ಸಿಬಿಐ, ಇಡಿ ಬಿಟ್ಟು ಹೆದರಿಸಿದರು. ನನ್ನನ್ನು ಮುಗಿಸಲು ಸಂಚು ಮಾಡಿದರು. ಸಮಯ ಬಂದಾಗ ಎಲ್ಲ ಬಿಚ್ಚಿಡುತ್ತೇನೆ. ಯಾರಿಗೂ ಹೆದರೋ ಮಗ ಅಲ್ಲ ಈ ಶಿವಕುಮಾರ್’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಮುಖಂಡರಾದ ಡಾ.ಜಿ. ಪರಮೇಶ್ವರ, ಕೃಷ್ಣ ಬೈರೇಗೌಡ, ರಾಮಲಿಂಗಾ ರೆಡ್ಡಿ, ವಿನಯ್‌ಕುಮಾರ್ ಸೊರಕೆ, ಈಶ್ವರ ಖಂಡ್ರೆ ಸೇರಿ ರಾಜ್ಯದ ಹಲವು ಕಾಂಗ್ರೆಸ್ ಮುಖಂಡರು ಸಮಾವೇಶದಲ್ಲಿ ಭಾಗವಹಿಸಿದ್ದರು.

ಶಿವಮೊಗ್ಗದ ಬಿ.ಎಚ್.ರಸ್ತೆಯಲ್ಲಿ ಶನಿವಾರ ನಡೆದ ಕಾಂಗ್ರೆಸ್ ಜನಾಕ್ರೋಶ ಪ್ರತಿಭಟನಾ ರ್‍ಯಾಲಿ

ಮಾಧ್ಯಮಗಳನ್ನು ಕುಟುಕಿದ ಶಾಸಕ ರಮೇಶ್ ಕುಮಾರ್

‘ದೆಹಲಿ ಬಳಿ 105 ದಿನಗಳಿಂದ ನಡೆಯುತ್ತಿರುವ ರೈತ ಹೋರಾಟದಲ್ಲಿ 200 ಜನರು ಪ್ರಾಣ ಕಳೆದುಕೊಂಡಿದ್ದಾರೆ. ಅದು ಮಾಧ್ಯಮಗಳಿಗೆ ಸುದ್ದಿ ಎನಿಸಲಿಲ್ಲ. ನಿಮ್ಮ ಕಾಳಜಿಗೆ ನನ್ನ ಶಿರಸಾಷ್ಟಾಂಗ ನಮಸ್ಕಾರ’ ಎಂದು ಶಾಸಕ ರಮೇಶ್ ಕುಮಾರ್ ಮಾಧ್ಯಮಗಳನ್ನು ಕುಟುಕಿದರು.

ಬಿಜೆಪಿ ಮುಖಂಡರು ರಾಮನ ಬಗ್ಗೆ ಮಾತನಾಡುತ್ತಾರೆ. ರಾಮ ಮಹಾರಾಜನಾದರೂ ಮರ್ಯಾದಾ ಪುರುಷ. ಜನರ ಮಾತಿಗೆ ಮನ್ನಣೆ ನೀಡುತ್ತಿದ್ದ. ಬಿಜೆಪಿಯವರು ಈಗ ಸಿ.ಡಿ ರಾಮರಾಗಿದ್ದಾರೆ. ಬಾಂಬೆಗೆ ಹೋದವರು ಅಲ್ಲಿ ಭಗವದ್ಗೀತೆ ಓದುತ್ತಿದ್ದರಾ? ಯೋಗ ಮಾಡುತ್ತಿದ್ದರಾ? ಇಂಥವರಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆ ಎಂದು ಹರಿಹಾಯ್ದರು.

ಗಡಿ ವಿಚಾರ ಕೆದಕಿದ ಶಿವಸೇನಾ

ಒಂದನೇ ಪುಟದಿಂದ

‘ಇದು ರಾಜ್ಯದ ಸಮಸ್ಯೆಯಾಗಿರುವುದರಿಂದ ವಿರೋಧ ಪಕ್ಷದವರೂ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಜತೆ ನಿಲ್ಲಬೇಕು. ಬೆಳಗಾವಿಯಲ್ಲಿ ಮರಾಠಿ ಮಾತನಾಡುವ ಜನರಿಗೆ ನಾವು ಬೆಂಬಲ ನೀಡಬೇಕು. ಒಗ್ಗಟ್ಟು ಪ್ರದರ್ಶನಕ್ಕಾಗಿ ಬೆಳಗಾವಿಗೆ ಸರ್ವಪಕ್ಷ ನಿಯೋಗವೊಂದು ಹೋಗಬೇಕು ಎಂದಿದ್ದಾರೆ.

‘ಬೆಳಗಾವಿಯ ಬೆಳವಣಿಗೆಗಳಿಗೆ ಶಿವಸೇನೆಯೂ ತಕ್ಕ ಪ್ರತ್ಯುತ್ತರ ನೀಡಬಲ್ಲದು. ಆದರೆ, ಎರಡು ರಾಜ್ಯಗಳ ಮಧ್ಯೆ ಸಂಘರ್ಷ ಸೃಷ್ಟಿಸಲು ನಾವು ಇಚ್ಛಿಸುವುದಿಲ್ಲ. ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಬೇಕು’ ಎಂದು ರಾವುತ್ ಒತ್ತಾಯಿಸಿದ್ದಾರೆ.

ಮರಾಠಿ ಫಲಕಕ್ಕೆ ಎಂಇಎಸ್ ಬೇಡಿಕೆ (ಬೆಳಗಾವಿ ವರದಿ): ‘ಬೆಳಗಾವಿಯಲ್ಲಿ ಮರಾಠಿ ನಾಮಫಲಕಗಳನ್ನು ಅಳವಡಿಸಲು ಅವಕಾಶ ನೀಡಬೇಕು’ ಎಂದು ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಹಾಗೂ ಶಿವಸೇನಾ ಮುಖಂಡರು ನಗರ ಪೊಲೀಸ್ ಆಯುಕ್ತ ಕೆ. ತ್ಯಾಗರಾಜನ್ ಅವರಿಗೆ ಶನಿವಾರ ಮನವಿ ಸಲ್ಲಿಸಿದರು.

‘ಮರಾಠಿಯಲ್ಲಿ ಫಲಕಗಳನ್ನು ಹಾಕಿಕೊಳ್ಳಲು ಕಾನೂನಿನಲ್ಲಿ ಅವಕಾಶವಿದೆ. ಶಿವಸೇನಾ ಜಿಲ್ಲಾ ಘಟಕದ ಅಧ್ಯಕ್ಷ ಪ್ರಕಾಶ ಶಿರೋಳಕರ ಅವರ ಕಾರಿನಲ್ಲಿ ಅಳವಡಿಸಿದ್ದ ಮರಾಠಿ ಫಲಕ ಕಿತ್ತೆಸೆದ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು’ ಎಂದು ಎಂಇಎಸ್ ಮುಖಂಡ ಶುಭಂ ಶೇಳಕೆ ಒತ್ತಾಯಿಸಿದರು.

ಈ ನಡುವೆ, ಕೊಲ್ಹಾಪುರದಲ್ಲಿ ಶಿವಸೇನಾ ಕಾರ್ಯಕರ್ತರು ಕನ್ನಡ ನಾಮಫಲಕಗಳಿಗೆ ಮಸಿ ಬಳಿಯುವ ಕೃತ್ಯವನ್ನು ಮುಂದುವರಿಸಿದ್ದಾರೆ.

ಗಡಿಯ ಕಾಗಲ್ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಶನಿವಾರ ಕರ್ನಾಟಕಕ್ಕೆ ಬರುತ್ತಿದ್ದ ಲಾರಿ ಸೇರಿದಂತೆ ಕೆಲವು ಖಾಸಗಿ ವಾಹನಗಳನ್ನು ತಡೆದು ‘ಜೈ ಮಹಾರಾಷ್ಟ್ರ’ ಎಂದು ಸ್ಟಿಕ್ಕರ್ ಅಂಟಿಸಿದ್ದಾರೆ.

ಕೊಲ್ಹಾಪುರಕ್ಕೆ ಬಸ್ ಸ್ಥಗಿತ

ಒಂದನೇ ಪುಟದಿಂದ

‘ಮುಂಜಾಗ್ರತಾ ಕ್ರಮವಾಗಿ, ಕೊಲ್ಹಾಪುರಕ್ಕೆ ಬಸ್ ಸಂಚಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಕೊಲ್ಹಾಪುರಕ್ಕೆ ಇಲ್ಲಿಂದ ನಿತ್ಯ 97 ಹಾಗೂ ಅಲ್ಲಿಂದ ಇಲ್ಲಿಗೆ 57 ಬಸ್‌ಗಳು ಸಂಚರಿಸುತ್ತಿದ್ದವು’ ಎಂದು ಎನ್‌ಡಬ್ಲ್ಯುಕೆಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಎಂ.ಆರ್. ಮುಂಜಿ ‘ಪ್ರಜಾವಾಣಿ’ಗೆ ತಿಳಿಸಿದರು.

ಕಿರುಕುಳ ಖಂಡನೀಯ: ‘ಎರಡು ದಿನಗಳಿಂದ ಮಹಾರಾಷ್ಟ್ರದ ಕೊಲ್ಹಾಪುರ ಹಾಗೂ ಸುತ್ತಮುತ್ತ ಶಿವಸೇನಾದವರು ಕನ್ನಡಿಗರಿಗೆ ಕಿರುಕುಳ ನೀಡುತ್ತಿರುವುದು ಖಂಡನೀಯ’ ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ. ಸೋಮಶೇಖರ ಹೇಳಿದ್ದಾರೆ.

‘ನಮ್ಮ ಗೃಹಸಚಿವರು ಮಹಾರಾಷ್ಟ್ರದ ಗೃಹಸಚಿವರನ್ನು ಸಂಪರ್ಕಿಸಿ, ಕನ್ನಡಿಗರು ಹಾಗೂ ಮರಾಠಿ ಭಾಷಿಗರ ನಡುವೆ ಸೌಹಾರ್ದ ವಾತಾವರಣ ಮೂಡಿಸಲು ಶ್ರಮಿಸಬೇಕು’ ಎಂದು ಆಗ್ರಹಿಸಿದ್ದಾರೆ.

ವಿಡಿಯೊ ಹರಿಬಿಟ್ಟ ಯುವತಿ

ಒಂದನೇ ಪುಟದಿಂದ

‘ರಮೇಶ ಜಾರಕಿಹೊಳಿ ಅವರೇ ನನಗೆ ಕೆಲಸ ಕೊಡಿಸುತ್ತೇನೆ ಎಂದರು. ಅದೆಲ್ಲ ಮಾಡಿ ಈಗ ವಿಡಿಯೊವನ್ನು ಹೊರಗಡೆ ಬಿಡುತ್ತಿದ್ದಾರೆ. ನನಗೆ ಯಾವುದೇ ರಕ್ಷಣೆ ಇಲ್ಲ’ ಎಂದೂ ಯುವತಿ ಹೇಳಿದ್ದಾರೆ.

‘ಬೊಮ್ಮಾಯಿ ಅವರೇ ನನಗೆ ರಕ್ಷಣೆ ಕೊಡಿ. ಈ ವಿಡಿಯೊ ಹೇಗೆ ಮಾಡಿದರು ಎಂಬುದು ನನಗೆ ಗೊತ್ತಿಲ್ಲ. ಈಗಾಗಲೇ ನನ್ನ ಮಾನ, ಮರ್ಯಾದೆ ಹರಾಜು ಆಗಿಬಿಟ್ಟಿದೆ. ನನ್ನ ಮನೆ ಹತ್ತಿರ ಜನ ಬಂದು ಕೇಳಿಕೊಂಡು ಹೋಗುತ್ತಿದ್ದಾರೆ. ಅಪ್ಪ- ಅಮ್ಮ ಎರಡು ಬಾರಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ನಾನು ಸಹ ಮೂರ್ನಾಲ್ಕು ಬಾರಿ ಆತ್ಮಹತ್ಯೆಗೆ ಯತ್ನಿಸಿದ್ದೇನೆ. ನಮಗೆ ರಾಜಕೀಯ ಬೆಂಬಲವೂ ಇಲ್ಲ’ ಎಂದು ಯುವತಿ ವಿವರಿಸಿದ್ದಾರೆ.

ಆಪ್ತನ ಮೂಲಕ ರಮೇಶ ಜಾರಕಿಹೊಳಿ ದೂರು

ರಮೇಶ ಜಾರಕಿಹೊಳಿ ತಮ್ಮ ಆಪ್ತರಾದ ಮಾಜಿ ಶಾಸಕ ಎಂ.ವಿ. ನಾಗರಾಜು ಮೂಲಕ ಸಲ್ಲಿಸಲಾಗಿರುವ ದೂರಿನ ಅನ್ವಯ ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ದೂರಿನ ಪರಿಶೀಲನೆ ನಡೆಸಿದ ಇನ್‌ಸ್ಪೆಕ್ಟರ್, ಅಪರಾಧ ಸಂಚು (ಐಪಿಸಿ 34), ಕ್ರಿಮಿನಲ್ ಪಿತೂರಿ (ಐಪಿಸಿ 120ಬಿ), ಬೆದರಿಸಿ ಸುಲಿಗೆಗೆ ಯತ್ನ (ಐಪಿಸಿ 385), ಸಹಿ ನಕಲು ಮಾಡಿದ (ಐಪಿಸಿ 465) ಹಾಗೂ ಗೌರವ ಹಾಳು ಮಾಡಲು ನಕಲು ಮಾಡಿದ (ಐಪಿಸಿ 469) ಆರೋಪದಡಿ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ದೂರಿನ ವಿವರ: ‘ನನ್ನನ್ನು ರಾಜಕೀಯವಾಗಿ ತೇಜೋವಧೆ ಮಾಡಲು, ರಾಜಕೀಯವಾಗಿ ಮುಗಿಸಲು ಹಾಗೂ ಹಣ ವಸೂಲಿ ಮಾಡಲು ಷಡ್ಯಂತ್ರವನ್ನು ರೂಪಿಸುತ್ತಿದ್ದಾರೆ’ ಎಂದು ರಮೇಶ ಜಾರಕಿಹೊಳಿ ದೂರಿನಲ್ಲಿ ತಿಳಿಸಿದ್ದಾರೆ.

‘ಸುಮಾರು 3 ತಿಂಗಳಿನಿಂದ ಸದಾಶಿವನಗರದಲ್ಲಿ ನನ್ನ ವಿರುದ್ಧ ಮಸಲತ್ತು ಹಾಗೂ ಮೋಸ ಮಾಡಿ ಒಂದು ನಕಲಿ ಸಿ.ಡಿ.ಯನ್ನು ಸೃಷ್ಟಿಸಿ ಮಾನಸಿಕವಾಗಿ ಹಿಂಸಿಸಿ, ರಾಜಕೀಯವಾಗಿ ಮಾನಹಾನಿ ಮಾಡಿ ನನ್ನಿಂದ ಹಣ ಪಡೆಯಲು ಪ್ರಯತ್ನಿಸುತ್ತಿದ್ದಾರೆ. ಇದರ ಹಿಂದೆ ಹಲವಾರು ಜನರು ಇದ್ದು, ಕೆಲವರು ಷಡ್ಯಂತ್ರ ರಚಿಸಿ ಇನ್ನು ಕೆಲವರು ನಕಲಿ ಸಿ.ಡಿ ತಯಾರಿಸಲು ಭಾಗಿಯಾಗಿ ಹಾಗೂ ಇತರರನ್ನು ಬಳಸಿಕೊಂಡು ಅಂತರ್ಜಾಲದಲ್ಲಿ ಬಿಡುಗಡೆ ಮಾಡಿ ರಾಜಕೀಯ ಅಸ್ಥಿರತೆ ಉಂಟು ಮಾಡುತ್ತಿದ್ದಾರೆ. ಅವರನ್ನು ಪತ್ತೆ ಮಾಡಿ ಕಾನೂನು ಕ್ರಮ ಕೈಗೊಳ್ಳಿ’ ಎಂದೂ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಮಯೂರ
ಏಪ್ರಿಲ್ 2021 ಸಂಚಿಕೆಯಲ್ಲಿ
ನವನವೀನ ಬರಹಗಳ ಗುಚ್ಛ
ಸ್ಮರಣೆ
ಫ್ರೆಂಚ್ ಲೇಖಕಿ ಸಿಮೊನ್ ದ ಬೊವಾ ಬರೆದ ನೆನಪಿನ ಬರಹ ಸಾರ್ತ್ರ್‌ರ ಕೊನೆಯ ದಿನಗಳು ಕನ್ನಡಿಸಿದ್ದಾರೆ ವಿಕ್ರಂ ವಿಸಾಜಿ
ವಿದ್ಯಮಾನ
ಅಪರಿಚಿತರ ಹೊಸ್ತಿಲಲ್ಲಿ ಆಶ್ವಾಸನೆಯ ಶೋಧನೆ
ಕವಯಿತ್ರಿ ಭಾನು ಕಪಿಲ್ ಕಾವ್ಯ ಕುರಿತ ಕಮಲಾಕರ ಕಡವೆ ಬರಹ
ಕತೆಗಳು
• ಬಿ.ವಿ. ರಾಮಪ್ರಸಾದ್
• ಶಶಿಕಲಾ ಬಾಯಾರು
• ರಾಜಕುಮಾರ ಕುಲಕರ್ಣಿ
• ಎಸ್. ಗಂಗಾಧರಯ್ಯ
• ಚಿಂತಾಮಣಿ ಕೊಡ್ಲೆಕೆರೆ
• ಶ್ವೇತಾ ನರಗುಂದ
• ಕೇಶವರೆಡ್ಡಿ ಹಂದ್ರಾಳ
• ಫಕೀರ್ ಮೋಹನ್ ಸೇನಾಪತಿ
ಪ್ರಬಂಧಗಳು
ಮಲ್ಲಿಕಾರ್ಜುನ ಹುಲಗಬಾಳಿ, ತುರುವೇಕೆರೆ ರವಿಶಂಕರ್ ಅವರ ಭಿನ್ನ ಶೈಲಿಯ ಪ್ರಬಂಧಗಳು
ತೇಜಸ್ವಿ ನೆನಪು
ಲೇಖಕ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರೊಂದಿಗಿನ ನಾಲ್ಕು ದಶಕಗಳ ಒಡನಾಟವನ್ನು ಮೆಲುಕು ಹಾಕುವ ಪದ್ಮಾ ಶ್ರೀರಾಮ ಅವರ ಬರಹ
₹15 ನಿಮ್ಮ ಪ್ರತಿಗಳಿಗೆ ಏಜೆಂಟರನ್ನು ಸಂಪರ್ಕಿಸಿ
editormy@mayura.co.in /mayuramonthly
mayuraezine.com 080-45557333/264

ಪ್ರಜಾವಾಣಿ facebook Premier
FB.com/prajavani.net
ಮಧುರ ಚಲನಚಿತ್ರ ಗೀತೆಗಳ ಕಾರ್ಯಕ್ರಮ
‘ಹೂವು ಚೆಲುವೆಲ್ಲಾ ನಂದೆಂದಿತು’
ನಂದಿನಿ ವಲ್ಲೀಶ್
ಖ್ಯಾತ ಕಿರುತೆರೆ- ಚಲನಚಿತ್ರ ನಟಿ, ಹಿನ್ನೆಲೆ ಗಾಯಕಿ
ಸ್ವರೂಪ್ ರಮೇಶ್
ಖ್ಯಾತ ಗಾಯಕ
ಇಂದು ಸಂಜೆ 6.30 ರಿಂದ

ಪ್ರಜಾವಾಣಿ ಸಂವಾದ
facebook LIVE
ಫೇಸ್‌ಬುಕ್‌ನಲ್ಲಿ ನೇರ ಪ್ರಸಾರ
ರಾಜ್ಯದಲ್ಲಿ ಮತ್ತೆ ಪ್ರಬಲ ರೈತ ಚಳವಳಿ ತಲೆ ಎತ್ತುತ್ತಿದೆಯೆ? 20 ರಂದು ಶಿವಮೊಗ್ಗದಲ್ಲಿ ರಾಕೇಶ್ ಟಿಕಾಯತ್ ಸಮ್ಮುಖದಲ್ಲಿ ನಡೆಯಲಿರುವ ಕಿಸಾನ್ ಮಹಾ ಪಂಚಾಯತ್ ಅದಕ್ಕೆ ಮುನ್ನುಡಿ ಆಗಲಿದೆಯೆ?
ಪಾಲ್ಗೊಳ್ಳುವವರು
ನೀವೂ ಪಾಲ್ಗೊಳ್ಳಿ
ಕೆ.ಟಿ.ಗಂಗಾಧರ
ವರಿಷ್ಠರು, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರುಸೇನೆ
ಎಚ್.ವಿ.ವಾಸು
ಸಾಮಾಜಿಕ ಹೋರಾಟಗಾರರು
ಸೋಮವಾರ 15.03.2021 ಬೆಳಿಗ್ಗೆ 11 ರಿಂದ 12
fb.com/prajavani.net

ಟಿ.ವಿ ವರದಿಗಾರನ ಮನೆ ತಪಾಸಣೆ

ಶಿರಾ: ಮಾಜಿ ಸಚಿವ ರಮೇಶ ಜಾರಕಿಹೊಳಿ ರಾಜೀನಾಮೆಗೆ ಕಾರಣವಾದ ಸಿ.ಡಿ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ ಶುಕ್ರವಾರ ರಾತ್ರಿ ತಾಲ್ಲೂಕಿನ ಭೂವನಹಳ್ಳಿಯಲ್ಲಿರುವ ಸುದ್ದಿವಾಹಿನಿಯ ವರದಿಗಾರರೊಬ್ಬರ ಮನೆಯಲ್ಲಿ ಪರಿಶೀಲನೆ ನಡೆಸಿದೆ.

ಶುಕ್ರವಾರ ರಾತ್ರಿ ಗ್ರಾಮಕ್ಕೆ ಬಂದ ಅಧಿಕಾರಿಗಳ ತಂಡ ವರದಿಗಾರನ ಮನೆ ಜಾಲಾಡಿದೆ. ಬೆಂಗಳೂರಿನಲ್ಲಿ ಖಾಸಗಿ ಸುದ್ದಿವಾಹಿನಿಯೊಂದರಲ್ಲಿ ಕೆಲಸ ಮಾಡುತ್ತಿರುವ ಗ್ರಾಮದ ನರೇಶ್ ಗೌಡ ಮನೆಗೆ ಬಂದ ಅಧಿಕಾರಿಗಳು ವರದಿಗಾರನ ತಾಯಿ ಮತ್ತು ಪತ್ನಿಯನ್ನು ಪ್ರಶ್ನಿಸಿದ್ದಾರೆ.

ನರೇಶ್ 15 ದಿನಗಳ ಹಿಂದೆ ಪತ್ನಿಯನ್ನು ಬೆಂಗಳೂರಿನಿಂದ ಕರೆತಂದು ಭೂವನಹಳ್ಳಿ ಗ್ರಾಮದ ತಮ್ಮ ಮನೆಯಲ್ಲಿ ಬಿಟ್ಟಿದ್ದರು. ಇದೇ ಜ. 17ರಂದು ನಡೆದ ನರೇಶ್ ಅವರ ಮಗಳ ನಾಮಕರಣ ಸಮಾರಂಭದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಭಾಗಿಯಾಗಿದ್ದರು ಎನ್ನಲಾಗಿದೆ.

ಎಸ್‌ಐಟಿ ಪರಿಶೀಲನೆ

ಬೆಂಗಳೂರು: ವರದಿಗಾರರು, ಸರ್ಕಾರಿ ಶಿಕ್ಷಕಿ ಸೇರಿ ಹಲವರನ್ನು ವಿಚಾರಣೆ ನಡೆಸಿದ್ದ ಎಸ್‌ಐಟಿ ಅಧಿಕಾರಿಗಳು, ಬೆಂಗಳೂರು, ಬೀದರ್, ದೇವನಹಳ್ಳಿ, ತುಮಕೂರು ಸೇರಿದಂತೆ ಹಲವೆಡೆ ಶನಿವಾರ ಪರಿಶೀಲನೆ ನಡೆಸಿದರು.

ವಿಚಾರಣೆಗೆ ಒಳಪಡಿಸಿದ್ದ ವ್ಯಕ್ತಿಗಳ ಮನೆ ಹಾಗೂ ಕಚೇರಿಗಳಲ್ಲಿ ಪರಿಶೀಲನೆ ನಡೆಸಿದರು. ಕಂಪ್ಯೂಟರ್, ಹಾರ್ಡ್ ಡಿಸ್ಕ್ ಸೇರಿ ಹಲವು ವಸ್ತುಗಳನ್ನು ತಮ್ಮ ಸುಪರ್ದಿಗೆ ಪಡೆದರು ಎಂಬುದಾಗಿ ಗೊತ್ತಾಗಿದೆ.

ಸುದ್ದಿವಾಹಿನಿ ತಂತ್ರಜ್ಞ ಯುವಕನ ಮನೆ ಜಾಲಾಡಿದ ಎಸ್‌ಐಟಿ

ವಿಜಯಪುರ: ಸಿ.ಡಿಯ ಜಾಡು ಹಿಡಿದು ಹೊರಟಿರುವ ವಿಶೇಷ ತನಿಖಾ ತಂಡ ಸುದ್ದಿವಾಹಿನಿಯೊಂದರ ತಾಂತ್ರಿಕ ಉದ್ಯೋಗಿ ಶ್ರವಣ್ ಎಂಬ ಯುವಕನ ಮನೆಯ ಮೇಲೆ ಶನಿವಾರ ಬೆಳಗಿನ ಜಾವ ದಾಳಿ ನಡೆಸಿ, ಕೆಲವು ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿದೆ ಎಂದು ಮೂಲಗಳು ತಿಳಿಸಿವೆ.

ಶ್ರವಣ್ ನಾಲ್ಕು ದಿನಗಳಿಂದ ನಾಪತ್ತೆಯಾಗಿದ್ದು, ಬಸವೇಶ್ವರ ಬಡಾವಣೆಯ ಮನೆಯ ಮೇಲೆ ದಾಳಿ ನಡೆದಾಗ ಆತನ ತಂದೆ ಸುರೇಶ್ ಮತ್ತು ಅಣ್ಣ ಶರಣ್ ಇದ್ದರು.

ಕಂಪ್ಯೂಟರ್, ಸಿ.ಡಿ, ಪೆನ್‌ಡ್ರೈವ್ ವಶಪಡಿಸಿಕೊಳ್ಳಲಾಗಿದ್ದು, ಶರಣ್‌ನನ್ನು ಪೊಲೀಸರು ವಿಚಾರಣೆಗಾಗಿ ತಮ್ಮೊಂದಿಗೆ ಕರೆದೊಯ್ದಿದ್ದಾರೆ.

ಶ್ರವಣ್

ದಾಳಿ ವೇಳೆ ₹25 ಲಕ್ಷ ಮೊತ್ತದ ಡಿ.ಡಿ ಕೂಡ ಪತ್ತೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ರಷ್ಯಾದ ಸರ್ವರ್ ಹ್ಯಾಕ್?: ಸಿ.ಡಿ ಎಡಿಟಿಂಗ್, ಅಪ್‌ಲೋಡಿಂಗ್ ಕಾರ್ಯದಲ್ಲಿ ಕಿಂಗ್‌ಪಿನ್ ಆಗಿದ್ದ ಶ್ರವಣ್, ರಷ್ಯಾದ ಸರ್ವರ್ ಹ್ಯಾಕ್ ಮಾಡಿ ಸಿ.ಡಿ ಅಪ್‌ಲೋಡ್ ಮಾಡಿದ್ದಾನೆ. ಕಂಪ್ಯೂಟರ್‌ನ ಪಾಸ್‌ವರ್ಡ್ ಪತ್ತೆಯಾಗಬೇಕಿದೆ. ಶ್ರವಣ್ ಕೆಲವು ಪ್ರಭಾವಿ ರಾಜಕಾರಣಿಗಳೊಂದಿಗೆ ಗುರುತಿಸಿಕೊಂಡಿದ್ದಾನೆ ಎಂದು ಮೂಲಗಳು ತಿಳಿಸಿವೆ.



ಸಮಾರಂಭದಲ್ಲಿ ಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್, ಪಿಯುಸಿ ವಿದ್ಯಾರ್ಥಿಗಳಿಗೆ 'ಸಂವಿಧಾನ ಓದು' ಪುಸ್ತಕವನ್ನು ವಿತರಿಸಿದರು. ಶಾಸಕ ಸಿ.ಪುಟ್ಟರಂಗಶೆಟ್ಟಿ, ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ವಿ. ಶ್ರೀನಿವಾಸ ಪ್ರಸಾದ್, ಶಾಸಕ ಎನ್.ಮಹೇಶ್, ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ ಅಶ್ವಿನಿ, ಶಾಸಕರಾದ ಹರ್ಷವರ್ಧನ್, ಅಶ್ವಿನ್‌ಕುಮಾರ್ ಇದ್ದರು

‘ಸಂವಿಧಾನ ಓದು: ಸಿದ್ಧಾಂತ ತಿಳಿಸುವ ವಿಧಾನ ಆಗಬಾರದು’

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ‘ಸಂವಿಧಾನದ ಬಗ್ಗೆ ಜನರಿಗೆ, ವಿದ್ಯಾರ್ಥಿಗಳಿಗೆ ತಿಳಿಸುವಾಗ ರಾಗ ದ್ವೇಷ ಇರಬಾರದು. ಸಂವಿಧಾನವನ್ನು ಓದಿ ಎಂದು ಹೇಳುವುದು ಯಾವುದೋ ಸಿದ್ಧಾಂತವನ್ನು ತಿಳಿಸುವ ವಿಧಾನ ಆಗಬಾರದು’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ಶನಿವಾರ ಇಲ್ಲಿ ಹೇಳಿದರು.

ಪಿಯುಸಿಯ 30 ಸಾವಿರ ವಿದ್ಯಾರ್ಥಿಗಳಿಗೆ ನೀಡಲು ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಪ್ರದೇಶಾಭಿವೃದ್ಧಿ ನಿಧಿಯಿಂದ ಮುದ್ರಿಸಲಾದ, ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅವರ ‘ಸಂವಿಧಾನ ಓದು’ ಪುಸ್ತಕ ವಿತರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

‘ದೇಶದ ಸಂವಿಧಾನದಲ್ಲಿ ತುರ್ತು-ಪರಿಸ್ಥಿತಿ ಹೇರಿಕೆಯು ಕರಾಳ ಅಧ್ಯಾಯ. ನಾಗಮೋಹನದಾಸ್ ಅವರು ‘ಸಂವಿಧಾನ ಓದು’ ಕೃತಿಯಲ್ಲಿ ಇದನ್ನು ಯಾಕೆ ಸೇರಿಸಿಲ್ಲ ಎಂಬುದು ಗೊತ್ತಿಲ್ಲ. ಆದರೆ, ಅವರು ಇದನ್ನು ಸೇರಿಸಬೇಕಾಗಿತ್ತು’ ಎಂದರು.

‘ರಾತ್ರಿ ಮೂರು ಗಂಟೆಗೆ ರಾಷ್ಟ್ರಪತಿ ಅವರನ್ನು ನಿದ್ದೆಯಿಂದ ಎಬ್ಬಿಸಿ ತುರ್ತು ಪರಿಸ್ಥಿತಿ ಘೋಷಣೆಗೆ ಸಹಿ ಹಾಕಿಸಲಾಗಿತ್ತು. ಸರ್ಕಾರದ ವಿರುದ್ಧ ಮಾತನಾಡಿದವರನ್ನೆಲ್ಲ ಬಂಧಿಸಿ ಚಿತ್ರಹಿಂಸೆ ನೀಡಲಾಗಿತ್ತು. ಲೋಕಸಭೆಯನ್ನು ದುರುಪಯೋಗ ಪಡಿಸಿಕೊಂಡಿದ್ದರು. ನ್ಯಾಯಾಂಗವನ್ನೂ ಹಿಡಿತದಲ್ಲಿಟ್ಟುಕೊಂಡಿದ್ದರು. ಮಾಧ್ಯಮಗಳ ಮೇಲೆಯೂ ನಿಯಂತ್ರಣ ಹೇರಲಾಗಿತ್ತು. ಇದೊಂದು ಕರಾಳ ಅಧ್ಯಾಯ. ಮೂರು ಬಾರಿ ‘ಸಂವಿಧಾನ ಓದು’ ಪುಸ್ತಕವನ್ನು ಓದಿದ್ದೇನೆ. ಆದರೆ, ನನ್ನ ಆತ್ಮೀಯ ಗೆಳೆಯರಾದ ನಾಗಮೋಹನದಾಸ್ ಅವರು ಇದರ ಬಗ್ಗೆ ಪುಸ್ತಕದಲ್ಲಿ ಸೇರಿಸಿಲ್ಲ. ಯಾಕೆ ಎಂಬುದು ಎಂಬುದು ಗೊತ್ತಿಲ್ಲ. ಇದು ಅತ್ಯಂತ ಅಗತ್ಯವಾಗಿದ್ದ ಅಧ್ಯಾಯವಾಗಿತ್ತು. ಯಾಕೆಂದರೆ, ತುರ್ತುಪರಿಸ್ಥಿತಿಯಂತಹ ಸ್ಥಿತಿ ಈ ದೇಶದಲ್ಲಿ ಇನ್ನೊಮ್ಮೆ ನಿರ್ಮಾಣವಾಗಬಾರದು’ ಎಂದರು.

‘ಅದರ ಬದಲಿಗೆ, ಅಲ್ಲೇನೋ ನಡಿಯುತ್ತಿದೆ. ಇಲ್ಲೇನೋ ಆಗುತ್ತಿದೆ ಎಂದು ಹೇಳುವುದು, ಯಾರೋ ಒಬ್ಬರು ಸಂವಿಧಾನದ ವಿರುದ್ಧ ಮಾತನಾಡಿದ್ದನ್ನು ಪ್ರಸ್ತಾಪಿಸಿ, ಅದನ್ನು ಸರ್ಕಾರದ ವಿರುದ್ಧವೇ ಹಾಕುವುದು ಅಷ್ಟು ಸರಿ ಹೋಗಲಿಕ್ಕಿಲ್ಲ. ಸಂವಿಧಾನ ಎನ್ನುವುದು ನಮ್ಮ ಜೀವನದ ಶ್ರದ್ಧೆಯ ಗ್ರಂಥ. ನಮಗೆ ಜೀವನದಲ್ಲಿ ಏನಾದರೂ ಅವಕಾಶ ಸಿಕ್ಕಿದ್ದರೆ ಅದಕ್ಕೆ ಸಂವಿಧಾನ ಕಾರಣ’ ಎಂದರು.

‘ಮೋದಿ ಸರ್ಕಾರ ಬಂದ ಮೇಲೆ ಪ್ರತಿ ವರ್ಷ ನವೆಂಬರ್ 26ರಂದು ಸಂವಿಧಾನ ದಿನ ಆಚರಿಸಲಾಗುತ್ತದೆ. ಶಾಲಾ ಕಾಲೇಜುಗಳಲ್ಲಿ ಆ ದಿನದಂದು ಸಂವಿಧಾನದ ಪೀಠಿಕೆಯನ್ನು ಓದಿಸಲಾಗುತ್ತದೆ. ಪ್ರತಿ ಶಾಲೆಯಲ್ಲಿ ಪ್ರತಿಯೊಂದು ಮಗುವೂ ಓದುವಂತೆ ಮಾಡಲಾಗಿದೆ’ ಎಂದು ಸಚಿವ ಸುರೇಶ್ ಕುಮಾರ್ ಹೇಳಿದರು.

ದರೋಜಿ ಕರಡಿಧಾಮದಲ್ಲಿ ಮಣ್ಣಿನ ಸಂರಕ್ಷಣೆ– ಅಂತರ್ಜಲ ಮಟ್ಟ ಹೆಚ್ಚಳ, ಬೇಟೆಗೆ ಕಡಿವಾಣ

ಗಣಿಗಾರಿಕೆಗೆ ನಿರ್ಬಂಧ: ಹೆಚ್ಚಿದ ಕರಡಿ ಸಂತತಿ

● ಶಶಿಕಾಂತ ಎಸ್. ಶೆಂಬೆಳ್ಳಿ

ವಿಜಯನಗರ (ಹೊಸಪೇಟೆ): ಕಲ್ಲು ಕ್ವಾರಿ ಗಣಿಗಾರಿಕೆ ಮೇಲೆ ನಿರ್ಬಂಧ ಹೇರಿ ಕರಡಿಗಳ ಆವಾಸಸ್ಥಾನದ ಸಂರಕ್ಷಣೆಗೆ ಅಗತ್ಯ ಕ್ರಮಗಳನ್ನು ಕೈಗೊಂಡಿರುವುದರ ಪರಿಣಾಮ ತಾಲ್ಲೂಕಿನ ದರೋಜಿ ಕರಡಿಧಾಮದಲ್ಲಿ ಕರಡಿ ಸಂತತಿ ನಿರಂತರವಾಗಿ ಹೆಚ್ಚಳ-ವಾಗುತ್ತಿದೆ.

ಈ ಹಿಂದೆ ವರ್ಷದಲ್ಲಿ ಐದಾರು ಕರಡಿ ಮರಿಗಳು ಜನಿಸಿದರೆ ಹೆಚ್ಚಿತ್ತು. ಈಗ ವರ್ಷಕ್ಕೆ ಏನಿಲ್ಲವೆಂದರೂ 20 ಮರಿಗಳು ಧಾಮದಲ್ಲಿ ಜನಿಸುತ್ತಿವೆ. ಪ್ರಸಕ್ತ ಸಾಲಿನ ಜನವರಿಯಲ್ಲಿ ಎರಡು ಕರಡಿಗಳು ತಲಾ ಎರಡೆರಡು ಕರಡಿಗಳು ಜನ್ಮ ನೀಡಿವೆ. ಫೆಬ್ರುವರಿ-ಯಲ್ಲಿ ಮತ್ತೊಂದು ಕರಡಿಗೆ ಎರಡು ಮರಿಗಳು ಜನಿಸಿದ್ದು, ಇವುಗಳು ಅರಣ್ಯ ಇಲಾಖೆಯ ಸಿಬ್ಬಂದಿಗೆ ಗೋಚರಿಸಿವೆ.

2019ರ ಸೆಪ್ಟೆಂಬರ್‌ನಿಂದ ಡಿಸೆಂಬರ್ ಅವಧಿಯಲ್ಲಿ ಏಳೆಂಟು ಕರಡಿಗಳು ಮರಿ ಹಾಕಿವೆ. ಒಂದು ಕರಡಿ ಒಟ್ಟಿಗೆ ಎರಡು ಮರಿ ಹಾಕುತ್ತದೆ. ಬಂಡೆಗಲ್ಲುಗಳಿಂದ ಕೂಡಿರುವ ಗುಹೆಗಳಲ್ಲಿಯೇ ಕರಡಿಗಳು ಹೆಚ್ಚಾಗಿ ವಾಸವಾಗಿರುವುದರಿಂದ ಅವುಗಳ ನಿಖರ ಸಂಖ್ಯೆ ಗೊತ್ತಾಗಿಲ್ಲ. ಸದ್ಯ ಧಾಮದಲ್ಲಿ 130ಕ್ಕೂ ಅಧಿಕ ಕರಡಿಗಳು ಇರಬಹುದು ಎಂದು ಅರಣ್ಯ ಇಲಾಖೆ ಅಂದಾಜಿಸಿದೆ.

ಮುಖ್ಯಾಂಶಗಳು

- ಸಂತಾನೋತ್ಪತ್ತಿಗೆ ಪೂರಕ ವಾತಾವರಣ
- ಕರಡಿ ಧಾಮದಲ್ಲಿ 50 ಬಗೆಯ ಸರೀಸೃಪ
- 180 ಪ್ರಭೇದದ ಪಕ್ಷಿಗಳ ನೆಲೆ

ವರ್ಷಕ್ಕೆ ಸುಮಾರು 20 ಕರಡಿ ಮರಿಗಳು ಜನಿಸುತ್ತಿವೆ. ಕರಡಿಗಳು ಸ್ಥಳೀಯ ಪರಿಸರಕ್ಕೆ ಹೊಂದಿಕೊಂಡಿರುವುದಕ್ಕೆ ಇದು ಸಾಕ್ಷಿಯಾಗಿದೆ.

–ಉಷಾ, ಆರ್‌ಎಫ್‌ಒ, ದರೋಜಿ ಕರಡಿಧಾಮ

ಅರಣ್ಯ ಇಲಾಖೆಯ ವಿಶೇಷ ಕಾಳಜಿಯಿಂದಾಗಿ ದಖನ್ ಪ್ರಸ್ಥಭೂಮಿಯ ಮಾದರಿ ಅರಣ್ಯಧಾಮವಾಗಿ ದರೋಜಿ ಕರಡಿಧಾಮ ಬದಲಾಗಿದೆ.

–ಸಮದ್ ಕೊಟ್ಟೂರು, ವನ್ಯಜೀವಿ ತಜ್ಞ

ದರೋಜಿ ಕರಡಿಧಾಮದಲ್ಲಿ ಕರಡಿ ಮರಿಗಳ ತುಂಟಾಟ– ಚಿತ್ರ: ರಾಚಯ್ಯ ಎಸ್. ಸ್ಥಾವರಿಮಠ

ಪ್ರಜಾವಾಣಿ ವಿಶೇಷ

1994ರ ಅಕ್ಟೋಬರ್ 17ರಂದು ದರೋಜಿಯನ್ನು ಸರ್ಕಾರ ಕರಡಿಧಾಮವೆಂದು ಘೋಷಿಸಿತು. ಆದರೆ, ಧಾಮದ ಸುತ್ತ ಕಲ್ಲು ಕ್ವಾರಿ ಗಣಿಗಾರಿಕೆ, ಬೇಟೆ ಅವ್ಯಾಹತವಾಗಿ ನಡೆಯುತ್ತಿದ್ದವು. ಮಣ್ಣಿನ ಸಂರಕ್ಷಣೆ, ಕರಡಿಗಳಿಗೆ ಕುಡಿಯುವ ನೀರು, ಆಹಾರ ಸಿಗದೆ ಜನವಸತಿ ಪ್ರದೇಶಗಳಿಗೆ ನುಗ್ಗುತ್ತಿ-ದ್ದವು. ಜನ ಹೊಡೆದು ಸಾಯಿಸುತ್ತಿದ್ದರು.

ಇತ್ತೀಚಿನ ಕೆಲವು ವರ್ಷಗಳಿಂದ ಅರಣ್ಯ ಇಲಾಖೆ ಬಿಗಿ ಕ್ರಮಗಳನ್ನು ಕೈಗೊಂಡಿತು. 2019ರ ಸೆ. 25ರಂದು ಸರ್ಕಾರವು ಧಾಮವನ್ನು ಪರಿಸರ ಸೂಕ್ಷ್ಮ ವಲಯವಾಗಿ ಘೋಷಿಸಿದ ನಂತರ ಎಲ್ಲದಕ್ಕೂ ತಡೆ ಬಿದ್ದಿದೆ.

ಧಾಮದ ಏಳು ಕಿ.ಮೀ ಪ್ರದೇಶದ ಸುತ್ತಮುತ್ತ ಕಲ್ಲು ಕ್ವಾರಿ ಗಣಿಗಾರಿಕೆ ಸಂಪೂರ್ಣ ನಿಂತಿದೆ. ಅಕ್ರಮ ಪ್ರವೇಶಕ್ಕೆ ತಡೆ ಬಿದ್ದಿದೆ.

ಉದ್ಯೋಗ ಖಾತ್ರಿ ಯೋಜನೆಯಡಿ ಇಂಗುಗುಂಡಿ, ಬದು ನಿರ್ಮಿಸಲಾಗಿದೆ. ಸಣ್ಣ ಕೆರೆಗಳ ಹೂಳು ತೆಗೆಸಿರುವುದ-ರಿಂದ ಅಂತರ್ಜಲ ಮಟ್ಟ ವೃದ್ಧಿಯಾಗಿದೆ. ಉಲುಪಿ, ಕಾರೆ, ಕವಳೆ, ಬಾರೆ, ಜಾನೆ, ಕಕ್ಕೆ, ಗೊರವಿ, ಸೀತಾಫಲ ಸೇರಿದಂತೆ 28 ಜಾತಿಯ ಗಿಡ ಮರಗಳನ್ನು ಅರಣ್ಯ ಇಲಾಖೆ ಬೆಳೆಸಿದೆ.

‘ಕರಡಿಗಳಿಗೆ ಕರಡಿಧಾಮ ಸುರಕ್ಷಿತ ಆವಾಸಸ್ಥಾನವಾಗಿ ಬದಲಾಗಿದೆ. ನೀರು, ಆಹಾರ, ಸಂತಾನೋತ್ಪತ್ತಿಗೆ ಪೂರಕ ವಾತಾವರಣ, ಭದ್ರತೆ ಎಲ್ಲವೂ ಸಿಕ್ಕಿರುವುದರಿಂದ ಅವುಗಳ ಸಂತತಿ ನಿರಂತರ ಹೆಚ್ಚಳವಾಗುತ್ತಿದೆ. ಶೀಘ್ರದಲ್ಲೇ ಗಣತಿ ನಡೆಸಿ, ಅವುಗಳ ನಿಖರ ಸಂಖ್ಯೆ ದಾಖಲಿಸಲಾಗುವುದು’ ಎಂದು ಧಾಮದ ಆರ್‌ಎಫ್‌ಒ ಉಷಾ ತಿಳಿಸಿದರು.

ಬಿ.ಜಯಶ್ರೀಗೆ ‘ಕೆರೆಮನೆ ಶಿವರಾಮ ಹೆಗಡೆ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬಿ.ಜಯಶ್ರೀ



ಕಪ್ಪೆಕೆರೆ ಸುಬ್ರಾಯ

ಹೊನ್ನಾವರ (ಉತ್ತರ ಕನ್ನಡ): ಯಕ್ಷಗಾನ ಕಲಾವಿದ ದಿ.ಕೆರೆಮನೆ ಶಿವರಾಮ ಹೆಗಡೆ ಅವರ ನೆನಪಿನಲ್ಲಿ ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿಯು ನೀಡುವ ‘ಕೆರೆಮನೆ ಶಿವರಾಮ ಹೆಗಡೆ’ ಪ್ರಶಸ್ತಿಯನ್ನು ಪ್ರಸಿದ್ಧ ರಂಗ ಕಲಾವಿದೆ ಬಿ.ಜಯಶ್ರೀ ಅವರಿಗೆ ಘೋಷಿಸಲಾಗಿದೆ.

ಪ್ರಶಸ್ತಿಯು ₹ 25 ಸಾವಿರ ನಗದು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ.

ಪ್ರಸಿದ್ಧ ಸ್ತ್ರೀ ವೇಷಧಾರಿ ದಿ.ಕೆರೆಮನೆ ಗಜಾನನ ಹೆಗಡೆ ಅವರ ಸ್ಮರಣೆಯಲ್ಲಿ ಇದೇ ಮಂಡಳಿ ನೀಡುವ ವಾರ್ಷಿಕ ‘ಕೆರೆಮನೆ ಗಜಾನನ ಹೆಗಡೆ ಪ್ರಶಸ್ತಿ’ಗೆ ಯಕ್ಷಗಾನದ ಹಿರಿಯ ಭಾಗವತ ಕಪ್ಪೆಕೆರೆ ಸುಬ್ರಾಯ ಭಾಗವತ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ₹ 15 ಸಾವಿರ ನಗದು, ಪ್ರಶಸ್ತಿ ಪತ್ರ ಒಳಗೊಂಡಿದೆ. ಏ.2 ಹಾಗೂ 3ರಂದು ಗುಣವಂತೆಯ ಯಕ್ಷಾಂಗಣದ-ಲ್ಲಿ ನಡೆಯಲಿರುವ ಕೆರೆಮನೆ ಶಂಭು ಹೆಗಡೆ ರಾಷ್ಟ್ರೀಯ ನಾಟ್ಯೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ನಾಟ್ಯೋತ್ಸವ ಸಮಿತಿಯ ಕಾರ್ಯಾಧ್ಯಕ್ಷ ಲಕ್ಷ್ಮೀನಾರಾಯಣ ಕಾಶಿ, ಮಂಡಳಿಯ ನಿರ್ದೇಶಕ ಕೆರೆಮನೆ ಶಿವಾನಂದ ಹೆಗಡೆ ತಿಳಿಸಿದ್ದಾರೆ.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

1203-2021

ರೈತ ಸಂಘದ ಚುಕ್ಕಿ ನಂಜುಂಡಸ್ವಾಮಿ ಆರೋಪ

ಭಾರತೀಯ ಸಂಯುಕ್ತ ಕಿಸಾನ್ ಮೋರ್ಚಾದ ನಾಯಕರಾದ ರಾಕೇಶ್ ಟಿಕಾಯತ್, ಯುದ್ಧವೀರ್ ಸಿಂಗ್, ಡಾ.ದರ್ಶನ್ ಪಾಲ್ ಭಾಗವಹಿಸಲಿದ್ದಾರೆ.

ರೈತರ ಮಹಾಪಂಚಾಯತ್‌ಗೆ ಮೈದಾನ ನಿರಾಕರಣೆ

ಬೆಳಗಾವಿ: ‘ಕೃಷಿಗೆ ಸಂಬಂಧಿಸಿದ ತಿದ್ದುಪಡಿ ಕಾಯ್ದೆಗಳನ್ನು ಹಿಂಪಡೆಯಬೇಕು ಹಾಗೂ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಖಾತ್ರಿಗೊಳಿಸಬೇಕು’ ಎನ್ನುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮಾರ್ಚ್ 31ರಂದು ಇಲ್ಲಿ ಆಯೋಜಿಸಿರುವ ರೈತರ ಮಹಾಪಂಚಾಯತ್‌ಗೆ ಜಿಲ್ಲಾ ಕ್ರೀಡಾಂಗಣ ಸೇರಿದಂತೆ ಯಾವುದೇ ಮೈದಾನವನ್ನೂ ಜಿಲ್ಲಾಡಳಿತ ನೀಡುತ್ತಿಲ್ಲ’ ಎಂದು ರೈತ ಸಂಘದ ನಾಯಕಿ ಚುಕ್ಕಿ ನಂಜುಂಡಸ್ವಾಮಿ ದೂರಿದರು.

ಚುಕ್ಕಿ ನಂಜುಂಡಸ್ವಾಮಿ

ಇಲ್ಲಿ ಶನಿವಾರ ಪತ್ರಿಕಾಗೋಷ್ಠಿಯ-ಲ್ಲಿ ಮಾತನಾಡಿದ ಅವರು, ‘ಜಿಲ್ಲಾಡಳಿತದ ಅಸಹಕಾರದ ನಡುವೆಯೂ ನಾವು ಚಳವಳಿ ನಡೆಸಿಯೇ ತೀರುತ್ತೇವೆ. ಕೇಂದ್ರದ ರೈತ ವಿರೋಧಿ ಧೋರಣೆಯನ್ನು ಜನರ ಮುಂದೆ ತೆರೆದಿಡಬೇಕಾ-ಗಿದೆ. ಹೀಗಾಗಿ, ರಾಣಿ ಚನ್ನಮ್ಮ ವೃತ್ತದಲ್ಲೇ ವಿಭಾಗ ಮಟ್ಟದ ಮಹಾಪಂಚಾಯತ್ ನಡೆಸುವುದು ಅನಿ-ವಾರ್ಯವಾಗಿದೆ. ಸಹಸ್ರಾರು ಮಂದಿ ಪಾಲ್ಗೊಳ್ಳ-ಲಿದ್ದಾರೆ’ ಎಂದರು.

‘ಮುಖಂಡ ಯೋಗೇಂದ್ರ ಯಾದವ್ ಅವರಿಗೂ ಆಹ್ವಾನ ನೀಡಿದ್ದೇವೆ. ನಮ್ಮಲ್ಲಿನ ಹೋರಾಟಗಾರರಾದ ಕೋಡಿಹಳ್ಳಿ ಚಂದ್ರಶೇಖರ, ಬಡಗಲಪುರ ನಾಗೇಂದ್ರ ಮೊದಲಾದವರನ್ನೂ ಕರೆದಿದ್ದೇವೆ’ ಎಂದು ಮಾಹಿತಿ ನೀಡಿದರು.

‘ಶಿವಮೊಗ್ಗದಲ್ಲಿ ಮಾರ್ಚ್ 20ರಂದು ಹಾಗೂ ಹಾವೇರಿಯಲ್ಲಿ ಮಾರ್ಚ್ 21ರಂದು ಮಹಾಪಂಚಾಯತ್ ಹಮ್ಮಿಕೊಂಡಿದ್ದು, ಅಲ್ಲಿ ಮೈದಾನಗಳು ದೊರೆತಿವೆ. ಆದರೆ, ಇಲ್ಲಿ ಮುಂಬರುವ ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆ ಹಿನ್ನೆಲೆಯಲ್ಲಿ ಮುಜುಗರ ಆಗಬಾರದೆಂದು ಸರ್ಕಾರವು ಅಧಿಕಾರಿಗಳ ಮೇಲೆ ಒತ್ತಡ ತಂದು ಮೈದಾನ ಸಿಗದಂತೆ ನೋಡಿಕೊಂಡಿದೆ. ಖಾಸಗಿ ಸಂಸ್ಥೆಗಳಿಗೆ ಸೇರಿದ ಮೈದಾನವೂ ಸಿಗದಂತೆ ಮಾಡುತ್ತಿದೆ’ ಎಂದು ಆರೋಪಿಸಿದರು.

‘ಮೀಸಲಾತಿ: ಎಲ್ಲರ ಹಿತ ಗಣನೆ’

ಶೇ 50ಕ್ಕಿಂತ ಹೆಚ್ಚಿಸಬೇಕೇ– ಕಾನೂನು ತಜ್ಞರ ಜೊತೆ ಬೊಮ್ಮಾಯಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೀಸಲಾತಿ ಪ್ರಮಾಣ ಶೇ 50ಕ್ಕಿಂತ ಹೆಚ್ಚಿಸಬೇಕೊ, ಬೇಡವೊ ಎಂಬ ವಿಚಾರದಲ್ಲಿ ರಾಜ್ಯದಲ್ಲಿ ಬಹು-ಸಂಖ್ಯೆಯಲ್ಲಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ಸಮುದಾಯದವರ ಆಶೋತ್ತರ ಮತ್ತು ಸಂವಿಧಾನದ ಹಕ್ಕುಗಳನ್ನು ಗಮನದಲ್ಲಿಟ್ಟು ತೀರ್ಮಾನ ತೆಗೆದು-ಕೊಳ್ಳಲಾಗುವುದು’ ಎಂದು ಕಾನೂನು ಮತ್ತು ಸಂಸದೀಯ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ಮೀಸಲಾತಿ ಪ್ರಮಾಣ ಹೆಚ್ಚಿಸುವ ಬಗ್ಗೆ ಎಲ್ಲ ರಾಜ್ಯಗಳಿಂದ ಸುಪ್ರೀಂಕೋರ್ಟ್ ಅಭಿಪ್ರಾಯ ಕೇಳಿರುವ ಬೆನ್ನಲ್ಲೇ, ಬೊಮ್ಮಾಯಿ ಅವರು ಕಾನೂನು ತಜ್ಞರ ಜೊತೆ ಶನಿವಾರ ಸುದೀರ್ಘ ಸಭೆ ನಡೆಸಿದರು.

ಬಸವರಾಜ ಬೊಮ್ಮಾಯಿ

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಮೀಸಲಾತಿ ಪ್ರಮಾಣ ಹೆಚ್ಚಳದ ಬಗ್ಗೆ ಎಲ್ಲ ವರ್ಗಗಳ ಜನಸಂಖ್ಯೆ, ಶಿಕ್ಷಣ, ಉದ್ಯೋಗಕ್ಕೆ ಸಂಬಂಧಿಸಿದ ಬಯಕೆಗಳಿಗೆ ಪೂರಕವಾಗಿ ಎಲ್ಲಾ ಆಯಾಮಗಳಲ್ಲೂ ಚರ್ಚೆ ಮಾಡಿದ್ದೇವೆ’ ಎಂದರು.

‘ಸಭೆಯಲ್ಲಿ ಕೆಲವರು ಲಿಖಿತ ಅಭಿಪ್ರಾಯ ನೀಡಿದ್ದಾರೆ. ಇದೇ 23ರಂದು ಸುಪ್ರೀಂ ಕೋರ್ಟ್‌ಗೆ ರಾಜ್ಯದ ನಿಲುವು ತಿಳಿಸಬೇಕಿದೆ. ಹೀಗಾಗಿ, ಉತ್ತರದ ಕರಡನ್ನು ಕಾನೂನು ತಜ್ಞರಿಗೆ ಕಳುಹಿಸಿ, ಅವರ ಸ್ಪಷ್ಟನೆ ಪಡೆದು ಅಂತಿ-ಮಗೊಳಿಸಲಾಗುವುದು’ ಎಂದರು.

‘ಮೀಸಲಾತಿ ವಿಚಾರದಲ್ಲಿ ಕೆಲವು ತಿದ್ದುಪಡಿಯಿಂದ ರಾಜ್ಯ ಸರ್ಕಾರಕ್ಕೆ ಈಗಿರುವ ಅವಕಾಶಗಳಿಗೆ ತೊಂದರೆ ಆಗಬಹುದೇ? ಈಗಿರುವ ಅವಕಾಶ-ಗಳನ್ನು ಒಕ್ಕೂಟ ವ್ಯವಸ್ಥೆಯಲ್ಲಿ ಹೇಗೆ ರಕ್ಷಣೆ ಮಾಡಬೇಕು ಎಂಬ ಬಗ್ಗೆಯೂ ಚರ್ಚಿಸಿದ್ದೇವೆ’ ಎಂದರು.

ಸಭೆಯಲ್ಲಿ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ, ವಿಶ್ರಾಂತ ನ್ಯಾಯಮೂರ್ತಿ ಮಂಜುನಾಥ್, ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವದಗಿ, ಹಿಂದಿನ ಅಡ್ವೊಕೇಟ್ ಜನರಲ್‌ಗಳಾದ ರವಿವರ್ಮ ಕುಮಾರ್, ಉದಯ ಹೊಳ್ಳ, ಮಧುಸೂದನ್ ನಾಯಕ ಇದ್ದರು.

‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ಪತ್ರಿಕಾ ಬಳಗವು ಬೆಂಗಳೂರಿನ ‘ಇನ್‌ಸೈಟ್ಸ್ ಐಎಎಸ್’ ಸಹಯೋಗದಲ್ಲಿ ಶನಿವಾರ ದಾವಣಗೆರೆ ನಗರದಲ್ಲಿ ಹಮ್ಮಿಕೊಂಡಿದ್ದ ‘ಗೈಡಿಂಗ್ ಫೋರ್ಸ್’ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಐಎಎಸ್, ಐಪಿಎಸ್ ಆಕಾಂಕ್ಷಿಗಳು –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ಮಹಿಳೆಗೆ ಮಂಗನ ಕಾಯಿಲೆ

ಪ್ರಜಾವಾಣಿ ವಾರ್ತೆ

ಸಿದ್ದಾಪುರ: ತಾಲ್ಲೂಕಿನ ಹೆಗ್ಗೆಕೊಪ್ಪ ಗ್ರಾಮದ ಪುರದಮಠದ 27 ವರ್ಷ ವಯಸ್ಸಿನ ಮಹಿಳೆಯೊಬ್ಬರಲ್ಲಿ ಮಂಗನ ಕಾಯಿಲೆ(ಕೆಎಫ್‌ಡಿ) ದೃಢಪಟ್ಟಿದೆ.

ತಾಲ್ಲೂಕಿನ ಕೊರ್ಲಕೈ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅವರು ಚಿಕಿತ್ಸೆ ಪಡೆಯುತ್ತಿದ್ದು, ಆರೋಗ್ಯ ಸ್ಥಿರವಾಗಿದೆ.

ಈ ಮೂಲಕ ತಾಲ್ಲೂಕಿನಲ್ಲಿ ಕೆಎಫ್‌ಡಿ ಪೀಡಿತರ ಸಂಖ್ಯೆ ಎರಡಾಗಿದೆ ಎಂದು ತಾಲ್ಲೂಕು ಆಡಳಿತದ ಮೂಲಗಳು ತಿಳಿಸಿವೆ.

‘ಶರಣ ಸೇನೆ’ ಉದ್ಘಾಟನೆ ಇಂದು

ಚಿತ್ರದುರ್ಗ: ‘ಶರಣ ಸೇನೆ ಹೆಸರಿನಲ್ಲಿ ಧರ್ಮಾತೀತ, ಜಾತ್ಯತೀತ ಹಾಗೂ ಪಕ್ಷಾತೀತ ಸಂಘಟನೆ ಸ್ಥಾಪಿಸಲಾಗಿದೆ’ ಎಂದು ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ತಿಳಿಸಿದರು.

ಶಿವಮೂರ್ತಿ ಮುರುಘಾ ಶರಣರು

‘ಮುರುಘಾ ಮಠದಲ್ಲಿ ಮಾರ್ಚ್ 14ರಂದು ಬೆಳಿಗ್ಗೆ 11ಕ್ಕೆ ಶರಣ ಸೇನೆ ಉದ್ಘಾಟನೆಯಾಗಲಿದೆ. ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ನೇತೃತ್ವ ವಹಿಸುವರು. ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಸೇನೆಗೆ ಚಾಲನೆ ನೀಡುವರು. ಶಾಸಕರಾದ ಜಿ.ಎಚ್. ತಿಪ್ಪಾರೆಡ್ಡಿ, ಟಿ.ರಘುಮೂರ್ತಿ ಸೇನೆಯ ಲೋಗೊ ಬಿಡುಗಡೆಗೊಳಿಸು-ವರು’ ಎಂದು ಶನಿವಾರ ಪತ್ರಿಕಾಗೋಷ್ಠಿ-ಯಲ್ಲಿ ಹೇಳಿದರು.

‘ಇದು ರಾಜ್ಯಮಟ್ಟದ ಸಂಘಟನೆಯಾಗಿದೆ. ಪ್ರತಿ ಎರಡು ಜಿಲ್ಲೆಗಳಿಗೆ ಒಂದು ಘಟಕ ಸ್ಥಾಪಿಸಲಾ-ಗುವುದು. ಸಮ ಸಮಾಜ ನಿರ್ಮಾಣ, ದೇಶ ಮತ್ತು ರಾಜ್ಯದ ಒಳಿತಿಗಾಗಿ, ಪ್ರಗತಿಗಾಗಿ ಹಾಗೂ ಪ್ರಕೃತಿ ವಿಕೋಪ ಉಂಟಾದಾಗ ನೆರವು ನೀಡಲು ಸೇನೆಯ ಕಾರ್ಯಕರ್ತರು ಸಕ್ರಿಯವಾಗಿ ಕೆಲಸ ಮಾಡಲಿದ್ದಾರೆ’ ಎಂದು ತಿಳಿಸಿದರು.

‘ಮೊದಲ ಹಂತದಲ್ಲಿ ಸಾವಿರಾರು ಕಾರ್ಯಕರ್ತರು ಒಗ್ಗೂಡಿ ಕೆಲಸ ಮಾಡಲಿದ್ದಾರೆ. ನಿತ್ಯವೂ ಸೇನೆಯ ಕಾರ್ಯಕರ್ತರ ಸಂಖ್ಯೆ ಹೆಚ್ಚಲಿದೆ. ನಿಸ್ವಾರ್ಥ ಮನೋಭಾವದಿಂದ ಎಲ್ಲರೂ ಉತ್ತಮ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸಲಿದ್ದಾರೆ’ ಎಂದು ಶರಣರು ಹೇಳಿದರು.

ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಆಯೋಜಿಸಿದ್ದ ‘ಗೈಡಿಂಗ್ ಫೋರ್ಸ್’

ಐಎಎಸ್, ಐಪಿಎಸ್ ಆಕಾಂಕ್ಷಿಗಳ ಕಣ್ಣಲ್ಲಿ ನಿರೀಕ್ಷೆಯ ಹೊಳಪು

ಪ್ರಜಾವಾಣಿ ವಾರ್ತೆ

ದಾವಣಗೆರೆ: ಐಎಎಸ್, ಐಪಿಎಸ್ ಅಧಿಕಾರಿಗಳು ಆಗುವ ಕನಸು ಹೊತ್ತು ಬಂದಿದ್ದವರ ಕಣ್ಣುಗಳಲ್ಲಿ ಹೊಳಪು ಮೂಡಿತು. ಕನಸು ನನಸು ಮಾಡುವ ಹಂಬಲ ಮತ್ತಷ್ಟು ಹೆಚ್ಚಾಯಿತು.

‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ಪತ್ರಿಕಾ ಬಳಗವು ಬೆಂಗಳೂರಿನ ‘ಇನ್‌ಸೈಟ್ಸ್ ಐಎಎಸ್’ ಸಹಯೋಗದಲ್ಲಿ ಶನಿವಾರ ನಗರದಲ್ಲಿ ಹಮ್ಮಿಕೊಂಡಿದ್ದ ‘ಗೈಡಿಂಗ್ ಫೋರ್ಸ್’ ಕಾರ್ಯಕ್ರಮವು ಇದಕ್ಕೆ ಕಾರಣವಾಯಿತು.

ಸ್ಪರ್ಧಾತ್ಮಕ ಪರೀಕ್ಷೆಯ ತರಬೇತಿಯಲ್ಲಿ ನುರಿತವರ ಮಾತು ಒಂದು ಕಡೆ, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣರಾ-ದವರ ಅನುಭವದ ಮಾತು ಇನ್ನೊಂದು ಕಡೆ ಮಿಂಚು ಹರಿಸಿತು.

ಕಾರ್ಯಕ್ರಮ ಉದ್ಘಾಟಿಸಿದ ದಾವಣಗೆರೆ ವಿಶ್ವವಿದ್ಯಾಲಯದ ಕುಲಸಚಿವರಾದ (ಆಡಳಿತ) ಪ್ರೊ. ಗಾಯತ್ರಿ ದೇವರಾಜ ಅವರು ಸ್ಪರ್ಧಾತ್ಮಕ ಪರೀಕ್ಷೆಗೆ ಮಾನಸಿಕವಾಗಿ ಸಜ್ಜಾಗುವುದು ಹೇಗೆ ಎಂಬುದನ್ನು ತಿಳಿಸಿಕೊಟ್ಟರು.

ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಸ್ಪರ್ಧಾತ್ಮಕ ಪರೀಕ್ಷೆಯನ್ನು ಸ್ವತಃ ಎದುರಿಸಿದಾಗಿನ ಅನುಭವಗಳನ್ನು ಹಂಚಿಕೊಂಡು ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ತುಂಬಿದರು.

‘ಇನ್‌ಸೈಟ್ಸ್ ಐಎಎಸ್’ ಸಂಸ್ಥಾಪಕ ಮತ್ತು ನಿರ್ದೇಶಕ ಜಿ.ಬಿ. ವಿನಯಕುಮಾರ್, ಸಂಸ್ಥೆಯ ಸಂಪನ್ಮೂಲ ಅಧಿಕಾರಿಗಳಾದ ಪ್ರದೀಪ್ ಕುಮಾರ್, ಶಮಂತ ಗೌಡ ಅವರು ಪರೀಕ್ಷೆಯ ಸಿದ್ಧತೆಗಳ ಬಗ್ಗೆ ಬೆಳಕು ಚೆಲ್ಲಿದರು.

ಆಕಾಂಕ್ಷಿಗಳು ಪ್ರಶ್ನೆಗಳನ್ನು ಕೇಳಿ ತಮಗಿರುವ ಗೊಂದಲಗಳನ್ನು ಪರಿಹ-ರಿಸಿಕೊಂಡರು.

ನಿಧನ ವಾರ್ತೆ

ಸ್ವಾತಂತ್ರ್ಯ ಹೋರಾಟಗಾರ ಶ್ರೀರಾಮ ವಿಷ್ಣುಪಂತ ತೇಂಬೆ

ಹುಬ್ಬಳ್ಳಿ: ಓಂ ನಗರ ನಿವಾಸಿ, ಸ್ವಾತಂತ್ರ್ಯ ಹೋರಾಟಗಾರ ಶ್ರೀರಾಮ ವಿಷ್ಣುಪಂತ ತೇಂಬೆ (97) ಶನಿವಾರ ನಿಧನರಾದರು.



ಶ್ರೀರಾಮ ವಿಷ್ಣುಪಂತ ತೇಂಬೆ

ಮೃತರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ.

ತೇಂಬೆ ಅವರು, ಹಾವೇರಿ ಜಿಲ್ಲೆಯ ಅನೇಕ ಪ್ರದೇಶಗಳಲ್ಲಿ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವ-ಹಿಸಿದ್ದರು. ಹರತಾಳ, ಪಿಕೆಟಿಂಗ್, ಪ್ರಭಾತಪೇರಿ ಮೂಲಕ ಜನಜಾಗೃತಿ ಮೂಡಿಸುತ್ತಿದ್ದರು.

ಭ್ರಷ್ಟಾಚಾರ ನಿಗ್ರಹ ದಳದ ಕಾರ್ಯಾಚರಣೆ

ಲಂಚ ಪಡೆದು ಸಿಕ್ಕಿಬಿದ್ದ ತಾ.ಪಂ. ಇಒ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಬೆಳಗೆರೆ ಗ್ರಾಮ ಪಂಚಾಯಿತಿಯ 14ನೇ ಹಣಕಾಸಿನ ಉಳಿಕೆ ಹಣದಲ್ಲಿ ರೂಪಿಸಿದ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲು ಪಿಡಿಒ ಬಳಿ ₹ 20 ಸಾವಿರ ಲಂಚ ಪಡೆಯುತ್ತಿದ್ದ ಚಳ್ಳಕೆರೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾ-ಧಿಕಾರಿ ಶ್ರೀಧರ್ ಬಾರಕೇರ್ ಅವರು ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಬಲೆಗೆ ಬಿದ್ದಿದ್ದಾರೆ.

ಶ್ರೀಧರ್ ಅವರ ಮನೆ, ಕಚೇರಿ ಸೇರಿ ಹಲವೆಡೆ ದಾಳಿ ನಡೆಸಿದ ಎಸಿಬಿ ಅಧಿಕಾರಿಗಳಿಗೆ ಆಸ್ತಿ ಪತ್ರಗಳು, ಬ್ಯಾಂಕ್ ಖಾತೆ ಹಾಗೂ ₹ 6 ಲಕ್ಷ ನಗದು ಪತ್ತೆಯಾಗಿದೆ. ನಗದು ಹಣದ ಬಗ್ಗೆ ಸೂಕ್ತ ಮಾಹಿತಿ ನೀಡದ ಕಾರಣ ಶ್ರೀಧರ್ ಅವರನ್ನು ಎಸಿಬಿ ಬಂಧಿಸಿದೆ.

ಶ್ರೀಧರ್ ಬಾರಕೇರ್

ಚಳ್ಳಕೆರೆ ತಾಲ್ಲೂಕಿನ ಬೆಳಗೆರೆ ಗ್ರಾಮ ಪಂಚಾಯಿತಿಯಲ್ಲಿ 14ನೇ ಹಣಕಾಸಿನಲ್ಲಿ ₹ 7.71 ಲಕ್ಷ ಅನುದಾನ ಉಳಿದಿತ್ತು. ಉಳಿಕೆ ಹಣದಲ್ಲಿ ಹತ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿ-ಕೊಳ್ಳಲು ಕ್ರಿಯಾ ಯೋಜನೆ ಸಿದ್ಧಪಡಿಸಿ ಜಿಲ್ಲಾ ಪಂಚಾಯಿತಿಗೆ ಸಲ್ಲಿಸಲಾಗಿತ್ತು. ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅವರು ಶ್ರೀಧರ್ ಅವರಿಗೆ ಕಡತವನ್ನು ರವಾನೆ ಮಾಡಿದ್ದರು.

ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದ ಪ್ರತಿಯನ್ನು ಹಸ್ತಾಂತರಿಸಲು ಬೆಳಗೆರೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗುಂಡಪ್ಪ ಅವರಿಗೆ ₹ 20 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಶುಕ್ರವಾರ ರಾತ್ರಿ 10 ಗಂಟೆಗೆ ಲಂಚದ ಹಣವನ್ನು ಪಡೆಯುತ್ತಿದ್ದಾಗ ಎಸಿಬಿ ಡಿವೈಎಸ್‌ಪಿ ಬಸವರಾಜ್ ಆರ್. ಮಗದುಮ್ ನೇತೃತ್ವದ ತಂಡ ದಾಳಿ ನಡೆಸಿತ್ತು. ಬಳಿಕ ಚಿತ್ರದುರ್ಗದ ಮಹಾವೀರ ಬಡಾವಣೆಯಲ್ಲಿರುವ ಶ್ರೀಧರ್ ಮನೆ ಮೇಲೆಯೂ ದಾಳಿ ನಡೆಸಲಾಗಿತ್ತು.

ನೀಳಾದೇವಿಗೆ ‘ಎಸ್‌ವಿಪಿ ಪ್ರಶಸ್ತಿ’

ಬೆಂಗಳೂರು: ಪ್ರೊ. ಎಸ್. ವಿ. ಪರಮೇಶ್ವರ ಭಟ್ಟ ಪ್ರತಿಷ್ಠಾನ (ಮಂಗಳೂರು) ನೀಡುವ ‘ಪ್ರೊ. ಎಸ್.ವಿ.ಪಿ. ಪ್ರಶಸ್ತಿ’ಗೆ ಅನುವಾದಕಿ ನೀಳಾದೇವಿ ಆಯ್ಕೆಯಾಗಿದ್ದಾರೆ.

ನೀಳಾದೇವಿ

ಪ್ರತಿಷ್ಠಾನದ ಅಧ್ಯಕ್ಷರಾದ ಬಿ.ಎ. ವಿವೇಕ ರೈ ನೇತೃತ್ವದ ಸಮಿತಿಯು ಈ ಆಯ್ಕೆ ಮಾಡಿದೆ.

ಪ್ರಶಸ್ತಿಯು ₹ 10 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ ಎಂದು ಪ್ರತಿಷ್ಠಾನದ ಉಪಾಧ್ಯಕ್ಷ ಡಾ.ನಾ. ದಾಮೋದರ ಶೆಟ್ಟಿ ಪ್ರಕಟಣೆ-ಯಲ್ಲಿ ತಿಳಿಸಿದ್ದಾರೆ.

ಚೆನ್ನೈನಲ್ಲಿ ನಿರ್ಮಾಣವಾಗಿರುವ ಯಂತ್ರ • ವೆಲ್ಲಾರ–ಲ್ಯಾಂಗ್‌ಫೋರ್ಡ್ ನಡುವೆ ಕಾರ್ಯಾಚರಣೆ

ಕಾರ್ಯಾಚರಣೆ ಆರಂಭಿಸಿದ ದೇಸಿ ಟಿಬಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ'ದ ಎರಡನೇ ಹಂತದ ಸುರಂಗ ನಿರ್ಮಾಣ ಕಾರ್ಯ ಚುರುಕಿನಿಂದ ಸಾಗಿದ್ದು, ಇದೇ ಮೊದಲ ಬಾರಿಗೆ ದೇಸಿ ಟಿಬಿಎಂ ಒಂದು ಕಾರ್ಯಾಚರಣೆ ಆರಂಭಿಸಿದೆ. ವೆಲ್ಲಾರ–ಲ್ಯಾಂಗ್‌ಫೋರ್ಡ್ ನಡುವೆ ಈ ಯಂತ್ರ ಕೆಲಸ ಮಾಡುತ್ತಿದೆ.

ತಮಿಳುನಾಡಿನ ಚೆನ್ನೈನ ಕಾರ್ಖಾನೆಯಲ್ಲಿ ಈ ಟಿಬಿಎಂ ನಿರ್ಮಾಣವಾಗಿದೆ. ಜರ್ಮನ್ ಮೂಲದ ಹೆರೆನ್‌ಕ್ನೆಚ್ ಕಂಪನಿಯು ಚೆನ್ನೈನಲ್ಲಿ ಈ ಯಂತ್ರವನ್ನು ನಿರ್ಮಾಣ ಮಾಡಿದೆ. ಯಂತ್ರದ ಬಹುತೇಕ ಬಿಡಿಭಾಗಗಳನ್ನು ಸ್ಥಳೀಯವಾಗಿಯೇ ನಿರ್ಮಿಸಲಾಗಿದೆ. ಫೆಬ್ರುವರಿ ಮೊದಲ ವಾರದಲ್ಲಿಯೇ ಈ ಯಂತ್ರದ ಬಿಡಿಭಾಗಗಳನ್ನು ನಗರಕ್ಕೆ ತರಲಾಗಿತ್ತು. ಈ ಟಿಬಿಎಂಗೆ ಇನ್ನೂ ಯಾವುದೇ ಹೆಸರಿಟ್ಟಿಲ್ಲ.

650 ಮೀ. ಉದ್ದ: ವೆಲ್ಲಾರ–ಲ್ಯಾಂಗ್‌ಫೋರ್ಡ್ ನಡುವೆ 650 ಮೀಟರ್ ಉದ್ದದ ಸುರಂಗವನ್ನು ಈ ಯಂತ್ರ ಕೊರೆಯಲಿದೆ. ನಿತ್ಯ ಸರಾಸರಿ 6 ಮೀಟರ್ ಸುರಂಗ ಕೊರೆಯುವ ಗುರಿಯನ್ನು ಹೊಂದಲಾಗಿದೆ. ಈ ಮಾರ್ಗದ ನಿರ್ಮಾಣ ಗುತ್ತಿಗೆಯನ್ನು ಆಫ್ಕನ್ಸ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಕಂಪನಿ ಪಡೆದಿದೆ.

ವೆಲ್ಲಾರ–ಲ್ಯಾಂಗ್‌ಫೋರ್ಡ್ ನಡುವೆ ಸುರಂಗ ಕೊರೆಯುತ್ತಿರುವ ದೇಸಿ ಟಿಬಿಎಂ

ಡೇರಿ ವೃತ್ತದಿಂದ ನಾಗವಾರದವರೆಗೆ 13.85 ಕಿ.ಮೀ. ಉದ್ದದ ಸುರಂಗ ಮಾರ್ಗ ನಿರ್ಮಾಣವಾಗುತ್ತಿದ್ದು, ಒಟ್ಟು 9 ಟಿಬಿಎಂಗಳು ಕೆಲಸ ಮಾಡಲಿವೆ. ಈ ಪೈಕಿ ಈಗಾಗಲೇ ನಾಲ್ಕು ಯಂತ್ರಗಳು ಕಾರ್ಯಾಚರಣೆ ಆರಂಭಿಸಿದ್ದು, ವಿವಿಧ ಹಂತಗಳಲ್ಲಿ ಕಾರ್ಯ ಪ್ರಗತಿಯಲ್ಲಿದೆ.

ಟ್ಯಾನರಿ ರಸ್ತೆ-ನಾಗವಾರ ನಡುವೆ ಸುರಂಗ ಕೊರೆಯಲು ನಿಯೋಜಿಸಲಾಗುವ ಟಿಬಿಎಂ ತುಂಗಾ ಮತ್ತು ಭದ್ರಾ ಕೂಡ ಚೆನ್ನೈನಲ್ಲೇ ತಯಾರಾಗುತ್ತಿದ್ದು, ಇನ್ನೊಂದು ತಿಂಗಳಲ್ಲಿ ಸೇರ್ಪಡೆಗೊಳ್ಳುವ ಸಾಧ್ಯತೆ ಇದೆ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮದ ಅಧಿಕಾರಿಯೊಬ್ಬರು ಹೇಳಿದರು.

ಸುರಂಗ ಮಾರ್ಗ ಮತ್ತು ಉದ್ದ (ಕಿ.ಮೀ. ಗಳಲ್ಲಿ)

ಮಾರ್ಗ	ಉದ್ದ
ಶಿವಾಜಿ ನಗರ–ಟ್ಯಾನರಿ ರಸ್ತೆ	2.88
ಟ್ಯಾನರಿ ರಸ್ತೆ–ನಾಗವಾರ	4.59
ವೆಲ್ಲಾರ–ಶಿವಾಜಿನಗರ	2.75
ಡೇರಿ ವೃತ್ತ–ವೆಲ್ಲಾರ	3.65

ಜೆ.ಪಿ.ನಗರದ ಏಳನೇ ಹಂತದಲ್ಲಿ ನೂತನವಾಗಿ ಆರಂಭಿಸಿರುವ ರಾಮರಾಜ್ ಜವಳಿ ಮಳಿಗೆಯನ್ನು ಶನಿವಾರ ಉದ್ಘಾಟಿಸಿದ ನಟಿ ಕಾವ್ಯ ಶಾ ಅವರು ಮಳಿಗೆಯಲ್ಲಿರುವ ವಸ್ತ್ರಗಳನ್ನು ವೀಕ್ಷಿಸಿದರು. (ಎಡದಿಂದ) ಬಿಜೆಪಿ ಮುಖಂಡ ಜಯರಾಮ್, ಮಳಿಗೆ ಮುಖ್ಯಸ್ಥ ರಾಜೇಶ್ ಮತ್ತು ಕರ್ನಾಟಕ ಮಾರ್ಕೆಟಿಂಗ್ ಮ್ಯಾನೇಜರ್ ಸತೀಶ್ ಇದ್ದಾರೆ –ಪ್ರಜಾವಾಣಿ ಚಿತ್ರ

ಅಟಲ್ ಟಿಂಕರಿಂಗ್ ಲ್ಯಾಬ್ ಆವಿಷ್ಕಾರ ಮೇಳ

ಬೆಂಗಳೂರು: ಚಾಮರಾಜಪೇಟೆಯಲ್ಲಿರುವ ಬಿಬಿಎಂಪಿ ಪ್ರೌಢಶಾಲೆಯಲ್ಲಿ 'ಅಟಲ್ ಟಿಂಕರಿಂಗ್ ಲ್ಯಾಬ್' ಆವಿಷ್ಕಾರ ಮೇಳವು ಶನಿವಾರ ನಡೆಯಿತು.

ಕೊರೊನಾ ಹರಡುವಿಕೆ ತಡೆಯುವ ಬಗ್ಗೆ ಜಾಗೃತಿ ಮೂಡಿಸುವ ಛದ್ಮವೇಷದ ಮೂಲಕ ವಿದ್ಯಾರ್ಥಿಗಳು ಅತಿಥಿಗಳನ್ನು ಸ್ವಾಗತಿಸಿದರು. ಚಾಮರಾಜಪೇಟೆಯ ಮುಖಂಡರಾದ ಕೋಕಿಲಾ ಚಂದ್ರಶೇಖರ್ ಉದ್ಘಾಟಿಸಿದರು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಲ್ಯಾಬ್‌ನಲ್ಲಿ ಮಹಿಳೆಯರ ವಿವಿಧ ರೂಪಗಳ ಚಿತ್ರಗಳನ್ನು ಪ್ರದರ್ಶಿಸಲಾಯಿತು. ವಿಜ್ಞಾನ ವಸ್ತುಪ್ರದರ್ಶನ, ಕೆರೆ ನೀರಾವರಿ ಹಾಗೂ ತುಂತುರು ನೀರಾವರಿ ಪದ್ಧತಿಗಳ ಪ್ರಾತ್ಯಕ್ಷಿಕೆಗಳು ನಡೆದವು. ಪ್ಲಾಸ್ಟಿಕ್ ಬಳಕೆ ತ್ಯಜಿಸುವ ಬಗ್ಗೆ ಜಾಗೃತಿ ಮೂಡಿಸಲು ಖಾದಿ ಬಟ್ಟೆಯ ಬ್ಯಾಗ್‌ಗಳ ಮೇಲೆ ಸಮಾಜಮುಖಿ ಚಿತ್ರಗಳೊಂದಿಗೆ ಘೋಷ ವಾಕ್ಯಗಳನ್ನು ಬರೆದು ಪ್ರದರ್ಶಿಸಲಾಯಿತು. ಬಿಬಿಎಂಪಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ರಾಜೇಶ್ವರಿ ಉಪಸ್ಥಿತರಿದ್ದರು. ವಿವಿಧ ಶಾಲೆ ಹಾಗೂ ಕಾಲೇಜುಗಳ ಸುಮಾರು 500 ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ವಸ್ತುಪ್ರದರ್ಶನ ವೀಕ್ಷಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUILDERS ESSENTIAL

Building Contractors

KANTHI CONSTRUCTIONS We Construct Your Dream Home Just 1550/- and 1650/- Per SQFT: 9880785589/ 9066487178

Water Proofing Materials

LEAKAGE... LEAKAGE... Old/New-Building, Sump, Bathroom, Wallcrack, Skylight, Terrace Waterproofing done by New-Technology- 9880916988

Water Proofing

WE FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

REAL ESTATE BUYING

Sites

Arkavathy Layout

BDA SITES WANTED ARKAVATHI (1-22 Blocks), Kempegowda, Any BDA Layout. Genuine Customers Contact: SAPTHAGIRI. 9900268073, 9448068073.

Banashankari

BDA-SITES WANTED @ Anjanapura Banashankari 6th Stage, Sir.M Vishweshwraiah Layout 20x30, 30x40, 40x60 Immediate Settlement Call:9741072999, 9591099099

Bannerghatta Road

WANTED: 30X40 Site near Meenakshi Temple surrounding 3 kms. Noble Residency/ Other Layouts. 9845513822/ 9845119946

Kanakapura Road

BDA/BBMP "A" Khata Sites Wanted. Banashankari 6th Stage,Anjanapura, BCC Layout,Narayananagar , Rajarajeshwari Nagar: 9945835569

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Sahakarnagar

WANTED sites 30x40 E/N/F Rajivgandhi Nagar, A khata, clear titles,owners call Real Estate. 9686699154.

Vishweshwariah Layout

WANTED SITES 30x40 E/N/F good location BDA/ A-khata quick settlement, owners call Real Estate. 9686699154.

JOB OPPORTUNITIES

Accounts & Finance

WANTED FEMALE EXPERIENCED ACCOUNTANTS with Knowledge of TALLY, IT, GST, ESI, PF. Apply to: jayaramaiah24@gmail.com. Call:23214288

GRADUATES WITH Commerce/ Science background with Computer skill below 32 years. Freshers can apply. 9900263508

REQUIRED 2 to 3 years Experienced Accounts Assistant with Tally background. mail Resume to surpat@rediffmail.com

Cook

WANTED /AVAILABLE Experienced Lady Cook Elderly/ Baby/ Home Care Nurse (fulltime only) 15000/-, 9886458648

Engg/ Production Technical

"WANTED IMMEDIATELY, Engineers" Qualification: BE-Mech/ Civil,Diploma in-Mech and ITI-holders for-a manufacturing unit-in Bommanahalli, Bangalore-68. Candidates preferably-from Bangalore South.Send resume: uppbangalore@gmail.com/ Contact: 08025731282/ 9449817703.

Wanted Operator In Milling Lathe Vmc Drilling Helper For Factory In Dabaspet Call 7676131555

General

WANTED FOR Speciality Medicine Distributor 'Customer Care Executive' Male/ Female, D-pharma, PUC, Degree, 2wheeler, Fresh/Exp, Salary 15000 pm + allowens. send CV to: zenexmannapur@gmail.com Call: 9513965596

S-VYASA YOGA University-Jigani, Anekal Taluk, invites RESIDENT WARDEN for Gents Hostel (Vegetarian only) with minimum 3 Years Experience. Need apply within seven days to: hrdesk@svyasa.org

REQUIRED FACTORY Manager/ Accountant (Above 50 years Prefered, 2Wheeler Must) Deepanjalinagar, Mysore Road, Salary 15K. 9845227242

FRESHERS /EXPERIENCE. BE Civil/Diploma for PROPERTY VALUATION All over BANGALORE, 7259810579 pavanak.1970@gmail.com

Multiple Vacancy

Power-one Micro Systems Pvt.Ltd. JOB OPPORTUNITIES
A leading Manufacturers of ONLINE UPS, Servo Stabilizers, Isolation Transformers and EV Chargers are looking for dynamic Sales personnel for the following posts at Bangalore.
Manager - Sales With 3 to 4 years experience Selling of Online UPS system in Pvt. Industry.
Asst. Manager - Sales With 2 to 3 years experience Selling of Online UPS system in Pvt. Industry.
Marketing Executives With 1 to 2 years experience in Selling of Online UPS system.
Service Engineers Diploma / ITI in Electronics with or without experience.
Production Assistant ITI / JOC with Electrical wiring experience.
WALK IN INTERVIEW AT : Powerone Micro Systems Pvt. Ltd. GF-3, KSSIDC Building, 5th Cross, Peenya Industrial Estate, Bangalore-58
Call: 63669 47362
E-mail: careers@poweroneups.com

RAJIV GANDHI COLLEGE OF NURSING
Opp. Meenakshi Temple, IIT Campus, Bannerghatta Road, Bangalore-560076
REQUIRES
1. One Female Warden for Girls Hostel - Age 30 years and above with experience. Accommodation and food will be provided
2. One Graduate Preferably with B. Com Qualification and good computer knowledge with experience to look after accounts. Male or Female candidate below 35 years
Candidates residing in and around 10 kms from the College is preferred. Salary negotiable in person.
Please send your Bio-Data to principal_rggi@yahoo.co.in

REQUIRED 1ST or 2nd-class Mining Managers, Qualification Diploma/ Engineers/DGMS certified for stone Crusher unit in Kunigal,Tumkur Mobile 9108066888

Marketing & Sales

WANTED AGSAR PAINTS BANGALORE Application Invited for hard working Sales Executives (Fresher/ Experience) Salary negotiable. Email ID: bangalore@agsar.netContact: 9535910010

REQUIRED EXPERIENCED/ Retired Sales Assistant in Steel Structures mail your Resume to surpat@rediffmail.com

Stores/ Purchase

REQUIRED EXPERIENCED Store Assistant in Steel Structure Staying Around Hoody/ Whitefield/ Bangalore. mail Resume to surpat@rediffmail.com

Wanted

ADMIN/ OPERATIONS ASSISTANT wanted for day-day- work- Dynamic- Hard Working- Self Motivated sincere. Online/ offline order Dispatches, Inventory Records, Documents/ Reports, Customer Queries, Logistics Know- how, Good in Computer Operations (MS Office, E- Commerce Sites like Amazon), Vendor search/ Purchase, Good in English. Work Time 9.30 am to 6.00pm. Salary 15,000– 20,000 E-mail ID: business@divinearoma.in

WANTED LADIES house worker with family we provide house for living. Contact Shashidhar: 9886092877.

REQUIRED MALE/ Female Office in Jeevanbhima Nagar, candidates Must be Familiar with computer operation, Fluency in English. Contact: 9986661596/ 080-25292933

ELECTRICIAN WANTED in Marathahalli, Bangalore. Good Salary, age 24- 38 yrs, Fresher, Call: 9449424755, 9845837386

Teachers/ Professors

REQUIRES LADY Teachers for English (MABEd) Art and Craft, Social Studies (BA.BEd),Substitution Teacher BA/BCom Graduates with good English Skills. Walk-in Interview with the Secretary, Srikrishna International School, ITI- Layout, BSK 3rd Stage, Bangalore-85. Ph: 65365824.

WANTED IMMEDIATELY trained teachers for middle & High school to teach English, Social-studies, Maths & Science contact- Principle with resume and PP size photo. Camlin High school, 4th cross RPC layout Hampinagar, B-104.ph: 23301363

"WANTED ADMIN/ Principal for V.V. Group of Institutions, Vijayanagar, Bengaluru-40. Contact: 080-23405860."

SVR Chinmaya School (Affiliated to CBSE, New Delhi)
REQUIRES
PRINCIPAL a trained post graduate with minimum ten years of experience as Principal / Vice-Principal in a CBSE school.
Experienced Trained Graduate **TEACHERS & PRIMARY TEACHERS** with good communication skills for all Subjects including **Physical Education & Librarian.**
Samasandrapalya, HSR Layout Sector 2, Bangalore 560102
080-41400067/ 9480774418
svrfaculty@gmail.com
www.svrchinmayaschool.in

RECRUITING FOR Social and English TEACHER for GEM English High School, Basaveshwarnagar. Contact: 8660535089

WANTED ENGLISH MEDIUM TRAINED LADY TEACHERS, B.A./ M.A./ B.Ed./ to teach English/ Social Science/ for Primary and High School,B.Sc./ B.Ed. to teach Maths/ Science for Primary School./ N.T.T Trained/ Computer graduates interested in teaching can also apply. Contact in Person- Secretary, Deccan Educational Society, No.95, 3rd cross, Srirampuram, Bengaluru-560021(Near Sampige Theater, Malleswaram).

AUTOMOTIVE

Four Wheelers Selling

Hyundai

CRETA-1.4, CRDI-E+DIESEL. Accident Vehicle:- KA-41-MC-4671, Regd:18-10-19 lying with Girish:-9742633425, Adarshnagara, Arshinkuntae, Nelamangala Bangalore-562123.Sale with RC.Send Offer To:-New India Assurance, Brigade Plaza, Anandarao Circle. Bangalore. Phone:- 7898002814/ 8050281383.

BUSINESS

Business to Business

Business

GREAT BUSINESS opportunity. Do all govt related services and earn good returns,along with E-Services. Estamp facility also provided. Contact : 6363242408 / 8792353813

Finance

"URGENT LOAN Avail. @ 3.5% p.a Personal, Business, Project, Takeover all types loan in just 5 days OM FINANCE LTD. Call/ WhatsApp:: 8826494700."

Business Offers

Business For Sale

SALE/ TAKEOVER:: Dry-fruits cum General Stationary with complete infrastructure & Stock-Mathikere good location: 9449059015

General

BAR LICENSE Requires on Rental Basis in Jayanagar and J.P.Nagar Area, Contact- 8867255121.

EDUCATIONAL

Correspondence Courses

ADMISSION ASSURED Regular & Distance UGC & GOVERNMENT APPROVED SSLC/ PUC (PCMB/C, CEBA/ SEBA/ ARTS) BCom, BBA, BA, BCA, MBA, MCOM, MA, PGDIPLOMA. CALL OCEANIK COLLEGE 9880788077, 08023515861/2/3 HEBBAL/ MALLESWARAM. HOSTEL AVAILABLE.

FAILED DISCONTINUED Students please Contact: 9341273990. Upgrade Your Educational Qualifications, Choose Approved Courses, SSLC onwards.

MATRIMONIAL

Grooms Wanted

Christian

ALLIANCE REQUESTED for remarriage. CSI Nadar girl aged 32 without issues M.Tech working in a MNC at Bangalore. Native of Kanyakumari district Tamil Nadu. Hails from upper middle class. Contact number 09488932182 & 09443109363.

Matrimonial Bureaus

MANNAT MUSLIM MATRIMONIAL Services:
Doctors, Engineers, Businessmen Working in India and Abroad. Also for Widows & Divorcees. We also undertake Bridal Mehendi & Makeup
Contact: ILYAS: 9845472555
ilyasahmed4866@gmail.com
www.mannatmarriagebureau.com

ವೈವಾಹಿಕ
ಕನ್ನಡ ಸ್ಮಾರ್ಥ ಬ್ರಾಹ್ಮಣ ಸಮುದಾಯದ ವಧು–ವರರ ಅಂತರ್ಜಾಲ ತಾಣ
http://www.hoysalakarnatakabrahmins.com.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಸುಮ ಗೋಪಾಲಕೃಷ್ಣ
ದೂರವಾಣಿ: 9886908152

1000 DAYS Validity + Free Benefits One Time Regn. Fees Rs. 1000 . www.brahminkalyanam.com (brahmins) , hindusmatri.com (other castes) 8939702500

WEEKEND CORNER ಕ್ಲಾಸಿಫೈಡ್ಸ್

ಕಿವಿ ಕೇಳುವುದಿಲ್ಲವೇ?
ಟಿ.ವಿ, ದೂರವಾಣಿ ಕೇಳಲು ಸಮಸ್ಯೆಯೇ?
ಸಂಭಾಷಣೆಯ ಮಾತು ಕೇಳದೇ?
ನೀವೇ ಮನೆಯಲ್ಲಿ ಟಿ.ವಿ. ಮೂಲಕ ಕಿವಿ ಪರೀಕ್ಷೆ ಮಾಡಿಕೊಳ್ಳಿ.
ವೀಕ್ಷಿಸಿ ದಿನಾಂಕ 15/03/2021 ಸೋಮವಾರ 1:30 ಗಂಟೆಗೆ
ಸುವರ್ಣ ಟಿ.ವಿ. ನ್ಯೂಸ್
ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ
98450 58544
www. nayakshearingcareclinic .com
•J.P. Nagar •Indiranagar •Banashankari •Malleshwaram • Wilson Garden.

ಹೊಸ ಚೀಟಿಗಳ ಪ್ರಾರಂಭ ಸ್ಥಾಪನೆ : 2001
ಸೀಬಿ ನರಸಿಂಹಸ್ವಾಮಿ ಚಿಟ್ಸ್(ಕ) ಪ್ರೈ.ಲಿ.
ಬೆಂಗಳೂರು । ತುಮಕೂರು । ಮೈಸೂರು । ಹಾಸನ । ರಾಮನಗರ

ಚೀಟಿಯ ಮೊತ್ತ	ತಿಂಗಳು	ತಿಂಗಳ ಕಂತು	ಬಹುಮಾನಿತ ಮೊತ್ತ	3ನೇ ತಿಂಗಳಿನಿಂದ
1 ಲಕ್ಷ	25	4000	70000	3000
2 ಲಕ್ಷ	25	8000	140000	6000
5 ಲಕ್ಷ	25	20000	350000	15000
10 ಲಕ್ಷ	50	20000	700000	15000
10 ಲಕ್ಷ	100	10000	700000	7500
25 ಲಕ್ಷ	100	25000	1750000	18750

ಸಂಪರ್ಕಿಸಿ 7892303484 । 9483247455

Borewell Drilling 6 ½" (Robo & Surface)

Call: 9448171416, 9844115032

ಮಲ್ಲೇಶ್ವರಂ ಆಯುರ್ವೇದ & ಆರ್ಗ್ಯಾನಿಕ್ ಭವನ
ಮೊದಲನೆ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ
ಕೊಡುಗೆಗಳು 31ನೇ ಮಾರ್ಚ್‌ವರೆಗೆ
10%* ರಿಯಾಯಿತಿ
ಎಲ್ಲಾ ವಿಧದ ಪ್ರತಿಷ್ಠಿತ ಆಯುರ್ವೇದ ಕಂಪನಿಯ ಔಷಧಿಗಳು:
- ಆಯುರ್ವೇದ ಚೂರ್ಣಗಳು ಶುದ್ಧ ದೇಸಿ ತುಪ್ಪ ಮತ್ತು ಕಾಡುಜೇನು
- ಕೋಲ್ಡ್‌ಪ್ರೆಸ್ ಆಯಿಲ್, ಮೆಡಿಕೆಟೆಡ್ ಪುಟ್‌ವೇರ್
- ಸಾವಯುವ ಸಿರಿಧಾನ್ಯ ಮತ್ತು ಗ್ರಾಸರಿ ಪ್ರಾಡಕ್ಟಗಳು
- ಆಯುರ್ವೇದ ಗಿಡಮೂಲಿಕೆಗಳು ಮತ್ತು ಶುದ್ಧವಾದ ಆರೋಗ್ಯವರ್ಧಕ ಕಾಂತಿವರ್ಧಕಗಳು

ಮಲ್ಲೇಶ್ವರಂ ಆಯುರ್ವೇದ & ಆರ್ಗ್ಯಾನಿಕ್ ಭವನ
ನಂ.18, 8ನೇ ಅಡ್ಡರಸ್ತೆ. ಮಲ್ಲೇಶ್ವರಂ, ಚಂದೂಸ್ ಹೋಟಲ್ ಹತ್ತಿರ
ಸಂಪರ್ಕಿಸಿ: 080 42111223 / 9019622242 / 7483091943
ನಮ್ಮ ಶಾಖೆ :
ದಿ ಕನ್ಸೂಮರ್ಸ್ ಆಯುರ್ವೇದ & ಆರ್ಗ್ಯಾನಿಕ್®, ಡಿ.ವಿ.ಜಿ. ರಸ್ತೆ ಬಸವನಗುಡಿ
ಬಸವನಗುಡಿ ಆಯುರ್ವೇದ & ಆರ್ಗ್ಯಾನಿಕ್ ಭವನ ಗಾಂಧಿಬಜಾರ ಮುಖ್ಯರಸ್ತೆ.

PERSONAL

Change of Name

I, VISHWANATH YADAWAD S/o Vasant #28, Naipunya Layout T.C. Palya Main Road Anandapur Circle K.R. Puram. Bangalore-560036 Have Changed my name from Vishwanath Yadawad to Vishwanath V Yadawad Vide Affidavit dated 12/03/2021 Sworn Before Notary L. Puttaraju Bangalore

JAYALAXMAMMA, MOTHER/O, 14829035W, NK/MT, KISHOR KUMAR, Vill-THIPPUR, M SHIVRA, CHANNARAYAPATTANA, HASSAN, KARNATAKA, have changed my name from JAYALAXMAMMA to JAYALAKSHMAMMA, 13/03/2021, Notary K.V. Mani, Bangalore

REKHA, W/O, JC-681832W, SUB, MOREBOINA GURUVAIAH, Vill/ PO/ TEH-KOMAROLE, PRAKASAM, ANDHRA PRADESH, have changed my name from REKHA to MAREBOINA REKHA, 13/03/2021, Notary K.V. Mani, Bangalore

I, PADMAVATHI, Spouce of JC-142398W, Rank Ex Sub Name: Vollanda Chinnappa Karumbiah, R/@ #268, Swaraj Nilaya, 3rd Main, 4th Cross, OMBR Layout, Banaswadi, Bangalore-43. Have changed My Name From PADMAVATHI TO V.K PADMAVATHI Vide Affidavit Dated:13/03/2021 Before Notary Y.R Chandrasekar Bangalore.

I, BHARATHI N, R/@ #401,2ND Floor,5TH Cross,Chandapura Bangalore-99. Have Changed My Name to Bharathi Achary Vide Affidavit Dated:08/03/2021 Before Notary N.Shankar Bangalore

14847573M, NK, Patil Deepak G, 56Coy, SUP, mother name service record MALUTAI instead of LAXMI GANPTI PATIL notary K.V. Mani, Bangalore.

14844299P, NK/MT, Rajesha MT Wing 2ATC mother name service record NALINI. N instead of NALINAKSHI notary K.V. Mani, Bangalore.

Others

EGG DONOR wanted for HYD based VEG Couple. Healthy Woman around 25 years, willing to donate eggs may email their details on eggdonorwantedhyd@gmail.com OR call on 62813 17273

MORE Classifieds IN SUPPLEMENT

ಮೂರು ವಾರ್ಷಿಕ ಕಂತುಗಳಲ್ಲಿ ₹ 300 ಕೋಟಿ ಪ್ರಸ್ತಾವನೆ ಸಲ್ಲಿಸಿದ್ದ ನಾಟಕ ಅಕಾಡೆಮಿ

ನನೆಗುದಿಗೆ ಬಿದ್ದ 'ರಂಗಮಂದಿರ ಪ್ರಾಧಿಕಾರ'

• ವರುಣ್ ಹೆಗಡೆ

ಬೆಂಗಳೂರು: ರಂಗಮಂದಿರಗಳ ಕೊರತೆ ಹಾಗೂ ರಂಗಭೂಮಿಯ ಸಮಸ್ಯೆಗಳನ್ನು ನೀಗಿಸಲು ಕರ್ನಾಟಕ ನಾಟಕ ಅಕಾಡೆಮಿ 'ರಂಗ ಮಂದಿರ ಪ್ರಾಧಿಕಾರ' ರಚಿಸುವ ಪ್ರಸ್ತಾವನೆ ಸಿದ್ಧಪಡಿಸಿತ್ತು. ಈ ಪ್ರಸ್ತಾವನೆ ನನೆಗುದಿಗೆ ಬಿದ್ದಿದೆ.

ನಾಡಿನ ರಂಗಕರ್ಮಿಗಳು ಹಾಗೂ ಸಾಂಸ್ಕೃತಿಕ ವಲಯದ ತಜ್ಞರ ಸಲಹೆಗಳನ್ನು ಪಡೆದಿದ್ದ ಅಕಾಡೆಮಿ, ಪ್ರಾಧಿಕಾರ ರಚನೆಗೆ ಸಂಬಂಧಿಸಿದ ರೂಪುರೇಷೆಗಳನ್ನೂ ಈ ಹಿಂದೆ ಸಿದ್ಧಪಡಿಸಿತ್ತು. ಪ್ರತಿ ತಾಲ್ಲೂಕಿನಲ್ಲಿ 300 ಆಸನಗಳ ವ್ಯವಸ್ಥೆಯ ಸುಸಜ್ಜಿತ ರಂಗಮಂದಿರ ನಿರ್ಮಾಣ ಮಾಡಬೇಕು ಎಂದು ಪ್ರಸ್ತಾವನೆಯಲ್ಲಿ ತಿಳಿಸಲಾಗಿತ್ತು. ರಂಗ ಮಂದಿರದ ನೀಲ ನಕ್ಷೆಯನ್ನೂ ರಚಿಸಿ, ಪ್ರತಿ ರಂಗಮಂದಿರಕ್ಕೆ ₹ 1.6 ಕೋಟಿ ವೆಚ್ಚವಾಗಲಿದೆ ಎಂದೂ ಅಂದಾಜಿಸಲಾಗಿತ್ತು.

ಒಟ್ಟಾರೆ ₹ 300 ಕೋಟಿಯನ್ನು ಮೂರು ವಾರ್ಷಿಕ ಕಂತುಗಳಲ್ಲಿ ನೀಡಿದಲ್ಲಿ ಇದು ಸಾಕಾರವಾಗಲಿದೆ ಎಂದು ಅಂದಿನ ಅಕಾಡೆಮಿ ಅಧ್ಯಕ್ಷ ಜೆ. ಲೋಕೇಶ್ ಅವರು ಮೈತ್ರಿ ಸರ್ಕಾರ ಹಾಗೂ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದರು. ಎರಡು ವರ್ಷಗಳು ಕಳೆದರೂ ಸರ್ಕಾರದ ಮಟ್ಟದಲ್ಲಿ ಈ ಬಗ್ಗೆ ಯಾವುದೇ ಸ್ಪಂದನೆ ದೊರೆಯದಿರುವುದು ಸಾಂಸ್ಕೃತಿಕ ವಲಯದ ಆಕ್ರೋಶಕ್ಕೆ ಕಾರಣವಾಗಿದೆ.

'ರಂಗಭೂಮಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿರುವ ರಂಗಕರ್ಮಿಗಳು, ಕಲಾವಿದರಿಗೆ ತಮ್ಮ ನಾಟಕಗಳನ್ನು ಪ್ರದರ್ಶಿಸುವುದೆಲ್ಲಿ ಎನ್ನುವುದೇ ಯಕ್ಷ ಪ್ರಶ್ನೆಯಾಗಿದೆ. ನಾಟಕದ ತಯಾರಿಗೆ ಬೇಕಾದ ತಾಲೀಮು ಕೊಠಡಿಗಳು ಹಾಗೂ ರಂಗ ಪ್ರದರ್ಶನಕ್ಕೆ ಅಗತ್ಯವಾದ ರಂಗಮಂದಿರಗಳ ಕೊರತೆಯಿದೆ. ತಾಲ್ಲೂಕು ಕೇಂದ್ರಗಳಲ್ಲಿ ನಾಟಕಗಳನ್ನು ಪ್ರದರ್ಶಿಸಲು ಮೂಲಸೌಕರ್ಯ ಹೊಂದಿರುವ ರಂಗ ಮಂದಿರಗಳು ಕಾಣಸಿಗುವುದಿಲ್ಲ. ಇದು ರಂಗ ಚಟುವಟಿಕೆಗಳು ಕುಂಠಿತವಾಗಲು ಕಾರಣವಾಗಿದೆ. ಯುವಕರಲ್ಲಿನ ಆಸಕ್ತಿಯನ್ನು ಇದು ಕುಂದಿಸುತ್ತಿದೆ' ಎಂದು ರಂಗಕರ್ಮಿಗಳು ಬೇಸರ ವ್ಯಕ್ತಪಡಿಸಿದ್ದಾರೆ.



200 ರಂಗ ಮಂದಿರ ಪ್ರಸ್ತಾವನೆ: '5 ವರ್ಷಗಳ ಅವಧಿಯಲ್ಲಿ 200 ರಂಗ ಮಂದಿರಗಳನ್ನು ನಿರ್ಮಿಸಬೇಕೆಂದು ಪ್ರಸ್ತಾವನೆಯಲ್ಲಿ ತಿಳಿಸಲಾಗಿತ್ತು. ಬೆಂಗಳೂರಿನಲ್ಲಿಯೇ ರವೀಂದ್ರ ಕಲಾಕ್ಷೇತ್ರ ಹೊರತುಪಡಿಸಿದರೆ ಸರ್ಕಾರ ನಿರ್ವಹಿಸುವ ಬೇರೆ ಸುಸಜ್ಜಿತ ರಂಗ ಮಂದಿರಗಳಿಲ್ಲ. ಇರುವ ರಂಗ ಮಂದಿರಗಳಿಗೆ ಕೂಡ ಅಗತ್ಯ ಪರಿಕರಗಳನ್ನು ಅಳವಡಿಸಲು ಲೋಕೋಪಯೋಗಿ ಇಲಾಖೆ ಬೇಕಾಬಿಟ್ಟಿ ಟೆಂಡರ್ ಕರೆದು, ಕಳಪೆ ಗುಣಮಟ್ಟದ ಸಾಧನಗಳನ್ನು ಅಳವಡಿಸುವ ಸಾಧ್ಯತೆ ಇರುತ್ತದೆ. ಪ್ರಾಧಿಕಾರ ರಚನೆಯಾದಲ್ಲಿ ಈ ಸಮಸ್ಯೆ ಇರುವುದಿಲ್ಲ. ಆದ್ದರಿಂದಲೇ ಈ ಸಂಬಂಧ ರೂಪುರೇಷೆಯನ್ನು ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಆದರೆ, ಅದನ್ನು ಕಾರ್ಯಗತಗೊಳಿಸಲು ಸರ್ಕಾರವು ಆಸಕ್ತಿ ತೋರಿಲ್ಲ' ಎಂದು ಅಕಾಡೆಮಿಯ ನಿಕಟಪೂರ್ವ ಅಧ್ಯಕ್ಷ ಜೆ. ಲೋಕೇಶ್ ತಿಳಿಸಿದರು.

'ರಂಗ ಮಂದಿರದ ಕೊರತೆಯಿಂದಾಗಿ ರಂಗಭೂಮಿಯ ಬೆಳವಣಿಗೆಗೆ ತೊಡಕಾಗಿದೆ. ಪ್ರಾಧಿಕಾರ ರಚನೆ ತುರ್ತಾಗಿ ಆಗಬೇಕಾದ ಕೆಲಸ. ರಾಜ್ಯದ ಕೆಲವು ಭಾಗಗಳಲ್ಲಿ ಮಾತ್ರ ರಂಗ ಮಂದಿರಗಳು ಕಾಣಸಿಗುತ್ತವೆ. ಅವುಗಳ ನಿರ್ವಹಣೆ ಕೂಡ ಸೂಕ್ತ ರೀತಿಯಲ್ಲಿ ಆಗುತ್ತಿಲ್ಲ. ಹಾಗಾಗಿ, ಸರ್ಕಾರವು ಪ್ರಾಧಿಕಾರ ನಿರ್ಮಾಣ ಮಾಡಲು ಮನಸ್ಸು ಮಾಡಬೇಕು' ಎಂದು ಅಕಾಡೆಮಿಯ ಅಧ್ಯಕ್ಷ ಪ್ರೊ. ಭೀಮಸೇನ ಆರ್. ಒತ್ತಾಯಿಸಿದರು.

ಪ್ರಸ್ತಾವನೆಯಲ್ಲಿ ಏನಿದೆ?

ಅಕಾಡೆಮಿಯು ಸಿದ್ಧಪಡಿಸಿದ್ದ ಪ್ರಸ್ತಾವನೆಯಲ್ಲಿ ತಾಲ್ಲೂಕಿಗೆ ಒಂದರಂತೆ ರಾಜ್ಯದ ಎಲ್ಲೆಡೆ ರಂಗಮಂದಿರವನ್ನು ನಿರ್ಮಿಸಬೇಕು ಎಂದು ತಿಳಿಸಲಾಗಿದೆ.

ಪ್ರತಿ ರಂಗಮಂದಿರದಲ್ಲಿ 300 ಆಸನಗಳನ್ನು ಒದಗಿಸಬೇಕು. ಅಲ್ಲಿ ವೃತ್ತಿ, ಪೌರಾಣಿಕ ಹಾಗೂ ಹವ್ಯಾಸಿ ನಾಟಕಗಳ ಪ್ರದರ್ಶನಕ್ಕೆ ಆದ್ಯತೆ ನೀಡಬೇಕು.

ಉಳಿದ ಸಾಂಸ್ಕೃತಿಕ ಕಲಾ ಪ್ರಕಾರಗಳಿಗೂ ಅವಕಾಶವನ್ನು ಒದಗಿಸಬೇಕು.

ಸಾಂಸ್ಕೃತಿಕ ಕ್ಷೇತ್ರದಲ್ಲಿ ಆಡಳಿತ ಅನುಭವ ಹಾಗೂ ರಂಗ ಪರಿಣತಿ ಹೊಂದಿರುವವರನ್ನು ಪ್ರಾಧಿಕಾರದ ಅಧ್ಯಕ್ಷರನ್ನಾಗಿ ಮಾಡಬೇಕು ಎಂದೂ ಉಲ್ಲೇಖಿಸಲಾಗಿತ್ತು.

ಪ್ರಾಧಿಕಾರದ ಪ್ರಧಾನ ಕಚೇರಿಯನ್ನು ಧಾರವಾಡ ಅಥವಾ ದಾವಣಗೆರೆಯಲ್ಲಿ ನಿರ್ಮಿಸಬೇಕು ಹಾಗೂ ಪಾರಂಪರಿಕ ಕಲೆಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಪ್ರಾಧಿಕಾರ ಅತ್ಯಗತ್ಯ. ಇಡೀ ನಾಡಿನಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ಸಮೃದ್ಧವಾಗಿ ಬೆಳವಣಿಗೆ ಕಾಣಲಿವೆ. ವಾರ್ಷಿಕ ಸರ್ಕಾರಿ ಅನುದಾನ ಹಾಗೂ ರಂಗಮಂದಿರಗಳಿಂದ ಬರುವ ಆದಾಯದಿಂದ ಪ್ರಾಧಿಕಾರ ನಿರ್ವಹಣೆ ಸಾಧ್ಯ ಎಂದು ತಿಳಿಸಲಾಗಿತ್ತು.

ಪೃಥ್ವಿ ಅವರ ಕುಟುಂಬ

ಶುಲ್ಕದ ಭಾರ: ಉತ್ಪಾದನೆಯ ದಾರಿ

ಒಂದನೇ ಪುಟದಿಂದ

₹5 ಲಕ್ಷ ವೆಚ್ಚದಲ್ಲಿ ಘಟಕ: 5 ಕಿಲೊವ್ಯಾಟ್ ಸಾಮರ್ಥ್ಯದ, 15 ಸೌರಫಲಕಗಳನ್ನು ಅಳವಡಿಸಲಾಗಿರುವ ಈ ಘಟಕಕ್ಕೆ ₹5 ಲಕ್ಷ ವೆಚ್ಚವಾಗಿದೆ.

'ಬೆಸ್ಕಾಂನಿಂದ ಪ್ರತ್ಯೇಕ ಮೀಟರ್ ಅಳವಡಿಸಲಾಗಿದೆ. ಮನೆಯ ಪಕ್ಕದ ಟ್ರಾನ್ಸ್‌ಫಾರ್ಮರ್ ಮೂಲಕ ಈ ವಿದ್ಯುತ್ ನೇರವಾಗಿ ಬೆಸ್ಕಾಂನ ಗ್ರಿಡ್‌ಗೆ ಹೋಗುತ್ತದೆ. ಪ್ರತಿ ಯುನಿಟ್‌ಗೆ ₹7ರಂತೆ ಬೆಸ್ಕಾಂ ಹಣ ನೀಡುತ್ತಿದೆ. ನಾವು ಬಳಸುವ ವಿದ್ಯುತ್ ವೆಚ್ಚವನ್ನು ಕಡಿತಗೊಳಿಸಿ ಉಳಿದ ಹಣವನ್ನು ನಮ್ಮ ಖಾತೆಗೆ ಜಮಾ ಮಾಡಲಾಗುತ್ತದೆ' ಎಂದು ಪೃಥ್ವಿ ಅವರ ತಾತ ರಾಜನ್ ಹೇಳಿದರು.

'ನಮ್ಮ ವಿದ್ಯುತ್ ವೆಚ್ಚ, ಬೆಸ್ಕಾಂ ನೀಡುವ ಹಣ ಮತ್ತು ಬಡ್ಡಿ ಲೆಕ್ಕ ಎಲ್ಲ ಹಾಕಿದರೆ ಒಂದೂವರೆ ವರ್ಷಕ್ಕೆ ₹1 ಲಕ್ಷದವರೆಗೆ ನಮಗೆ ಲಾಭವಾಗಿದೆ. ಇನ್ನೂ 25 ವರ್ಷ ನಮಗೆ ಚಿಂತೆ ಇಲ್ಲ' ಎಂದು ಅವರು ಹೇಳಿದರು.

ಜಾನಪದ ಲೋಕದಲ್ಲಿ ಲೋಕೋತ್ಸವ ಸಂಭ್ರಮ

39 ಮಂದಿಗೆ ಲೋಕಶ್ರೀ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ರಾಮನಗರ: ಇಲ್ಲಿನ ಜಾನಪದ ಲೋಕದ ಬಯಲು ರಂಗಮಂದಿರದಲ್ಲಿ ಶನಿವಾರ ಸಂಜೆ ನಡೆದ ಕಾರ್ಯಕ್ರಮದಲ್ಲಿ ನಾಡಿನ 39 ಕಲಾವಿದರಿಗೆ 2021ನೇ ಸಾಲಿನ ಲೋಕಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

10 ಸಾವಿರ ರೂಪಾಯಿ ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡ ಪುರಸ್ಕಾರವನ್ನು ಆದಿಚುಂಚನಗಿರಿ ನಿರ್ಮಲಾನಂದನಾಥ ಸ್ವಾಮೀಜಿ ಕಲಾವಿದರಿಗೆ ಪ್ರದಾನ ಮಾಡಿದರು.

ಈ ಸಂದರ್ಭ ಆಶೀರ್ವಚನ ನೀಡಿದ ಅವರು 'ವಿಜ್ಞಾನ ಮತ್ತು ಅಧ್ಯಾತ್ಮ ಒಂದೇ ನಾಣ್ಯದ ಎರಡು ಮುಖ. ಬದುಕಿಗೆ ಎರಡೂ ಬೇಕು. ಆನಂದ ಮತ್ತು ನೆಮ್ಮದಿ ಇದ್ದರೆ ಬದುಕು ಹಸನಾಗುತ್ತದೆ' ಎಂದರು. 'ಜನಪದ ಉಳಿಯದೇ ಹೋದರೆ ಮನುಷ್ಯನ ನೆಮ್ಮದಿ ಉಳಿಯುವುದಿಲ್ಲ. ಜನಪದ, ಕಲೆ, ಸಂಗೀತ ಈ ಎಲ್ಲವೂ ಬದುಕಿಗೆ ಬೇಕು' ಎಂದು ಪ್ರತಿಪಾದಿಸಿದರು.

ಕಾರ್ಯಕ್ರಮದಲ್ಲಿ ಕಲಾವಿದರಿಗೆ ನಿರ್ಮಲಾನಂದನಾಥ ಸ್ವಾಮೀಜಿ ಪ್ರಶಸ್ತಿ ಪ್ರದಾನ ಮಾಡಿದರು. ಜಾನಪದ ವಿದ್ವಾಂಸ ಹಿ.ಶಿ. ರಾಮಚಂದ್ರೇಗೌಡ, ಕರ್ನಾಟಕ ಜಾನಪದ ಪರಿಷತ್ತು ಅಧ್ಯಕ್ಷ ಟಿ. ತಿಮ್ಮೇಗೌಡ ಹಾಗೂ ಆದಿಚುಂಚನಗಿರಿ ಶಾಖಾ ಮಠದ ಅನ್ನದಾನೇಶ್ವರನಾಥ ಸ್ವಾಮೀಜಿ ಇದ್ದರು

ಆದಿಚುಂಚನಗಿರಿ ಶಾಖಾ ಮಠದ ಅನ್ನದಾನೇಶ್ವರನಾಥ ಸ್ವಾಮೀಜಿ, ಕರ್ನಾಟಕ ಜಾನಪದ ಪರಿಷತ್ತು ಅಧ್ಯಕ್ಷ ಟಿ. ತಿಮ್ಮೇಗೌಡ, ಮ್ಯಾನೇಜಿಂಗ್ ಟ್ರಸ್ಟಿ ಆದಿತ್ಯ ನಂಜರಾಜ್, ಜಾನಪದ ವಿದ್ವಾಂಸ ಹಿ.ಶಿ. ರಾಮಚಂದ್ರೇಗೌಡ ಇದ್ದರು. ಇದೇ ಸಂದರ್ಭ 2021ನೇ ಸಾಲಿನ ಕರ್ನಾಟಕ ಜಾನಪದ ಪರಿಷತ್ತಿನ ಪ್ರಕಟಣೆಗಳನ್ನು ಬಿಡುಗಡೆ ಮಾಡಲಾಯಿತು.

ಪ್ರಶಸ್ತಿ ಪುರಸ್ಕೃತರು: ತುಮಕೂರು ಜಿಲ್ಲೆಯ ಯಕ್ಷಗಾನ ಭಾಗವತ ಕಲ್ಮನೆ ನಂಜಪ್ಪ, ಶತಕಂ ಮಲ್ಲೇಶ್, ರಂಗಪ್ಪ. ಬೆಂಗಳೂರಿನ ಡಾ.ಜೆ. ನಾರಾಯಣ, ಶ್ರೀನಿವಾಸ ಕಪ್ಪಣ್ಣ, ನೀಲಾಂಬಿಕಾ, ಟಾ.ಟಿ. ಗೋವಿಂದರಾಜು, ಜೋಗಿಲ ಸಿದ್ದರಾಜು. ಶಿಲ್ಪಾ ಮುಡಬಿ, ರಾಯಚೂರಿನ ದಂಡಮ್ಮ ಅಕ್ಕರಕಿ, ಲಂಕೆಪ್ಪ ಭಜಂತ್ರಿ, ಬೆಳಗಾವಿಯ ಮಲ್ಲಪ್ಪ ಅಪ್ಪಣ್ಣ ಕಕ್ಕೇರಿ, ಪುಂಡಲೀಕ ಸೈದಪ್ಪ ಮಾದರ, ಶಿವಲಿಂಗ ಪಾವಡಿ ಪೂಜೇರಿ.ದಕ್ಷಿಣ ಕನ್ನಡ ಜಿಲ್ಲೆಯ ಸೇಸಪ್ಪ ಪಂಬದ ಮಂಜನಾಡಿ, ರಾಮನಗರದ ಚಂದು, ಶಿವಲಿಂಗಯ್ಯ, ಸಿದ್ದರಾಜು, ಯಾದಗಿರಿಯ ಬಸಪ್ಪ, ಶಿವಮೊಗ್ಗದ ವಸಂತ ರಾವ್ ಕುಗ್ವೆ, ಹಾವೇರಿಯ ಮಲ್ಲಪ್ಪ ಚಿಂಚಲಿ, ವಿಜಯಪುರದ ವೀರಭದ್ರಪ್ಪ ಯಲ್ಲಪ್ಪ, ಶಿವಣ್ಣ ಬಿರಾದಾರ, ಮೈಸೂರಿನ ಚಿಕ್ಕತಾಯಮ್ಮ, ಮಾಸ್ತಮ್ಮ, ಬೀದರ್‌ನ ಶಂಭುಲಿಂಗ ವಾಲದೊಡ್ಡಿ, ಚಿಕ್ಕಮಗಳೂರಿನ ಕೆ.ಎಚ್.ರೇವಣ್ಣ, ಬಾಗಲಕೋಟೆಯ ಶ್ರೀಶೈಲ ಚೆನ್ನಪ್ಪ.

ಹಾಸನದ ಜವರಯ್ಯ, ಮಂಡ್ಯದ ಸಾಕಮ್ಮ, ದೊಡ್ಡಕಾಳೇಗೌಡ, ಬಳ್ಳಾರಿಯ ಕಿಂದ್ರಿ ಲಕ್ಷ್ಮೀಪತಿ, ಚಿತ್ರದುರ್ಗದ ಮಾರಕ್ಕ, ಧಾರವಾಡದ ಶಂಕರಯ್ಯ ಹಿರೇಮಠ, ಕೊಡಗು ಜಿಲ್ಲೆಯ ಸುಜಾತ, ಬೆಸೂರು ಶಾಂತೇಶ್, ಕೊಪ್ಪಳದ ಶಾವಮ್ಮ, ಚಾಮರಾಜನಗರದ ಮಲ್ಲೇಗೌಡ, ಉಡುಪಿಯ ರವೀಂದ್ರ ಪಾಣರ, ಕಾಸರಗೋಡು ಜಿಲ್ಲೆಯ ಎ.ಶ್ರೀನಾಥ ಅವರಿಗೆ ಕಾರ್ಯಕ್ರಮದಲ್ಲಿ ಲೋಕಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಿಂಗನಾಯಕನಹಳ್ಳಿ 'ಜಾನಪದ ಕಲಾಸಂಜೆ'

ಪ್ರಜಾವಾಣಿ ವಾರ್ತೆ

ಯಲಹಂಕ: ವಿಶ್ವಭಾರತಿ ಕ್ರೀಡಾ ಮತ್ತು ಸಾಂಸ್ಕೃತಿಕ ಕೇಂದ್ರದ ಆಶ್ರಯದಲ್ಲಿ ಸಿಂಗನಾಯಕನಹಳ್ಳಿಯಲ್ಲಿ ಜಾನಪದ ಕಲಾಸಂಜೆ' ಕಾರ್ಯಕ್ರಮ ನಡೆಯಿತು.

ಕೊತ್ತನೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ನೃತ್ಯ, ಪಟದ ಕುಣಿತ ಮತ್ತು ಎಲ್ಲಮ್ಮನ ದೃಶ್ಯರೂಪಕ ಪ್ರಸ್ತುತಪಡಿಸಿದರು. ಡೊಳ್ಳುಕುಣಿತ, ಕಂಸಾಳೆ, ಜಂಬೆ ಮತ್ತು ತಾಳಮದ್ದಳೆಯ ಸದ್ದು ಜನರನ್ನು ಮೈನವಿರೇಳುವಂತೆ ಮಾಡಿತು.

ವಿಶ್ವಭಾರತಿ ಸಂಸ್ಥೆಯ ಕಲಾವಿದರಾದ ಆನಂದ್, ಯಶಸ್ವಿನಿ, ಸುಧಾಕರ್ ಜೈನ್ ಹಾಗೂ ವೈಜಯಂತಿ, ಜಾನಪದ ಹಾಡು ಮತ್ತು ತಾಳಮದ್ದಳೆಗಳ ಮೂಲಕ ಸಿಂಗನಾಯಕನಹಳ್ಳಿಯ ಇತಿಹಾಸವನ್ನು ಜನರಿಗೆ ತಿಳಿಸುವ ಪ್ರಯತ್ನ ಮಾಡಿದರು.

ಕಾರ್ಯಕ್ರಮದಲ್ಲಿ ಕೊತ್ತನೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳು 'ಯಲ್ಲಮ್ಮನ ದೃಶ್ಯರೂಪಕ' ಪ್ರಸ್ತುತಪಡಿಸಿದರು.

ಗ್ರಾಮದ ಏಳಿಗೆಗೆ ಸೇವೆ ಸಲ್ಲಿಸಿದವರನ್ನು ಸನ್ಮಾನಿಸಲಾಯಿತು. ಶಾಸಕ ಎಸ್.ಅರ್.ವಿಶ್ವನಾಥ್, 'ಪಾಶ್ಚಿಮಾತ್ಯ ಸಂಸ್ಕೃತಿಯ ಮೊರೆ ಹೋಗಿರುವ ಯುವಜನಾಂಗ, ಮೂಲ ಜಾನಪದ ಕಲೆ ಮತ್ತು ಸಂಸ್ಕೃತಿಯನ್ನು ಮರೆಯುತ್ತಿರುವುದು ಬೇಸರದ ಸಂಗತಿ. ವಿಶ್ವಭಾರತಿ ಸಂಸ್ಥೆಯವರು ನಶಿಸುತ್ತಿರುವ ಜಾನಪದ ಕಲೆಗಳನ್ನು ಪುನಶ್ಚೇತನಗೊಳಿಸಲು ಶಾಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ಜಾನಪದ ಕಲಾಪ್ರಕಾರಗಳನ್ನು ಕಲಿಸುತ್ತಿರುವುದು ಶ್ಲಾಘನೀಯ' ಎಂದರು.

ಸಿಂಗನಾಯಕನಹಳ್ಳಿ ರೈತರಸೇವಾ ಸಹಕಾರ ಸಂಘದ ಅಧ್ಯಕ್ಷೆ ವಾಣಿಶ್ರೀ ವಿಶ್ವನಾಥ್, ವಿಶ್ವಭಾರತಿ ಸಂಸ್ಥೆಯ ಕಾರ್ಯದರ್ಶಿ, ಸುರೇಶ್ ಬಾಬು, ಕಲಾವಿದರಾದ ಸುರೇಂದ್ರ, ಕಲಾಶಿಕ್ಷಕ ಆನಂದ್ ಪರಾಕೋಟ್ ಭಾಗವಹಿಸಿದ್ದರು.

ಜಯಚಂದ್ರಗೆ 'ಸಿದ್ಧಾಂತ ಕೀರ್ತಿ' ಪ್ರಶಸ್ತಿ

ಹೊಂಬುಜ (ರಿಪ್ಪನ್‌ಪೇಟೆ): ಶ್ರೀಕ್ಷೇತ್ರ ಹೊಂಬುಜ ಜೈನ ಮಠದಿಂದ ಕೊಡಮಾಡುವ 2021ನೇ ಸಾಲಿನ 'ಸಿದ್ಧಾಂತ ಕೀರ್ತಿ' ಪ್ರಶಸ್ತಿಗೆ ನಿವೃತ್ತ ಪ್ರಾಂಶುಪಾಲ, ಜಾನಪದ ಸಾಹಿತಿ, ಜೈನಾಗಮ ವಿದ್ವಾಂಸ ಬೆಂಗಳೂರಿನ ಡಾ. ಎಂ.ಎ. ಜಯಚಂದ್ರ ಆಯ್ಕೆಯಾಗಿದ್ದಾರೆ. ಪ್ರಶಸ್ತಿ ₹ 51 ಸಾವಿರ ನಗದು ಮತ್ತು ಅಂಗವಸ್ತ್ರ ಒಳಗೊಂಡಿದೆ. ಏಪ್ರಿಲ್ 2ರಂದು ಮಠದಲ್ಲಿ ನಡೆಯಲಿರುವ ವಾರ್ಷಿಕ ಮಹಾರಥಯಾತ್ರಾ ಮಹೋತ್ಸವದಲ್ಲಿ ಮಠದ ಪೀಠಾಧಿಕಾರಿ ಡಾ. ದೇವೇಂದ್ರ ಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ವರ್ಯ ಸ್ವಾಮೀಜಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಮಠದ ಪ್ರಕಟಣೆ ತಿಳಿಸಿದೆ.

ಚಿತ್ರಾವಳಿ

ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ದೇಶೀಯ ಕಾರ್ಮಿಕರ ಹಕ್ಕುಗಳ ಒಕ್ಕೂಟವು ವಿವಿಧ ವಿಷಯಗಳ ಕುರಿತು ಚರ್ಚಿಸಲು ಶನಿವಾರ ಆಯೋಜಿಸಿದ್ದ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ್ದ ಮಹಿಳೆಯರು

ಬಿದಿರು ಹೆಣೆದು ತಯಾರಿಸಿದ ಆಸನಗಳನ್ನು ರಾಜಸ್ತಾನದ ವ್ಯಾಪಾರಿಯೊಬ್ಬರು ಜೋಡಿಸುತ್ತಿರುವ ದೃಶ್ಯ ಕತ್ರಿಗುಪ್ಪೆ ಬಳಿಯ ಹೊರವರ್ತುಲ ರಸ್ತೆಯಲ್ಲಿ ಶನಿವಾರ ಕಂಡುಬಂತು ಪ್ರಜಾವಾಣಿ ಚಿತ್ರ/ ರಂಜು ಪಿ

ವಿವಿಧ ಕ್ಷೇತ್ರಗಳ ಸಾಧಕರನ್ನು ಶಾಸಕ ಎಸ್‌ಆರ್‌ವಿಶ್ವನಾಥ್ ಅವರು ಕಾರ್ಯಕ್ರಮದಲ್ಲಿ ಸನ್ಮಾನಿಸಿದರು.

'ಎಲ್ಲ ರಂಗಗಳಲ್ಲೂ ಮಹಿಳೆಗೆ ಮುಕ್ತ ಅವಕಾಶ'

ಯಲಹಂಕ: 'ಎಲ್ಲ ರಂಗಗಳಲ್ಲಿಯೂ ಮಹಿಳೆಯರಿಗೆ ಮುಕ್ತ ಅವಕಾಶಗಳನ್ನು ಕಲ್ಪಿಸುವ ಮೂಲಕ ಅವರೂ ಮುಖ್ಯವಾಹಿನಿಗೆ ಬರಲು ಪ್ರೋತ್ಸಾಹಿಸಬೇಕು' ಎಂದು ಶಾಸಕ ಎಸ್.ಆರ್.ವಿಶ್ವನಾಥ್ ಹೇಳಿದರು.

ಬಿಜೆಪಿ ಮಹಿಳಾ ಮೋರ್ಚಾದ ಯಲಹಂಕ ಕ್ಷೇತ್ರ, ಸಿಂಗನಾಯಕನಹಳ್ಳಿ ರೈತರಸೇವಾ ಸಹಕಾರ ಸಂಘ, ವಿಶ್ವವಾಣಿ ಫೌಂಡೇಶನ್ ಹಾಗೂ ರೋಟರಿ ಕ್ಲಬ್ ಆಶ್ರಯದಲ್ಲಿ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ವಿಶ್ವ ಮಹಿಳಾ ದಿನಾಚರಣೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರನ್ನು ಸನ್ಮಾನಿಸಲಾಯಿತು. ಕ್ರೀಡಾಸ್ಪರ್ಧೆಗಳಲ್ಲಿ ವಿಜೇತರಾದ ಮಹಿಳೆಯರಿಗೆ ಬಹುಮಾನ ಹಾಗೂ ಸ್ತ್ರೀಶಕ್ತಿ ಗುಂಪುಗಳಿಗೆ ಸಾಲಸೌಲಭ್ಯದ ಚೆಕ್ ವಿತರಿಸಲಾಯಿತು. ಉಚಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ಸ್ವಸಹಾಯ ಸಂಘಗಳಿಂದ ಬಟ್ಟೆ ಮತ್ತು ಕೃತಕ ಆಭರಣಗಳ ಪ್ರದರ್ಶನ ಹಾಗೂ ಮಾರಾಟ ಏರ್ಪಡಿಸಲಾಗಿತ್ತು.

ಸಿಂಗನಾಯಕನಹಳ್ಳಿ ರೈತರಸೇವಾ ಸಹಕಾರ ಸಂಘದ ಅಧ್ಯಕ್ಷೆ ವಾಣಿಶ್ರೀ, ಬಿಜೆಪಿ ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷೆ ಗೀತಾ ವಿವೇಕಾನಂದ, ಪ್ರಮುಖರಾದ ಎಂ.ಸತೀಶ್, ಡಾ.ಗೀತಾ ಶಶಿಕುಮಾರ್, ನೇತ್ರಾ ಪಲ್ಲವಿ, ಪಕ್ಷದ ಮುಖಂಡರಾದ ದಿಬ್ಬೂರು ಜಯಣ್ಣ, ಹನುಮಯ್ಯ, ಆಶಾರಾವ್, ಬೃಂದಾ ವೀರೇಶ್ ಉಪಸ್ಥಿತರಿದ್ದರು.

ಬಂಡೀಪುರ: ತ್ರಿಯಂಭಕಪುರ ದಕ್ಷಿಣದ ಸಂರಕ್ಷಿತ ಅರಣ್ಯಕ್ಕೆ ಬೆಂಕಿ

ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಗುಂಡ್ಲುಪೇಟೆ ಬಫರ್ ಜೋನ್ ವ್ಯಾಪ್ತಿಗೆ ಬರುವ ತ್ರಿಯಂಭಕಪುರದಕ್ಷಿಣದಸಂರಕ್ಷಿತಅರಣ್ಯಪ್ರದೇಶಕ್ಕೆ ಶನಿವಾರ ಸಂಜೆ ಬೆಂಕಿ ಬಿದ್ದಿದ್ದು, ಅಪಾರ ಅರಣ್ಯ ನಾಶವಾಗಿದೆ.

ಸಂಜೆ ಅರಣ್ಯದಂಚಿನಲ್ಲಿ ಕಾಣಿಸಿಕೊಂಡ ಬೆಂಕಿಯು, ರಭಸವಾಗಿ ಬೀಸುತ್ತಿದ್ದ ಗಾಳಿಯಿಂದಾಗಿ ಒಣಗಿದ ಹುಲ್ಲು–ಗಿಡಗಂಟೆಗಳಿಗೆ ಹೊತ್ತಿಕೊಂಡು ತೀವ್ರವಾಗಿ ವ್ಯಾಪಿಸಿತು. ಬೆಂಕಿ ತನ್ನ ಕೆನ್ನಾಲಿಗೆಯನ್ನು ಚಾಚುತ್ತಿದ್ದ ದೃಶ್ಯ ತ್ರಿಯಂಭಕಪುರ ಮತ್ತು ಕಗ್ಗಳ, ಕಗ್ಗಳದಹುಂಡಿ, ತೆರಕಣಾಂಬಿ ಗ್ರಾಮಗಳಿಗೆ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಜನರು ಚಿತ್ರ ತೆಗೆದು, ಅರಣ್ಯ ಇಲಾಖೆಯವರಿಗೆ ಮಾಹಿತಿ ನೀಡಿದರು.

ತ್ರಿಯಂಬಕಪುರ ದಕ್ಷಿಣದ ಸಂರಕ್ಷಿತ ಅರಣ್ಯಕ್ಕೆ ಬೆಂಕಿ ಬಿದ್ದಿರುವುದು

ಮಾಹಿತಿ ತಿಳಿದ ಅಧಿಕಾರಿಗಳು ಹಾಗೂ ಸಿಬ್ಬಂದಿ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ವಾಹನದ ಸಹಾಯದಿಂದ ಬೆಂಕಿ ನಂದಿಸುವ ಪ್ರಯತ್ನ ನಡೆಸಿದರು. ನೂರಾರು ಎಕರೆ ಸಂರಕ್ಷಿತ ಅರಣ್ಯ ನಾಶವಾಗಿದೆ ಎಂದು ಸ್ಥಳೀಯರು ಹೇಳಿದ್ದು, ಅರಣ್ಯ ಅಧಿಕಾರಿಗಳು ನಿರಾಕರಿಸಿದ್ದಾರೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಎಸ್.ಆರ್. ನಟೇಶ್, 'ಪಕ್ಕದ ಕೃಷಿ ಜಮೀನಿನಲ್ಲಿ ಹಾಕಿದ್ದ ಬೆಂಕಿಯು ತೀವ್ರವಾದ ಗಾಳಿಯಿಂದಾಗಿ ಸಂರಕ್ಷಿತ ಅರಣ್ಯ ಪ್ರದೇಶಕ್ಕೆ ಹರಡಿತು. ತಕ್ಷಣವೇ ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ನಿಯಂತ್ರಣಕ್ಕೆ ತರಲಾಗಿದೆ' ಎಂದು ಹೇಳಿದರು.

ಪಿಎಸ್‌ಐ ಮೇಲೆ ಹಲ್ಲೆ ಮತ್ತೊಬ್ಬ ಆರೋಪಿ ಬಂಧನ

ಕೆಜಿಎಫ್: ಬೆಂಗಳೂರಿನ ಮಹದೇವಪುರ ಪೊಲೀಸ್ ಠಾಣೆ ಸಬ್ ಇನ್‌ಸ್ಪೆಕ್ಟರ್ ಹರಿನಾಥ್ ಮೇಲೆ ಹಲ್ಲೆ ಮಾಡಿದ್ದ ಮತ್ತೊಬ್ಬ ಆರೋಪಿ, ಬ್ಯಾಂಡ್‌ಲೈನ್ ನಿವಾಸಿ ಪ್ರಶಾಂತ್ ಆಲಿಯಾಸ್ ಲಾಲ್ ಎಂಬುವವನನ್ನು ಆಂಡರ್‌ಸನ್‌ಪೇಟೆ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಮಾರ್ಚ್ 13 ತಡರಾತ್ರಿ ಆರೋಪಿ ಅಪೇನ್‌ನನ್ನು ಬಂಧಿಸಲು ಹೋದ ಪೊಲೀಸರ ಮೇಲೆ ಪ್ರಶಾಂತ್ ಹಲ್ಲೆ ನಡೆಸಿ ಪರಾರಿಯಾಗಿದ್ದ. ಹಲ್ಲೆ ನಡೆದ ನಂತರ ಆರೋಪಿಗಳನ್ನು ಚೆನ್ನೈಗೆ ಕಾರಿನಲ್ಲಿ ಕರೆದುಕೊಂಡು ಹೋಗಿ ವಸತಿ ಕಲ್ಪಿಸಿಕೊಟ್ಟಿದ್ದ ಸೂಸೈಪಾಳ್ಯದ ಸಂತೋಷ್ ಆಲಿಯಾಸ್ ಅಪ್ಪು, ಕಾರು ಚಾಲಕ ದಿನೇಶ್ ಕುಮಾರ್‌ನನ್ನೂ ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಇಲಕ್ಕಿಯಾ ಕರುಣಾಗರನ್ ತಿಳಿಸಿದ್ದಾರೆ.

ಪ್ರಶಾಂತ್

ನಗರದಲ್ಲಿ ಇಂದು

ನಮ್ಮ ಕಾಂಪೋಸ್ಟಿಂಗ್ ಸಂತೆ: ಸಾವಯವ ಗೊಬ್ಬರಕ್ಕೆ ಪರಿಹಾರಗಳನ್ನು ಕಲಿಯಲು ತಜ್ಞರ ಭೇಟಿ ಅವಕಾಶ, ಆಯೋಜನೆ: ಬಿಬಿಎಂಪಿ, ಸ್ಥಳ: ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆ, ಉಲ್ಲಾಳು ಕೆರೆ ಹತ್ತಿರ, ಬೆಳಿಗ್ಗೆ 6.30ರಿಂದ 11.30

ಜಾಗೃತಿ ಕಾರ್ಯಕ್ರಮ: ಮೋಳೆ ಮುಕ್ತ ಮರ, ಅತಿಥಿಗಳು: ಭಾಸ್ಕರ್ ರಾವ್, ಮಂಜುನಾಥ್ ಪ್ರಸಾದ್, ಆಯೋಜನೆ: ದಾರಿ ಆಂಜನೇಯ ಸ್ವಾಮಿ ಚಾರಿಟಬಲ್ ಟ್ರಸ್ಟ್, ಬಿ. ಪ್ಯಾಕ್, ಸ್ಥಳ: ಯಶವಂತಪುರ ವೃತ್ತ, ಬೆಳಿಗ್ಗೆ 7.30

ಭಾಸ್ಕರ್ ರಾವ್

ಮಡಿವಾಳ ಕೆರೆ ಸ್ವಚ್ಛತಾ ಕಾರ್ಯಕ್ರಮ: ನೇತೃತ್ವ: ತೇಜಸ್ವಿ ಸೂರ್ಯ, ಸಹಯೋಗ: ರೈಂಬೋ ಮಕ್ಕಳ ಆಸ್ಪತ್ರೆ, ಸ್ಥಳ: ಮಡಿವಾಳ ಕೆರೆ ಪಾರ್ಕಿಂಗ್ ಗೇಟ್ ಹತ್ತಿರ, ಬೆಳಿಗ್ಗೆ 8

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಇಂದಿರಾ ಕ್ರೀಡೋತ್ಸವ: ಮುಖ್ಯ ಅತಿಥಿ: ಸಲೀಮ್ ಅಹಮದ್, ಸೌಮ್ಯಾ ರೆಡ್ಡಿ, ಪ್ರೊ. ರಾಧಾಕೃಷ್ಣ, ಎಂ. ಶಿವರಾಜು, ಎಸ್. ಕೇಶವಮೂರ್ತಿ, ಆಯೋಜನೆ: ಮಹಾಲಕ್ಷ್ಮೀಲೇಔಟ್ ವಿಧಾನಸಭಾ ಕ್ಷೇತ್ರ ಮಹಿಳಾ ಕಾಂಗ್ರೆಸ್ ಸಮಿತಿ, ಸ್ಥಳ: ಸ್ವಾಮಿ ವಿವೇಕಾನಂದ ಆಟದ ಮೈದಾನ, ಶಂಕರಮಠ, ಬೆಳಿಗ್ಗೆ 9.30

ನೂತನ ಬೃಹತ್ ಬೆಂಗಳೂರು ಮಹಾನಗರ ಯುವ ಘಟಕದ ಉದ್ಘಾಟನೆ ಮತ್ತು ಅಭಿನಂದನಾ ಸಮಾರಂಭ: ಉದ್ಘಾಟನೆ: ಶಾಮನೂರು ಶಿವಶಂಕರಪ್ಪ, ಉಪಸ್ಥಿತಿ: ಈಶ್ವರ ಖಂಡ್ರೆ, ಅಧ್ಯಕ್ಷತೆ: ಎಸ್. ಚಂದ್ರಮೌಳಿ, ಸನ್ಮಾನಿತರು: ಬಿ.ಎಸ್. ಪರಮಶಿವಯ್ಯ, ಎಂ. ರುದ್ರೇಶ್, ಜಿ. ಮರಿಸ್ವಾಮಿ, ಟಿ.ಎಸ್. ಲೋಕೇಶ್ವರ್, ಭಾರತಿ ಮಲ್ಲಿಕಾರ್ಜುನಪ್ಪ, ಆತ್ಮ ವಿ. ಹಿರೇಮಠ, ಎಸ್. ಲಿಂಗಮೂರ್ತಿ, ಬಿ.ಇ. ರಂಗಸ್ವಾಮಿ, ಮಹಾಂತೇಶ ಪಾಟೀಲ, ಆಯೋಜನೆ: ಅಖಿಲ ಭಾರತ ವೀರಶೈವ ಮಹಾಸಭಾ, ಸ್ಥಳ: ಹಾನಗಲ್ ಕುಮಾರಸ್ವಾಮಿ ಸಭಾಂಗಣ, ವೀರಶೈವ ಲಿಂಗಾಯತ ಭವನ, ಸದಾಶಿವನಗರ, ಬೆಳಿಗ್ಗೆ 10



ರವಿವರ್ಮ ಕುಮಾರ್

ಸಮಾಲೋಚನಾ ಸಭೆ: ವಿಷಯ: 'ದಿಕ್ಕು ತಪ್ಪಿದ ಮೀಸಲಾತಿ ಹೋರಾಟ', ಭಾಗವಹಿಸುವವರು: ಪ್ರೊ. ರವಿವರ್ಮ ಕುಮಾರ್, ಬಂಜಗೆರೆ ಜಯಪ್ರಕಾಶ್, ಪ್ರೊ.ಎನ್. ನರಸಿಂಹಯ್ಯ, ಡಾ. ರಾಜಾನಾಯ್ಕ್, ಎಣ್ಣೆಗೆರೆ ವೆಂಕಟರಾಮಯ್ಯ, ವಿಕಾಸ್ ಆರ್. ಮೌರ್ಯ, ಉಪಸ್ಥಿತಿ: ಮಾವಳ್ಳಿ ಶಂಕರ್, ಗುರುಪ್ರಸಾದ್ ಕೆರೆಗೋಡು, ವಿ. ನಾಗರಾಜ್, ಲಕ್ಷ್ಮೀನಾರಾಯಣ ನಾಗವಾರ, ಎನ್. ಮುನಿಸ್ವಾಮಿ, ಎನ್. ವೆಂಕಟೇಶ್, ಆಯೋಜನೆ: ದಲಿತ ಸಂಘರ್ಷ ಸಮಿತಿ ಸಂಘಟನೆಗಳ ಜಂಟಿ ವೇದಿಕೆ, ಸ್ಥಳ: ಗಾಂಧಿ ಭವನ, ಶಿವಾನಂದ ವೃತ್ತದ ಬಳಿ, ಬೆಳಿಗ್ಗೆ 11.00

ದತ್ತಿ ಉಪನ್ಯಾಸ: ದಿ.ಬಿ.ಎಸ್. ಗೋಪಾಲರಾವ್ ಮತ್ತು ಶ್ರೀಮತಿ ವೇದವತಿ ಬಾಯಿ ದತ್ತಿ ಉಪನ್ಯಾಸ, ವಿಷಯ: ಕುಮಾರ ವ್ಯಾಸ ಭಾರತದ ಭಾಗ, ಗಮಕ ಕಾರ್ಯಕ್ರಮ, ವಾಚನ: ಶೋಭಾ ಶಶಿಧರ್, ವ್ಯಾಖ್ಯಾನ: ಐ.ವಿ. ಗಾಯತ್ರಿ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ, ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಬೆಳಿಗ್ಗೆ 10.30

ಪೂರ್ವಭಾವಿ ಸಭೆ: 2ಎ ಮೀಸಲಾತಿ ಯಥಾಸ್ಥಿತಿ ಕಾಪಾಡುವಿಕೆ, ಉದ್ಘಾಟನೆ: ಬಿ.ಕೆ. ಹರಿಪ್ರಸಾದ್, ಮುಖ್ಯ ಅತಿಥಿ: ಮಾಲೀಕಯ್ಯ ಗುತ್ತೇದಾರ್, ಎಂ.ಡಿ. ಲಕ್ಷ್ಮೀನಾರಾಯಣ, ಕೆ.ಎಂ. ರಾಮಚಂದ್ರಪ್ಪ, ನೆ.ಲ. ನರೇಂದ್ರ ಬಾಬು, ಸತೀಶ್ ಸೈಲ್, ಆಯೋಜನೆ: ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಹಿತರಕ್ಷಣಾ ಸಂಘ, ಸ್ಥಳ: ಗಾಂಧಿ ಭವನ, ಬೆಳಿಗ್ಗೆ 11

ವೆಬಿನಾರ್: ಮಾಧ್ಯಮ ಮಂಥನ–2: 'ಮುದ್ರಣ ಮಾಧ್ಯಮ ಡಿಜಿಟಲ್ ರೂಪಾಂತರದ ಸಾಧ್ಯತೆ ಸವಾಲುಗಳು', ಮಾತನಾಡುವವರು: ರವೀಂದ್ರ ಭಟ್ಟ, ಆಯೋಜನೆ: ಬದುಕು ಸೆಂಟರ್ ಫಾರ್ ಲೈವ್ಲಿಹುಡ್ಸ್ ಲರ್ನಿಂಗ್, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ವೈದ್ಯಕೀಯ ವಿದ್ಯಾರ್ಥಿಗಳ ಅಭಿನಂದನಾ ಸಮಾರಂಭ: ಸಾನ್ನಿಧ್ಯ: ಸಿದ್ದರಾಮಾನಂದಪುರಿ ಸ್ವಾಮೀಜಿ, ಯೋಗೇಶ್ವರಾನಂದ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಮುಖ್ಯ ಅತಿಥಿ: ಆರ್. ಶಂಕರ್, ಎಚ್.ಎಂ. ರೇವಣ್ಣ, ಡಾ.ಎಂ. ನಾಗರಾಜ್, ಕೆ.ಎಂ. ರಾಮಚಂದ್ರಪ್ಪ, ಆಯೋಜನೆ: ಕರ್ನಾಟಕ ಪ್ರದೇಶ ಕುರುಬರ ಸಂಘ, ಸ್ಥಳ: ಕನಕ ಭವನ, ಜಟ್ಟಿಗರಹಳ್ಳಿ, ಬನಶಂಕರಿ 6ನೇ ಹಂತ, ಬೆಳಿಗ್ಗೆ 11

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಸಾಧನೆಗೈದ ಅಂಧ ಮಹಿಳೆಯರಿಗೆ ಸನ್ಮಾನ: ಉದ್ಘಾಟನೆ: ಕೆ. ಪೂರ್ಣಿಮಾ, ಅಧ್ಯಕ್ಷತೆ: ನಾಗಮಣಿ ಎಚ್.ಬಿ., ಧ್ವನಿಸುರುಳಿ ಬಿಡುಗಡೆ: ಜೈನಾ ಕೊಠಾರಿ, ಆಯೋಜನೆ: ಕರ್ನಾಟಕ ರಾಜ್ಯ ಸರ್ಕಾರಿ ಅಂಧ ನೌಕರರ ಸಂಘ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಬೆಳಿಗ್ಗೆ 11

ಉದಯ ಸ್ಮೃತಿ 88: ಉದಯ್ ಕುಮಾರ್ ಅವರ 88ನೇ ಜಯಂತಿಯ ನೆನಪು, ಉದ್ಘಾಟನೆ: ಎಂ. ಕೃಷ್ಣಪ್ಪ, ಮುಖ್ಯ ಅತಿಥಿಗಳು: ಶಿವರಾಮ್, ಡಾ. ಬಾಬೂ ಕೃಷ್ಣಮೂರ್ತಿ, ಗಿರಿಜಾ ಲೋಕೇಶ್, ಡಾ. ಶ್ರೀಧರ್, ನೆ.ಲ. ನರೇಂದ್ರಬಾಬು, ಶ್ರೀರಾಮ್ ಆರ್., ಪಿ.ಎಲ್. ವೆಂಕಟರಾಮ ರೆಡ್ಡಿ, ವಿ. ಮನೋಹರ್, ಸುಬ್ರಮಣ್ಯ ಶರ್ಮಾ, ಉದಯ ಸ್ಮೃತಿ ಗೌರವ: ವೀಣಾ ಮತ್ತು ನಾಗರಾಜ್, ಬಿ.ಎಸ್. ಅರುಣ್ ಕುಮಾರ್, ಬಿ.ಪಿ. ಬಾಲಾಜಿ, ಪ್ರದೀಪಚಂದ್ರ ಕುತ್ಪಾಡಿ, ಆಯೋಜನೆ: ಉದಯ ಕಲಾನಿಕೇತನ ಸಂಘ, ಸ್ಥಳ: ಸಂಘದ ರಂಗ ಮಂದಿರದ ಆವರಣ, 3ನೇ ಅಡ್ಡ ರಸ್ತೆ, ಅನ್ನಪೂರ್ಣೇಶ್ವರಿ ಬಡಾವಣೆ, ಚುಂಚಘಟ್ಟ ರಸ್ತೆ, ಸಂಜೆ 5.30

ಗುಡಿಸಲಿಗೆ ಬೆಂಕಿ: ಕುರಿ, ಮೇಕೆ ಕರಕಲು

ಗೌರಿಬಿದನೂರು: ತಾಲ್ಲೂಕಿನ ಡಿ.ಪಾಳ್ಯ ಹೋಬಳಿಯ ಪುಲಮಾಕಲಹಳ್ಳಿಯಲ್ಲಿ ಶನಿವಾರ ರಾತ್ರಿ ಗುಡಿಸಲಿಗೆ ಬಿದ್ದ ಆಕಸ್ಮಿಕ ಬೆಂಕಿಯಲ್ಲಿ ಸುಮಾರು 60ಕ್ಕೂ ಹೆಚ್ಚು ಕುರಿ, 20 ಮೇಕೆ ಮತ್ತು ನಾಲಕ್‌ಉ ಜಾನುವಾರು ಸುಟ್ಟು ಕರಕಲಾಗಿವೆ.

ಗಂಗಾಧರಪ್ಪ ಎಂಬ ರೈತನ ಹಲ್ಲಿನ ಗುಡಿಸಲಿಗ ಬೆಂಕಿ ತಗುಲಿ, ಗುಡಿಸಲಿನ ಒಳಗಿದ್ದ 60 ಕ್ಕೂ ಹೆಚ್ಚು ಕುರಿ ಸಂಪೂರ್ಣವಾಗಿ ಸುಟ್ಟು ಕರಕಲಾಗಿವೆ. ಪಕ್ಕದ ಗುಡಿಸಲಿನಲ್ಲಿದ್ದ ಅಶ್ವತ್ಥಪ್ಪ ಅವರಿಗೆ ಸೇರಿದ 20 ಮೇಕೆ ಕೂಡ ಬೆಂಕಿಗಾಹುತಿಯಾಗಿವೆ ಎಂದು ಪ್ರತ್ಯಕ್ಷದರ್ಶಿಗಳು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಪುಲಮಾಕಲಹಳ್ಳಿಯಲ್ಲಿ ನಡೆದ ಬೆಂಕಿ ಅವಘಡದಲ್ಲಿ ಸುಟ್ಟು ಕರಕಲಾದ ಕುರಿಗಳು

ಜಲ ಸಂಪನ್ಮೂಲ ಇಲಾಖೆ ಅಧಿಕಾರಿಗಳಿಂದ ಪರಿಶೀಲನೆ

ಗದಗ ಜಿಲ್ಲೆಗೆ ಬೇಡ್ತಿ ನದಿ ನೀರು ಹರಿಸಲು ಚಿಂತನೆ

• ಚಿರಂಜೀವಿ ಕುಲಕರ್ಣಿ

ಬೆಂಗಳೂರು: 'ಎತ್ತಿನಹೊಳೆ ಮಾದರಿ'ಯಲ್ಲಿ ಬೇಡ್ತಿ ನದಿ ತಿರುವು ಯೋಜನೆಯನ್ನು ಹೊಸ ಸ್ವರೂಪದಲ್ಲಿ ಕೈಗೆತ್ತಿಕೊಳ್ಳುವ ಕುರಿತು ಜಲ ಸಂಪನ್ಮೂಲ ಇಲಾಖೆ ಚಿಂತನೆ ನಡೆಸಿದೆ.

ಬೇಡ್ತಿ– ವರದಾ ನದಿಗಳನ್ನು ಜೋಡಣೆ ಮಾಡುವ ಪ್ರಸ್ತಾವವನ್ನು 25 ವರ್ಷಗಳ ಹಿಂದೆ ಸಿದ್ಧಪಡಿಸಲಾಗಿತ್ತು. ಈ ಯೋಜನೆಯಡಿ ಬೇಡ್ತಿ ನದಿಯ ನೀರನ್ನು ವರದಾ ನದಿಗೆ ಹರಿಸಿ ಬಳಿಕ ತುಂಗ ಭದ್ರಾ ಎಡದಂಡೆ ಕಾಲುವೆಗಳಿಗೆ ಹರಿಸುವ ಪ್ರಸ್ತಾವವಿತ್ತು. ಈಗ ಬೇಡ್ತಿ ನದಿಯ 'ಹೆಚ್ಚುವರಿ' ನೀರನ್ನು ಏತ ನೀರಾವರಿ ಮೂಲಕ ಗದಗ ಜಿಲ್ಲೆಯ ಹಿರೇವಡ್ಡಟ್ಟಿ ಬಳಿಗೆ ಹರಿಸುವ ಚಿಂತನೆ ನಡೆದಿದೆ.

ಬೇಡ್ತಿ ನದಿ ತಿರುವು ಯೋಜನೆಗೆ 25 ವರ್ಷಗಳಿಂದಲೂ ಉತ್ತರ ಕನ್ನಡ ಜಿಲ್ಲೆಯ ಜನರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಈಗಲೂ ಅಲ್ಲಿನ ಜನರು ಮತ್ತು ಪರಿಸರವಾದಿಗಳು ಪ್ರಸ್ತಾವಿತ ಯೋಜನೆ ಕುರಿತು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರೀಯ ಜಲ ಅಭಿವೃದ್ಧಿ ಏಜೆನ್ಸಿ (ಎನ್‌ಡಬ್ಲ್ಯುಡಿಎ), ಪಶ್ಚಿಮ ಘಟ್ಟದ ನದಿಗಳಲ್ಲಿ ಹರಿಯುವ ಹೆಚ್ಚುವರಿ ನೀರನ್ನು ಬಳಸಿಕೊಳ್ಳಲು 1995ರಲ್ಲಿ ಯೋಜನೆ ರೂಪಿಸಿತ್ತು. ಅದರ ಭಾಗವಾಗಿ, ಬೇಡ್ತಿ ನದಿಯಿಂದ 8.5 ಟಿಎಂಸಿ ಅಡಿ ನೀರನ್ನು ವರದಾ ನದಿಗೆ ಹರಿಸಲು ಪೂರ್ವ ಕಾರ್ಯಸಾಧ್ಯತಾ ವರದಿಯನ್ನೂ ಸಿದ್ಧಪಡಿಸಿತ್ತು.

ಈ ಯೋಜನೆಗೆ ಅನುಮತಿ ಕೋರಿ ಕರ್ನಾಟಕ ನೀರಾವರಿ ನಿಗಮ ಕೇಂದ್ರ ಪರಿಸರ ಇಲಾಖೆಗೆ ಪ್ರಸ್ತಾವವನ್ನೂ ಸಲ್ಲಿಸಿತ್ತು. ಆದರೆ, ಬೇಡ್ತಿ ಮತ್ತು ಅಘನಾಶಿನಿ ಕಣವೆ ಸಂರಕ್ಷಣಾ ಸಮಿತಿಯು ಸೋಂದಾ ಸ್ವರ್ಣವಲ್ಲಿ ಮಠಾಧೀಶರು ಹಾಗೂ ಸ್ಥಳೀಯ ಜನ ಪ್ರತಿನಿಧಿಗಳ ಬೆಂಬಲದೊಂದಿಗೆ ಬೃಹತ್ ಹೋರಾಟ ಸಂಘಟಿಸಿದ್ದರಿಂದ ಯೋಜನೆಯಿಂದ ಹಿಂದಕ್ಕೆ ಸರಿದಿತ್ತು.

'ಈಗ ಬೇಡ್ತಿ ನದಿಯ ಎರಡು ಕವಲುಗಳಿಂದ 8.5 ಟಿಎಂಸಿ ಅಡಿ ನೀರನ್ನು ಹಿರೇವಡ್ಡಟ್ಟಿಗೆ ಹರಿಸುವ ಕುರಿತು ರಾಜ್ಯ ಸರ್ಕಾರ ಪರಿಶೀಲಿಸುತ್ತಿದೆ. ಅಲ್ಲಿ 100 ಟಿಎಂಸಿ ಅಡಿಗಳಷ್ಟು ನೀರನ್ನು ಸಂಗ್ರಹಿಸಲು ಅವಕಾಶವಿದೆ' ಎಂದು ಜಲ ಸಂಪನ್ಮೂಲ ಇಲಾಖೆಯ ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ತುಂಗಭದ್ರಾ ನಾಲೆಗಳ ನೀರು ಹರಿಯದ ರಾಯಚೂರು, ಗದಗ ಮತ್ತು ಕೊಪ್ಪಳ ಜಿಲ್ಲೆಗಳ ಮೂಲೆಯ ಹಳ್ಳಿಗಳಿಗೆ ಕುಡಿಯುವ ನೀರು ಪೂರೈಸಲು ಬೇಡ್ತಿ ನದಿಯಿಂದ 22 ಟಿಎಂಸಿ ಅಡಿಗಳಷ್ಟು ಹೆಚ್ಚುವರಿ ನೀರನ್ನು ಬೇಡ್ತಿ ಮತ್ತು ಅಘನಾಶಿನಿ ನದಿಗಳಿಂದ ಏತ ನೀರಾವರಿ ಮೂಲಕ ಕೊಂಡೊಯ್ಯಲು ಯೋಚಿಸಿದ್ದೇವೆ. ಶಿರಸಿ ಬಳಿಯಿಂದ ನೀರನ್ನು ಎತ್ತಿ 100 ಕಿ.ಮೀ. ದೂರದವರೆಗೆ ಕೊಳವೆಗಳ ಮೂಲಕ ನೀರನ್ನು ಸಾಗಿಸುವ ಕಾಮಗಾರಿಗಳನ್ನು ಪ್ರಸ್ತಾವಿತ ಯೋಜನೆ ಒಳಗೊಂಡಿದೆ' ಎಂದು ಅವರು ಹೇಳಿದ್ದಾರೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಈ ಯೋಜನೆಯ ಕುರಿತು ಬಜೆಟ್‌ನಲ್ಲಿ ಸೂಚ್ಯವಾಗಿ ಪ್ರಸ್ತಾಪಿಸಿದ್ದಾರೆ.

ಬಳಿಕ ಉತ್ತರ ಕನ್ನಡ ಜಿಲ್ಲೆಯ ಪರಿಸರವಾದಿಗಳು ತೀವ್ರ ವಿರೋಧವನ್ನೂ ವ್ಯಕ್ತಪಡಿಸಿದ್ದಾರೆ.

ಇದೇ 24ಕ್ಕೆ ಸಭೆ

'ಎತ್ತಿನಹೊಳೆ ಯೋಜನೆಯಲ್ಲಿ ಅಂದಾಜು ಮಾಡಿದ್ದ ಪ್ರಮಾಣದ ಅರ್ಧದಷ್ಟು ನೀರನ್ನೂ ಪಡೆಯಲು ಈವರೆಗೆ ಸಾಧ್ಯವಾಗಿಲ್ಲ. ಆದರೆ, ಯೋಜನೆಯಿಂದ ಪರಿಸರಕ್ಕೆ ಯಾವ ಪ್ರಮಾಣದ ಹಾನಿಯಾಗಿದೆ ಎಂಬುದನ್ನು ನೋಡಿದ್ದೇವೆ' ಎಂದು ಅಘನಾಶಿನಿ ಕಣಿವೆ ಸಂರಕ್ಷಣಾ ಸಮಿತಿಯ ವಿಶ್ವೇಶ್ವರ ಹೆಗ್ಡೆ ಪ್ರತಿಕ್ರಿಯಿಸಿದರು.

ಶಿರಸಿ ಸುತ್ತಮುತ್ತಲ ಪರಿಸರಕ್ಕೆ ತೀವ್ರವಾದ ಹಾನಿಯಾಗಲಿದೆ. ಅಧಿಕಾರಿಗಳು ಹೆಚ್ಚುವರಿ ನೀರು ಎಂದು ಅಂದಾಜು ಮಾಡಿರುವುದರಲ್ಲೇ ಸಂಪೂರ್ಣ ತಪ್ಪಾಗಿದೆ. ಯೋಜನೆಯ ವಿರುದ್ಧ ಹೋರಾಟದ ಕುರಿತು ಚರ್ಚಿಸಲು ಮಾರ್ಚ್ 24ರಂದು ಬೃಹತ್ ಸಭೆಯನ್ನೂ ಕರೆಯಲಾಗಿದೆ ಎಂದರು.

'ಇದು ಶಿರಸಿ ಮತ್ತು ಹಾವೇರಿ ನಡುವಣ ವಿಷಯವಲ್ಲ. ನೀರು ಎಲ್ಲರಿಗೂ ಮುಖ್ಯವೇ. ಪಶ್ಚಿಮ ಘಟ್ಟ ಹಾಗೂ ಅಲ್ಲಿನ ನದಿಗಳಲ್ಲಿನ ನೀರಿನ ಲಭ್ಯತೆಯ ಕುರಿತು ಮೊದಲು ವೈಜ್ಞಾನಿಕವಾದ ಅಧ್ಯಯನ ನಡೆಯಬೇಕು. ಈಗ ರೂಪಿಸುತ್ತಿರುವ ಯೋಜನೆ ಅವೈಜ್ಞಾನಿವಾದುದು ಮತ್ತು ಸುಸ್ಥಿರವಲ್ಲದ್ದು' ಎಂದು ಶಿರಸಿಯ ಜೀವವಿಜ್ಞಾನಿ ಕೇಶವ ಎಚ್. ಕೊರ್ಸೆ ಹೇಳಿದರು.

'ಪಶ್ಚಿಮ ಘಟ್ಟದಿಂದ ಸಿಹಿ ನೀರು ಸಮುದ್ರ ತಲುಪಿದರೆ ಮಾತ್ರ ಸಮುದ್ರದಲ್ಲಿ ಜೀವಸಂಕುಲ ಅಭಿವೃದ್ಧಿಯಾಗುತ್ತದೆ. ಈಗಾಗಲೇ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಸಮುದ್ರ ಪ್ರದೇಶದಲ್ಲಿ ಮೀನಿನ ಕೊರತೆ ಸೃಷ್ಟಿಯಾಗಿದೆ. ಅಂಕೋಲಾ ಸಮುದ್ರ ತೀರವು ಬೇಡ್ತಿಯ ಹರಿವನ್ನು ಅವಲಂಬಿಸಿದೆ. ಈ ನೀರನ್ನು ಬೇರೆ ಕಡೆಗೆ ಹರಿಸಿದರೆ ಏನಾಗಬಹುದು ಎಂಬುದು ಆಲೋಚಿಸಬೇಕಾದ ವಿಚಾರ' ಎಂದರು.

ಬಹುಗ್ರಾಮ ಎಂಬ ಬಹುವೈಫಲ್ಯ ಯೋಜನೆ

ಕೋಟಿ ಸುರಿದರೂ ಗ್ರಾಮಗಳಿಗೆ ಬಾರದ ನೀರು

• ಮನೋಜಕುಮಾರ್ ಗುದ್ದಿ

ಕಲಬುರ್ಗಿ: ಗ್ರಾಮೀಣ ಪ್ರದೇಶದ ಪ್ರತಿ ಮನೆಗೂ ಶುದ್ಧ ಕುಡಿಯುವ ನೀರು ಪೂರೈಸಲು ರೂಪಿಸಿರುವ ಬಹುಗ್ರಾಮ ಕುಡಿಯುವ ನೀರಿನ ಬಹುಪಾಲು ಯೋಜನೆಗಳು ಕಳಪೆ ಕಾಮಗಾರಿ, ಸಮನ್ವಯ ಮತ್ತು ನಿರ್ವಹಣೆ ಕೊರತೆ, ಅವೈಜ್ಞಾನಿಕವಾಗಿ ಜಲಮೂಲಗಳ ಆಯ್ಕೆಯ ಕಾರಣಗಳಿಂದ ಯಶಸ್ಸು ಕಂಡಿಲ್ಲ.

ಅಫಜಲಪುರ ತಾಲ್ಲೂಕಿನ ಅಳ್ಳಗಿ ಮತ್ತು ಇತರ ಆರು ಗ್ರಾಮಗಳಿಗೆ ನೀರು ಪೂರೈಸಲು 2014ರಲ್ಲಿ ₹ 5.16 ಕೋಟಿ ವೆಚ್ಚದಲ್ಲಿ ಸಿವಿಲ್ ಕಾಮಗಾರಿ ಮುಗಿಸಲಾಗಿದೆ. ಇದಕ್ಕೆ ಎಕ್ಸ್‌ಪ್ರೆಸ್ ಫೀಡರ್‌ನಿಂದ ವಿದ್ಯುತ್ ಸಂಪರ್ಕ ಕಲ್ಪಿಸಲು ಜೆಸ್ಕಾಂಗೆ ₹ 67 ಲಕ್ಷ ಪಾವತಿ ಮಾಡಲಾಗಿದೆ. ಆದರೂ, ವಿದ್ಯುತ್ ಸಂಪರ್ಕ ಸಿಕ್ಕಿಲ್ಲ.

ಬಂದರವಾಡ ಗ್ರಾಮದಲ್ಲಿ ₹1.20 ಕೋಟಿ ವೆಚ್ಚದಲ್ಲಿ ಪೈಪ್‌ಲೈನ್, ಪಂಪ್‌ಹೌಸ್, ಎರಡು ಓವರ್‌ಹೆಡ್ ಟ್ಯಾಂಕ್ ನಿರ್ಮಿಸಲಾಗಿದೆ. ಆದರೆ, ಒಮ್ಮೆಯೂ ಅಲ್ಲಿ ನೀರು ಹರಿದಿಲ್ಲ. ಇದೀಗ ಮತ್ತೊಂದು ಯೋಜನೆಯಡಿ ಗ್ರಾಮಕ್ಕೆ ನೀರು ಪೂರೈಸಲಾಗುತ್ತಿದೆ.

ಜೇವರ್ಗಿ ತಾಲ್ಲೂಕಿನ ಮಲ್ಲಾ (ಕೆ) ಮತ್ತು ಒಂಬತ್ತು ಗ್ರಾಮಗಳಿಗೆ ನೀರು ಪೂರೈಕೆ ಯೋಜನೆಯನ್ನು ₹ 3.75 ಕೋಟಿ, ಇಟಗಾ ಮತ್ತು ಇತರ ಒಂಬತ್ತು ಗ್ರಾಮಗಳಿಗೆ ₹ 2.55 ಕೋಟಿ ವೆಚ್ಚದಲ್ಲಿ ಯೋಜನೆ ಪೂರ್ಣಗೊಳಿಸಿ ಗ್ರಾಮ ಪಂಚಾಯಿತಿಗೆ ಹಸ್ತಾಂತರ ಮಾಡಲಾಗಿದೆ. ಆದರೆ, ನಿರ್ವಹಣೆ ಇಲ್ಲದ ಕಾರಣ ನೀರು ಪೂರೈಕೆ ಆಗುತ್ತಿಲ್ಲ.

ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ಯೋಜನಾ ಮೊತ್ತ ₹ 50 ಲಕ್ಷದಿಂದ ₹ 5 ಕೋಟಿಯವರೆಗೂ ಇದೆ. ನದಿಗಳನ್ನು ಮೂಲವಾಗಿಟ್ಟುಕೊಂಡು ರೂಪಿಸಿರುವ ಬಹುಪಾಲು ಯೋಜನೆಗಳು ಯಶಸ್ವಿಯಾಗಿವೆ. ಆದರೆ, ನದಿಯಲ್ಲಿ ಎತ್ತರದಲ್ಲಿ ಜಾಕ್‌ವೆಲ್ ನಿರ್ಮಿಸಿರುವುದು, ನದಿ ದೂರ ಎಂಬ ಕಾರಣಕ್ಕೆ ಹಳ್ಳ-ಬಾವಿಗಳನ್ನೇ ಮೂಲವಾಗಿಟ್ಟುಕೊಂಡು ರೂಪಿಸಿರುವ ಕೆಲ ಯೋಜನೆಗಳಿಂದ ಬೇಸಿಗೆಯಲ್ಲಿ ಹನಿ ನೀರೂ ಸಿಗದ ಸ್ಥಿತಿ ಉಂಟಾಗಿದೆ. ಕೆಲವೆಡೆ ಯೋಜನೆ ಯಶಸ್ವಿಯಾಗಿದ್ದರೂ ಕೊನೆಯ ಹಂತಕ್ಕೆ ನೀರು ಸಿಗುತ್ತಿಲ್ಲ.

ಚಿಂಚೋಳಿ ತಾಲ್ಲೂಕಿನ ಚಂದನಕೇರಾ, ಚೇಂಗಟಾ, ಐನಾಪುರ ಹಾಗೂ ರುಮ್ಮನಗೂಡ ಗ್ರಾಮ ಪಂಚಾಯಿತಿಗಳ 12 ಗ್ರಾಮಗಳಿಗೆ ನೀರು ಪೂರೈಸುವ ಚಂದನಕೇರಾ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ ಯಶಸ್ಸು ಕಂಡಿದೆ. ಆದರೆ, ಚಂದನಕೇರಾ ಗ್ರಾಮದ ರಾಮಗೊಂಡರ ಬಡಾವಣೆಯಲ್ಲಿ ನೀರೇ ಸಿಗದ ಸ್ಥಿತಿಯಿದೆ. ಯೋಜನೆ ಅನುಷ್ಠಾನಗೊಳಿಸಿ ಆರು ವರ್ಷಗಳು ಕಳೆಯುತ್ತಿದ್ದರೂ ಈ ಬಡಾವಣೆಗೆ ಹನಿ ನೀರೂ ಬಂದಿಲ್ಲ. ‘ಗ್ರಾಮದಲ್ಲಿ ಅವೈಜ್ಞಾನಿಕವಾಗಿ ಕೊಳವೆ ಅಳವಡಿಸಿರುವುದು ಹಾಗೂ ಮಾರ್ಗ ಮಧ್ಯೆ ನೀರು ಪೋಲಾಗುತ್ತಿರುವುದು ಇದಕ್ಕೆ ಕಾರಣ’ ಎಂದು ದೂರುತ್ತಾರೆ ಚಂದನಕೇರಾದ ಯುವ ಮುಖಂಡ ದತ್ತಾತ್ರೇಯ ರಾಯಗೋಳ ಹಾಗೂ ವಕೀಲ ಪ್ರಕಾಶ ಬೋಯಿ.

ಇದೆಲ್ಲಕ್ಕಿಂತ ದೊಡ್ಡ ಸಮಸ್ಯೆ ಎಂದರೆ ಸ್ಥಳೀಯ ಪ್ರಭಾವಿಗಳು ಗುತ್ತಿಗೆ- ಉಪ ಗುತ್ತಿಗೆ ಕಾಮಗಾರಿ ನಿರ್ವಹಿಸುವುದು ಮತ್ತು ‘ಪಾಲುದಾರರು’ ಹೆಚ್ಚಿರುವುದು. ಇದಕ್ಕೆ ಅಪವಾದ ಎಂಬಂತೆ ಶಾಸಕರು ಕ್ರಿಯಾಶೀಲವಾಗಿರುವ ಕ್ಷೇತ್ರಗಳಲ್ಲಿ ಈ ಯೋಜನೆಗಳು ಯಶಸ್ವಿಯಾಗಿ ಮುನ್ನಡೆಯುತ್ತಿವೆ.

ಕಲಬುರ್ಗಿ ಜಿಲ್ಲೆ ಚಿಂಚೋಳಿ ತಾಲ್ಲೂಕು ಚಂದನಕೇರಾ ಬಹುಗ್ರಾಮ ಕುಡಿವ ನೀರಿನ ಯೋಜನೆ ಜಾಕ್‌ವೆಲ್

ನಿರ್ವಹಣೆಯ ಕೊರತೆ

ಜಿಲ್ಲಾ ಪಂಚಾಯಿತಿಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಯೋಜನೆಯನ್ನು ಪೂರ್ಣಗೊಳಿಸಿ ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸುತ್ತದೆ. ನಂತರ ಅದನ್ನು ನಿರ್ವಹಣೆ ಮಾಡಿಕೊಂಡು ಹೋಗಬೇಕಾದ ಹೊಣೆ ಗ್ರಾಮ ಪಂಚಾಯಿತಿಯದ್ದು. ಇದಕ್ಕಾಗಿ ಆ ಗ್ರಾಮ ಪಂಚಾಯಿತಿಯ ಹಿರಿಯ ಸದಸ್ಯರೊಬ್ಬರ ನೇತೃತ್ವದಲ್ಲಿ ನಿರ್ವಹಣಾ ಸಮಿತಿಯನ್ನೂ ರಚಿಸಲಾಗಿರುತ್ತದೆ. ಪ್ರತಿ ಮೂರು ತಿಂಗಳಿಗೊಮ್ಮೆ ಸಮಿತಿ ಸಭೆ ಸೇರಿ ಕರ ವಸೂಲಿಯಿಂದ ಬಂದ ಹಣವನ್ನು ನೀರು ಪೂರೈಕೆ ಜಾಲದ ದುರಸ್ತಿಗಾಗಿ ಬಳಸಬೇಕು. ಆದರೆ, ಬಹುತೇಕ ಪಂಚಾಯಿತಿಗಳಲ್ಲಿ ಈ ಕಾರ್ಯ ನಡೆಯುತ್ತಿಲ್ಲ ಎನ್ನುತ್ತಾರೆ ಗ್ರಾಮೀಣಾಭಿವೃದ್ಧಿ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು.

ಒಂದು ಯೋಜನೆ ವ್ಯಾಪ್ತಿಯಲ್ಲಿ 2–3 ಗ್ರಾಮ ಪಂಚಾಯಿತಿಗಳು ಬರುತ್ತವೆ. ಹೀಗಿದ್ದಾಗ ಇಲ್ಲಿ ಸಮನ್ವಯ ಸಾಧ್ಯವಾಗುವುದಿಲ್ಲ. ಮೇಲಾಗಿ ಹಸ್ತಾಂತರಿಸಿದ ನಂತರ ಈ ಯೋಜನೆಗಳತ್ತ ಇಲಾಖೆಯವರು ತಿರುಗಿಯೂ ನೋಡುವುದಿಲ್ಲ ಎಂಬುದು ಗ್ರಾಮ ಪಂಚಾಯಿತಿಗಳವರ ಪ್ರತ್ಯಾರೋಪ.

ಕಲಬುರ್ಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಬಂಗರವಾಡ ಗ್ರಾಮದಲ್ಲಿ ನಿರ್ಮಿಸಿರುವ ನೀರಿನ ಟ್ಯಾಂಕ್

ನಾಲ್ಕೈದು ವರ್ಷಗಳ ಹಿಂದೆ ಇಟಗಾ, ಸಿದ್ನಳ್ಳಿ, ಅಂಕಲಗಾ, ಬೋಸಗಾ ಗ್ರಾಮಗಳಿಗೆ ನೀರು ಕೊಡುವುದಾಗಿ ಪೈಪ್‌ಲೈನ್ ಹಾಕಿದ್ದರು. ಅದರಿಂದ ನೀರು ಬರಲೇ ಇಲ್ಲ. ಆಗ ಇದ್ದ ಅಧಿಕಾರಿಗಳು ವರ್ಗಾವಣೆಯಾಗಿ ಹೋಗಿದ್ದಾರೆ., ಕೋಟ್ಯಂತರ ರೂಪಾಯಿ ಖರ್ಚು ಮಾಡಿದರೂ ನೀರು ಸಿಗಲಿಲ್ಲ

ಕಾಂತು ಸುಭಾಷ್, ಇಟಗಾ, ಕಲಬುರ್ಗಿ ಜಿಲ್ಲೆ

ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಪೈಪ್ ಅಳವಡಿಸಿ, ಓವರ್‌ಹೆಡ್ ಟ್ಯಾಂಕ್ ಕಟ್ಟಿಸಿದರೂ ನಮ್ಮೂರಿಗೆ ನೀರು ಹರಿಯಲಿಲ್ಲ. ಅಧಿಕಾರಿಗಳ ಬೆನ್ನುಬಿದ್ದರೂ ಪ್ರಯೋಜನವಾಗಲಿಲ್ಲ. ಸಾಕಷ್ಟು ಭ್ರಷ್ಟಾಚಾರ ನಡೆಸಿ ಹಣ ಎತ್ತಿ ಹಾಕಿದ್ದರಿಂದ ಯೋಜನೆ ವಿಫಲವಾಗಿದೆ

ರಾಜೇಂದ್ರ ಸರ್ದಾರ್, ಬಂದರವಾಡ, ಕಲಬುರ್ಗಿ ಜಿಲ್ಲೆ

ವಿಫಲಗೊಂಡ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಜಲನಿರ್ಮಲ ಯೋಜನೆಯಡಿ ಕೈಗೆತ್ತಿಕೊಂಡು ಹಳ್ಳಿಗಳಿಗೆ ನೀರು ಪೂರೈಕೆ ಮಾಡಲಾಗುತ್ತಿದೆ. ಹಳೆಯ ಯೋಜನೆ ಏಕೆ ವಿಫಲವಾದವು ಎನ್ನುವ ಬಗ್ಗೆ ಮಾಹಿತಿ ಇಲ್ಲ

ಅಹ್ಮದ್ ಅಜೀಜುದ್ದೀನ್,
ಕಾರ್ಯನಿರ್ವಾಹಕ ಎಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರ್ಗಿ

ಹಾಳಾಗಿಹೋದ ಪೈಪ್‌ಗಳು

ಕಲಬುರ್ಗಿ ಜಿಲ್ಲೆಯಲ್ಲಿ ಅನುಷ್ಠಾನಗೊಂಡ ಕೆಲ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ ಬಳಸಲಾದ ಪಿವಿಸಿ ಪೈಪ್‌ಗಳು ನೆಲದಲ್ಲೇ ಹಾಳಾಗಿ ಹೋಗಿವೆ. ಈ ಕುರಿತು ರಿಯಾಲಿಟಿ ಚೆಕ್ ನಡೆಸಲು ‘ಪ್ರಜಾವಾಣಿ’ ಅಫಜಲಪುರ ತಾಲ್ಲೂಕಿನ ಬಂದರವಾಡ, ದೇವಲ ಗಾಣಗಾಪುರ, ಜೇವರ್ಗಿ ತಾಲ್ಲೂಕಿನ ಇಟಗಾ, ಬೋಸಗಾ (ಕೆ) ಗ್ರಾಮಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಆ ಗ್ರಾಮಗಳ ಕೆಲವು ಗ್ರಾಮಸ್ಥರು ಇದನ್ನು ಹೇಳಿಕೊಂಡರು.

‘ಇದು ಪೈಪ್‌ಗಳ ಉತ್ಪಾದಕರಿಗೆ ಲಾಭ ಮಾಡುವ ಯೋಜನೆ. ವಿದ್ಯುತ್ ಬಿಲ್ಲು ಸಂದಾಯದ್ದೇ ದೊಡ್ಡ ರಗಳೆ. ಇಂತಹ ಯೋಜನೆಗಳ ಬದಲು ಸ್ಥಳೀಯವಾಗಿಯೇ ಅಂತರ್ಜಲ ವೃದ್ಧಿಸುವ ಯೋಜನೆಗಳು ಬೇಕು’ ಎನ್ನುತ್ತಾರೆ ಮಾಜಿ ಶಾಸಕ ಬಿ.ಆರ್. ಪಾಟೀಲ.

ಹೂವಿನಹಡಗಲಿ ತಾಲ್ಲೂಕಿನ ಲಿಂಗನಾಯಕನಹಳ್ಳಿ ಸಮೀಪ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ನಿರ್ಮಿಸಲಾಗಿರುವ ಜಾಕ್‌ವೆಲ್

12 ಗ್ರಾಮಕ್ಕೆ ‘ಬಹುಗ್ರಾಮ ಯೋಜನೆ’ ಆಸರೆ

• ಶಶಿಕಾಂತ ಎಸ್. ಶೆಂಬೆಳ್ಳಿ

ವಿಜಯನಗರ (ಹೊಸಪೇಟೆ): ವರ್ಷದ ಎಲ್ಲ ದಿನಗಳಲ್ಲೂ ಟ್ಯಾಂಕರ್ ಮೂಲಕವೇ ನೀರು ಕಾಣುತ್ತಿದ್ದ ಗ್ರಾಮಗಳಲ್ಲಿ ಈಗ ನಿತ್ಯ ಜಲಧಾರೆ ಹರಿಯುತ್ತಿದೆ.

ಕುಡಿಯುವ ನೀರಿನ ನಿರೀಕ್ಷೆಯಲ್ಲಿ ಟ್ಯಾಂಕರ್‌ಗಾಗಿ ಗ್ರಾಮಸ್ಥರು ಕಾದು ಕೂರುವ ದಿನಗಳು ದೂರವಾಗಿವೆ. ಟ್ಯಾಂಕರ್ ಹಿಂದೆ ಕೊಡ ಹಿಡಿದು ಮನೆ ಮಂದಿ ಓಡಾಡುವ ಬವಣೆ ತಪ್ಪಿದೆ. ಕುಡಿಯುವ ನೀರಿಗೆ ಇನ್ನಿಲ್ಲದಂತೆ ಪರಿತಪಿಸುತ್ತಿದ್ದ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನ ಹನ್ನೆರಡು ಗ್ರಾಮಗಳಲ್ಲಿ ಈಗ ನೀರಿನ ಸಮಸ್ಯೆ ಸಂಪೂರ್ಣ ನೀಗಿದೆ. ಕಡು ಬೇಸಿಗೆಯಲ್ಲೂ ಗ್ರಾಮಸ್ಥರಿಗೆ ಶುದ್ಧ ಕುಡಿಯುವ ನೀರು ಪೂರೈಕೆಯಾಗುತ್ತಿದೆ.

ಹೂವಿನಹಡಗಲಿ ತಾಲ್ಲೂಕಿನ ಹರವಿ, ಹರವಿ ಬಸಾಪುರ, ಬೂದನೂರು, ಸಿದ್ದಾಪುರ, ಲಿಂಗನಾಯಕನಹಳ್ಳಿ, ಲಿಂಗನಾಯಕನಹಳ್ಳಿ ತಾಂಡಾ, ಗುಂಗರಗಟ್ಟಿ, ಕುರುವತ್ತಿ ಪ್ಲಾಟ್, ನಡುವಿನಹಳ್ಳಿ, ಕಳಸಾಪುರ, ದಾಸನಹಳ್ಳಿ ಹಾಗೂ ಹ್ಯಾರಡ ಗ್ರಾಮಗಳಿಗೆ ತುಂಗಭದ್ರಾ ನದಿಯಿಂದ ನಿತ್ಯ ಕುಡಿವ ನೀರು ಸರಬರಾಜು ಆಗುತ್ತಿದೆ.

ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ 2014ರಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿತ್ತು. ₹ 7.62 ಕೋಟಿ ಮೊತ್ತದ ಯೋಜನೆಯು 2017ರಲ್ಲಿ ಪೂರ್ಣಗೊಂಡಿತು. ತುಂಗಭದ್ರಾ ನದಿ ದಡದಲ್ಲಿ ಜಾಕ್‌ವೆಲ್ ಅಳವಡಿಸಿ, ನೀರು ಶುದ್ಧೀಕರಣ ಘಟಕದಿಂದ ನೇರವಾಗಿ ಆಯಾ ಗ್ರಾಮಗಳಿಗೆ ಪೈಪ್‌ಲೈನ್ ಮೂಲಕ ನೀರು ಪೂರೈಸಲಾಗುತ್ತಿದೆ. ಬೇಸಿಗೆಯಲ್ಲಿ ನೀರಿಗೆ ಸಮಸ್ಯೆ ಎದುರಾಗದಂತೆ ವಿಶೇಷ ಕ್ರಮಗಳನ್ನು ತೆಗೆದುಕೊಂಡ ಪರಿಣಾಮ, ಕಾಮಗಾರಿ ಪೂರ್ಣಗೊಂಡ ಮೂರು ವರ್ಷಗಳಿಂದ ಹನ್ನೆರಡು ಗ್ರಾಮಗಳಲ್ಲಿ ಇದುವರೆಗೆ ನೀರಿನ ಸಮಸ್ಯೆ ಉದ್ಭವಿಸಿಲ್ಲ.

‘ಇತರೆ ಋತುಗಳಲ್ಲಿ ನೀರಿನ ಸಮಸ್ಯೆ ಉಂಟಾಗುವುದಿಲ್ಲ. ಆದರೆ, ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸುವುದು ಸಾಮಾನ್ಯ. ಜಾತ್ರೆ ಸೇರಿದಂತೆ ಇತರೆ ಕಾರಣಗಳಿಗಾಗಿ ಬೇಸಿಗೆಯಲ್ಲಿ ಜಲಾಶಯದಿಂದ ನದಿಗೆ ನೀರು ಹರಿಸಲಾಗುತ್ತದೆ. ಈ ಸಂದರ್ಭದಲ್ಲಿ ಮರಳಿನ ಚೀಲಗಳನ್ನಿಟ್ಟು, ನದಿಯಲ್ಲಿ ನೀರು ಸಂಗ್ರಹಿಸಿ, ಗ್ರಾಮಗಳಿಗೆ ಪೂರೈಸಲಾಗುತ್ತಿದೆ. ಇದರಿಂದಾಗಿ ವರ್ಷದ ಯಾವ ದಿನವೂ ನೀರಿಗೆ ತೊಂದರೆ ಆಗುತ್ತಿಲ್ಲ’ ಎನ್ನುತ್ತಾರೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಂಜಿನಿಯರ್ ವಿಜಯ ನಾಯ್ಕ.

‘ಹಿಂದೆ ಈ ಗ್ರಾಮಗಳಲ್ಲಿ ಅಂತರ್ಜಲ ಮಟ್ಟ ಸಂಪೂರ್ಣ ಕುಸಿದಿತ್ತು. ಕೊಳವೆಬಾವಿ ಕೊರೆಸಿದರೂ ನೀರು ಸಿಗುತ್ತಿರಲಿಲ್ಲ. ಖಾಸಗಿಯವರಿಗೆ ಹಣ ಕೊಟ್ಟು, ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿತ್ತು. ಅದಕ್ಕಾಗಿ ಪ್ರತಿವರ್ಷ ಕೋಟ್ಯಂತರ ರೂಪಾಯಿ ಖರ್ಚಾಗುತ್ತಿತ್ತು. ಬಹುಗ್ರಾಮ ಯೋಜನೆಯಿಂದ ಅದೆಲ್ಲ ತಪ್ಪಿದೆ. ಉದ್ಯೋಗ ಖಾತ್ರಿ ಯೋಜನೆಯಡಿ ಹ್ಯಾರಡ ಕೆರೆ ತುಂಬಿಸಲಾಗಿದೆ. ದಾಸನಹಳ್ಳಿ, ನಡುವಿನಹಳ್ಳಿ, ಕಳಸಾಪುರದಲ್ಲಿ ಚೆಕ್ ಡ್ಯಾಂ ನಿರ್ಮಿಸಿರುವುದರಿಂದ ಅಂತರ್ಜಲ ವೃದ್ಧಿಸಿದೆ’ ಎಂದು ಹೇಳಿದರು.

ಹೂವಿನಹಡಗಲಿ ತಾಲ್ಲೂಕಿನ ಲಿಂಗನಾಯಕನಹಳ್ಳಿ ಬಳಿ ನಿರ್ಮಿಸಿರುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಜಾಕ್‌ವೆಲ್

ದಾಹ ಇಂಗಿಸದ ಯೋಜನೆ

ಒಂದನೇ ಪುಟದಿಂದ

ಎಲ್ಲಿ ಬೇಕೊ ಅಲ್ಲಿ ಇಲ್ಲ: ಈ ಯೋಜನೆ ಅನುಷ್ಠಾನದ ಬಗ್ಗೆ ಕೇಳಿ ಬರುವ ಇನ್ನೊಂದು ಪ್ರಮುಖ ಆರೋಪ, ನಿಜಕ್ಕೂ ಎಲ್ಲಿಗೆ ಅಗತ್ಯ ಇದೆಯೋ ಅಲ್ಲಿ ಇದನ್ನು ಜಾರಿಗೊಳಿಸುತ್ತಿಲ್ಲ ಎಂಬುದು. ಈ ಯೋಜನೆಯ ಜಾರಿಯ ಕುರಿತು ತೀರ್ಮಾನ ಕೈಗೊ ಳ್ಳುವಾಗ ಕುಡಿಯುವ ನೀರಿನ ಅಗತ್ಯದ ಮಾನದಂಡಕ್ಕಿಂತಲೂ ರಾಜಕೀಯ ಹಿತಾಸಕ್ತಿಗಳೇ ಮೇಲುಗೈ ಸಾಧಿಸುತ್ತಿವೆ.

‘ಈ ಯೋಜನೆ ಅನುಷ್ಠಾನಗೊಳಿಸಲು ಕೆಲವು ಮಾನದಂಡಗಳನ್ನು ಅನುಸರಿಸುತ್ತಿದ್ದೇವೆ. ಪ್ರಮುಖವಾಗಿ, ವರ್ಷಪೂರ್ತಿ ಅಥವಾ ಕನಿಷ್ಠ, ವರ್ಷದ ಏಳೆಂಟು ತಿಂಗಳು ನೀರು ಒದಗಿಸಬಲ್ಲ ಸುಸ್ಥಿರ ಜಲಮೂಲಗಳು ಇರಬೇಕು. ಯೋಜನೆಯ ಜಾರಿ ಆರ್ಥಿಕವಾಗಿಯೂ ಸುಸ್ಥಿರವಾಗಿರಬೇಕು. ನಿರ್ದಿಷ್ಟ ಪ್ರದೇಶದ ಜನಸಂಖ್ಯೆ ಆಧರಿಸಿ ಪ್ರತಿ ಮನೆಗೆ ನೀರು ತಲುಪಿಸಲು ಎಷ್ಟು ವೆಚ್ಚವಾಗುತ್ತದೆ ಎಂಬುದನ್ನು ಲೆಕ್ಕ ಹಾಕಲಾಗುತ್ತದೆ. ತಲಾ ವೆಚ್ಚ ₹17ಸಾವಿರ ಮೀರದಿದ್ದರೆ ಮಾತ್ರ ಯೋಜನೆ ಕೈಗೆತ್ತಿಕೊಳ್ಳುವ ಬಗ್ಗೆ ಪರಿಶೀಲಿಸುತ್ತೇವೆ. ತಲಾ ವೆಚ್ಚ ₹ 20ಸಾವಿರಕ್ಕೂ ಹೆಚ್ಚು ಇದ್ದರೆ ಅಂತಹ ಕಡೆ ಯೋಜನೆ ಜಾರಿಗೊಳಿಸುವುದಿಲ್ಲ’ ಎಂದು ಇಲಾಖೆಯ ಅಧಿಕಾರಿಗಳು ಸಮಜಾಯಿಷಿ ನೀಡುತ್ತಾರೆ.

ನೀರಿನ ಲಭ್ಯತೆ ಕಡಿಮೆ ಇರುವ ಕಡೆ ಸಣ್ಣ ಪ್ರಮಾಣದ ಯೋಜನೆಗಳನ್ನು ಅಳವಡಿಸಿಕೊಂಡಿದ್ದೂ ಈ ಯೋಜ ನೆಯ ವೈಫಲ್ಯಕ್ಕೆ ಇನ್ನೊಂದು ಕಾರಣ ಎನ್ನುತ್ತಾರೆ ಅಧಿಕಾರಿಗಳು.

‘ಪ್ರತಿ ವ್ಯಕ್ತಿಗೆ ನಿತ್ಯ ಪೂರೈಸುವ ನೀರಿನ ಪ್ರಮಾಣ 40 ಲೀಟರ್‌ಗಳಿಗಿಂತಲೂ ಕಡಿಮೆ ಇದ್ದ ಕಡೆಯೂ ಯೋಜನೆ ಅನುಷ್ಠಾನಗೊಳಿಸಲಾಯಿತು. ಕ್ರಮೇಣ ನೀರಿನ ಮೂಲಗಳನ್ನು ಕಳೆದುಕೊಂಡಿದ್ದರಿಂದ ಹಾಗೂ ಬೇಡಿಕೆ ಹೆಚ್ಚಳವಾಗಿದ್ದರಿಂದ ಯೋಜನೆ ವ್ಯಾಪ್ತಿಯ ಎಲ್ಲ ಗ್ರಾಮಗಳಿಗೆ ನೀರು ಪೂರೈಸಲು ಸಾಧ್ಯವಾಗಲಿಲ್ಲ. ಈ ಹಿಂದೆ ಕಾಲುವೆಗಳ ನೀರನ್ನು ನೆಚ್ಚಿಕೊಂಡು ಜಾರಿಗೊಳಿಸಿದ್ದ ಅನೇಕ ಯೋಜನೆಗಳು ವಿಫಲವಾಗಿವೆ. ಹಾಗಾಗಿ ನೀರು ಪೂರೈಸುವುದಕ್ಕೆ ನದಿಮೂಲಗಳಿರುವ ಕಡೆ ಮಾತ್ರ ಈ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ’ ಎಂದು ಅತೀಕ್ ವಿವರಿಸಿದರು. ಭಾರಿ ಯೋಜನೆಗಳನ್ನಷ್ಟೇ ಇಲಾಖೆ ಕೈಗೊಳ್ಳಲು ಮುಂದಾ ಗಿದೆ. ಪಾವಗಡದಲ್ಲಿ ₹ 2,500 ಕೋಟಿ ವೆಚ್ಚದಲ್ಲಿ ಜಾರಿಗೊಳಿಸುತ್ತಿ ರುವ ಯೋಜನೆಯಿಂದ ಮೂರು ಜಿಲ್ಲೆಗಳಿಗೆ ಅನುಕೂಲವಾಗುತ್ತಿದೆ. ಈ ಯೋಜನೆಯಿಂದ ಪಾವಗಡ ತಾಲ್ಲೂಕಿಗೆ, ಬಳ್ಳಾರಿ ಜಿಲ್ಲೆಯ ಬಳ್ಳಾರಿ ಮತ್ತು ಕೂಡ್ಲಿಗಿ ತಾಲ್ಲೂಕುಗಳಿಗೆ, ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ತಾಲ್ಲೂಕಿನ ಅರ್ಧಭಾಗ, ಮೊಳಕಾಲ್ಮುರು ಮತ್ತು ಚಳ್ಳಕೆರೆ ತಾಲ್ಲೂಕುಗಳಿಗೆ ಪ್ರಯೋಜನವಾಗಲಿದೆ.

ವಿಜಯಪುರ, ರಾಯಚೂರು, ಧಾರವಾಡ ಜಿಲ್ಲೆಗಳಿಗೆ ಹಾಗೂ ಮಂಡ್ಯ ಜಿಲ್ಲೆಯ ಪಾಂಡವಪುರ, ಕೆ.ಆರ್.ಪೇಟೆ ಹಾಗೂ ನಾಗಮಂಗಲ ತಾಲ್ಲೂಕುಗಳಿಗೆ ಕುಡಿಯುವ ನೀರು ಪೂರೈಸುವ ಯೋಜ ನೆಯ ರೂಪುರೇಷೆಗಳನ್ನು ಸರ್ಕಾರ ಸಿದ್ಧಪಡಿಸುತ್ತಿದೆ. ಇದರ ಅಂದಾಜು ವೆಚ್ಚ ₹ 7 ಸಾವಿರ ಕೋಟಿ.

ಬಹುಗ್ರಾಮ ಕುಡಿಯುವ ನೀರು ಯೋಜನೆಗಳ ಶೇ 50ರಷ್ಟು ವೆಚ್ಚವನ್ನು ಕೇಂದ್ರ ಸರ್ಕಾರದ ಜಲಜೀವನ ಮಿಷನ್‌ನಿಂದ ಭರಿಸಿದರೆ, ಇನ್ನುಳಿದ ಶೇ 50ರಷ್ಟನ್ನು ರಾಜ್ಯ ಸರ್ಕಾರ ಭರಿಸುತ್ತಿದೆ. ಇದಕ್ಕೆ ನಬಾರ್ಡ್‌ನಿಂದಲೂ ಸಾಲ ಪಡೆಯುತ್ತಿದೆ. ಕೃಷ್ಣಾ, ಕಾವೇರಿ, ಕಬಿನಿ, ಹೇಮಾವತಿ ತುಂಗಭದ್ರಾ ಹಾಗೂ ನೇತ್ರಾವತಿಯಂತಹ ದೊಡ್ಡ ನದಿಗಳ ನೀರಿನ ಮೂಲಗಳನ್ನೇ ನೆಚ್ಚಿಕೊಂಡು ಯೋಜನೆ ರೂಪಿಸಲು ಇಲಾಖೆ ನಿರ್ಧರಿಸಿದೆ.

‘ಬಹುತೇಕ ಕಡೆ ಈ ಯೋಜನೆ ಯಶಸ್ವಿಯಾಗಿದೆ. ಗದಗ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾದ ಎರಡು ಯೋಜನೆಗಳಿಂದ ಇಡೀ ಜಿಲ್ಲೆಯ 343 ಗ್ರಾಮಗಳಿಗೂ ಕುಡಿಯುವ ನೀರು ಪೂರೈಸಲಾಗುತ್ತಿದೆ. ಎಲ್ಲೆಲ್ಲಿ ಯೋಜನೆ ವಿಫಲ ಗೊಂಡಿದೆಯೋ, ಅವುಗಳನ್ನೂ ಪುನಃಶ್ಚೇತನಗೊಳಿಸುವ ಬಗ್ಗೆಯೂ ಕಾರ್ಯಕ್ರಮ ರೂಪಿಸಿದ್ದೇವೆ’ ಎನ್ನುತ್ತಾರೆ ಅತೀಕ್.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 14-3-1996

• ಅನಂತ್‌ನಾಗ್ ಕೊಲೆಗೆ ಯತ್ನ; ಆರೋಪಿ ಸೆರೆ

ಬೆಂಗಳೂರು, ಮಾರ್ಚ್ 13– ಕನ್ನಡ ಚಿತ್ರರಂಗದ ಖ್ಯಾತನಟ ಹಾಗೂ ಜನತಾದಳದ ಶಾಸಕ ಅನಂತ್‌ನಾಗ್ ಅವರನ್ನು ಹುಸಿಬಾಂಬ್ ಸ್ಫೋಟಿಸಿ ಕೊಲ್ಲುವ ವಿಫಲ ಪ್ರಯತ್ನ ಇಂದು ಬೆಳಿಗ್ಗೆ ನಗರದಲ್ಲಿ ನಡೆಯಿತು.

ಹುಸಿ ಬಾಂಬ್ ದಾಳಿಯಿಂದ ಸ್ವಲ್ಪದರಲ್ಲೇ ಪಾರಾದ ಅನಂತ್ ಸಿನಿಮಾ ನಾಯಕನ ಶೈಲಿಯಲ್ಲಿ ಆರೋಪಿಯ ಮೇಲೆ ಎರಗಿ, ಅವನೊಂದಿಗೆ ಸೆಣಸಿ, ಪರಾರಿಯಾಗುತ್ತಿದ್ದವನನ್ನು ಬೆನ್ನಟ್ಟಿ ಹಿಡಿದು ಪೊಲೀಸರಿಗೆ ಒಪ್ಪಿಸುವಲ್ಲಿ ಯಶಸ್ವಿಯಾದರು. ಅನಂತ್ ಇಂದು ಬೆಳಿಗ್ಗೆ ತಮ್ಮ ಮಗಳು ಅದಿತಿಯನ್ನು ಶಾಲೆಗೆ ಬಿಡಲು ಕಾರಿನಲ್ಲಿ ಹೋಗುವಾಗ ಯುವಕರಿಬ್ಬರು ಅವರನ್ನು ಅಡ್ಡಗಟ್ಟಿದ್ದರು.

50 ವರ್ಷಗಳ ಹಿಂದೆ

ಭಾನುವಾರ, 14-3-1971

• ಬಂಗಾಳ: ಯಾವುದೇ ಪಕ್ಷಕ್ಕೂ ನಿಚ್ಚಳ ಬಹುಮತ ಅಸಂಭವ

ಕೋಲ್ಕತ್ತ, ಮಾರ್ಚ್ 13– ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ಆಡಳಿತ ಕಾಂಗ್ರೆಸಿಗಾಗಲೀ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ನೇತೃತ್ವದ ಸಂಯುಕ್ತ ರಂಗಕ್ಕಾಗಲೀ ನಿಚ್ಚಳ ಬಹುಮತ ದೊರೆಯುವ ಸಂಭವ ದೂರವಾಗುತ್ತಾ ಬಂದಿದೆ. ಈ ಎರಡು ಪ್ರಮುಖ ಪಕ್ಷಗಳೂ ಸಮಸಮ ಸೆಣಸಿನಿಂದ ಸ್ಥಾನಗಳನ್ನು ಗಳಿಸುತ್ತಿವೆ.

ಸಂಜೆಯ ವೇಳಗೆ 188 ಸ್ಥಾನಗಳ ಫಲಿತಾಂಶ ಪ್ರಕಟವಾಗಿದ್ದು, ಮಾರ್ಕ್ಸ್‌ವಾದಿ ಸಂಯುಕ್ತ ರಂಗ 79 ಸ್ಥಾನಗಳನ್ನು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ 70 ಸ್ಥಾನ ಗಳಿಸಿದ್ದರೆ, ಆಡಳಿತ ಕಾಂಗ್ರೆಸ್ 77 ಸ್ಥಾನಗಳನ್ನು ಭದ್ರಪಡಿಸಿಕೊಂಡಿದೆ.

ದಿನ ಭವಿಷ್ಯ

ಭಾನುವಾರ 14 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಪೂರ್ವಾಭಾದ್ರ ಪ್ರತಿಪದೆ ಗಂ. 23-6 (ಹ. 3-49) ಭಾನುವಾರ ನಿತ್ಯ ನಕ್ಷತ್ರ ಉತ್ತರಾಭಾದ್ರ ಗಂ. 46-37 (ರಾ. 1-14) ಶುಭ ನಾಮ ಯೋಗ ಗಂ. 0-47 ಬವ ಕರಣ ಗಂ. 23-6 ವಿಶ ಗಂ. 8-19 ಅಮೃತ ಗಂ. 34-12 ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 ಸೂರ್ಯೋದಯ: 6-31 ಸೂರ್ಯಾಸ್ತ: 6-26 ಅದೃಷ್ಟ ಸಂಖ್ಯೆ 1, 8

ಮೇಷ: ಬಂಧುಗಳ ಗೌರವಕ್ಕೆ ಪಾತ್ರರಾಗುವಿರಿ. ಮನರಂಜನೆಗಾಗಿ ಖರ್ಚು. ಸ್ವಂತ ಉದ್ಯೋಗಿಗಳಿಗೆ ಯಶಸ್ಸು. ಕೃಷಿ ಉತ್ಪನ್ನ ಕೆಲಸಗಳಲ್ಲಿ ತೊಡಗಿಕೊಂಡವರಿಗೆ ಭೂಮಿಯಿಂದ ಧನಲಾಭ. ಅಧಿಕಾರಿಗಳಿಂದ ಸಹಕಾರ.

ವೃಷಭ: ಕೌಟುಂಬಿಕ ಸೌಹಾರ್ದದಿಂದ ಸಂತೃಪ್ತಿ. ಸಮಸ್ಯೆಗಳಿಂದ ಮುಕ್ತರಾಗುವಿರಿ. ಮಹಿಳೆಯರಿಗೆ ಉದ್ಯೋಗದಲ್ಲಿ ಯಶಸ್ಸು. ದೀರ್ಘಕಾಲೀನ ಅರೋಗ್ಯ ಸಮಸ್ಯೆಯಿಂದ ಸುಧಾರಣೆ. ಅಧ್ಯಯನದಿಂದ ಸಂತೃಪ್ತಿ.

ಮಿಥುನ: ಹೊಸ ವ್ಯಕ್ತಿಗಳಿಂದ ಸಹಕಾರ ದೊರಕಲಿದೆ. ವಿದ್ವಾಂಸರಿಗೆ, ಕಲಾವಿದರಿಗೆ ಸಾಮಾಜಿಕ ಗೌರವಗಳು ಪ್ರಾಪ್ತವಾಗಲಿವೆ. ಅನಿರೀಕ್ಷಿತ ಮೂಲಗಳಿಂದ ಧನಾಗಮನ. ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ.

ಕರ್ಕಾಟಕ: ಯಶಸ್ಸು ಮತ್ತು ಕೀರ್ತಿ ನಿಮ್ಮನ್ನು ಹಿಂಬಾಲಿಸಿ ಬರಲಿದೆ. ವಿಚಾರ ಲಹರಿಯಿಂದಾಗಿ ಗೌರವಕ್ಕೆ ಪಾತ್ರರಾಗುವಿರಿ. ಆತುರದ ನಿರ್ಧಾರದಿಂದಾಗಿ ಕೆಲಸ-ಕಾರ್ಯಗಳಲ್ಲಿ ವಿಘ್ನ. ಕುಲದೇವತಾ ದರ್ಶನ ಮಾಡಿ ವಸ್ತ್ರ ದಾನ ಮಾಡಿ.

ಸಿಂಹ: ವಿದ್ಯಾರ್ಥಿಗಳಿಗೆ ಸಮಸ್ಯೆಗಳಿಂದ ಮುಕ್ತಿ ದೊರೆತು ಉತ್ತಮ ಪ್ರಗತಿ. ಮಹಿಳಾ ಪ್ರತಿಭೆಗಳಿಗೆ ಪ್ರೋತ್ಸಾಹ ದೊರೆತು ಯಶಸ್ಸು. ಕುಟುಂಬವರ್ಗದಲ್ಲಿ ಶುಭ ಸಮಾರಂಭಗಳು ನಡೆಯಲಿವೆ. ಕೃಷಿ ಕ್ಷೇತ್ರದಿಂದ ಲಾಭ.

ಕನ್ಯಾ: ಬಂಧುಗಳಲ್ಲಿನ ಭಿನ್ನಾಭಿಪ್ರಾಯಗಳನ್ನು ದೂರ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುವಿರಿ. ಭೂ ಪ್ರಕರಣದಿಂದ ಧನಲಾಭ. ಆಧ್ಯಾತ್ಮಿಕ ಚಿಂತನೆಯಿಂದ ಸಮಸ್ಯೆಗಳು ಪರಿಹಾರವಾಗುವವು. ತೃಪ್ತಿಕರ ಜೀವನ.

ತುಲಾ: ಮಹಿಳೆಯರು ಕುಟುಂಬದಲ್ಲಿ ಗೌರವಕ್ಕೆ ಪಾತ್ರರಾಗುವ ಅವಕಾಶ. ವೃತ್ತಿಯಲ್ಲಿನ ಸಮಸ್ಯೆಗಳಿಗೆ ಪರಿಹಾರ. ಬಂಧುಗಳೊಂದಿಗಿನ ಸಂಬಂಧ ವೃದ್ಧಿಸುವುದು. ನ್ಯಾಯಾಲಯ ವಿಚಾರದಲ್ಲಿ ಪ್ರಗತಿ ಕಂಡುಬರುವುದು.

ವೃಶ್ಚಿಕ: ಸಾಮಾಜಿಕ ಸೇವೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಿರಿ. ಸಂತೃಪ್ತಿದಾಯಕ ದಾಂಪತ್ಯ ಜೀವನ ನಿಮ್ಮದಾಗುವುದು. ಮಿತ್ರರಿಂದ ಸಹಕಾರ ದೊರಕಿ ಕೆಲಸ-ಕಾರ್ಯಗಳು ನಿರ್ವಿಘ್ನವಾಗುವವು.

ಧನು: ಆಧ್ಯಾತ್ಮಿಕ ಚಿಂತನೆಯಿಂದ ಸಂತೃಪ್ತಿ. ಬಂಧುಗಳೊಂದಿಗಿನ ಸಂಬಂಧ ವೃದ್ಧಿ. ಹೊಸ ವಸ್ತುಗಳ ಖರೀದಿ ಸಾಧ್ಯತೆ. ಪ್ರಯಾಣ ಯೋಗ ಒದಗಿ ಬರಲಿದೆ. ಪುಣ್ಯಕ್ಷೇತ್ರ ದರ್ಶನ ಭಾಗ್ಯ. ದೇವತಾರಾಧನೆಯಿಂದ ಇಷ್ಟಾರ್ಥ ಸಿದ್ಧಿ.

ಮಕರ: ಕೌಟುಂಬಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ಮಿತ್ರರಿಂದ ಸಹಕಾರ. ಮಹಿಳೆಯರಿಗೆ ಎಲ್ಲ ಕಡೆಯಿಂದಲೂ ಸಹಕಾರ ದೊರೆತು ಯಶಸ್ಸು. ಸಾಮಾಜಿಕ ಕ್ಷೇತ್ರದಲ್ಲಿ ಭಾಗಿಯಾಗಿ ಗೌರವಾದರ ಪ್ರಾಪ್ತಿ.

ಕುಂಭ: ಮಿತ್ರರಿಂದ ಧನಲಾಭ. ಗೃಹನಿರ್ಮಾಣ ಕಾರ್ಯಗಳಲ್ಲಿ ಯಶಸ್ಸು. ಮಹಿಳೆಯರ ಅಪೇಕ್ಷೆಯ ಈಡೇರಿಕೆ. ಶುಭಕಾರ್ಯಗಳು ನಿಶ್ಚಯವಾಗಲಿವೆ. ಸಂತೃಪ್ತ ಜೀವನ. ಪ್ರಿಯ ವ್ಯಕ್ತಿಗಳ ಆಗಮನದಿಂದ ಮನೆಯಲ್ಲಿ ಸಂತಸ.

ಮೀನ: ಸ್ನೇಹಿತರಿಂದ ಸಹಕಾರ. ನಿರುದ್ಯೋಗಿಗಳಿಗೆ ಉದ್ಯೋಗದ ಬಾಗಿಲು ತೆರೆಯಲಿದೆ. ಕೃಷಿಕರಿಗೆ ಸರ್ಕಾರದಿಂದ ಸಹಾಯ ಸಹಕಾರ ದೊರಕುವುದು. ಕಳೆದುಹೋದ ವಸ್ತುಗಳು ಲಭ್ಯವಾಗುವ ಸಾಧ್ಯತೆ ಕಂಡುಬರುವುದು.

ನಿಮ್ಮ ಜನ್ಮದಿನ 14-ಮಾರ್ಚ್ ಈ ದಿನ ಅತ್ಯಂತ ಶುಭಕರ. ಸಮಾಜದ ಏಳಿಗೆಗಾಗಿ ಕೈಗೊಂಡ ಕಾರ್ಯಗಳಲ್ಲಿ ಏಳಿಗೆ ಸಹಿಸದವರಿಂದ ಸ್ವಲ್ಪಮಟ್ಟಿನ ವಿರೋಧ. ಮನೆಯವರಿಂದ ಹಿತವಚನಗಳು ಕೇಳಿ ಬರಲಿವೆ. ಸಹೋದರರ ಸಹಕಾರದಿಂದ ಆರ್ಥಿಕ ಉನ್ನತಿ. ಹೊಸದಾಗಿ ದಾಂಪತ್ಯಕ್ಕೆ ಕಾಲಿರಿಸಿದವರಿಗೆ ಸಂತಾನ ಭಾಗ್ಯ.

ಪದಬಂಧ 4536

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅತಿಶಯವಾದ ಪ್ರೀತಿ (3)
3.ತಂಬಾಕು ಕೊಯ್ಯಲು ಬಳಸಿದ ಕಿರುಗತ್ತಿ (2)
5.ವಿಷಯದಲ್ಲಿರುವ ನಂಜು (2)
6.ಮೃತರಾದವರಿಗಾಗಿ ಮಾಡುವ ಅಪರ ಕ್ರಿಯೆ (4)
7.ನದಿ ಸಮುದ್ರಕ್ಕೆ ಸೇರುವೆಡೆಯ ಮೆಕ್ಕಲುಭೂಮಿ (7)
10.ವಾರದ ಕೊನೆಗೆ ಬಂದಿರುವ ಗ್ರಾಮ ರಕ್ಷಕ (4)
11ಸನಿಹದಲ್ಲಿರುವ ತೊಟ್ಟು! (2)
13.ಗುಗ್ಗುಳವನ್ನು ಹಿಡಿದಿರುವ ಮೂರ್ಖ! (2)
14.ಮರಮುಟ್ಟು ನಾಶ ಮಾಡುವ ಕೀಟ (3)

ಮೇಲಿಂದ ಕೆಳಕ್ಕೆ
1.ವರ್ತುಲವನ್ನು ಸಮವಾಗಿ ವಿಭಾಗಿಸುವ ರೇಖೆ (2)
2.ವಿರಳವಾಗಿರುವ ಹರ್ಷ (3)
4.ಕುಟೀಲ ವಾಸವಾಗಿರುವ ಗುಡಿಸಲು (3)
5.ರೀತಿಯು ಈ ವಿಧವಾಗಿ ಬಂದಿದೆ (3)
6.ಧಾನ್ಯ ಸಂಗ್ರಹಿಸುವ ಸ್ಥಳ (3)
8.ಪುಷ್ಕರಿಣಿ ಬಳಿ ಹೂಡಿದ ಸಂಪು! (3)
9.ಇದು ಬಂಗಾರ (3)
10.ಒಣಗಿದ ವಸ್ತು ಇಲ್ಲಿದೆ (3)
11.ಮರದ ಹಾಳೆಯಿದು (3)
12. ಪರಾಭವಕ್ಕೊಂದು ಪರ್ಯಾಯ ಪದ (2)

1		2	■	■	■	■	3	4
	■		■	■	■	■	■	
■	5		■	■	6			
■		■	■	■		■	■	■
■	7		8				9	■
■	■	■		■	■	■		■
10				■	■	11		■
	■	■	■	■	■		■	12
13		■	■	■	■	14		

4535ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪರಾಜಿತ 3.ವಿದ್ಯಾಲಯ 5.ಕವಿ 7.ಕೆರಸಿ 8.ನಳ 10.ಜಾತ್ರೆ 11.ಸಂಭ್ರಮ 13.ಕರ 15.ತತ್ವಜ್ಞಾನ 16.ಕರಂಡಕ
ಮೇಲಿಂದ ಕೆಳಕ್ಕೆ: 1.ಪದಕ 2.ತಡಿಕೆ 3.ವಿಲಾಸಿ 4.ಯಮಳ 6.ವಿಜಯಯಾತ್ರೆ 8.ನಯವಂಚಕ 10.ಜಾಗೃತ 11.ಸಂಧಾನ 12.ಮರುಕ 14.ರಸಿಕ

ಸುಡೊಕು 4922

4			3		8			2
		1		6		3	8	
9		3			2			6
							6	
	2	6	9	4	7			
	4		6		1		7	5
			1		9	8		
8		7					9	
1	9		8		6	4		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4921 ಸುಡೊಕು

1	5	8	4	3	2	9	7	6
3	7	6	9	8	1	2	4	5
9	2	4	6	5	7	1	8	3
8	9	5	2	7	4	6	3	1
4	6	1	5	9	3	7	2	8
7	3	2	1	6	8	5	9	4
5	4	9	3	2	6	8	1	7
2	1	7	8	4	5	3	6	9
6	8	3	7	1	9	4	5	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಡಿಎಂಕೆ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ● ತೈಲೋತ್ಪನ್ನಗಳ ಮೇಲಿನ ತೆರಿಗೆ ಇಳಿಸುವ ಸೂಚನೆ ● ಹಿಂದೂ ತೀರ್ಥಯಾತ್ರಿಗಳಿಗೆ ಆರ್ಥಿಕ ನೆರವು

ಉದ್ಯೋಗ: ಸ್ಥಳೀಯರಿಗೆ ಶೇ 75ರಷ್ಟು ಮೀಸಲು

ಪ್ರಜಾವಾಣಿ ವಾರ್ತೆ

ಚೆನ್ನೈ: 'ಅಧಿಕಾರಕ್ಕೆ ಬಂದರೆ, ಉದ್ಯೋಗದಲ್ಲಿ ಶೇ 75ರಷ್ಟನ್ನು ಸ್ಥಳೀಯರಿಗೆ ಮೀಸಲಿರಿಸುವ ಕಾಯ್ದೆಯನ್ನು ಜಾರಿಗೊಳಿಸಲಾಗುವುದು' ಎಂದು ಡಿಎಂಕೆ ಪ್ರಣಾಳಿಕೆ ಭರವಸೆ ನೀಡಿದೆ. ಮುಂಬರುವ ತಮಿಳುನಾಡು ವಿಧಾನಸಭಾ ಚುನಾವಣೆ ನಿಮಿತ್ತ ಶನಿವಾರ ಬಿಡುಗಡೆ ಮಾಡಲಾದ ಪಕ್ಷದ ಪ್ರಣಾಳಿಕೆಯಲ್ಲಿ ಸರ್ಕಾರಿ ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಡೇಟಾ ಕಾರ್ಡ್ ಜೊತೆಗೆ ಉಚಿತ ಕಂಪ್ಯೂಟರ್ ಟ್ಯಾಬ್ಲೆಟ್ ನೀಡುವ ಭರವಸೆಯನ್ನೂ ನೀಡಲಾಗಿದೆ.

ಪ್ರಮುಖ ಹಿಂದೂ ಪುಣ್ಯಕ್ಷೇತ್ರಗಳಿಗೆ ತೀರ್ಥಯಾತ್ರೆಗೆ ತೆರಳುವ 1 ಲಕ್ಷ ಜನರಿಗೆ ₹25,000 ಆರ್ಥಿಕ ನೆರವು, ಹೆರಿಗೆ ರಜೆ ಅವಧಿ ವಿಸ್ತರಣೆ, ತೈಲ ಬೆಲೆ ನಿಯಂತ್ರಣ, ನೀಟ್‌ಗೆ ನಿರ್ಬಂಧ ಮೊದಲಾದ ಹಲವು ಘೋಷಣೆಗಳನ್ನು ಮಾಡಲಾಗಿದೆ.

ಪ್ರಣಾಳಿಕೆ ಬಿಡುಗಡೆ ಮಾಡಿ ಮಾತನಾಡಿದ ಪಕ್ಷದ ಅಧ್ಯಕ್ಷ ಎಂ.ಕೆ. ಸ್ಟಾಲಿನ್, 'ಡಿಎಂಕೆ ಅಧಿಕಾರಕ್ಕೆ ಬಂದರೆ, ಮೊದಲ ತಲೆಮಾರಿನ ಪದವೀಧರರಿಗೆ ಸರ್ಕಾರಿ ಉದ್ಯೋಗಗಳಲ್ಲಿ ಆದ್ಯತೆ ನೀಡಲಾಗುವುದು' ಎಂದರು. ಖಾಸಗಿ ವಲಯದಲ್ಲಿ ಮೀಸಲಾತಿ ಮತ್ತು ಸಣ್ಣ ರೈತರಿಗೆ ಸಬ್ಸಿಡಿ ನೀಡುವ ಭರವಸೆಯನ್ನೂ ನೀಡಿದರು.

ತೈಲೋತ್ಪನ್ನಗಳ ಮೇಲಿನ ತೆರಿಗೆ ಇಳಿಸುವ ಸೂಚನೆಯನ್ನೂ ಪ್ರಣಾಳಿಕೆಯಲ್ಲಿ ನೀಡಲಾಗಿದ್ದು, ಪೆಟ್ರೋಲ್ ದರವನ್ನು ₹5ರಷ್ಟು ಹಾಗೂ ಡೀಸೆಲ್ ದರವನ್ನು ₹4ರಷ್ಟು ಇಳಿಸಲಾಗುವುದು ಎಂದಿದೆ. ಜತೆಗೆ, ಪ್ರತಿ ಎಲ್‌ಪಿಜಿ ಸಿಲಿಂಡರ್‌ಗೆ ₹100 ಸಬ್ಸಿಡಿ ನೀಡುವ ವಾಗ್ದಾನ ಮಾಡಿದೆ.

2016ರಲ್ಲಿ ಮುಖ್ಯಮಂತ್ರಿ ಜೆ. ಜಯಲಲಿತಾ ಅವರ ಸಾವಿಗೆ ಕಾರಣವಾದ ಸಂದರ್ಭಗಳ ಬಗ್ಗೆ ತನಿಖೆ ನಡೆಸಲು ರಚಿಸಲಾದ ಅರ್ಮುಗಸ್ವಾಮಿ ಸಮಿತಿಯ ವರದಿಯನ್ನು ತ್ವರಿತವಾಗಿ ಪಡೆಯಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಪಕ್ಷ ತಿಳಿಸಿದೆ.

ರಾಜ್ಯದಲ್ಲಿ ಹಿಂದೂ ದೇವಸ್ಥಾನಗಳ ಪುನರುಜ್ಜೀವನ ಹಾಗೂ ನಿರ್ಮಾಣಕ್ಕೆ ₹1,000 ಕೋಟಿ ಅನುದಾನ ನೀಡುವುದರ ಜೊತೆಗೆ ಚರ್ಚ್ ಹಾಗೂ ಮಸೀದಿಗಳಿಗೆ ₹200 ಕೋಟಿ ನೀಡುವುದಾಗಿ ಸ್ಟಾಲಿನ್ ಭರವಸೆ ನೀಡಿದ್ದಾರೆ.

ನೀರಿನ ಸೂಕ್ತ ನಿರ್ವಹಣೆ, ಶುದ್ಧ ಕುಡಿಯುವ ನೀರು ಪೂರೈಕೆ, ಸರ್ಕಾರಿ ಉದ್ಯೋಗದಲ್ಲಿ ಮಹಿಳೆಯರಿಗೆ ಮೀಸಲಾತಿ ಹೆಚ್ಚಳ, ಪಿಂಚಣಿ ಏರಿಕೆ, ಹಸಿವು ನಿರ್ಮೂಲನೆಯ ಭಾಗವಾಗಿ 'ಕಲೈನಾರ್ ಉನವಾಗಂ' ಉಪಾಹಾರ ತಾಣಗಳ ಸ್ಥಾಪನೆಗೆ ಪ್ರಣಾಳಿಕೆಯಲ್ಲಿ ಒತ್ತು ನೀಡಲಾಗಿದೆ.

'ಸುಳ್ಳು ಭರವಸೆಗಳ ಪ್ರಣಾಳಿಕೆ': ಡಿಎಂಕೆ ಹೊರಡಿಸಿರುವ ಪ್ರಣಾಳಿಕೆಯು ಸುಳ್ಳು ಭರವಸೆಗಳಿಂದ ತುಂಬಿದೆ ಎಂದು ತಮಿಳುನಾಡು ಸಚಿವ ಎಸ್. ಪಿ. ವೇಲುಮಣಿ ಆರೋಪಿಸಿದ್ದಾರೆ. ಎಐಎಡಿಎಂಕೆ ಹೊರಡಿಸುವ ಪ್ರಣಾಳಿಕೆಯಿಂದ ಜನರಿಗೆ ನಿಜಕ್ಕೂ ನೆರವಾಗಲಿದೆ ಎಂದು ಅವರು ಹೇಳಿದ್ದಾರೆ.

ಡಿಎಂಕೆ ಅಧ್ಯಕ್ಷ ಎಂ.ಕೆ. ಸ್ಟಾಲಿನ್ ಅವರು ಪಕ್ಷದ ಚುನಾವಣಾ ಪ್ರಣಾಳಿಕೆಯನ್ನು ಶನಿವಾರ ಬಿಡುಗಡೆ ಮಾಡಿದರು. ಪ್ರಧಾನ ಕಾರ್ಯದರ್ಶಿ ದುರೈ ಮುರುಘನ್, ಖಜಾಂಚಿ ಟಿ.ಆರ್. ಬಾಲು ಇದ್ದಾರೆ —ಪಿಟಿಐ ಚಿತ್ರ

ದಿನದ ಬೆಳವಣಿಗೆ

- ಕಾಂಗ್ರೆಸ್ ಜತೆಗಿನ ಸೀಟು ಹೊಂದಾಣಿಕೆ ಬಿಕ್ಕಟ್ಟಿನ ನಡುವೆಯೇ ಅಬ್ಬಾಸ್ ಸಿದ್ದಿಕಿ ನೇತೃತ್ವದ ಇಂಡಿಯನ್ ಸೆಕ್ಯುಲರ್ ಫ್ರಂಟ್ (ಐಎಸ್‌ಎಫ್) ಪಶ್ಚಿಮ ಬಂಗಾಳ ಚುನಾವಣೆಗೆ 26 ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿಯನ್ನು ಶನಿವಾರ ಬಿಡುಗಡೆ ಮಾಡಿತು
- ಪುದುಚೇರಿ ಚುನಾವಣೆಯಲ್ಲಿ 13 ಕ್ಷೇತ್ರಗಳಿಗೆ ತನ್ನ ಅಭ್ಯರ್ಥಿಗಳನ್ನು ಡಿಎಂಕೆ ಪಕ್ಷ ಶನಿವಾರ ಬಿಡುಗಡೆ ಮಾಡಿತು
- ಕೇಂದ್ರ ಸಚಿವ ರಾಜನಾಥ್ ಸಿಂಗ್ ಅವರು ಅಸ್ಸಾಂ ಬಿಸ್ವನಾಥ್ ಮತ್ತು ಗೋಲಘಾಟ್‌ನಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ ಭಾನುವಾರ ಪ್ರಚಾರ ನಡೆಲಿದ್ದಾರೆ
- ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟದಲ್ಲಿರುವ ಕೇರಳ ಕಾಂಗ್ರೆಸ್ (ಜೋಸೆಫ್) ಬಣವು ಕೇರಳ ವಿಧಾನಸಭಾ ಚುನಾವಣೆಗೆ ಅಭ್ಯರ್ಥಿಗಳನ್ನು ಪ್ರಕಟಿಸಿದ್ದು, ಜೋಸೆಫ್ ಅವರು ತೊಡುಪುಳ ಕ್ಷೇತ್ರದಿಂದ ಸ್ಪರ್ಧೆ ಮಾಡಲಿದ್ದಾರೆ
- ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಭಾನುವಾರ ಹಾಗೂ ಸೋಮವಾರ ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಪ್ರವಾಸ ಮಾಡಲಿದ್ದಾರೆ. ಸಾರ್ವಜನಿಕ ರ‍್ಯಾಲಿಯಲ್ಲಿ ಭಾಷಣ ಮಾಡಲಿದ್ದಾರೆ.

ಕಾದುನೋಡುವ ತಂತ್ರ

ತಿರುವನಂತಪುರ: ಕೇರಳದಲ್ಲಿ ಹಿಂದಿನ ಬಾರಿ ಗೆದ್ದಿರುವ ಏಕೈಕ ವಿಧಾನಸಭಾ ಕ್ಷೇತ್ರವನ್ನು ಉಳಿಸಿಕೊಳ್ಳುವ ಸವಾಲು ಬಿಜೆಪಿಗೆ ಈ ಬಾರಿ ಎದುರಾಗಿದೆ. ತಿರುವನಂತಪುರ ಸನಿಹದ ನಿಮೋನ್ ಕ್ಷೇತ್ರದಲ್ಲಿ ಬಿಜೆಪಿಯನ್ನು ಹೇಗಾದರೂ ಮಾಡಿ ಸೋಲಿಸಬೇಕು ಎಂದು ಪಣ ತೊಟ್ಟಿರುವ ಕಾಂಗ್ರೆಸ್, ಈ ಬಾರಿ ಪ್ರಬಲ ಸ್ಪರ್ಧಿಯನ್ನು ಕಣಕ್ಕಿಳಿಸುವ ಸಾಧ್ಯತೆಯಿದೆ.

ಈ ಕ್ಷೇತ್ರದಲ್ಲಿ ಬಿಜೆಪಿಯ ಒ. ರಾಜಗೋಪಾಲ್ ಅವರು 67,800 ಮತಗಳಿಂದ ಜಯಶಾಲಿಯಾಗಿದ್ದರು. ಮಾಜಿ ಶಾಸಕ ವಿ. ಸಿವನ್‌ಕುಟ್ಟಿ ಅವರನ್ನು ಸಿಪಿಎಂ ಈ ಕ್ಷೇತ್ರದ ಅಭ್ಯರ್ಥಿ ಎಂದು ಘೋಷಿಸಿದೆ. ಕಾಂಗ್ರೆಸ್ ಪ್ರಬಲ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಸಾಧ್ಯತೆ ಇರುವ ಕಾರಣ ಬಿಜೆಪಿ ಇನ್ನೂ ಅಭ್ಯರ್ಥಿಯನ್ನು ಘೋಷಿಸಿಲ್ಲ. ಎದುರಾಳಿ ಅಭ್ಯರ್ಥಿ ಯಾರು ಎಂದು ತಿಳಿದುಕೊಳ್ಳಲು ಕಾದುನೋಡುವ ತಂತ್ರವನ್ನು ಬಿಜೆಪಿ ಹಾಗೂ ಕಾಂಗ್ರೆಸ್ ಹೂಡಿವೆ.

ಮಮತಾ ಮೇಲಿನ ಹಲ್ಲೆ: ಸಮಗ್ರ ವರದಿಗೆ ಸೂಚನೆ

ಕೋಲ್ಕತ್ತ: ನಂದಿಗ್ರಾಮದಲ್ಲಿ ಮಾರ್ಚ್ 10ರಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮೇಲೆ ನಡೆದಿದೆ ಎನ್ನಲಾದ ಹಲ್ಲೆಯನ್ನು ಕುರಿತ ವರದಿಯು ಸಂಕ್ಷಿಪ್ತವಾಗಿದ್ದು, ವಿವರವಾದ ವರದಿ ನೀಡುವಂತೆ ರಾಜ್ಯದ ಮುಖ್ಯಕಾರ್ಯದರ್ಶಿ ಆಲ್ಪನ್ ಬಂಡೋಪಾಧ್ಯಾಯ ಅವರಿಗೆ ಚುನಾವಣಾ ಆಯೋಗ ಸೂಚಿಸಿದೆ.

'ಘಟನೆಯು ಹೇಗೆ ನಡೆಯಿತು, ದಾಳಿಯ ಹಿಂದೆ ಯಾರಿದ್ದಾರೆ ಎಂಬಿತ್ಯಾದಿ ಅಂಶಗಳನ್ನೊಳಗೊಂಡ ವಿಸ್ತೃತ ವರದಿ ನೀಡುವಂತೆ ಸೂಚನೆ ನೀಡಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಶುಕ್ರವಾರ ಸಂಜೆ ವೇಳೆಗೆ ರಾಜ್ಯ ಸರ್ಕಾರವು ಆಯೋಗಕ್ಕೆ ವರದಿಯನ್ನು ಸಲ್ಲಿಸಿತ್ತು. ಘಟನಾ ಸ್ಥಳದಲ್ಲಿ ಬೃಹತ್ ಸಂಖ್ಯೆಯ ಜನರು ಸೇರಿದ್ದರು ಎಂದು ವರದಿ ಉಲ್ಲೇಖಿಸಿದೆ. ಆದರೆ ಮಮತಾ ಅವರು ತಮ್ಮ ಮೇಲೆ 4–5 ಜನರು ಹಲ್ಲೆ ಮಾಡಿದ್ದಾರೆ ಎಂದು ಆರೋಪಿಸಿದ್ದರು' ಎಂದು ಅಧಿಕಾರಿ ತಿಳಿಸಿದ್ದಾರೆ.

ನಂದಿಗ್ರಾಮದ ಬಿರುಲಿಯಾ ಬಜಾರ್‌ನಲ್ಲಿ ನಡೆದ ಹಲ್ಲೆಗೆ ಸಂಬಂಧಪಟ್ಟಂತೆ ಸ್ಪಷ್ಟವಾದ ವಿಡಿಯೊ ದೃಶ್ಯಾವಳಿಗಳು ಲಭ್ಯವಿಲ್ಲ ಎಂದು ವರದಿಯಲ್ಲಿ ಮಾಹಿತಿ ನೀಡಲಾಗಿದೆ. ಘಟನೆಯ ವರದಿ ನೀಡುವಂತೆ ಕೇಂದ್ರ ಚುನಾವಣಾ ಆಯೋಗವು ರಾಜ್ಯ ಸರ್ಕಾರಕ್ಕೆ ಸೂಚಿಸಿತ್ತು. ರಾಜ್ಯಕ್ಕೆ ಇಬ್ಬರು ವೀಕ್ಷಕರನ್ನು ನೇಮಿಸಿತ್ತು.

ಅಸ್ಸಾಂ ಗದ್ದುಗೆ ಯಾರಿಗೆ?

ಅಸ್ಸಾಂ ಅಧಿಕಾರ ಯಾರಿಗೆ? ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಹಿರಿಯ ಮುಖಂಡ ಯಶವಂತ್ ಸಿನ್ಹಾ ಅವರು ಕೋಲ್ಕತ್ತದಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ ಶನಿವಾರ ಸೇರ್ಪಡೆಯಾದರು —ಪಿಟಿಐ ಚಿತ್ರ

ಟಿಎಂಸಿ ಸೇರಿದ ಯಶವಂತ್ ಸಿನ್ಹಾ

ಕೋಲ್ಕತ್ತ: ಕೇಂದ್ರದ ಮಾಜಿ ಸಚಿವ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ಪ್ರಮುಖ ಟೀಕಾಕಾರರಲ್ಲಿ ಒಬ್ಬರಾಗಿರುವ ಯಶವಂತ್ ಸಿನ್ಹಾ ಅವರು ಶನಿವಾರ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸೇರ್ಪಡೆಯಾದರು.

'2024ರಲ್ಲಿ ಮೋದಿ ನೇತೃತ್ವದ ಸರ್ಕಾರವನ್ನು ಸೋಲಿಸಲು ಹಾಗೂ ದೇಶವನ್ನು ರಕ್ಷಿಸಬೇಕಾದರೆ, ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಟಿಎಂಸಿ ಅಭೂತಪೂರ್ವ ಗೆಲುವು ಕಾಣಬೇಕಾದ ಅನಿವಾರ್ಯತೆ ಇದೆ' ಎಂದು ಪಕ್ಷಕ್ಕೆ ಸೇರ್ಪಡೆಯಾದ ಬಳಿಕ ಸಿನ್ಹಾ ಹೇಳಿದರು.

ಅಟಲ್ ಬಿಹಾರಿ ವಾಜಪೇಯಿ ಆಡಳಿತದಲ್ಲಿ ಹಿರಿಯ ಸಚಿವರಾಗಿ ಕಾರ್ಯ ನಿರ್ವಹಿಸಿದ್ದ ಸಿನ್ಹಾ ಅವರು ಬಿಜೆಪಿ ನಾಯಕತ್ವದ ಬಗ್ಗೆ ತೀವ್ರ ಭಿನ್ನಾಭಿಪ್ರಾಯ ಹೊಂದಿದ್ದ ಕಾರಣ, 2018ರಲ್ಲಿ ಪಕ್ಷ ತ್ಯಜಿಸಿದ್ದರು. 2019ರ ಲೋಕಸಭಾ ಚುನಾವಣೆಯಲ್ಲಿ ಟಿಎಂಸಿ ಪರ ಪ್ರಚಾರ ನಡೆಸಿದ್ದರು. ಇವರ ಪುತ್ರ ಜಯಂತ್ ಸಿನ್ಹಾ ಅವರು ಜಾರ್ಖಂಡ್‌ನ ಹಜಾರಿಬಾಗ್‌ನ ಬಿಜೆಪಿ ಸಂಸದರಾಗಿದ್ದಾರೆ.

'ಮಮತಾ ಬ್ಯಾನರ್ಜಿ ಜತೆ ಕೇವಲ 45 ನಿಮಿಷ ಮಾತುಕತೆ ನಡೆಸಿ, ಪಕ್ಷಕ್ಕೆ ಸೇರುವ ನಿರ್ಧಾರ ಮಾಡಿದೆ. ನಂದಿಗ್ರಾಮದಲ್ಲಿ ಮಮತಾ ಮೇಲಿನ ಹಲ್ಲೆಯು ಚುನಾವಣೆಯನ್ನು ಗೆಲ್ಲಲು ಕೇಂದ್ರ ಸರ್ಕಾರ ಏನು ಬೇಕಾದರೂ ಬಾಡಬಲ್ಲದು ಎಂಬುದಕ್ಕೆ ನಿದರ್ಶನದಂತಿಗೆ. ನಾನು ಟಿಎಂಸಿ ಸೇರಲು ಮಮತಾ ಮೇಲೆ ನಡೆದ ಹಲ್ಲೆಯ ಘಟನೆಯೇ ಕಾರಣ. ಅವರೊಂದಿಗೆ ಕೆಲಸ ಮಾಡಲು ಇದು ಪ್ರೇರಣೆಯಾಯಿತು' ಎಂದು ಸಿನ್ಹಾ ಹೇಳಿದ್ದಾರೆ.

'ಮೋದಿ ಹಾಗೂ ಗೃಹಸಚಿವ ಅಮಿತ್ ಶಾ ಅವರಿಂದ ದೇಶದ ಪ್ರಜಾಪ್ರಭುತ್ವಕ್ಕೆ ಅಪಾಯವಿದೆ. ಪ್ರಜಾಪ್ರಭುತ್ವ ಬಲಗೊಳ್ಳಬೇಕಾದರೆ ಸಂಸ್ಥೆಗಳು ದೃಢವಾಗಿರಬೇಕು. ಆದರೆ ಎಲ್ಲಾ ಸಂಸ್ಥೆಗಳನ್ನು ವ್ಯವಸ್ಥಿತವಾಗಿ ದುರ್ಬಲಗೊಳಿಸಲಾಗಿದೆ ಎಂದು ಸಿನ್ಹಾ ಆರೋಪಿಸಿದ್ದಾರೆ.

'ರೈತರು ದೆಹಲಿಯ ಗಡಿಯಲ್ಲಿ ತಿಂಗಳುಗಳಿಂದ ಧರಣಿ ಕುಳಿತಿದ್ದರೂ ಸರ್ಕಾರ ಅವರನ್ನು ಗಣನೆಗೆ ತೆಗೆದುಕೊಂಡಿಲ್ಲ. ಚುನಾವಣೆಗಳನ್ನು ಗೆಲ್ಲುವುದೊಂದೇ ಆಡಳಿತ ಪಕ್ಷದ ಮಂತ್ರವಾಗಿದೆ ಎಂದರು.

'ಬಿಜೆಪಿ ವಿರುದ್ಧ ಹೋರಾಟ ನಡೆಸುತ್ತಿರುವ ತೃಣಮೂಲ ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಭಾರಿ ಅಂತರದಲ್ಲಿ ಜಯ ಸಾಧಿಸಲಿದೆ. ನಾವು ಈ ಗೆಲುವನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ಯಬೇಕಿದೆ. 'ಬಂಗಾಳ ಇಂದು ಏನು ಚಿಂತಿಸುತ್ತದೆಯೋ, ಭಾರತ ಅದರ ಬಗ್ಗೆ ನಾಳೆ ಆಲೋಚಿಸುತ್ತದೆ' ಎಂದು ಗೋಪಾಲಕೃಷ್ಣ ಗೋಖಲೆ ಹೇಳಿದ್ದರು. ಬಂಗಾಳದಲ್ಲಿ ಈ ಬಾರಿ ತೃಣಮೂಲ ಕಾಂಗ್ರೆಸ್‌ನ ಗೆಲುವು, 2024ರ ಸಾರ್ವತ್ರಿಕ ಚುನಾವಣೆಯಲ್ಲಿ ಮೋದಿ–ಶಾ ಅಧಿಪತ್ಯದ ಪತನಕ್ಕೆ ಸೂಚನೆ ನೀಡಲಿದೆ' ಎಂದು ಸಿನ್ಹಾ ವಿಶ್ಲೇಷಿಸಿದರು.

ಕುಟುಂಬ ಸದಸ್ಯರೊಂದಿಗೆ ವಲಸೆ : ಸೇನಾಡಳಿತ ವಿರುದ್ಧ ದೌರ್ಜನ್ಯ ಆರೋಪ

ಗಡಿ ದಾಟಿ ಭಾರತಕ್ಕೆ ಬಂದ ಮ್ಯಾನ್ಮಾರ್ ಪೊಲೀಸರು

ಜೋಖ್‌ವಥರ್ (ಎಎಫ್‌ಪಿ): ಮ್ಯಾನ್ಮಾರ್‌ನ ನೂರಾರು ಪೊಲೀಸರು ಮತ್ತು ಅವರ ಕುಟುಂಬದ ಸದಸ್ಯರು ಈಗ ಗಡಿದಾಟಿ ಭಾರತಕ್ಕೆ ವಲಸೆ ಬಂದಿದ್ದಾರೆ ಎಂದು ಭದ್ರತಾ ಅಧಿಕಾರಿಗಳು ತಿಳಿಸಿದ್ದಾರೆ. ಹೀಗೆ ವಲಸೆ ಬಂದಿರುವ ಅಧಿಕಾರಿಯೊಬ್ಬರು, 'ಮ್ಯಾನ್ಮಾರ್‌ನಲ್ಲಿ ಪ್ರತಿಭಟನಾಕಾರರ ಮೇಲೆ ಸೇನಾಡಳಿತ ದೌರ್ಜನ್ಯ ಎಸಗುತ್ತಿದ್ದು, ಹಲ್ಲೆ ಮಾಡುತ್ತಿದೆ' ಎಂದು ದೂರಿದ್ದಾರೆ.

ಮ್ಯಾನ್ಮಾರ್‌ನಲ್ಲಿನ ಫೆ.1ರ ಸೇನಾದಂಗೆ ವಿರುದ್ಧ ಜನರು ತೀವ್ರವಾಗಿ ಪ್ರತಿಭಟಿಸುತ್ತಿದ್ದಾರೆ. ಇದನ್ನು ಹತ್ತಿಕ್ಕಲು ಸೇನಾಡಳಿತವು ಯತ್ನಿಸುತ್ತಿದೆ. ವಿಶ್ವಸಂಸ್ಥೆ ಉನ್ನತ ಅಧಿಕಾರಿಗಳ ಪ್ರಕಾರ, ಈವರೆಗೆ ಸುಮಾರು 70 ಪ್ರತಿಭಟನಕಾರರು ಹತರಾಗಿದ್ದಾರೆ.

ಪ್ರತಿಭಟನೆಯನ್ನುಹತ್ತಿಕ್ಕುವಕಾರ್ಯದಲ್ಲಿ ಭಾಗಿಯಾಗಲು ಪೊಲೀಸರು ಸೇರಿದಂತೆ ಹಲವರು ನಿರಾಕರಿಸುತ್ತಿದ್ದಾರೆ. ಈ ಪೈಕಿ ಹಲವರು ಉತ್ತರ ಭಾರತದ ಮಿಜೋರಾಂ ಸೇರಿದಂತೆ ವಿವಿಧ ರಾಜ್ಯಗಳತ್ತ ವಲಸೆ ಮಾಡಿದ್ದಾರೆ.

ಶುಕ್ರವಾರದವರೆಗಿನ ಮಾಹಿತಿಯಂತೆ ಸುಮಾರು 264 ಮಂದಿ ವಲಸೆ ಬಂದಿದ್ದು, ಈ ಪೈಕಿ 198 ಮಂದಿ ಪೊಲೀಸ್ ಸಿಬ್ಬಂದಿ ಮತ್ತು ಅವರ ಕುಟುಂಬ ಸದಸ್ಯರು ಸೇರಿದ್ದಾರೆ ಎಂದು ಭದ್ರತಾ ಸಿಬ್ಬಂದಿ ಮಾಹಿತಿ ನೀಡಿದ್ದಾರೆ.

ಮ್ಯಾನ್ಮಾರ್‌ನಿಂದ ಭಾರತಕ್ಕೆ ಬರಲು ಮುಖ್ಯ ಕಾರಣವೆಂದರೆ ಸೇನಾಡಳಿತ ದಡಿ ಕೆಲಸ ಮಾಡಲು ತಾವು ಬಯಸುವುದಿಲ್ಲ ಎಂಬುದೇ ಆಗಿದೆ ಎಂದು ಹೆಸರು ಹೇಳಲು ಬಯಸದ ಅಧಿಕಾರಿಯೊಬ್ಬರು ತಿಳಿಸಿದರು.

ಮಿಲಿಟರಿ ಆಡಳಿತದಡಿ ಸೇವೆಗೆ ರಾಜೀನಾಮೆ ನೀಡಿ ಜನತೆಯೊಂದಿಗೆ ಕೈಜೋಡಿಸಿ ಹೋರಾಟಕ್ಕೆ ಇಳಿದರೆ ಸೇನಾಡಳಿತ ಕೊನೆಗಾಣಿಸಬಹುದು ಎಂಬುದು ಮತ್ತೊಂದು ಕಾರಣ ಎಂದು ತಿಳಿಸಿದರು.

'ಪ್ರತಿಭಟನೆಯಲ್ಲಿ ಭಾಗಿಯಾಗದವರು, ರಸ್ತೆ ಬಂದಿ ನಿಂತಿದ್ದವರು ಸೇರಿದಂತೆ ಬಹುತೇಕ ಎಲ್ಲರನ್ನೂ ಪೊಲೀಸರು ಬಂಧಿಸುವುದನ್ನು ನಾನು ಗಮನಿಸಿದ್ದೇನೆ' ಎಂದರು.

ಗಡಿ ದಾಟಿ ಭಾರತಕ್ಕೆ ಬಂದವರಲ್ಲಿ ಸುಮಾರು ಎಂಟು ಜನರನ್ನು ಮರಳಿ ವಾಪಸು ಕಳುಹಿಸಲಾಗಿದೆ. ಗಡಿದಾಟಲು ಸುಮಾರು 12ಕ್ಕೂ ಅಧಿಕ ಜನರು ಕಾಯುತ್ತಿದ್ದಾರೆ ಎಂದು ಗಡಿ ಭಾಗದ ಗ್ರಾಮವೊಂದರ ಮುಖಂಡರು ತಿಳಿಸಿದ್ದಾರೆ.

ಪ್ರತಿಭಟನೆ ತೀವ್ರ, ಮತ್ತೆ 6 ಸಾವು

ಮ್ಯಾನ್ಮಾರ್ (ರಾಯಿಟರ್ಸ್): ಸೇನಾದಂಗೆ ವಿರುದ್ಧ ಪ್ರತಿಭಟನೆ ಇನ್ನಷ್ಟು ಚುರುಕುಗೊಂಡಿದ್ದು, ಸೇನಾಪಡೆಗಳು ಗುಂಡಿಗೆ ಮತ್ತೆ ಸುಮಾರು 6 ಮಂದಿ ಮೃತಪಟ್ಟಿದ್ದಾರೆ. 1988ರ ಘರ್ಷಣೆಯಲ್ಲಿ ಮೃತಪಟ್ಟಿದ್ದ ವಿದ್ಯಾರ್ಥಿಯೊಬ್ಬರ ವರ್ಷದ ಸ್ಮರಣೆ ಕಾರ್ಯಕ್ರಮ ಶನಿವಾರ ಹಿಂಸೆಗೆ ತಿರುಗಿತು.

ಮ್ಯಾಂಡಲೇ ನಗರದಲ್ಲಿ ಪ್ರತಿಭಟನಕಾರರ ಮೇಲೆ ಪೊಲೀಸರು ಗುಂಡು ಹಾರಿಸಿದ್ದು ಮೂವರು ಸತ್ತರು. ಸೆಂಟ್ರಲ್ ಟೌನ್‌ನಲ್ಲಿ ಒಬ್ಬರು, ಯಂಗೋನ್‌ನಲ್ಲಿ ಇಬ್ಬರು ಮೃತಪಟ್ಟರು ಎಂದು ವರದಿಗಳು ತಿಳಿಸಿವೆ.

ಗಾಯಾಳುಗಳ ಬಳಿ ಆ್ಯಂಬುಲೆನ್ಸ್ ಹೋಗದಂತೆ ಭದ್ರತಾ ಸಿಬ್ಬಂದಿ ಮೊದಲು ತಡೆದರು. ಗಾಯಗೊಂಡಿದ್ದ ಒಬ್ಬರು ಆ್ಯಂಬುಲೆನ್ಸ್ ಬರುವ ವೇಳೆಗೇ ಮೃತಪಟ್ಟಿದ್ದರು ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದರು.

ಮ್ಯಾನ್ಮಾರ್‌ನಲ್ಲಿ ಪ್ರಜಾಪ್ರಭುತ್ವ ಮರುಸ್ಥಾಪಿಪನೆಗೆ ಅಮೆರಿಕ, ಭಾರತ, ಆಸ್ಟ್ರೇಲಿಯ, ಜಪಾನ್ ಮುಖಂಡರು ಈಚೆಗೆ ಆಗ್ರಹಪಡಿಸಿದ್ದರು. ಪ್ರತಿಭಟನೆ ಹತ್ತಿಕ್ಕಲು ಸೇನಾಡಳಿತ ಯತ್ನಿಸುತ್ತಿದೆ.

ಅಮೆರಿಕ: ಮ್ಯಾನ್ಮಾರ್‌ನ ಪ್ರಜೆಗಳಿಗೆ ತಾತ್ಕಾಲಿಕ ರಕ್ಷಣೆ

ವಾಷಿಂಗ್ಟನ್ (ಎಪಿ): ಜೋ ಬೈಡನ್ ನೇತೃತ್ವದ ಅಮೆರಿಕ ಸರ್ಕಾರವು ಮ್ಯಾನ್ಮಾರ್ ಪ್ರಜೆಗಳಿಗೆ ಅಮೆರಿಕದಲ್ಲಿ ಕಾನೂನಾತ್ಮಕ ರೀತಿಯಲ್ಲಿ ತಾತ್ಕಾಲಿಕವಾಗಿ ನೆಲೆಸಲು ಅನುಮತಿ ನೀಡಿದೆ. ಈಗಾಗಲೇ ಅಮೆರಿಕದಲ್ಲಿ ನೆಲೆಸಿರುವ ಮ್ಯಾನ್ಮಾರ್‌ನ ಪ್ರಜೆಗಳಿಗೆ ಮಾತ್ರ ಈ ಅವಕಾಶವನ್ನು ಕಲ್ಪಿಸಲಾಗಿದೆ.

ಅಲೆಜಾಂಡ್ರೊ

'ಅಮೆರಿಕದಲ್ಲಿ ವಾಸವಿರುವ ಮ್ಯಾನ್ಮಾರ್‌ನ ಜನರಿಗೆ ತಾತ್ಕಾಲಿಕ ರಕ್ಷಣೆ ನೀಡಲಾಗಿದೆ. ಇದು 18 ತಿಂಗಳವರೆಗೂ ಇರುತ್ತದೆ' ಎಂದು ಹೋಂಲ್ಯಾಂಡ್ ಸೆಕ್ಯುರಿಟಿ ಇಲಾಖೆಯ ಕಾರ್ಯದರ್ಶಿ ಅಲೆಜಾಂಡ್ರೊ ಮಯೋರ್ಕಾಸ್ ಅವರು ತಿಳಿಸಿದ್ದಾರೆ.

'ಮ್ಯಾನ್ಮಾರ್‌ನಲ್ಲಿ ಮಿಲಿಟರಿ ದಂಗೆಯಿಂದಾಗಿ ಮಾನವೀಯತೆ ನಾಶವಾಗುತ್ತಿದೆ. ಅಲ್ಲದೆ ಆರ್ಥಿಕ ಬಿಕ್ಕಟ್ಟು ಕೂಡ ಹೆಚ್ಚಿದೆ. ಇದರಿಂದಾಗಿ ಬೇರೆ ದೇಶಗಳಲ್ಲಿ ನೆಲೆಸಿರುವ ಮ್ಯಾನ್ಮಾರ್ ಪ್ರಜೆಗಳಿಗೆ ತನ್ನ ರಾಷ್ಟ್ರಕ್ಕೆ ಮರಳಲು ಬಹಳ ಕಷ್ಟವಾಗುತ್ತಿದೆ' ಎಂದು ಅವರು ಹೇಳಿದ್ದಾರೆ.

ಫೆಬ್ರುವರಿ 1ರಂದು ನಾಯಕಿ ಆಂಗ್ ಸಾನ್ ಸೂಕಿ ನೇತೃತ್ವದ ಚುನಾಯಿತ ಸರ್ಕಾರದ ವಿರುದ್ಧ ದಂಗೆ ಎದ್ದು, ಮಿಲಿಟರಿ ಆಡಳಿತ ಚುಕ್ಕಾಣಿ ಹಿಡಿಯಿತು. ಇದನ್ನು ವಿರೋಧಿಸಿ ಮ್ಯಾನ್ಮಾರ್‌ನಲ್ಲಿ ಹಲವು ದಿನಗಳಿಂದ ಪ್ರತಿಭಟನೆ ನಡೆಯುತ್ತಿದೆ. ಭದ್ರತಾ ಪಡೆಗಳು ಪ್ರತಿಭಟನೆಯನ್ನು ವಿವಿಧ ರೀತಿಯಲ್ಲಿ ಹತ್ತಿಕ್ಕುತ್ತಿವೆ.

ಪ್ರಶಸ್ತಿ ಪ್ರದಾನ

ಧಾರವಾಡದ ಸೃಜನಾ ರಂಗಮಂದಿರದಲ್ಲಿ ಶನಿವಾರ ಜರುಗಿದ ಪಂಡಿತ್ ಬಸವರಾಜ ರಾಜಗುರು ರಾಷ್ಟ್ರೀಯ ಟ್ರಸ್ಟ್‌ನ ಕಾರ್ಯಕ್ರಮದಲ್ಲಿ ಪಂಡಿತ್ ಗಣಪತಿಭಟ್ ಹಾಸಣಗಿ (ಕುಳಿತವರಲ್ಲಿ ಮಧ್ಯದವರು) ಅವರಿಗೆ ರಾಷ್ಟ್ರೀಯ ಪ್ರಶಸ್ತಿ, ಉಸ್ತಾದ್ ಹಫೀಜ್ ಬಾಲೇಖಾನ್ ಮತ್ತು ಲಕ್ಷ್ಮೀ ನಾಗರಾಜ್ ಅವರಿಗೆ ಯುವ ಪುರಸ್ಕಾರವನ್ನು ಸಚಿವ ಜಗದೀಶ ಶೆಟ್ಟರ್ ಪ್ರದಾನ ಮಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಮಂಜುಳಾ ಯಲಿಗಾರ, ಟ್ರಸ್ಟ್‌ನ ಉದಯ ದೇಸಾಯಿ, ಚಂದ್ರಕಾಂತ ಬೆಲ್ಲದ, ಹುಡಾ ಅಧ್ಯಕ್ಷ ನಾಗೇಶ ಕಲಬುರ್ಗಿ, ಜಿಲ್ಲಾಧಿಕಾರಿ ನಿತೇಶ್ ಕೆ.ಪಾಟೀಲ, ನಿಜಗುಣ ರಾಜಗುರು, ಪಂಡಿತ್ ಪರಮೇಶ್ವರ ಹೆಗಡೆ, ಭಾರತಿದೇವಿ ರಾಜಗುರು ಇದ್ದಾರೆ.

'ಸುಪ್ರೀಂ'ನಲ್ಲಿ ಒಬ್ಬರೇ ಮಹಿಳಾ ನ್ಯಾಯಮೂರ್ತಿ: ಆತ್ಮಾವಲೋಕನ ಅಗತ್ಯ'

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): 'ಸುಪ್ರೀಂ ಕೋರ್ಟ್‌ನಲ್ಲಿ ಸದ್ಯ ಒಬ್ಬರೇ ಮಹಿಳಾ ನ್ಯಾಯಮೂರ್ತಿ ಇದ್ದಾರೆ. ಇದು, ಕಳವಳದ ಸಂಗತಿ. ಈ ಬಗ್ಗೆ ಗಂಭೀರವಾದ ಆತ್ಮಾವಲೋಕನ ಅಗತ್ಯ' ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಹೇಳಿದರು.

ವಕೀಲಿ ವೃತ್ತಿಯಿಂದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಮೊದಲಿಗೆ ನೇಮಕವಾಗಿದ್ದ ಇಂದು ಮಲ್ಹೋತ್ರಾ ಅವರು ನಿವೃತ್ತಿ ಹಿನ್ನೆಲೆಯಲ್ಲಿ ಯುವ ವಕೀಲರ ವೇದಿಕೆ ಆಯೋಜಿಸಿದ್ದ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನ್ಯಾಯಮೂರ್ತಿ ಇಂದು ಮಲ್ಹೋತ್ರಾ ನಿವೃತ್ತಿ ಆಗುತ್ತಿದ್ದಾರೆ ಎಂದರೆ, ಉಳಿದಂತೆ ಒಬ್ಬರು ಮಹಿಳಾ ನ್ಯಾಯಮೂರ್ತಿಯಷ್ಟೇ ಉಳಿಯುತ್ತಾರೆ. ಒಂದು ಸಂಸ್ಥೆಯಾಗಿ ಇದೊಂದು ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಸಂಗತಿ ಎಂದು ಹೇಳಿದರು.

ದೇಶದ ವೈವಿಧ್ಯಯತೆಯು ಕೋರ್ಟ್‌ನಲ್ಲಿಯೂ ಬಿಂಬಿತವಾಗುವಂತೆ ನೋಡಿಕೊಳ್ಳಬೇಕು. ಇಂಥ ಕ್ರಮಗಳು ಸಂಸ್ಥೆಯ ಬಗೆಗೆ ಸಾರ್ವಜನಿಕರಲ್ಲೂ ವಿಶ್ವಾಸಾರ್ಹತೆಯನ್ನು ಹೆಚ್ಚಿಸಲಿವೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಮಾತನಾಡಿದ ಇಂದು ಮಲ್ಹೋತ್ರಾ ಅವರು, ಒಬ್ಬ ವಕೀಲರಾಗಿ ಉನ್ನತ ವೃತ್ತಿಪರತೆ ಕಾಯ್ದುಕೊಳ್ಳುವುದು ಈಗಿನ ಅಗತ್ಯ ಎಂದು ಸಲಹೆ ಮಾಡಿದರು.

ಜೂನ್ 28ರಿಂದ ಅಮರನಾಥ ಯಾತ್ರೆ ಆರಂಭ

ಶ್ರೀನಗರ: ದಕ್ಷಿಣ ಕಾಶ್ಮೀರ ಹಿಮಾಲಯದ 52 ದಿನಗಳ ಪವಿತ್ರ ಅಮರನಾಥ ಯಾತ್ರೆಯು ಜೂನ್ 28ರಂದು ಆರಂಭವಾಗಲಿದೆ. ಆಗಸ್ಟ್ 22ರಂದು ಯಾತ್ರೆ ಅಂತ್ಯವಾಗಲಿದೆ.

3,880 ಮೀಟರ್ ಎತ್ತರದಲ್ಲಿನ ನೈಸರ್ಗಿಕ ಮಂಜಿನ ಶಿವಲಿಂಗ ದರ್ಶನದ ಯಾತ್ರೆಯು ಕಳೆದ ವರ್ಷ ಕೋವಿಡ್ ಬಿಕ್ಕಟ್ಟು ಕಾರಣದಿಂದ ಸ್ಥಗಿತಗೊಂಡಿತ್ತು. ಕಾಶ್ಮೀರಕ್ಕೆ ವಿಶೇಷಾಧಿಕಾರ ನೀಡಿದ್ದ 370ನೇ ವಿಧಿ ರದ್ದು ಕಾರಣದಿಂದ ಉಂಟಾದ ಗಲಭೆ ಕಾರಣದಿಂದ 2019ರಲ್ಲೂ ಸಹ ಯಾತ್ರೆಯನ್ನು ರದ್ದುಗೊಳಿಸಲಾಗಿತ್ತು.

ಕೋವಿಡ್ 19 ಮಾರ್ಗಸೂಚಿ ಪ್ರಕಾರವೇ ಯಾತ್ರೆಯನ್ನು ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಟ್ಕಳದ ವ್ಯಕ್ತಿ ಬಂಧನ: 2.1 ಕೆ.ಜಿ ಚಿನ್ನ ವಶ

ಪಣಜಿ: ದುಬೈಯಿಂದ ಗೋವಾಗೆ ವಿಮಾನದಲ್ಲಿ ಬಂದಿಳಿದ ಭಟ್ಕಳ ಮೂಲದ ವ್ಯಕ್ತಿಯೊಬ್ಬರನ್ನು ಬಂಧಿಸಿರುವ ಕಂದಾಯ ಗುಪ್ತದಳ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು, ಅವರಿಂದ 2.1 ಕೆ.ಜಿ ಚಿನ್ನವನ್ನು ವಶಪಡಿಸಿಕೊಂಡಿದ್ದಾರೆ.

ಭಟ್ಕಳ ಮೂಲದ, 45 ವರ್ಷದ ವ್ಯಕ್ತಿ ಅಕ್ಬರ್ ಅಬುಬಖ್ರ್ ಎಂಬವರಿಂದ ಚಿನ್ನದ 18 ಬಿಸ್ಕೆಟ್ ವಶಪಡಿಸಿಕೊಳ್ಳಲಾಗಿದೆ. ಇವುಗಳ ತೂಕ 2.1 ಕೆ.ಜಿ ಆಗಿದ್ದು, ಒಟ್ಟು ಮೌಲ್ಯ 97 ಲಕ್ಷ ಆಗಲಿದೆ ಡಿಆರ್‌ಐ ಈ ಕುರಿತ ಹೇಳಿಕೆಯಲ್ಲಿ ತಿಳಿಸಿದೆ.

ಶತಾಬ್ದಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಬೆಂಕಿ ಅವಘಡ

ಡೆಹ್ರಾಡೂನ್ (ಪಿಟಿಐ): ದೆಹಲಿಯಿಂದ ಡೆಹ್ರಾಡೂನ್‌ಗೆ ಹೋಗುತ್ತಿದ್ದ ಶತಾಬ್ದಿ ಎಕ್ಸ್‌ಪ್ರೆಸ್ ರೈಲು ಉತ್ತರಾಖಂಡದ ಕಾನ್ಸ್ರೋ ರೈಲ್ವೆ ನಿಲ್ದಾಣದ ಬಳಿ ಸಂಚರಿಸುತ್ತಿದ್ದ ವೇಳೆ ಬೋಗಿಯೊಂದರಲ್ಲಿ ಬೆಂಕಿ ಅವಘಡ ಸಂಭವಿಸಿದೆ.

ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದಾಗಿ ರೈಲಿನ ಸಿ-4 ಬೋಗಿಯಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ಉತ್ತರಾಖಂಡ ಪೊಲೀಸ್ ಮಹಾನಿರ್ದೇಶಕ ಅಶೋಕ್ ಕುಮಾರ್ ಮಾಹಿತಿ ನೀಡಿದ್ದಾರೆ.

ಶತಾಬ್ದಿ ಎಕ್ಸ್‌ಪ್ರೆಸ್ ರೈಲಿನ ಸಿ-5 ಕಂಪಾರ್ಟ್‌ಮೆಂಟ್‌ನಲ್ಲಿ ಶಾರ್ಟ್ ಸರ್ಕಿಟ್‌ನಿಂದಾಗಿ ಶನಿವಾರ ಬೆಂಕಿ ಕಾಣಿಸಿಕೊಂಡಿದೆ. ಬೋಗಿಯಲ್ಲಿ ಒಟ್ಟು 35 ಪ್ರಯಾಣಿಕರಿದ್ದರು. ಯಾರೊಬ್ಬರೂ ಗಾಯಗೊಂಡಿರುವ ಬಗ್ಗೆ ವರದಿಯಾಗಿಲ್ಲ. ಎಲ್ಲರನ್ನೂ ಸುರಕ್ಷಿತವಾಗಿ ಮತ್ತೊಂದು ಬೋಗಿಗೆ ಸ್ಥಳಾಂತರಿಸಲಾಯಿತು. ಬೆಂಕಿ ಕಾಣಿಸಿಕೊಂಡಿದ್ದ ಬೋಗಿಯನ್ನು ಬೇರ್ಪಡಿಸಲಾಗಿದೆ. ರೈಲು ಸುರಕ್ಷಿತವಾಗಿ ಡೆಹ್ರಾಡೂನ್ ತಲುಪಿದೆ ಎಂದು ಅಶೋಕ್‌ಕುಮಾರ್ ತಿಳಿಸಿದ್ದಾರೆ.

ಕಾನ್ಸ್ರೋ ರೈಲ್ವೆ ನಿಲ್ದಾಣದ ಬಳಿ ರೈಲಿನಲ್ಲಿ ಕಾಣಿಸಿಕೊಂಡ ಬೆಂಕಿ

ಟಿಕ್ರಿ ಗಡಿ: 25 ಶಾಶ್ವತ ಮನೆ ಕಟ್ಟಿಕೊಂಡು ರೈತರ ಹೋರಾಟ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೃಷಿ ಕಾಯ್ದೆಗಳನ್ನು ಹಿಂಪಡೆಯುವಂತೆ ಒತ್ತಾಯಿಸಿ ದೆಹಲಿ ಗಡಿಗಳಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರು ಇದೀಗ ಅಲ್ಲಿಯೇ ಶಾಶ್ವತ ಮನೆಗಳನ್ನು ಕಟ್ಟಿಕೊಳ್ಳುವ ಮೂಲಕ ಕೃಷಿ ಕಾಯ್ದೆಗಳನ್ನು ರದ್ದು ಮಾಡದ ಹೊರತು ಯಾವುದೇ ಕಾರಣಕ್ಕೂ ಪ್ರತಿಭಟನೆ ಹಿಂಪಡೆಯುವುದಿಲ್ಲ ಎಂಬ ಸಂದೇಶ ರವಾನಿಸಿದ್ದಾರೆ.

ಟಿಕ್ರಿ ಗಡಿಯಲ್ಲಿ ಕಿಸಾನ್ ಸೋಶಿಯಲ್ ಆರ್ಮಿಯು ಪ್ರತಿಭಟನೆಯಲ್ಲಿ ತೊಡಗಿರುವ ರೈತರಿಗಾಗಿ ಶಾಶ್ವತ ಮನೆಗಳನ್ನು ನಿರ್ಮಿಸಿದೆ.

'ಈ ಮನೆಗಳು ತಾತ್ಕಾಲಿಕ ಸ್ವರೂಪದ್ದಾಗಿರದೇ ಗಟ್ಟಿಮುಟ್ಟಾಗಿವೆ. ಸದ್ಯ 25 ಮನೆಗಳನ್ನು ನಿರ್ಮಿಸಲಾಗಿದೆ, ಮುಂಬರುವ ದಿನಗಳಲ್ಲಿ ಅಂತಹುದೇ 1000-2000 ಮನೆಗಳನ್ನು ನಿರ್ಮಿಸಲಾಗುವುದು" ಎಂದು ಕಿಸಾನ್ ಸೋಷಿಯಲ್ ಆರ್ಮಿಯ ಅನಿಲ್ ಮಲಿಕ್ ಎಎನ್‌ಐಗೆ ತಿಳಿಸಿದ್ದಾರೆ.

ಈ ಮಧ್ಯೆ, ಶುಕ್ರವಾರ ರಾಜಸ್ಥಾನದ ಜೋಧಪುರದ ಪಿಪರ್‌ನಲ್ಲಿ ರೈತರ 'ಮಹಾಪಂಚಾಯತ್' ಉದ್ದೇಶಿಸಿ ಮಾತನಾಡಿದ್ದ ಭಾರತೀಯ ಕಿಸಾನ್ ಯೂನಿಯನ್ ಮುಖಂಡ ರಾಕೇಶ್ ಟಿಕಾಯತ್, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವನ್ನು ಯಾರೊಬ್ಬರ ಮಾತನ್ನೂ ಕೇಳದ 'ಇಬ್ಬರು ವ್ಯಕ್ತಿಗಳ ಆಡಳಿತ' ಎಂದು ಟೀಕಿಸಿದ್ದರು. 'ಸರ್ಕಾರವಿದ್ದರೆ ಮಾತುಕತೆ ಸಾಧ್ಯವಾಗುತ್ತಿತ್ತು. ಆದರೆ, ದೇಶದಲ್ಲಿ ಇಬ್ಬರು ವ್ಯಕ್ತಿಗಳ ಸರ್ಕಾರವಿದೆ. ಈ ಆಡಳಿತವು ಯಾರ ಅಭಿಪ್ರಾಯವನ್ನೂ ಆಲಿಸುವುದಿಲ್ಲ' ಎಂದು ಹೇಳಿದರು.

ನರೇಂದ್ರ ಮೋದಿ ಸರ್ಕಾರವು ತಮ್ಮನ್ನು ಗುರಿಯಾಗಿಸಿಕೊಂಡು ತನಿಖೆ ನಡೆಸಬಹುದೆಂಬ ಭಯದಿಂದ ಪ್ರತಿಪಕ್ಷದ ನಾಯಕರು ಸಹ ರೈತರ ಪ್ರತಿಭಟನೆಗೆ ಹೆಚ್ಚಿನ ಬೆಂಬಲ ನೀಡುತ್ತಿಲ್ಲ ಎಂದು ಟಿಕಾಯತ್ ವಾಗ್ದಾಳಿ ನಡೆಸಿದರು.



ಪ್ರತಿಭಟನಾ ನಿರತ ರೈತರನ್ನು ಉದ್ದೇಶಿಸಿ ರಾಕೇಶ್ ಟಿಕಾಯತ್ ಭಾಷಣ

ವಾಜೆಗೆ ಮಧ್ಯಂತರ ಜಾಮೀನು ನಿರಾಕರಣೆ

ಮುಂಬೈ: ಆಟೊಮೊಬೈಲ್ ಬಿಡಿಭಾಗಗಳ ಡೀಲರ್ ಮನ್‌ಸುಖ್ ಹಿರೆನ್ ಅವರ ನಿಗೂಢ ಸಾವಿನ ಪ್ರಕರಣದಲ್ಲಿ ಟೀಕೆಗೊಳಗಾಗಿರುವ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಅವರಿಗೆ ಮಧ್ಯಂತರ ಜಾಮೀನು ನೀಡಲು ಠಾಣಾ ಜಿಲ್ಲಾ ಸೆಷೆನ್ಸ್ ನ್ಯಾಯಾಲಯ ಶನಿವಾರ ನಿರಾಕರಿಸಿದೆ.

ಹೆಚ್ಚುವರಿ ಸೆಷೆನ್ಸ್ ನ್ಯಾಯಾಧೀಶರಾದ ಶೈಲೇಂದ್ರ ತಾಂಬೆ ಅವರು, 'ಪ್ರಕರಣದಲ್ಲಿ ಅರ್ಜಿದಾರರಾದ ಸಚಿನ್ ವಾಜೆ ಅವರ ವಿರುದ್ಧ ಪ್ರಾಥಮಿಕ ಸಾಕ್ಷ್ಯಗಳು ಮತ್ತು ಪುರಾವೆಗಳಿವೆ. ಈ ನ್ಯಾಯಾಲಯವು ಅವರಿಗೆ ಮಧ್ಯಂತರ ಜಾಮೀನು ನೀಡುವುದಿಲ್ಲ. ಈ ಪ್ರಕರಣದಲ್ಲಿ ಸಚಿನ್ ಅವರನ್ನು ವಿಚಾರಗೊಳಪಡಿಸುವ ಅಗತ್ಯವಿದೆ' ಎಂದು ಹೇಳಿದರು.

ಸಚಿನ್ ವಾಜೆ

'ವಾಜೆ ಅವರ ವಿರುದ್ಧದ ಆರೋಪಗಳಲ್ಲಿ ಸೆಕ್ಷನ್ 302 (ಕೊಲೆ), ಸೆಕ್ಷನ್ 201 (ಸಾಕ್ಷ್ಯಗಳ ನಾಶ) ಮತ್ತು ಐಪಿಸಿಯ 120 (ಬಿ) (ಕ್ರಿಮಿನಲ್ ಪಿತೂರಿ) ಸೇರಿವೆ. ಇವರು ಗಂಭೀರ ಅಪರಾಧಗಳಾಗಿವೆ. ಅಷ್ಟೇ ಅಲ್ಲ, ಆರೋಪಿ ಸಚಿನ್, ಫೆ. 27, 28ರಂದು ಮನ್‌ಸುಖ್ ಹಿರೆನ್ ಅವರೊಂದಿಗೆ ಮುಂಬೈನಲ್ಲಿದ್ದರು ಎನ್ನುವುದು ತಿಳಿದು ಬಂದಿದೆ. ದೂರಿನಲ್ಲಿ ಹಿರೆನ್ ಅವರ ಪತ್ನಿ ಕೂಡಾ ನಿರ್ದಿಷ್ಟವಾಗಿ ಸಚಿನ್ ವಾಜೆ ಅವರ ಹೆಸರನ್ನು ಹೇಳಿದ್ದಾರೆ' ಎಂದು ನ್ಯಾಯಾಲಯವು ತಿಳಿಸಿದೆ.

'ಎಫ್‌ಐಆರ್‌ನಲ್ಲಿ ಹಿರೆನ್ ಅವರ ಪತ್ನಿ ನೇರವಾಗಿ ವಾಜೆ ಅವರ ವಿರುದ್ಧ ಆರೋಪ ಮಾಡಿದ್ದಾರೆ. ಹಾಗಾಗಿ, ಈ ಪ್ರಕರಣವು ತನಿಖೆಯ ಆರಂಭಿಕ ಹಂತದಲ್ಲಿದೆ ಎನ್ನುವ ತೀರ್ಮಾನಕ್ಕೆ ಬರಲಾಗಿದೆ' ಎಂದೂ ನ್ಯಾಯಾಲಯವು ಹೇಳಿದೆ.

ತನಿಖೆಗೆ ಸಹಕರಿಸುವುದಾಗಿ ಕೋರಿ, ಬಂಧನಕ್ಕೆ ಮುನ್ನವೇ ಸಚಿನ್ ಪರ ವಕೀಲರಾದ ಎ.ಎಂ. ಕೇಳ್ಕರ್ ಮಧ್ಯಂತರ ಜಾಮೀನು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ವಿವೇಕ್ ಕಡು ಅವರು, ಪ್ರಕರಣದಲ್ಲಿ ತನಿಖೆಯು ನಿರ್ಣಾಯಕ ಹಂತದಲ್ಲಿದೆ. ಹಾಗಾಗಿ, ಆರೋಪಿಗೆ ಜಾಮೀನು ನೀಡಬಾರದು ಎಂದು ವಾದಿಸಿದರು.

ಸಚಿನ್ ಅವರ ಅರ್ಜಿ ವಿಚಾರಣೆಯನ್ನು ಮಾರ್ಚ್ 19ಕ್ಕೆ ಮುಂದೂಡಿದ ನ್ಯಾಯಾಲಯವು, ಈ ವೇಳೆ ಅರ್ಜಿಗೆ ಪ್ರತಿಯಾಗಿ ಅಫಿಡವಿಟ್ ಸಲ್ಲಿಸುವಂತೆ ಎನ್‌ಟಿಎಸ್ ತನಿಖಾಧಿಕಾರಿಗೆ ನಿರ್ದೇಶನ ನೀಡಿತು.

ದೇಹ ರಾಜಕಾರಣದ ದಾಳವಾಗಿ ಮಹಿಳೆ

ಕಲೆ: ಭಾವು ಪತ್ತಾರ್

ಲೈಂಗಿಕ ಹಗರಣದ ಆರೋಪ ಎದುರಿಸಿದ ರಾಜ್ಯದ ರಾಜಕಾರಣಿಗಳಲ್ಲಿ ರಮೇಶ್ ಜಾರಕಿಹೊಳಿ ಅವರೇನೂ ಮೊದಲಿಗರಲ್ಲ. ಪ್ರಾಯಶಃ ಕೊನೆಯವರೂ ಆಗಲಾರರು. ಅಧಿಕಾರದ ಗದ್ದುಗೆಗೆ ಏರಿ ಕುಳಿತವರನ್ನೇ ಇಂತಹ ಹಗರಣಗಳು ಸುತ್ತಿಕೊಳ್ಳುವುದೇಕೆ? ವಿಷಕನ್ಯೆ, ಮೋಹಿನಿ, ಮಾಯೆ, ಅನಾಮಿಕೆ... ಹೀಗೆ ವಿವಿಧ ಪಾತ್ರ ರೂಪಕಗಳು ಹೇಳುವ ಕಥೆಯಾದರೂ ಯಾವುದನ್ನು?

ಚಾರಿತ್ರಿಕ ವಾಸ್ತವ ಮತ್ತು ಪುರಾಣಗಳ ರೂಪಕ

ಬರಗೂರು ರಾಮಚಂದ್ರಪ್ಪ

ರಾಣಿ ಸ್ಥಾನದಲ್ಲಿದ್ದರೂ ಮಹಿಳೆಯು ಶೋಷಿತಳೇ ಆಗಿರುತ್ತಾಳೆ ಎಂಬ ಮಾತೊಂದಿದೆ. ಹೀಗೆ ಪ್ರಚಲಿತವಿರುವ ಈ ಮಾತು ಮಹಿಳೆಯರನ್ನು ಎರಡನೇ ದರ್ಜೆಯ ಪ್ರಜೆಯಂತೆ ಕಾಣುತ್ತ ಬಂದ ವ್ಯವಸ್ಥೆಯ ಒಂದು ವ್ಯಾಖ್ಯಾನವೂ ಆಗಿದೆ. ಉತ್ಪಾದನಾ ಪದ್ಧತಿಯನ್ನು ತನ್ನ ಯಜಮಾನಿಕೆಯ ನಿಯಂತ್ರಣದಲ್ಲಿಟ್ಟುಕೊಂಡ ಪುರುಷ, ಆರ್ಥಿಕವಾಗಿ ಅಷ್ಟೇ ಅಲ್ಲ. ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಯಲ್ಲೂ 'ಯಜಮಾನ ಸಿಂಹಾಸನ'ದ ಆನುವಂಶಿಕ ಹಕ್ಕುದಾರನಾಗಿಬಿಟ್ಟ.

ಜಾತಿ, ವರ್ಣ, ವರ್ಗ ಮತ್ತು ಧರ್ಮಗಳ ನೆಲೆಯಲ್ಲೂ ಈ ಯಜಮಾನಿಕೆಯೇ ಮಾನ್ಯವಾಗಿತ್ತು. ಮುಂದೆ ಕೆಲವು ಸುಧಾರಣೆಗಳಿಂದ ಪುರುಷ ಪ್ರಧಾನ ಯಜಮಾನಿಕೆಯಲ್ಲಿ 'ಅನಿವಾರ್ಯ ಔದಾರ್ಯ' ಕಾಣಿಸಿಕೊಳ್ಳತೊಡಗಿತು. ಆದರೆ, ಮಹಿಳೆಯರ ಸ್ಥಿತಿಗತಿಗಳು ಸಂಪೂರ್ಣ ಸ್ಥಿತ್ಯಂತರ ಹೊಂದಿಲ್ಲ. ಅಷ್ಟೇಕೆ, ಎಲ್ಲಾ ಮಹಿಳೆಯರ ಸ್ಥಿತಿಗತಿಗಳ ಸ್ವರೂಪ ಒಂದೇ ರೀತಿಯದಾಗಿಲ್ಲ. ರಾಣಿಸ್ಥಾನದಲ್ಲಿರುವ ಮಹಿಳೆ ಪುರುಷ ಪ್ರಧಾನತೆಯ ಅಡಿಯಲ್ಲಿದ್ದರೂ ಆಕೆ ಇತರೆ ವರ್ಗದ ಮಹಿಳೆಯರಂತೆ ವರ್ಗ ಶೋಷಣೆಯ ಮೊದಲ ಉದಾಹರಣೆ ಆಗುವುದಿಲ್ಲ. ರೈತ, ಕೂಲಿ, ಅಸ್ಪೃಶ್ಯ ಎನ್ನಲಾಗುವ ಸಾಮಾಜಿಕ ಅವಮಾನವನ್ನು ರಾಣಿಯೇ ಮುಂತಾದ ಮೇಲ್ವರ್ಗದ ಮಹಿಳೆ ಅನುಭವಿಸುವುದಿಲ್ಲ. ಸಾಮಾನ್ಯೀಕೃತ ನೆಲೆಯಲ್ಲಿ ಎಲ್ಲಾ ಮಹಿಳೆಯರೂ ಶೋಷಿತರಾದರೂ ಶೋಷಣೆಯ ಆಳ, ಅಗಲಗಳ ಆಯಾಮದಲ್ಲಿ ಅಂತರವಿದ್ದೇ ಇರುತ್ತದೆ. ಇದು ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯ ವಾಸ್ತವ. ಆದರೂ ಪುರುಷ ಪ್ರಧಾನ ವ್ಯವಸ್ಥೆಯು ಒಟ್ಟಾರೆಯಾಗಿ ಮಹಿಳೆಯರನ್ನು ಬಳಸಿಕೊಂಡ ರೀತಿ ಭೀಕರವೆಂದೇ ಹೇಳಬೇಕಾಗುತ್ತದೆ.

ಹೀಗೆ ಮಹಿಳೆಯನ್ನು ಸ್ವಾರ್ಥ ಕೇಂದ್ರಿತ ದಾಳವಾಗಿ ಬಳಸಿದ ದಮನಕಾರಿ ಮಾದರಿಗಳನ್ನು ಚರಿತ್ರೆಯ ವಾಸ್ತವದಲ್ಲೂ ಪುರಾಣಗಳ ಪ್ರತೀಕಾತ್ಮಕತೆಯಲ್ಲೂ ಕಾಣಬಹುದು. ವಿಷಕನ್ಯೆಯ ಕಲ್ಪನೆಯಿಂದಲೇ (?) ದಾಳದಮನಕಾರಿ ಕೃತ್ಯಗಳ ನಿದರ್ಶನವನ್ನು ಆರಂಭಿಸಬಹುದು. ವಿಷಕನ್ಯೆಯರನ್ನು ಶತ್ರುನಾಶಕ್ಕಾಗಿ ಬಳಸಿಕೊಳ್ಳಲಾಗುತ್ತಿತ್ತು ಎಂದು ಹೇಳಲಾಗುತ್ತದೆ. ಚಾಣಕ್ಯನ (ಕೌಟಿಲ್ಯ) ಅರ್ಥಶಾಸ್ತ್ರದಲ್ಲಿ ವಿಷಕನ್ಯೆಯರ ಬಳಕೆ ಕುರಿತ ಪ್ರಸ್ತಾಪವಿದೆ. 'ಕಲ್ಕಿ ಪುರಾಣ'ವು ವಿಷಕನ್ಯೆಯರ ನೋಟದಿಂದಲೇ ಎದುರಿದ್ದವರನ್ನು ಕೊಲ್ಲಬಹುದಿತ್ತೆಂಬ ಮಾಹಿತಿ ನೀಡುತ್ತದೆ. ಚಿತ್ರಗ್ರೀವ ಎಂಬ ಗಂಧರ್ವನ ಪತ್ನಿ ಸುಲೋಚನಳು ಇಂಥ ವಿಷಕನ್ಯೆಯಾಗಿದ್ದಳೆಂದು ನಿರೂಪಿಸಲಾಗಿದೆ. ಅನೇಕ ಜನಪದ ಕಥನಗಳಲ್ಲಿ ವಿಷಕನ್ಯೆಯ ಪ್ರತೀಕ ಪಾತ್ರಗಳ ಬಳಕೆಯಾಗಿದೆ.

ಮಹಿಳೆಯರನ್ನು ವಿಷಕನ್ಯೆಯಾಗಿಸುವ ಪ್ರಕ್ರಿಯೆಯನ್ನು ಬಾಲ್ಯದಿಂದಲೇ ಆರಂಭಿಸಲಾಗುತ್ತಿತ್ತಂತೆ! ಆಹಾರದಲ್ಲಿ ವಿಷವನ್ನು ಉಣಿಸುತ್ತ ಹೆಣ್ಣುಮಕ್ಕಳ ದೇಹವನ್ನು ಅದಕ್ಕೆ ಒಗ್ಗಿಸಲಾಗುತ್ತಿತ್ತು. ಕೆಲವರು ಸತ್ತೇ ಹೋಗುತ್ತಿದ್ದರು. ಬದುಕಿದವರು ವಿಷಕನ್ಯೆಯರಾಗಿ ಬೆಳೆಯುತ್ತಿದ್ದರು. ಇವರನ್ನು ಅಧಿಕಾರಸ್ಥ ರಾಜರು ತಮ್ಮ ಶತ್ರುರಾಜರ ನಾಶಕ್ಕೆ (ಸಾವಿಗೆ) ಬಳಸುತ್ತಿದ್ದರು. ವಿಷಕನ್ಯೆಯರನ್ನು ಲೈಂಗಿಕವಾಗಿ ಬಳಸುವುದು, ವಿಷಪ್ರಾಶನದ ಸಾಧನವಾಗಿಸುವುದು-ಇವೇ ಮುಂತಾದ ಕ್ರಿಯೆಗಳಿಂದ ಸಾಮ್ರಾಜ್ಯ ವಿಸ್ತರಣೆಗೆ ವೇದಿಕೆಯಾಗಿಸಿಕೊಂಡ ಪ್ರಸಂಗಗಳನ್ನು ಕೆಲವು ಮಾಹಿತಿಗಳು ನೀಡುತ್ತವೆ. ನಂದರ ಅಮರ್ತ್ಯ ರಾಕ್ಷಸನು ಚಂದ್ರಗುಪ್ತಮೌರ್ಯನನ್ನು ಕೊಲ್ಲಲು ವಿಷಕನ್ಯೆಯನ್ನು ಕಳುಹಿಸಿದ್ದನೆಂದೂ ಚಾಣಕ್ಯನು ಅದನ್ನು ತಪ್ಪಿಸಿದನೆಂದೂ ತಿಳಿಸುವ ಉಲ್ಲೇಖಗಳಿವೆ. ಅಷ್ಟೇಕೆ ನಂದವಂಶದ ಪ್ರವರ್ತಕ ಮಹಾಪದ್ಮನಂದನು ಶಿಶುನಾಗ ವಂಶದ ರಾಜನನ್ನು ಕೊಲ್ಲಲು ವಿಷಕನ್ಯೆಯನ್ನು ಬಳಸಿದ್ದಾಗಿ ಮಾಹಿತಿಯಿದೆ. ವಿಶಾಖದತ್ತ ವಿರಚಿತ 'ಮುದ್ರಾರಾಕ್ಷಸ' ಕೃತಿಯಲ್ಲಿ ವಿಷಕನ್ಯೆ ಬಳಕೆಯ ಪ್ರಸ್ತಾಪವಿದೆ.

ಹೀಗೆ ಪುರಾಣ ಮತ್ತು ಚರಿತ್ರೆಯ ಪ್ರಸಂಗಗಳಲ್ಲಿ ಪ್ರಸ್ತಾಪಿಸಲಾದ 'ವಿಷಕನ್ಯೆಯರು' ನಿಜವಾಗಿಯೂ ವಿಷವುಂಡು ಬೆಳೆದು ಕನ್ಯೆಯರಾಗಿದ್ದರೋ ಇಲ್ಲವೋ ಎಂಬ ಪ್ರಶ್ನೆಯನ್ನು ಹೊರತುಪಡಿಸಿ ನೋಡಿದರೂ ಮಹಿಳೆಯರನ್ನು ತಮ್ಮ ರಾಜಪ್ರಭುತ್ವ ಸ್ಥಾಪನೆ ಮತ್ತು ವಿಸ್ತರಣೆಗೆ ದಾಳವಾಗಿ ಬಳಸಿಕೊಳ್ಳುತ್ತಿದ್ದ 'ಸತ್ಯವನ್ನು' ಈ ಪ್ರಸಂಗಗಳು ಪ್ರತಿನಿಧಿಸುತ್ತವೆ. 'ವಿಷಕನ್ಯೆ'ಯನ್ನು ಕಲ್ಪಿತ ರೂಪಕವೆಂದು ಭಾವಿಸಿದರೂ ಮಹಿಳಾ ದಾಳದ ಈ ರೂಪಕ ನಿರ್ಮಾಣಕ್ಕೆ ಪೂರಕವಾದ ಪ್ರಸಂಗಗಳು ರಾಜಪ್ರಭುತ್ವದ ಸಂದರ್ಭದಲ್ಲಿ ನಡೆದಿರುವುದು ನಿಜವೇ ಆಗಿರುತ್ತದೆ. ಇಂತಹ ನಿಜಗಳನ್ನು ನಿರೂಪಿಸಲು ಪೂರಕ ರೂಪಕಗಳ ನಿರ್ಮಾಣವಾಗಿರುತ್ತದೆ. ಅಧಿಕಾರ ಲಾಲಸೆಗಾಗಿ ಮಹಿಳೆಯರನ್ನು ಬಳಸಿ ಬಿಸಾಕುವ ಭೀಕರ ಮನೋವೃತ್ತಿಯು ಪ್ರಭುತ್ವ ಪದ್ಧತಿಯ ಕ್ರೌರ್ಯವನ್ನು ಸಂಕೇತಿಸುತ್ತದೆ.

ಮಹಿಳೆಯನ್ನು ಅಧಿಕಾರದ ಲಾಲಸೆಗೆ ದಾಳವಾಗಿ ಬಳಸಿದ್ದಕ್ಕೆ ಚರಿತ್ರೆಯಲ್ಲೂ ನಿದರ್ಶನಗಳಿವೆ. ಸಾಂಕೇತಿಕವಾಗಿ ಅಶೋಕಚಕ್ರವರ್ತಿ ಕಾಲದ ಒಂದು ನಿದರ್ಶನವನ್ನು ನೀಡಬಹುದು. ಬೃಹದ್ರಥ ಮೌರ್ಯನನ್ನು ಆತನ ಸೈನ್ಯದ ಮಹಾದಂಡನಾಯಕನಾಗಿದ್ದ ಪುಷ್ಯಮಿತ್ರಶುಂಗನು ಕೊಲ್ಲುವುದಕ್ಕಾಗಿ ತನ್ನ ಮಗಳನ್ನೇ ಮದುವೆ ಮಾಡಿಕೊಟ್ಟು 'ಕ್ರೌರ್ಯಸಾಧನೆ' ಮಾಡಿಸಿದನಂತೆ. ಮಗಳನ್ನು ಮದುವೆ ಮಾಡಿಸಿ, ಆಪ್ತನಾಗಿ, ಆಕೆಯನ್ನೇ ಬಳಸಿ, ಪಿತೂರಿ ಮಾಡಿ, ಹತ್ಯೆ ಮಾಡಿಸಿದನಂತೆ (ಉಲ್ಲೇಖ: ಡಾ.ಸಿ. ಚಂದ್ರಪ್ಪನವರ ಬರಹ).

ಮಹಿಳೆಯನ್ನು ಸಂಚಿನ ಸಾಧನವಾಗಿ ಬಳಸಿದ ಘಟನೆಗಳನ್ನು ಪುರಾಣ ಪ್ರಸಂಗ ಮತ್ತು ಕಾವ್ಯಗಳಲ್ಲಿ ಹೇರಳವಾಗಿ ಕಾಣಬಹುದು. 'ಮೋಹಿನಿ ಭಸ್ಮಾಸುರ' ಪುರಾಣ ಪ್ರಸಂಗವನ್ನು ಗಮನಿಸಿ: ಭಸ್ಮಾಸುರನ ಸಾವಿಗೆ 'ದೇವರೇ' ಮೋಹಿನಿಯ ರೂಪಧಾರಣೆ ಮಾಡಿದ ಈ ರೂಪಕವು ಮಹಿಳೆಯರನ್ನು ಸಾಧನವಾಗಿ ಬಳಸುತ್ತಿದ್ದ ಮನೋವೃತ್ತಿಯ ಸಾಂಕೇತಿಕ ಉದಾಹರಣೆಯೂ ಆಗಿದೆ. 'ಪ್ರಭುಲಿಂಗ ಲೀಲೆ'ಯಲ್ಲಿ ಅಲ್ಲಮಪ್ರಭುಗಳನ್ನು ಕಾಮ ಕೆಣಕುವಿನ ಗಾಳಕ್ಕೆ ಸೆಳೆಯಲು 'ಮಾಯೆ' ಪಾತ್ರದ ಬಳಕೆಯನ್ನು ಇಲ್ಲಿ ಉದಾಹರಿಸಬಹುದು. ಆದರೆ ಇಲ್ಲಿ ಅಲ್ಲಮ ಸೋಲುವುದಿಲ್ಲ. ಆದರೆ, ಆಧ್ಯಾತ್ಮಿಕ ಹಾಗೂ ನೈತಿಕ ಪರೀಕ್ಷೆಯ ಸಾಧನವಾಗಿ ಮಹಿಳೆಯ ರೂಪಕವೇ ಬಳಕೆಯಾಗುವುದನ್ನು ಗಮನಿಸಬೇಕು.

'ಹರಿಶ್ಚಂದ್ರ ಕಾವ್ಯ'ದ ಅನಾಮಿಕೆಯರ ಪ್ರಸಂಗವು ಉಲ್ಲೇಖಿಸಬೇಕಾದ ಇನ್ನೊಂದು ಉದಾಹರಣೆ. ರಾಜಹರಿಶ್ಚಂದ್ರನ ನೈತಿಕ ಪರೀಕ್ಷೆಗೆಂದು ವಿಶ್ವಾಮಿತ್ರನು ಅನಾಮಿಕೆಯರನ್ನು (ಅಸ್ಪೃಶ್ಯ ಕನ್ಯೆಯರನ್ನು) ಸೃಷ್ಟಿಸಿ ಕಳುಹಿಸುತ್ತಾನೆ. ಈ ಅನಾಮಿಕೆಯರು ಹರಿಶ್ಚಂದ್ರನ ಎದುರು ನೃತ್ಯ ಮಾಡಿ ರಂಜಿಸುತ್ತಾರೆ. ಪ್ರಸನ್ನನಾದ ರಾಜ ಹರಿಶ್ಚಂದ್ರನಲ್ಲಿ ಒಂದು ವರವನ್ನು ಕೇಳುತ್ತಾರೆ. ತಮ್ಮನ್ನು ಮದುವೆ ಆಗಬೇಕೆಂಬುದು ಅವರ ಕೇಳಿಕೆಯಾಗಿತ್ತು. ಹರಿಶ್ಚಂದ್ರ ಒಪ್ಪದೆ ಅಟ್ಟಿಸಿ ಓಡಿಸಿದ ಪ್ರಸಂಗ ಈ ಕಾವ್ಯದಲ್ಲಿದೆ. ಈ ಪ್ರಸಂಗವು ಅಸ್ಪೃಶ್ಯತೆ ಕುರಿತ ಚರ್ಚೆಗೂ ಕಾರಣವಾಗುತ್ತದೆ.

ಅಸ್ಪೃಶ್ಯ ಕನ್ಯೆಯರನ್ನು ನಿರಾಕರಿಸಿ ಓಡಿಸಿದ ರಾಜನು ಕಡೆಗೆ ಸ್ಮಶಾನವಾಸಿ ಅಸ್ಪೃಶ್ಯ ವೀರಬಾಹುವಿನ ಸೇವೆ ಮಾಡಿದಾಗ ಶಿವ ಸಾಕ್ಷಾತ್ಕಾರವಾಗುತ್ತದೆ. ಇದು ಕುಲಮದ ನಿರಸನದ ಒಂದು ಅರ್ಥಪೂರ್ಣ ಸಂಕೇತವಾಗಿದೆ. ಅದು ಬೇರೆಯದೇ ವ್ಯಾಖ್ಯಾನ. ಈ ಲೇಖನದ ಮಿತಿಯಲ್ಲಿ ಮಹಿಳೆಯರನ್ನು ದುರ್ಬಳಕೆ ಮಾಡಿಕೊಳ್ಳುವ ವಿಷಯದ ಉಲ್ಲೇಖ ಮುಖ್ಯ. ಈ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯನ್ನು ಸ್ವಾರ್ಥ ಸಂಚಿನ ಲೈಂಗಿಕ ಸಾಧನವಾಗಿ ಬಳಸಿಕೊಂಡಿರುವುದನ್ನೂ ಕಾಣಬಹುದು.

ಈ ಪ್ರವೃತ್ತಿಯ ಸಾಮಾಜಿಕ ಕಟುವಾಸ್ತವಕ್ಕೆ ದೇವದಾಸಿ ಪದ್ಧತಿ ಒಂದು ವಿಷಾದಕರ ಉದಾಹರಣೆಯಾಗಿದೆ. ದೇವಾಲಯಗಳ ನೃತ್ಯಗಾರ್ತಿಯರಾಗಿದ್ದ ದೇವದಾಸಿಯರು ರಾಜರ ಹಾಗೂ ಶ್ರೀಮಂತರ ಲೈಂಗಿಕ ತೃಷೆಗೆ ಆಹಾರವಾಗುತ್ತ ಕಡೆಗೆ ಅದೊಂದು ಆಚರಣಾ ಪದ್ಧತಿಯೇ ಆದದ್ದು ಒಂದು ವಾಸ್ತವಿಕ ವಿಕೃತಿಯಾಗಿದೆ.

ಮಹಿಳೆಯರು ಅನಿವಾರ್ಯ ಸಂದರ್ಭಗಳಲ್ಲಿ ಉನ್ನತ ಸ್ಥಾನ ಪಡೆದ ಕೆಲವು ಚಾರಿತ್ರಿಕ ಸಂದರ್ಭಗಳಿದ್ದರೂ ಪುರುಷ ಪ್ರಭುತ್ವ ಸಮಾಜದ ಕಣ್ಣಿಗೆ ಬಹುಪಾಲು ಮಹಿಳೆಯ 'ಮನಸ್ಸು' ಕಾಣಲಿಲ್ಲ. 'ದೇಹ' ಕಾಣಿಸಿತು. ಹೀಗಾಗಿ ಪ್ರಭುತ್ವ ಪಲ್ಲಟದ ಸಂಚು ಹಾಗೂ ಲೈಂಗಿಕದಾಹಗಳ 'ದೇಹರಾಜಕಾರಣ'ಕ್ಕೆ ಮಹಿಳೆ ಬಲಿಪಶುವಾದದ್ದೇ ಅಧಿಕ. ಇದು ಮಹಿಳೆಯನ್ನು ಕುರಿತಂತೆ ಮೇಲುಗೈ ಪಡೆದಿದ್ದ ಸಂಕುಚಿತ ಸಾಮಾಜಿಕ ದೃಷ್ಟಿಕೋನವಾಗಿದೆ.

ಮುಂದಿನ ಪುಟಕ್ಕೆ...

ಲೈಂಗಿಕ ಹಗರಣ ಮತ್ತು ಸಾಮಾಜಿಕ ಬದುಕು

ಶಶಿಧರ್ ಭಟ್

ರಮೇಶ್ ಜಾರಕಿಹೊಳಿ ಅವರನ್ನು ಸುತ್ತಿಕೊಂಡ ಸಿ.ಡಿ ಹಗರಣ ಹಲವು ಮುಖ್ಯ ಪ್ರಶ್ನೆಗಳನ್ನು ಎತ್ತುವಂತೆ ಮಾಡಿದೆ. ರಾಜಕೀಯ ಮತ್ತು ನೈತಿಕತೆಯ ಪ್ರಶ್ನೆ ಇದರಲ್ಲಿ ಬಹುಮುಖ್ಯವಾದುದು. ಸಾರ್ವಜನಿಕ ಬದುಕಿನಲ್ಲಿ ಇರುವವರು ಸಮಾಜಕ್ಕೆ ಆದರ್ಶಪ್ರಾಯರಾಗಿರಬೇಕು ಎಂದು ಜನ ಅಪೇಕ್ಷೆಪಡುವುದು ತುಂಬಾ ಸಹಜ. ಹಾಗೆ ಸಾರ್ವಜನಿಕ ಬದುಕಿನಲ್ಲಿ ಇರುವವರಿಗೆ ಖಾಸಗಿ ಬದುಕು ಎನ್ನುವುದು ಇರುವುದಿಲ್ಲ. ಅವರ ಖಾಸಗಿ ಬದುಕು, ಸಾಮಾಜಿಕ ಆಯಾಮವನ್ನು ಪಡೆದೇ ಪಡೆಯುತ್ತದೆ. ರಮೇಶ್ ಜಾರಕಿಹೊಳಿ ಅವರ ಮೇಲಿನ ಆರೋಪವನ್ನು ಈ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಆದರೆ, ಈಗ ಈ ವಿಚಾರ ಸಂಪೂರ್ಣವಾಗಿ ದಾರಿ ತಪ್ಪಿದೆ. ರಾಜಕಾರಣದಲ್ಲಿ ನೈತಿಕ ದಿವಾಳಿತನದ ಕುರಿತು ಚರ್ಚೆ ನಡೆಯಬೇಕಾಗಿತ್ತು. ಆದರೆ, ಈಗ ಸಿ.ಡಿ ಮಾಡಿದವರು ಯಾರು ಎಂಬ ಬಗ್ಗೆಯೇ ತನಿಖಾ ವರದಿಗಳು ಬರಲು ಪ್ರಾರಂಭಿಸಿವೆ.

ಹಾಗೆ ನೋಡಿದರೆ ಇಂತಹ ಆರೋಪಗಳಿಗೆ ಒಳಗಾದ ಮೊದಲ ವ್ಯಕ್ತಿ ಜಾರಕಿಹೊಳಿ ಅಲ್ಲ. ಅಲ್ಲದೆ, ಅವರು ಕೊನೆಯ ವ್ಯಕ್ತಿಯೂ ಆಗಲಾರರು. ಅಧಿಕಾರವು ಹಣ ಬರುವಂತೆ ಮಾಡುತ್ತದೆ. ಹಣ, ಅನ್ಯ ಮಾರ್ಗಗಳ ಮೂಲಕ ಲೈಂಗಿಕ ಚಟುವಟಿಕೆಯಲ್ಲಿ ತೊಡಗುವಂತೆ ಮಾಡುತ್ತದೆ. ಲೈಂಗಿಕತೆ ನಮ್ಮ ಅವಶ್ಯಕತೆಗಳಲ್ಲಿ ಒಂದಾದರೂ ಈ ಅವಶ್ಯಕತೆಯನ್ನು ನಾವು ಹೇಗೆ ಪೂರೈಸಿಕೊಳ್ಳುತ್ತೇವೆ ಎನ್ನುವುದು ನೈತಿಕತೆಯ ನಿಕಷಕ್ಕೆ ಒಳಗಾಗಲೇ ಬೇಕಾಗುತ್ತದೆ.

ಹಾಗೆ ಒಪ್ಪಿತ ಲೈಂಗಿಕತೆಯನ್ನು ಯಾರೂ ವಿರೋಧಿಸುವುದು ಸಾಧ್ಯವಿಲ್ಲ. ಕಾನೂನು ಸಹ ಒಪ್ಪಿತ ಲೈಂಗಿಕತೆಗೆ ಅವಕಾಶ ನೀಡುತ್ತದೆ. ಆದರೆ, ಒಂದು ಗಂಡು ಮತ್ತು ಒಂದು ಹೆಣ್ಣು ನಡೆಸುವ ಒಪ್ಪಿತ ಲೈಂಗಿಕತೆಯಲ್ಲಿ ಅಧಿಕಾರ ಯಾವ ರೀತಿ ಪ್ರಭಾವ ಬೀರಿದೆ? ಅಧಿಕಾರವನ್ನು ಬಳಸಿಕೊಂಡು ಲೈಂಗಿಕ ಚಟುವಟಿಕೆಗೆ ಭಾಗಿದಾರರನ್ನಾಗಿ ಮಾಡಿಕೊಂಡರೆ ಅದು ಅಪರಾಧ. ರಮೇಶ ಜಾರಕಿಹೊಳಿ ಪ್ರಕರಣದಲ್ಲಿ ಕೆಲಸ ಕೊಡಿಸುವ ಭರವಸೆ ನೀಡಿ ಆಕೆಯ ಜೊತೆ ಲೈಂಗಿಕ ಚಟುವಟಿಕೆ ನಡೆಸಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಅದು ನಿಜವಾಗಿದ್ದರೆ ಕಾನೂನು ಪ್ರಕಾರ ಅಪರಾಧ.

ಅಧಿಕಾರ ಪ್ರಭಾವದ ಲೈಂಗಿಕ ಚಟುವಟಿಕೆ ಅಪರಾಧ ಎನ್ನುವುದರಲ್ಲಿ ಎರಡು ಮಾತಿಲ್ಲ. ಹಾಗೆಯೇ ಗಂಡು ಹೆಣ್ಣಿನ ಸೂಕ್ಷ್ಮ ಸಂಬಂಧವನ್ನು ಅಶ್ಲೀಲತೆಯ ಹಂತಕ್ಕೆ ತೆಗೆದುಕೊಂಡು ಹೋಗುವುದು ಮತ್ತು ಅದನ್ನು ಚಿತ್ರೀಕರಿಸುವುದು ಸಾಮಾಜಿಕ ಸ್ವಾಸ್ಥ್ಯಕ್ಕೆ ಪೂರಕವಾದುದಲ್ಲ. ಈ ಹಿನ್ನೆಲೆಯನ್ನು ಗಮನದಲ್ಲಿ ಇಟ್ಟುಕೊಂಡು ರಾಜ್ಯದ ರಾಜಕಾರಣ ಮತ್ತು ಅದಕ್ಕೆ ಅಂಟಿಕೊಂಡ ಲೈಂಗಿಕ ಹಗರಣಗಳ ಬಹುಮುಖ್ಯ ವಿಚಾರವನ್ನು ನಾವು ನೋಡಬಹುದು.

ರಾಜ್ಯದಲ್ಲಿ ನಡೆದ ರಾಜಕೀಯ ಲೈಂಗಿಕ ಹಗರಣಗಳನ್ನು ನೋಡುವಾಗ ನೆನಪಾಗುವ ಮೊದಲ ಹಗರಣ 1973ರಲ್ಲಿ ನಡೆದಿದ್ದು. ಆಗ ಮುಖ್ಯಮಂತ್ರಿಯಾಗಿದ್ದವರು ದೇವರಾಜ ಅರಸು. ಅವರ ಸಂಪುಟದಲ್ಲಿ ಗೃಹ ಸಚಿವರಾಗಿದ್ದವರು ಆರ್.ಡಿ.ಕಿತ್ತೂರರು. ಅವರ ಮೇಲಿದ್ದ ಆರೋಪ ಕಾಣೆಯಾಗಿದ್ದ ಹೆಣ್ಣುಮಗಳೊಬ್ಬಳು ಸಚಿವ ಕಿತ್ತೂರ್ ಅವರ ಮನೆಯಲ್ಲಿ ಇದ್ದರು ಎಂಬುದು. ಆರೋಪದ ಕಾರಣದಿಂದ ಕಿತ್ತೂರ್ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಯಿತು. ಬಹುಶಃ ಲೈಂಗಿಕ ಹಗರಣದ ಕಾರಣದಿಂದ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಮೊದಲ ಸಚಿವರೂ ಅವರೇ. ಬಹಿರಂಗವಾದ ಮೊದಲ ಪ್ರಕರಣವೂ ಅದೇ.

ಇವತ್ತಿನ ಸಂದರ್ಭದಲ್ಲಿ ಈ ಹಗರಣವನ್ನು ನೋಡುವಾಗ ಇದೊಂದು ದೊಡ್ಡ ಹಗರಣ ಎಂದು ಅನ್ನಿಸುವುದಿಲ್ಲ. ಮನೆಯಲ್ಲಿ ಇದ್ದಳು ಎನ್ನಲಾದ ಆ ಹೆಣ್ಣುಮಗಳ ಜೊತೆ ಕಿತ್ತೂರ್ ಬೇರೆ ರೀತಿ ಸಂಬಂಧ ಹೊಂದಿದ್ದರು ಎಂಬುದಕ್ಕೆ ಯಾವುದೇ ಸಾಕ್ಷ್ಯ ಇರಲಿಲ್ಲ. ಆಕೆ ಸಚಿವರ ಮನೆಯಲ್ಲಿ ಇದ್ದರು ಅಷ್ಟೆ. ಆ ಸಂದರ್ಭದಲ್ಲಿ ಬಂದ ವರದಿಗಳ ಪ್ರಕಾರ, ಈ ಕತೆ ತುಂಬಾ ಸಿನಿಮೀಯವೂ ರೋಚಕವೂ ಆಗಿದೆ.

ಈ ಹೆಣ್ಣುಮಗಳು ಅದೊಂದು ದಿನ ಭಾರಿ ಮಳೆ ಬೀಳುತ್ತಿದ್ದ ಸಂದರ್ಭದಲ್ಲಿ ಸಚಿವರ ಅಧಿಕೃತ ನಿವಾಸದ ಕಾಂಪೌಂಡ್ ಒಳಗಿನ ಮರದ ಕೆಳಗೆ ನಿಂತಿದ್ದಳು. ಸಚಿವರು ಆಕೆಯನ್ನು ಮನೆಯ ಒಳಗೆ ಕರೆದಿದ್ದರು. ಇಲ್ಲಿಂದ ಕಥೆ ಬೇರೆ ಬೇರೆ ತಿರುವುಗಳನ್ನು ಪಡೆದು ಸಚಿವ ಕಿತ್ತೂರ್ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಯಿತು. 1973ರ ಸಂದರ್ಭದಲ್ಲಿ ಇದ್ದ ನೈತಿಕತೆಯ ವ್ಯಾಖ್ಯೆ ಈಗ ಸಂಪೂರ್ಣವಾಗಿ ಬದಲಾಗಿದೆ. ಆ ಸಂದರ್ಭದಲ್ಲಿ ಸಿ.ಡಿಯ ಸಾಕ್ಷ್ಯ ಇಲ್ಲದಿದ್ದರೂ ಕೇವಲ ಆರೋಪದ ಹಿನ್ನೆಲೆಯಲ್ಲಿ ಸಚಿವರು ರಾಜೀನಾಮೆ ನೀಡಿದರು. ಈಗ ಸಿ.ಡಿ ಇದ್ದರೂ ಅದು ನಕಲಿ ಎಂದು ವಾದ ಮಾಡಬಹುದು.

ಇದಾದ ನಂತರ 2007ರಲ್ಲಿ ಶಾಸಕ ರೇಣುಕಾಚಾರ್ಯ ಅವರ ಲೈಂಗಿಕ ಹಗರಣ ವರದಿಯಾಯಿತು. ಸ್ವಲ್ಪಕಾಲ ಭಾರಿ ಸದ್ದು ಮಾಡಿತು. ನರ್ಸ್ ಒಬ್ಬರ ಜೊತೆ ರೇಣುಕಾಚಾರ್ಯ ಚುಂಬನದಲ್ಲಿ ತೊಡಗಿದ್ದ ದೃಶ್ಯಗಳು ಬಹಿರಂಗಗೊಂಡವು. ಇದು ಭಾರತೀಯ ಜನತಾ ಪಕ್ಷವನ್ನು ಮುಜುಗರಕ್ಕೆ ಈಡು ಮಾಡಿತು. ರಾಜಕಾರಣಿಗಳ ನೈತಿಕತೆಯ ಪ್ರಶ್ನೆ ಮತ್ತೆ ಚರ್ಚೆಗೆ ಕಾರಣವಾಯಿತು. ಸಾರ್ವಜನಿಕ ಬದುಕಿನಲ್ಲಿ ಇರುವವರು ನೈತಿಕತೆಗೆ ಮಹತ್ವ ನೀಡದಿರುವುದು ಸಾಮಾಜಿಕ ವಲಯದ ಚರ್ಚೆಗೆ ಗ್ರಾಸ ಒದಗಿಸಿತು. ಈ ಆರೋಪದ ನಡುವೆಯೂ ರೇಣುಕಾಚಾರ್ಯ 2008ರಲ್ಲಿ ಸಚಿವರಾದರು. ಅವರ ಮೇಲೆ ಬಂದಿದ್ದ ಅನೈತಿಕ ಸಂಬಂಧದ ಪ್ರಶ್ನೆಯನ್ನು ನೇಪಥ್ಯಕ್ಕೆ ಸರಿಸಲಾಯಿತು.

2007ರ ನಂತರ ಅನೈತಿಕ ಲೈಂಗಿಕತೆ ಪ್ರಕರಣಗಳು ಹೆಚ್ಚು ಹೆಚ್ಚಾಗಿ ಬೆಳಕಿಗೆ ಬರತೊಡಗಿದವು. ಇದಕ್ಕೆ ಮಾಧ್ಯಮಗಳು, ರಾಜಕಾರಣಿಗಳ ವೈಯಕ್ತಿಕ ಬದುಕಿನ ಬಗ್ಗೆ ಹೆಚ್ಚಿನ ಮಹತ್ವ ನೀಡಲು ಪ್ರಾರಂಭಿಸಿದ್ದು ಒಂದು ಕಾರಣವಾದರೆ, ಟ್ಯಾಬ್ಲಾಯ್ಡ್ ಪತ್ರಿಕೋದ್ಯಮ ಮುಖ್ಯವಾಹಿನಿಗೆ ಬಂದಿದ್ದೂ ಕಾರಣ ಇರಬಹುದು. ಒಟ್ಟಿನಲ್ಲಿ ರಾಜಕಾರಣಿಗಳು ತುಂಬು ಎಚ್ಚರದಿಂದ ಇರಬೇಕಾದ ಸ್ಥಿತಿ ನಿರ್ಮಾಣವಾಗಿದ್ದು ನಿಜ. ಏನೇ ಇರಲಿ 2010ರಲ್ಲಿ ಇನ್ನೊಬ್ಬ ಸಚಿವರು ಲೈಂಗಿಕ ಹಗರಣಕ್ಕೆ ಸಿಲುಕಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಯಿತು. ಅವರು ಯಡಿಯೂರಪ್ಪ ಸರ್ಕಾರದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರಾಗಿದ್ದ ಹರತಾಳು ಹಾಲಪ್ಪ.

ಸ್ನೇಹಿತನ ಹೆಂಡತಿಯ ಜೊತೆ ಲೈಂಗಿಕ ಚಟುವಟಿಕೆ ನಡೆಸಿದ ಆರೋಪ ಹೊತ್ತಿದ್ದ ಹಾಲಪ್ಪ 2017ರಲ್ಲಿ ಈ ಆರೋಪದಿಂದ ಮುಕ್ತರಾದರು. ಹಾಲಪ್ಪ ಅವರ ಸ್ನೇಹಿತರೇ ತಮ್ಮ ಹೆಂಡತಿಯ ಜೊತೆ ಹಾಲಪ್ಪ ಅವರಿಗೆ ಸಂಬಂಧವಿದೆ ಎಂದು ಆರೋಪ ಮಾಡಿದ್ದರು. ಈ ಪ್ರಕರಣ ನಡೆದ ಎರಡೇ ವರ್ಷಗಳಲ್ಲಿ ಬೆಳಕಿಗೆ ಬಂದಿದ್ದು ಮೂವರು ಶಾಸಕರು ವಿಧಾನಸಭೆಯಲ್ಲಿ ಇರುವಾಗ ತಮ್ಮ ಮೊಬೈಲ್‌ನಲ್ಲಿ ನೀಲಿ ಚಿತ್ರದ ವೀಕ್ಷಣೆ ಮಾಡಿದ್ದು. ಅವರೆಂದರೆ ಈಗಿನ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ, ಈಗಿನ ಸಚಿವ ಸಿ.ಸಿ. ಪಾಟೀಲ ಮತ್ತು ಕೃಷ್ಣ ಪಾಲೇಮಾರ್.

ಈ ಪ್ರಕರಣ ಸಾಕಷ್ಟು ಸದ್ದು ಮಾಡಿತು. ಮತ್ತೆ ಸಾರ್ವಜನಿಕ ಬದುಕಿನಲ್ಲಿ ಇರುವವರ ನೈತಿಕತೆ ಮತ್ತು ಅನೈತಿಕತೆ ಕುರಿತು ಚರ್ಚೆ ನಡೆಯಿತು. ಹಾಗೆ ಈ ಬಗ್ಗೆ ತನಿಖೆ ನಡೆಸಲು ನೇಮಕವಾದ ಸದನ ಸಮಿತಿ ಲಕ್ಷ್ಮಣ ಸವದಿ ಮತ್ತು ಸಿ.ಸಿ. ಪಾಟೀಲರನ್ನು ಆರೋಪ ಮುಕ್ತರನ್ನಾಗಿ ಮಾಡಿತು. ಪಾಲೇಮಾರ್ ಮಾತ್ರ ತಪ್ಪಿತಸ್ಥರಾದರು.

ಇಷ್ಟಕ್ಕೇ ಶಾಸಕರ ಮೇಲಿನ ಲೈಂಗಿಕ ಹಗರಣದ ಆರೋಪ ನಿಲ್ಲಲಿಲ್ಲ. ಕೇವಲ ಒಂದು ವರ್ಷದ ನಂತರ ಪ್ರಕಟವಾದದ್ದು ಇನ್ನೊಂದು ಲೈಂಗಿಕ ಹಗರಣ. ಅದು ಉಡುಪಿ ಶಾಸಕ ರಘುಪತಿ ಭಟ್ಟರದು. ಮಹಿಳೆಯೊಬ್ಬರ ಜೊತೆ ಅವರಿದ್ದ ಫೋಟೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಯಿತು. ಭಟ್ಟರು ಚುನಾವಣೆಯಿಂದಲೇ ಹಿಂದೆ ಸರಿದರು. ಐದು ವರ್ಷ ವನವಾಸ ಅನುಭವಿಸಿದರು. ಯಾವಾಗಲೂ ಸಾಮಾನ್ಯ ಜನರಿಗೆ ನೆನಪು ಕಡಿಮೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಭಟ್ಟರು ಉಡುಪಿ ಕ್ಷೇತ್ರದಿಂದ ಗೆದ್ದು ವಿಧಾನಸಭೆ ಪ್ರವೇಶಿಸಿದರು.

2015ರಲ್ಲಿ ಲೈಂಗಿಕ ಹಗರಣದಲ್ಲಿ ಸಿಲುಕಿದ ಇನ್ನೊಬ್ಬ ಶಾಸಕ ಎ. ರಾಮದಾಸ್. ಮಹಿಳೆಯೊಬ್ಬರನ್ನು ಲೈಂಗಿಕವಾಗಿ ಬಳಸಿಕೊಂಡರು ಎಂಬುದು ಅವರ ಮೇಲಿನ ಆರೋಪವಾಗಿತ್ತು. ಆದರೆ ಈ ಆರೋಪದಿಂದಾಗಿ ರಾಮದಾಸ್ ಆತ್ಮಹತ್ಯೆಗೆ ಯತ್ನ ನಡೆಸಿದ್ದರು. ನಂತರ ಈ ಆರೋಪದ ಬಗ್ಗೆ ತನಿಖೆ ನಡೆಸಿದ ಸಿಐಡಿ ಪೊಲೀಸರು ಅವರನ್ನು ಆರೋಪ ಮುಕ್ತರನ್ನಾಗಿ ಮಾಡಿದರು.

11ನೇ ಪುಟಕ್ಕೆ...

ಅಕ್ಬರ್ ಸಾಹೇಬರ ಶಿಷ್ಯೋತ್ತಮೆ

ಉಸ್ತಾದ್ ಅಲಿ ಅಕ್ಬರ್‌ಖಾನ್ ಅವರ ಶಿಷ್ಯೆ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ದಿಗ್ಗಜರೆನಿಸಿದ ಪಿಟೀಲು ವಾದಕಿ, ವಿದುಷಿ ಶಿಶಿರಕೊನಾ ಧರ್ ಚೌಧರಿ ಮೊನ್ನೆಯಷ್ಟೇ ಬದುಕಿನ ಯಾತ್ರೆಯನ್ನು ಮುಗಿಸಿದವರು. ಅವರ ಬದುಕಿನ ಪುಟಗಳ ಕೆಲವು ಆಪ್ತ ನೆನಪುಗಳು ಇಲ್ಲಿವೆ...

ಕಲೆ: ಗುರು ನಾವಳ್ಳಿ

ಪಂಡಿತ್ ರಾಜೀವ ತಾರಾನಾಥ್

ನಾನು, 1955ರಲ್ಲಿ ಅಲಿ ಅಕ್ಬರ್ ಖಾನ್ ಸಾಹೇಬರ ಬಳಿ ಶಿಷ್ಯವೃತ್ತಿ ಸ್ವೀಕರಿಸಿ, ಮುಂಬೈನಲ್ಲಿದ್ದಾಗ ಶಿಶಿರಕೊನಾ ಅವರನ್ನು ಮೊದಲು ಭೇಟಿಯಾಗಿದ್ದೆ. ಕೆಲವು ತಿಂಗಳ ಬಳಿಕ ಅವರು ಕೋಲ್ಕತ್ತಕ್ಕೆ ಹೋದರು. ಆ ಬಳಿಕ, ನಾನೂ ಕೋಲ್ಕತ್ತಕ್ಕೆ ಹೋದಾಗ ಮತ್ತೆ ಅವರ ಒಡನಾಟ ಸಿಕ್ಕಿತು. ನಾನು ಆಗಷ್ಟೆ ಶುರುವಾತ್ ಮಾಡಿದ್ದೆ. ಶಿಶಿರಕೊನಾ ಅವರು ಆಗಲೇ ಉತ್ತಮ ಸಂಗೀತಗಾರ್ತಿ ಎಂದು ಹೆಸರು ಮಾಡಿದ್ದರು. ಕಛೇರಿ ನೀಡುತ್ತಿದ್ದರು. ಇದಕ್ಕೂ ಮೊದಲು ಅವರು ಪಿಟೀಲು ವಾದಕ ಪಂ. ವಿ.ಜಿ. ಜೋಗ್ ಅವರಲ್ಲಿ ಶಿಷ್ಯವೃತ್ತಿ ಮಾಡಿ, ಆಮೇಲೆ ಖಾನ್ ಸಾಹೇಬರ ಬಳಿ ಬಂದಿದ್ದರು. ಹೀಗಾಗಿ, ಕೋಲ್ಕತ್ತದಲ್ಲಿ ಅವರಿಗೆ ದೊಡ್ಡ ಹೆಸರಿತ್ತು.

ಅವರು ಅಸ್ಸಾಂನವರು. ಅವರದು ದೊಡ್ಡ ಬಂಗಾಳಿ ಮನೆತನ. ಕೋಲ್ಕತ್ತಕ್ಕೆ ಬಂದ ಮೇಲೆ ಇನ್ನೂ ಹೆಸರು ಮಾಡಿದರು. ಅವರೂ ನಾನೂ ಹಲವೆಡೆ ಒಟ್ಟಿಗೆ ಕೆಲಸ ಮಾಡಿದ್ದೇವೆ. ಜುಗಲ್‌ಬಂದಿ ನೀಡಿದ್ದೇವೆ. ಖಾನ್ ಸಾಹೇಬರು ಸಿನಿಮಾಕ್ಕೆ ಸಂಗೀತ ಕೊಡುತ್ತಿದ್ದಾಗ, ಆಗ ಇಬ್ಬರೂ ನುಡಿಸಿದ್ದೆವು.

1956ರಲ್ಲಿ ಕೋಲ್ಕತ್ತದಲ್ಲಿ ಖಾನ್ ಸಾಹೇಬರ, 'ಅಲಿ ಅಕ್ಬರ್ ಖಾನ್ ಕಾಲೇಜ್ ಆಫ್ ಮ್ಯೂಸಿಕ್' ಆರಂಭವಾಯಿತು. ಅಲ್ಲಿ ಶಿಶಿರಕೊನಾ ಅವರು ಪಾಠ ಮಾಡುತ್ತಿದ್ದರು. ನಾನು ಕೂಡ ಬಹಳ ಸಣ್ಣ ಕ್ಲಾಸಿನವರಿಗೆ ಹೇಳಿಕೊಡುತ್ತಿದ್ದೆ. ಖಾನ್ ಸಾಹೇಬರು ಎಲ್ಲೆಲ್ಲಿ ಪಾಠ ಮಾಡುತ್ತಿದ್ದರೋ ಅಲ್ಲೆಲ್ಲ ನಮ್ಮನ್ನು ಬರಹೇಳುತ್ತಿದ್ದರು. ಅಲ್ಲೆಲ್ಲ ಕೂತು ಕಲಿಯುತ್ತಿದ್ದೆವು. ಮುಂದೆ ಅವರ ಮನೆಗೆ ಹೋಗಿಯೂ ಕಲಿಯುತ್ತಿದ್ದೆವು.

ಆ ಹೊತ್ತಿನಲ್ಲಿ ನಾನು ದುಃಸ್ಥಿತಿಯಲ್ಲಿದ್ದೆ. ಕೈಯಲ್ಲಿ ದುಡ್ಡಿರಲಿಲ್ಲ. ಕೆಟ್ಟ ಬಡತನ ಬೇರೆ. ಇಂಥ ಹೊತ್ತಿನಲ್ಲಿ ಅಲ್ಲಿನ ಅನ್ನದಾತರನ್ನು ನಾನು ಇವತ್ತಿಗೂ ಮರೆಯುವುದಿಲ್ಲ. ಪ್ರಭಾತ್‌ಕುಮಾರ್ ದಾಸ್ ಎಂಬ ಜ್ಯುವೆಲರ್ ನನಗೆ ಆಶ್ರಯ ಕೊಟ್ಟು, ಊಟ ಹಾಕಿದರು. ತಮ್ಮ ಕುಟುಂಬದ ಸದಸ್ಯರಂತೆ ನೋಡಿಕೊಂಡರು. ಇವತ್ತಿಗೂ, ನನ್ನ ಕುಟುಂಬದವರು ಯಾರಾದರೂ ಇದ್ದರೆ ಅದು ಅವರೇ ಎಂದು ಹೇಳುತ್ತೇನೆ. ಆ ಮನೆಯ ಪಕ್ಕದಲ್ಲಿಯೇ ಶಿಶಿರಕೊನಾ ಅವರ ಮನೆಯಿತ್ತು. ಅವರು ಅಭ್ಯಾಸ ಮಾಡುತ್ತಿರುವುದೂ ನಮಗೆ ಕೇಳಿಸುತ್ತಿತ್ತು. ಅಲ್ಲಿ ಆರೇಳು ವರ್ಷ ಇದ್ದುದರಿಂದ, ಆಗಾಗ ಅವರ ಭೇಟಿ ಆಗುತ್ತಿತ್ತು.

ಈಗ ಸಂಗೀತ ದುನಿಯಾದಲ್ಲಿ ರಾಜಂ ಅವರು ಯಾವ ಸ್ಥಾನ ಗಳಿಸಿದ್ದಾರೋ ವಯಲಿನ್‌ನಲ್ಲಿ ಅಂಥದ್ದು ಅಥವಾ ಅದಕ್ಕೂ ದೊಡ್ಡ ಸ್ಥಾನ 50ರ ದಶಕದಲ್ಲಿ ಶಿಶಿರಕೊನಾ ಅವರಿಗಿತ್ತು. 60ರ ದಶಕದಲ್ಲಿಯೂ ಕೂಡ.

ಖಾನ್ ಸಾಹೇಬರು ಅವರಿಗೆ ಬಹಳ ವಾತ್ಸಲ್ಯದಿಂದ ಹೇಳಿಕೊಟ್ಟರು. ಆ ವಾತ್ಸಲ್ಯ, ಆ ಮಾರ್ದವ ಶಿಶಿರಕೊನಾ ಅವರ ಸಂಗೀತದಲ್ಲಿ ಹೊಮ್ಮುತ್ತಿತ್ತು. ಗುರುಗಳ ಸಂಗೀತದ ಪ್ರೀತಿ ಮತ್ತು ಅದನ್ನು ವಾದ್ಯದಲ್ಲಿ ಹೊಮ್ಮಿಸುವ ಶಿಷ್ಯೆಯ ರೀತಿ ಎರಡೂ ಅಮೋಘ. ಶಿಷ್ಯತನ ಬಹಳೇ ಮುಖ್ಯ. ಖಾನ್ ಸಾಹೇಬರು ಎಷ್ಟು ವಾತ್ಸಲ್ಯದಿಂದ ಹೇಳಿಕೊಟ್ಟರೋ ಅಷ್ಟೇ ಭಕ್ತಿಯಿಂದ, ಅಷ್ಟೇ ಪ್ರೀತಿಯಿಂದ ಶಿಶಿರಕೊನಾ ಅವರು ಗುರು ಕೊಟ್ಟಿದ್ದನ್ನು ತೆಗೆದುಕೊಂಡರು.

ಇಡೀ ದೇಶದಲ್ಲಿ ಅವರ ಹೆಸರು ಹಬ್ಬಿತ್ತು. ನಾನು ಕರ್ನಾಟಕಕ್ಕೆ ಬಂದಮೇಲೆ, 1987ರಲ್ಲಿ ಅವರನ್ನು ಮೈಸೂರು ದಸರಾ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿತ್ತು. ಭವ್ಯ ಕಾರ್ಯಕ್ರಮ ನೀಡಿದರು. ಮುಂದೆ ಒಂದೆರಡು ಕಡೆ ನಾವು ಜುಗಲ್‌ಬಂದಿ ನೀಡಿದ್ದೆವು. ಆಮೇಲೆ ಸಂಪರ್ಕ ಇರಲಿಲ್ಲ. ನಾನು ಅಮೆರಿಕಕ್ಕೆ ಹೋದೆ.

ಆ ಹೊತ್ತಿಗೆ, ಖಾನ್ ಸಾಹೇಬರು ಶಿಶಿರಕೊನಾ ಅವರನ್ನೂ ಅಮೆರಿಕಕ್ಕೆ ಕರೆಸಿದರು. ಬಂಗಾಳಿ–ಇಂಗ್ಲಿಷ್ ಎರಡರಲ್ಲೂ ಪ್ರೌಢಿಮೆ ಇದ್ದ ಅವರಿಗೆ ಕೆಲಸವೊಂದನ್ನು ಒಪ್ಪಿಸಿದರು. ಖಾನ್ ಸಾಹೇಬರ ತಂದೆ ಐದಾರು ದೊಡ್ಡ ನೋಟ್‌ಪುಸ್ತಕಗಳಲ್ಲಿ ರಾಗಗಳು, ಗತ್ತುಗಳನ್ನು ಬಂಗಾಳಿಯಲ್ಲಿ ಕೈಯಲ್ಲಿ ಬರೆದಿದ್ದರು. ಅದು ಇಂಗ್ಲಿಷ್‌ಗೆ ಭಾಷಾಂತರವಾಗಿ, ಮುದ್ರಣವಾಗಬೇಕು ಎಂಬುದು ಖಾನ್ ಸಾಹೇಬರ ಇಚ್ಛೆಯಾಗಿತ್ತು. ಹೀಗಾಗಿ ಈ ಪ್ರಾಜೆಕ್ಟ್ ಅವರಿಗೆ ಒಪ್ಪಿಸಿದ್ದರು. ಅಂದಾಜು ಎರಡು ವರ್ಷದಲ್ಲಿ ಅವರು ಅದನ್ನು ಮುಗಿಸಿದರೆನಿಸುತ್ತದೆ. ಮುಂದೆ ಅವರು ಅದೇ ಸ್ಯಾನ್‌ಫ್ರಾನ್ಸಿಸ್ಕೊ ಸಮೀಪದಲ್ಲೇ ಒಂದು ಸಂಗೀತ ಶಾಲೆ ಆರಂಭಿಸಿದರು. ಆ ಶಾಲೆಯನ್ನು ಬಹಳೇ ಚೆನ್ನಾಗಿ ನಡೆಸಿದರು.

ಅಲ್ಲಿ ಖಾನ್ ಸಾಹೇಬರ ಹುಟ್ಟಿದ ಹಬ್ಬವನ್ನು ಬಹಳ ವಿಜೃಂಭಣೆಯಿಂದ ನಡೆಸುತ್ತಿದ್ದರು. ಆ ಕಾರ್ಯಕ್ರಮದಲ್ಲಿ ನಾನೂ ಸರೋದ್ ನುಡಿಸಿದ್ದೆ. ಹೋದ ವರ್ಷ ಕೋವಿಡ್‌ನಿಂದಾಗಿ ಹೋಗಲಾಗಲಿಲ್ಲ. ಅವರು ಭಾರತಕ್ಕೆ ಬಂದು, ದಿಲ್ಲಿಯಲ್ಲಿ ಮಗಳ ಮನೆಯಲ್ಲಿದ್ದರು.

ಮಂಗಳವಾರ ರಾತ್ರಿ ಅಮೆರಿಕದಿಂದ ನನ್ನ ಶಿಷ್ಯೆಯೊಬ್ಬರು ಫೋನ್ ಮಾಡಿ, ಶಿಶಿರಕೊನಾ ಹೋಗಿಬಿಟ್ಟರು ಎಂಬ ಸುದ್ದಿ ತಿಳಿಸಿದಾಗ ನನಗೆ ದೊಡ್ಡ ಆಘಾತವಾಯಿತು. ದೊಡ್ಡ ಕಲಾಕಾರರನ್ನು ನಾವು ಕಳೆದುಕೊಂಡಿದ್ದೇವೆ. ಅದರ ಅರಿವು ನಮ್ಮ ಕರ್ನಾಟಕದಲ್ಲೂ ಬರಬೇಕು. ಅವರ ಸಂಗೀತ ಕೇಳಬೇಕು ಆ ಮೂಲಕ ಅವರನ್ನು ನೆನಪಿಸಿಕೊಳ್ಳಬೇಕು. ಅವರ ಸಾವನ್ನು ನಾವು ಗುರುತಿಸಬೇಕು. ಸುಮ್ಮನೇ ಒಂದು ಶ್ರದ್ಧಾಂಜಲಿ ಎಂದು ಮಾಡಿದರೆ ಅದೊಂದು ಸಮಾರಂಭ ಆಗಿಬಿಡಬಹುದು ಅಷ್ಟೆ.

ನಮ್ಮ ಸಂಸ್ಕೃತಿಯಲ್ಲಿ ಇರುವುದೇ ಸಂಗೀತ. ಅದರಲ್ಲಿಯೂ ಆ ಕ್ಷೇತ್ರದ ದಿಗ್ಗಜರೇ ಹೋಗಿಬಿಟ್ಟರೆ ಅದು ಬಹಳ ದೊಡ್ಡ ಆಘಾತ ಮತ್ತು ನಷ್ಟ.

ನಿರೂಪಣೆ: ವಿಶಾಲಾಕ್ಷಿ ಅಕ್ಕಿ

‘ನೋಡುಗನಲ್ಲಿ ಪ್ರಶ್ನೆ ಉಳೀಬೇಕು’

ರಶ್ಮಿ ಎಸ್.

ಮರಾಠಿ ರಂಗಭೂಮಿಯೊಳಗ ಸಂತೋಷ್ ಪವಾರ್ ಅಗ್ದಿ ಹೆಸರುವಾಸಿಯಾಗ್ಯಾರ. 52 ನಾಟಕಗಳನ್ನು ಬರದಾರ. ಅದರೊಳಗ ನಲ್ವತ್ತು ನಾಟಕಗಳು ಕನಿಷ್ಠಂದ್ರೂ 2000ದಷ್ಟು ಪ್ರಯೋಗ ಕಂಡಾವ. ಅವರ ‘ಯದಾಕದಾಶ್ಚಿತ್’ ನಾಟಕ 4 ಸಾವಿರ ಮೀರಿ ಪ್ರದರ್ಶನಗಳನ್ನು ಕಂಡದ. ಇದೇ ನಾಟಕವನ್ನು ಯಶ್ವಂತ ಸರದೇಶಪಾಂಡೆ ಅವರು ಕನ್ನಡಕ್ಕೆ ತಂದಾರ. ‘ಹಿಂಗಾದ್ರ ಹೆಂಗ’ ಅಂತ. ಈ ನಾಟಕದ ತಯಾರಿಗೆ ಬಂದಾಗ ಸಂತೋಷ ಪವಾರ್ ಹಾಗೂ ಅವರ ಪತ್ನಿ, ಕಲಾವಿದೆ ಶಿಲಾಖಾ ಇಬ್ಬರೂ ಮಾತಿಗೆ ಸಿಕ್ಕರು. ಮರಾಠಿ ರಂಗಭೂಮಿಯ ಒಳಹೊರಗನ್ನು ತೆರೆದಿಟ್ಟರು. ಮುಂದಿನ ಸಂವಾದ ಅವರ ಮಾತಿನಾಗೇ ಕೇಳಬಹುದು.

ನಾಟಕ ನೋಡಾಕ ಬಂದಾಂವ ಬಿದ್ಬಿದ್ದು ನಗ್ತಾನ. ಹಗುರಾಗ್ತಾನ. ಮನೀಗೆ ಹೋಗ್ತಾನ. ಆದ್ರ ಹಂಗ ಹೋಗೂಮುಂದ ಅವನ ಮನಸಿನಾಗ, ಹಿಂಗಾದ್ರ ಹೆಂಗ ಅನ್ನುವ ಗುಂಗಿ ಹುಳ ಬಿಟ್ರ ನಿಮ್ಮ ನಾಟಕ ಮತ್ತು ಮಾಧ್ಯಮ ಎರಡೂ ಯಶಸ್ವಿಯಾದ್ಹಂಗ. ನಾನು ಕೊಂಕಣ ಭಾಗದಿಂದ ಬಂದಾಂವ. ಸಣ್ತನದಿಂದ ಕೊಂಕಣಿ ಕಲೆಯ ಪ್ರಕಾರವಾದ ನಮನ ನಾಟ್ಯ ನಂಗ ಸೆಳೀತಿತ್ತು. ನಾಟ್ಯ ಸಂಗೀತ, ನಾಟಕ ಇರುವ ಪ್ರಕಾರ ಅದು. ಮೊದಲು ನಿರೂಪಕರು, ನಂತರ ಗಾವಳಿ ನಾಟ್ಯ, ಆಮೇಲೆ ನಾಟಕ.

ನಾಟಕ ನೋಡಾಕ ಬೇಕಾಗಿರುವ ಮನಃಸ್ಥಿತಿಯನ್ನು ಇವು ಪ್ರವೇಶದ ಸಂದರ್ಭದೊಳಗ ಸಿದ್ಧಪಡಸ್ತಾವ. ಮನರಂಜನೆ, ಮಾಹಿತಿ ಜೊತಿಗೆ ಚಿಂತನೆ ಇವೆಲ್ಲವನ್ನೂ ಒಟ್ಟೊಟ್ಟಿಗೆ ಕೊಡ್ತದ. ನನ್ನೆಲ್ಲ ನಾಟಕಗಳೂ ವ್ಯಂಗ್ಯ ಮತ್ತು ವಿಡಂಬನೆಯ ಆಧಾರಿತವಾಗಿವೆ. ರಾಜಕೀಯ ನನ್ನ ನಾಟಕದ ಮೂಲದ್ರವ್ಯ ಎಂದರು ಸಂತೋಷ್.

> ಮರಾಠಿ ರಂಗಭೂಮಿಯ ದೈತ್ಯಪ್ರತಿಭೆ ಎನಿಸಿದ ಸಂತೋಷ್ ಪವಾರ್ ನಾಟಕಗಳ ರಚನೆಯಲ್ಲಿ ಅರ್ಧಶತಕವನ್ನು ಬಾರಿಸಿದವರು. ಅವರ ಒಂದೊಂದು ನಾಟಕವೂ ಸಾವಿರಾರು ಪ್ರದರ್ಶನಗಳನ್ನು ಕಂಡಿದೆ. ಹುಬ್ಬಳ್ಳಿಗೆ ಬಂದಿದ್ದ ಅವರಿಗೆ ‘ಏನ್ರಪ್ಪ ನಿಮ್ಮ ಮಜಕೂರು’ ಎಂದು ಕೇಳಿದ್ದೇ ತಡ ‘ಹಿಂಗಾದ್ರ ಹೆಂಗ’ ಅನ್ನೋಕೀತ ಮಾತಿಗೆ ಶುರುವಿಟ್ಟರು...

ಅಪರೂಪದ ರಂಗಜೋಡಿ...ಸಂತೋಷ್ ಪವಾರ್ ಮತ್ತು ಶಿಲಾಖಾ

ಶಿಲಾಖಾ ಅಷ್ಟರೊಳಗ ಮಾತಿಗೆ ತಮ್ಮ ಅಭಿಪ್ರಾಯ ಸೇರಿಸಿದ್ರು. ಸಂತೋಷ ಅವರ ನಾಟಕದ ಇನ್ನೊಂದು ಪ್ರಬಲ ಅಂಶ ಅಂದ್ರ, ಇಲ್ಲಿಯ ಹೆಣ್ಮಕ್ಕಳು ಭಾಳ ಎಕ್ಸ್‌ಪ್ರೆಸಿವ್ ಇರ್ತಾರ. ಅಂದ್ರ ಮಹಿಳಾ ಪಾತ್ರಗಳು ತಮ್ಮ ಸಿದ್ಧ ಚೌಕಟ್ಟನಿಂದ ಹೊರಗ ಇರ್ತಾವ. ಗಾಂಧಾರಿ ಇಲ್ಲಿ ಧೃತರಾಷ್ಟ್ರಗ ತಿವೀತಾಳ, ಬೈತಾಳ, ಜರೀತಾಳ.

ದ್ರೌಪದಿ ಇದು ತನ್ನ ಕಥನ, ತಾನು ನಿರ್ಧಾರ ತಾಳಬೇಕು ಅಂತ ನಿರ್ಧಾರ ಮಾಡ್ತಾಳ. ಪಾಂಡವರು, ನಾವು ಸತ್ಯದ ಮಾರ್ಗದೊಳಗ ನಡದ್ವಿ. ಬರೇ ವನವಾಸ ಅನುಭವಿಸಬೇಕಾಯಿತು. ‘ಸತ್ತಾ’ ಅಧಿಕಾರ ಬೇಕಂದ್ರ ಮೋಸ ಮಾಡಲೇಬೇಕು ಅನ್ನುವ ನಿರ್ಧಾರಕ್ಕ ಬರ್ತಾರ. ಕೌರವರು, ಶತಶತಮಾನಗಳಿಂದ ನಾವು ದುಷ್ಟತನಕ್ಕ ಹೆಸರಾದ್ವಿ, ಇನ್ನು ಒಳಿತಿನ ಕಡೆ ಇರೂನು ಅನ್ನುವ ನಿರ್ಧಾರಕ್ಕ ಬರ್ತಾರ.

ಇದೊಂಥರ ಮಾನವೀಯ ನೆಲೆಯ ಸಂಘರ್ಷಗಳು. ಮಾನ, ಮರ್ಯಾದೆ ಅಥವಾ ಐಶ್ವರ್ಯ ಹಾಗೂ ಖ್ಯಾತಿ ಹೀಗೆ ಎರಡರ ನಡುವಿನ ಸಂಘರ್ಷಗಳು. ಜೊತಿಗೆ ಪ್ರಚಲಿತ ರಾಜಕೀಯದ ಗೊಂದಲ, ತೊಳಲಾಟಗಳು. ಇವೆಲ್ಲವೂ ಒಂದೊಂದು ಪಾತ್ರದೊಳಗ ಇಣುಕಿ ಇಣುಕಿ ಹೋಗ್ತಾವ. ಇವು ಪಾತ್ರಗಳೇ ಅಲ್ಲ. ಮೂಲತಃ ಮಾನವ ಸ್ವಭಾವದ ಸಂಕೇತಗಳು. ಈ ಪ್ರತೀಕಗಳು ಕಾಣಿಸಿಕೊಳ್ಳೂದೆ ಹಿಂಗ ಎಂದು ಶಿಲಾಖಾ ಅಲ್ಪವಿರಾಮ ಹಾಕಿದರು.

ರಂಗಭೂಮಿ

ಸಂತೋಷ್ ಮತ್ತೆ ಆರಂಭಿಸಿದರು... ನಾಟಕ ಒಂದು ಪ್ರಬಲ ಮಾಧ್ಯಮ. ರಾಜಕೀಯ ಪ್ರಜ್ಞೆ ಇರದಿದ್ದಲ್ಲಿ ನಾವೆಂಥ ನಾಗರಿಕರು ಹೇಳಿ? ಈಗಲೂ ಹಳ್ಳಿ ಕಟ್ಟೆಗಳಲ್ಲಿ ಹರಟಿ ಹೊಡಿಯೋರು ಇರ್ತಾರಲ್ಲ, ಅವರಿಗೆ ಒಂದು ಸ್ಪಷ್ಟ ನಿಲುವು ಇರ್ತದ. ಅವರಿಗೆ ತಮ್ಮ ರಾಜಕೀಯ ಒಲವಿನ ಬಗ್ಗೆ ಯಾವ ಗೊಂದಲವೂ ಇರೂದಿಲ್ಲ. ನಾಗರಿಕರು ಎನಿಸಿಕೊಂಡ ನಗರವಾಸಿಗಳೇ ಈ ನಿಟ್ಟಿನಲ್ಲಿ ಆಷಾಢಭೂತಿಗಳು. ನಾವು ಯಾವ ಪಕ್ಷದ ಪರ, ವಿರೋಧ ಅಂತ ಮಾತಾಡೂದಿಲ್ಲ. ಏನು ಕೆಟ್ಟದ್ದದೋನೊ ಅದನ್ನ ಲೇವಡಿ ಮಾಡಬೇಕು. ತೀಕ್ಷ್ಣವಾಗಿ ಕುಟುಕಬೇಕು. ಇಂಥ ಕೆಲಸ ಸಾಹಿತಿಗಳಿಂದ, ಲೇಖಕರಿಂದ ಆಗಬೇಕು.

ಇಲ್ಲಾಂದ್ರ ನೋಡ್ರಿ ನಮ್ಮ ಹಳ್ಳಿಯೋರು ಪೈಸೆ ಇಸ್ಕೊಂಡು ವೋಟು ಹಾಕ್ತಾರ... ಸರಿ ಹಾಕಲಿ. ಆದ್ರ ಅವರು ಟೈಮ್ ಬಂದ್ರ ಕೊರಳುಪಟ್ಟಿ ಹಿಡದು ಪ್ರಶ್ನಿಸ್ತಾರ. ನಮ್ಮ ಯುವಜನಾಂಗ ಹಂಗಲ್ಲ. ಪಲಾಯನವಾದ ಹಿಡೀತದ. ನೋಟಾ ಒತ್ತಿ ಬರ್ತಾರ. ಹಂಗಾಗಬಾರದು.

ನನ್ನ ನಾಟಕದೊಳಗ ಆಡಳಿತಶಾಹಿಯನ್ನು ನಾನು ಕಟುವಾಗಿ ಟೀಕಿಸ್ತೀನಿ. ಯಾವ ಅವಕಾಶಗಳನ್ನೂ ಬಿಡೂದಿಲ್ಲ. ಬದಲಾವಣೆ, ಸುಧಾರಣೆ ಮಾಡ್ತೀನಿ ಅನ್ನುವ ಹಟ ನನ್ನೊಳಗಿಲ್ಲ. ಆದ್ರ ನಾಟಕ ನೋಡಿ ಹೋದೋರ ತಲೆಯೊಳಗ ಒಂದು ಗುಂಗೀಹುಳ ಅಂತೂ ಬಿಡ್ತೀನಿ. ಅದು ಗುಂಯ್‌ಗುಡ್ಕೊಂತ ಇರ್ತದ.

ನಮ್ಮಲ್ಲಿ ಕೊರತೆ ಆಗ್ತಿರೂದು, ಸಾಹಿತ್ಯ ಕೃತಿಗಳು, ನಾಟಕಗಳು ಹಿಂಗ ಯೋಚನೆಗೆ ಈಡು ಮಾಡವಲ್ವು. ಸಾಹಿತಿಗಳೆಲ್ಲ ಚಳವಳಿಕಾರರ ಹಂಗ ಅಭಿಪ್ರಾಯ ನಿರ್ಮಾಣಕ್ಕ ನಿಲ್ತಾರ. ಒಂದು ಒಲವು, ನಿಲುವು ಸ್ಪಷ್ಟ ಪಡಸ್ತಾರ. ಹಿಂಗ ಬಿತ್ತಿದ ವಿಚಾರಗಳು ಕಡೀತನಕ ಉಳಿಯೂದಿಲ್ಲ. ನಾವು ಪ್ರಶ್ನೆಗಳನ್ನು ಹುಟ್ಟುಹಾಕಬೇಕು. ಉತ್ತರ ನೋಡುಗರೇ ಕಂಡುಕೊಳ್ಳಬೇಕು.

> ಈಗಲೂ ಹಳ್ಳಿ ಕಟ್ಟೆಗಳಲ್ಲಿ ಹರಟೆ ಹೊಡಿಯೋರು ಇರ್ತಾರಲ್ಲ, ಅವರಿಗೆ ಒಂದು ಸ್ಪಷ್ಟ ನಿಲುವು ಇರ್ತದ.

ಶಿಲಾಖಾ ಹೇಳಿದ ಅಂಶ ಅದಲ್ಲ, ಸ್ವಾವಲಂಬಿ ಮಹಿಳೆ ಅಂದ್ರೇನು? ನೀವು ಸಂಬಳಕ್ಕಾಗಿ ದುಡೀತೀರಿ, ನಿಮಗಾಗಿ ಖರ್ಚು ಮಾಡ್ತೀರಿ ಅಂದ್ರ ಸ್ವಾವಲಂಬನೆ ಅಲ್ಲ. ನಿಮ್ಮ ಖುಷಿ, ನಿಮ್ಮ ಸಿಟ್ಟು, ಸೆಡವು, ಮುನಿಸು ಇವೆಲ್ಲವೂ ಸ್ವೀಕಾರಾರ್ಹ ಸ್ಥಿತಿಗೆ ಬರಬೇಕು. ಅದು ಪ್ರಜ್ಞಾವಂತ ಸಮಾಜದ ಲಕ್ಷಣ. ಹಂಗಾಗಿ ನನ್ನ ನಾಟಕದೊಳಗ ಬರುವ ಎಲ್ಲ ಮಹಿಳೆಯರ ಪಾತ್ರಗಳೂ ಹಿಂಗ ‘ಎಕ್ಸ್‌ಪ್ರೆಸಿವ್’ ಆಗಿರ್ತಾವ.

ಕನ್ನಡದ ರಂಗಭೂಮಿ ಬಗ್ಗೆ ಯೋಚಿಸಿದ್ರ ಇದು ನನಗ ಮೊದಲ ಅನುಭವ. ಖರೆ ಹೇಳಬೇಕಂದ್ರ ನನಗ ನಿಮ್ಮ ಯಕ್ಷಗಾನ ಮತ್ತು ಬಯಲಾಟದ ಬಗ್ಗೆ ಅಗ್ದಿ ಕುತೂಹಲ ಅದ. ಆ ಪ್ರಕಾರದೊಳಗ ನನ್ನ ನಾಟಕ ಮಾಡಿಸಬೇಕು ಅಂತ ಆಸೆ ಅದ. ನೋಡೂನು ಏನಾಗ್ತದ ಅಂತ.

ಕನ್ನಡ ರಂಗಭೂಮಿಗೆ ಇದೇ ಮೊದಲ ಸಲ ಬಂದೇನಿ. ಅಗ್ದಿ ಮುಕ್ತದ. ಮುಕ್ತಗೆ ನಮ್ಮ ಮಾತು ಕೇಳ್ತಾರ. ಒಪ್ಕೊಂತಾರ. ಒಪ್ಪಲಿಕ್ಕರ ಮನವರಿಕೆ ಮಾಡಾಕ ಪ್ರಯತ್ನಸ್ತಾರ. ಆದ್ರ ಎಲ್ಲಿಯೂ ಹಟ ಹಿಡಿಯೂದಿಲ್ಲ. ಕನ್ನಡದ ಅನುವಾದ ಓದೂದು ಕೇಳಿದೆ. ಅಲ್ಲಲ್ಲಿ ತಿಳೀತದ. ಪಾತ್ರಗಳು ಸಂಭಾಷಣೆ ಹೇಳುವ ಮೊದಲ ರಿಹರ್ಸಲ್ ನೋಡಿದ್ರ ತಿಳೀತದ ಅದರ ಶಕ್ತಿ ಏನು ಅಂತ. ಬಹುಶಃ ಇದು ಕನ್ನಡದ ಜಾಯಮಾನಕ್ಕ ಭಾಳ ಚಂದ ಭಟ್ಟಿ ಇಳದದ ಅನಿಸ್ತದ. ಯಶ್ವಂತ ಅವರಿಗೆ ಕನ್ನಡ ಛೊಲೊ ಗೊತ್ತದ. ಮರಾಠಿ ತಿಳೀತದ. ಹಿಂದಿ ಬರ್ತದ. ಹಿಂಗಾಗಿ ಭಾಳಷ್ಟು ಮೌಲಿಕ ಚರ್ಚೆ ಆದ್ವು ನಮ್ಮಿಬ್ಬರ ನಡುವೆ.

ಆದ್ರ ನಮ್ಮಲ್ಲಿ ಮುಂಬೈಯೊಳಗ ವೃತ್ತಿ ರಂಗಭೂಮಿಯ ಭರಾಟೆ ಜೋರದ. ಇಲ್ಲಿ ಹೆಂಗದ ಅಂತ ನೀವು ಹೇಳಬೇಕು. ಕನಿಷ್ಠ ನಾಲ್ಕೈದು ನೂರು ರೂಪಾಯಿ ಟಿಕೆಟ್ ಇಟ್ರೂ, ಪ್ರದರ್ಶನಕ್ಕ ಅರ್ಧಗಂಟೆ ಮೊದಲು ಹಾಲ್ ಫುಲ್ ಆಗಿರ್ತದ. ಅಲ್ಲಿ ನೋಡ್ತಾರ, ಮಾತಾಡ್ತಾರ. ಚರ್ಚೆ ಮಾಡ್ತಾರ. ಮರಾಠಿ ರಂಗಭೂಮಿಯ ಆಯಾಮವೇ ಬ್ಯಾರೆ ಅನಿಸ್ತದ. 52 ನಾಟಕ ಬರದೇನಿ. ನಲ್ವತ್ತು ನಾಟಕಗಳು ಕನಿಷ್ಠಂದ್ರೂ 2–3ಸಾವಿರ ಪ್ರದರ್ಶನ ಕಂಡಾವ.

ತಮಾಶಾ ಮಾಡ್ತಾರ ಅನ್ನುವುದೊಂದು ಮಾತಿತ್ತು. ಆದ್ರಿದು ತಮಾಶಾ ಅಲ್ಲ. ಲಾವಣಿನೂ ಅಲ್ಲ. ಇವೆರಡರ ಹೆಜ್ಜೆ ಚೂರು ಕಾಣಬಹುದು. ಇದು ಕೊಂಕಣದ ‘ನಮನ’ ಪ್ರಕಾರ. ಈಗ ಇದಕ್ಕೂ ಹೆಚ್ಚು ಮಹತ್ವ ಸಿಗಾಕ ಶುರು ಆಗೇದ.

ಸಿನಿಮಾ ಮತ್ತು ನಾಟಕ ನಾನು ಎರಡೂ ಪ್ರಕಾರದೊಳಗ ದುಡದೇನಿ. ಆದ್ರ ನಾಟಕದಷ್ಟು ಆತ್ಮಸಂತೃಪ್ತಿ ಕೊಟ್ಟ ಮಾಧ್ಯಮ ಇನ್ನೊಂದಿಲ್ಲ.

ಲೋಕಶಾಹಿ, ತಾನಾಶಾಹಿ ಅಂತ ಒಂದು ನಾಟಕ ಬರೆದೆ. ಅದನ್ನ ಉತ್ತರದ ಭಾಷೆಗೆ ಅನುವಾದ ಮಾಡ್ತಿದ್ವಿ. ಅನುವಾದಕರು ತಾನಾಶಾಹಿ ಉತ್ತಮ ಅನ್ನುವ ನಿರ್ಧಾರಕ್ಕ ಬರೂಹಂಗ ಅನುವಾದ ಮಾಡಿದ್ರು. ನಾನು ತೀರ್ಮಾನ ಎಲ್ಲಿಯೂ ಕೊಡೂದಿಲ್ಲ. ಕೊಡಬಾರದು. ಹಂಗ ಅವರಿಗೆ ಹೇಳಿದಾಗ ಒಪ್ಪಲೇ ಇಲ್ಲ ಅವರು. ನೋಡುಗರಿಗೆ ಗೊತ್ತಿರೂದಿಲ್ಲ, ನಾವೇ ಅವರಿಗೆ ದಾರಿ ತೋರಬೇಕು ಅಂತ ಅವರ ವಾದ. ದಾರಿಯಲ್ಲ, ಬೆಳಕು ತೋರಬೇಕು. ಅವರ ದಾರಿ ಅವರು ಹುಡುಕಿಕೊಬೇಕು ಅನ್ನೂದು ನನ್ನ ವಾದವಾಗಿತ್ತು.

ಆಮೇಲೆ ಹೇಳಿದೆ, ತಾನಾಶಾಹಿ ಛೊಲೊ ಅಂತ ಹೇಳುವ ಸ್ವಾತಂತ್ರ್ಯ ಇರೂದೆ ಲೋಕಶಾಹಿಯಿಂದ ಅಂತ. ಕೊನಿಗೆ ನಾವು ಸಹಮತಕ್ಕ ಬರಬೇಕಾದ್ರ ಭಾಳ ಕಸರತ್ತು ಮಾಡಬೇಕಾಯಿತು. ಒಂದು ಮೂಲಕೃತಿ ಇನ್ನೊಂದಕ್ಕ ಭಾಷಾನುವಾದ ಆಗುವಾಗ, ಸ್ಥಳೀಯ ಭಾಷೆಯ ಜಾಯಮಾನಕ್ಕ ತಕ್ಕಂಗ ಬದಲಾಗಬೇಕೇ ಹೊರತು, ಆಶಯ ಬದಲಾಗಬಾರದು.

ಇನ್ನ ಹೆಚ್ಗಿ ಹೇಳೂದಿಲ್ಲ. ನಾಟಕ ನೋಡ್ರಿ, ನಾವು ಒಂಚೂರು ಪ್ರ್ಯಾಕ್ಟಿಸ್ ಮಾಡಿಸಿ ಬರ್ತೇವಿ ಅಂತ ಶಿಲಾಖಾ ಮತ್ತ ಸಂತೋಷ್ ಪವಾರ್ ರಂಗಾಯಣದ ಅಂಗಳದೊಳಗ ಹೆಜ್ಜಿ ಹಾಕಿದ್ರು. ಅವರೊಟ್ಟಿಗೆ ಅವರ ಮಕ್ಕಳಾದ ಹಾಸ್ಯ ಮತ್ತು ಕಿಯಾ ಇಬ್ಬರೂ ಜೊತಿಗೂಡಿದ್ರು. ❖

ಚಾರಿತ್ರಿಕ ವಾಸ್ತವ...

...ಹಿಂದಿನ ಪುಟದಿಂದ

ವಿಷಕನ್ಯೆ, ಮೋಹಿನಿ, ಮಾಯೆ, ಅನಾಮಿಕೆ, ಹೀಗೆ ವಿವಿಧ ಪಾತ್ರ ರೂಪಕಗಳು ಮಹಿಳೆಯನ್ನು ದೇಹರಾಜಕಾರಣದ ಸಾಧನ ಮಾತ್ರವಾಗಿ ಕಾಣುವ ಚಾರಿತ್ರಿಕ ವಾಸ್ತವಕ್ಕೆ ಕನ್ನಡಿಯಾಗಿವೆ. ಆಧುನಿಕ ಸಂದರ್ಭದ ದೇಹರಾಜಕಾರಣಕ್ಕೆ ಮುನ್ನುಡಿಯೂ ಆಗಿವೆ.

ದೇಹರಾಜಕಾರಣದ ಭಾಗವಾಗಿಯೇ ಮಹಿಳೆಯರ ಮಾರಾಟ ಪದ್ಧತಿಯನ್ನು ಕೂಡ ಕಾಣಬಹುದು. ‘ಹರಿಶ್ಚಂದ್ರ ಕಾವ್ಯ’ದಲ್ಲೇ ಹರಿಶ್ಚಂದ್ರನು ತನ್ನ ಪತ್ನಿ ಚಂದ್ರಮತಿಯನ್ನು ಮಾರಾಟ ಮಾಡಿದ ಪ್ರಸಂಗ ಬರುತ್ತದೆ. ರಾಜ್ಯ ಕೋಶಾದಿಗಳನ್ನು ಕಳೆದುಕೊಂಡ ರಾಜ ಹರಿಶ್ಚಂದ್ರನು ಕೊಟ್ಟ ಮಾತಿಗೆ ತಪ್ಪದೆ ಪತ್ನಿ ಮತ್ತು ಮಗನ ಜೊತೆ ಪದತ್ಯಾಗ ಮತ್ತು ಪುರತ್ಯಾಗ ಮಾಡುತ್ತಾನೆ. ಕೊಟ್ಟ ಮಾತಿನಂತೆ ತನಗೆ ಕೊಡಬೇಕಾಗಿದ್ದ ಬಾಕಿ ಹಣದ ವಸೂಲಿಗೆ ವಿಶ್ವಾಮಿತ್ರನು ತನ್ನ ಶಿಷ್ಯ ನಕ್ಷತ್ರಿಕನನ್ನು ಕಳುಹಿಸಿರುತ್ತಾನೆ. ಆತನ ಕಾಟಕ್ಕೆ ಕಟ್ಟುಬಿದ್ದು ಹರಿಶ್ಚಂದ್ರನು ಪತ್ನಿಯನ್ನೇ ಮಾರಾಟ ಮಾಡುತ್ತಾನೆ. ಇದು ಕಾವ್ಯದ ಪ್ರಸಂಗ, ಇಲ್ಲಿ ನಾವು ಟೀಕಿಸಬೇಕಾದ್ದು ಹರಿಶ್ಚಂದ್ರನನ್ನಲ್ಲ. ಮಹಿಳೆಯನ್ನು ಮಾರಾಟ ಮಾಡುವ ಅಮಾನವೀಯ ಪದ್ಧತಿಯನ್ನು ಟೀಕಿಸಬೇಕು. ಕಾವ್ಯ ಪ್ರಸಂಗಕ್ಕೆ ಒದಗಿದ ಅನಿಷ್ಟ ಸಾಮಾಜಿಕ ವಾಸ್ತವವು ಅಂದು ಅಸ್ತಿತ್ವದಲ್ಲಿದ್ದ ಫಲವಾಗಿ ಈ ಪ್ರಸಂಗ ಮೂಡಿಬಂದಿದೆ. ಆದ್ದರಿಂದ ಯಾವುದೇ ಕೃತಿಯಲ್ಲಿ ಒಂದು ಪಾತ್ರದ ನಡವಳಿಕೆಯನ್ನು ವಿರೋಧಿಸುವುದು ಸಾಹಿತ್ಯ ವಿಮರ್ಶೆಯಾಗುವುದಿಲ್ಲ. ಇಂತಹ ಅನಿಷ್ಟಗಳಿಗೆ ಹಿನ್ನೆಲೆ ಒದಗಿಸಿದ ಸಾಮಾಜಿಕ ಆಕರಗಳ ಮೂಲಕವೇ ಕೃತಿಯನ್ನು ವಿಮರ್ಶಿಸಬೇಕು. ಪಾತ್ರದ ಬದಲು ಪದ್ಧತಿಯನ್ನು ವಿರೋಧಿಸಬೇಕು.

ನಮ್ಮ ಸಮಾಜದಲ್ಲಿ ಮಹಿಳೆಯರನ್ನು ಮಾರಾಟ ಮಾಡಿ ಗುಲಾಮಿತನಕ್ಕೆ ತಳ್ಳುವ ಪದ್ಧತಿಯಿದ್ದದ್ದು ನಿಜ. ಹಿಂದಿನಿಂದ ಇದ್ದ ಈ ಪದ್ಧತಿಯು ವಿವಿಧ ವಿಧಾನಗಳಲ್ಲಿ ಜಾರಿಯಲ್ಲಿತ್ತು. ಹನ್ನೆರಡನೇ ಶತಮಾನದ ವೇಳೆಗೆ ‘ಲೇಖ ಪದ್ಧತಿ’ಯು ಚಾಲ್ತಿಗೆ ಬಂತು. ಲೇಖ ಪದ್ಧತಿಯಲ್ಲಿ ‘ಯಜಮಾನ’ನಿಗೆ ಮಹಿಳೆಯನ್ನು ವಹಿಸಿಕೊಡುವ ಒಪ್ಪಂದವಾಗುತ್ತಿತ್ತು. ಆನಂತರ ಮಹಿಳೆಯ ತಂದೆ, ಗಂಡ-ಯಾರೂ ಮಧ್ಯೆ ಪ್ರವೇಶ ಮಾಡುವಂತಿರಲಿಲ್ಲ. ಹೀಗೆ ಮಾರಾಟಗೊಂಡ ಮಹಿಳೆಯು ಮನೆಗೆಲಸಗಳನ್ನೆಲ್ಲ ಮಾಡಬೇಕಿತ್ತು. ಕೆಲವರು ಲೈಂಗಿಕವಾಗಿಯೂ ಬಳಸಿಕೊಳ್ಳುತ್ತಿದ್ದರು, (Women Slaves in Medieval India by Shadab Bano) ಹೀಗೆ ಚಾಲ್ತಿಯಲ್ಲಿದ್ದ ಪದ್ಧತಿಯೇ ಪ್ರಸಂಗರೂಪದಲ್ಲಿ ನಮ್ಮ ಪುರಾಣ ಹಾಗೂ ಕಾವ್ಯಗಳಲ್ಲಿ ಬಂದಿದೆ. ಇದು ವ್ಯಕ್ತಿ ದೋಷವಲ್ಲ, ವ್ಯವಸ್ಥೆಯ ದೋಷ; ದೌರ್ಜನ್ಯ.

ಜಡ ಪದ್ಧತಿಗಳ ವಿರುದ್ಧ ಸಿಡಿದೆದ್ದ ಮಹಿಳೆಯರು ನಮ್ಮ ಸಾಹಿತ್ಯದ ಪಾತ್ರಗಳಾಗಿರುವುದುಂಟು. ಜೀವಂತವಿದ್ದ ಚಾರಿತ್ರಿಕ ವ್ಯಕ್ತಿಗಳಲ್ಲೂ ಪ್ರತಿರೋಧ ಪ್ರಕಟವಾಗಿರುವುದುಂಟು. ಈ ಎರಡು ಅಂಶಗಳಿಗೆ ಪ್ರಾತಿನಿಧಿಕವಾಗಿ ಹದಿನೈದನೇ ಶತಮಾನದ ಕುಮಾರವ್ಯಾಸ ಭಾರತದಲ್ಲಿ ಬರುವ ದ್ರೌಪದಿ ಪಾತ್ರ ಮತ್ತು ವಚನ ಚಳವಳಿಯ ಅಕ್ಕಮಹಾದೇವಿಯ ನಿಲುವನ್ನು ಪ್ರಸ್ತಾಪಿಸಬೇಕು. ಕುಮಾರವ್ಯಾಸ ಭಾರತದ ದ್ರೌಪದಿಯು ಹಿಂದಿನ ಮಹಾಭಾರತದ ಕಥನದಲ್ಲಿರುವ ಪಾತ್ರಕ್ಕಿಂತ ವಿಭಿನ್ನವಾಗಿದ್ದಾಳೆ. ಸಭಾಪರ್ವದ ವಸ್ತ್ರಾಪಹರಣ ಪ್ರಸಂಗದಲ್ಲಿ ಮಹಿಳಾ ಲೋಕದ ಪ್ರಾತಿನಿಧಿಕ ಪ್ರಶ್ನಾರೂಪಕವಾಗುತ್ತಾಳೆ. ತನ್ನ ವಸ್ತ್ರಾಪಹರಣವಾಗುತ್ತಿದ್ದರೂ ಮೌನವಾಗಿ ಕೂತ ತನ್ನ ಗಂಡಂದಿರು ‘ಸತಿಯನೆನ್ನನು ಮಾರಿ ಧರ್ಮಸ್ಥಿತಿಯ ಕೊಂಡರು’ ಎಂದು ಸಿಡಿಯುತ್ತಾಳೆ. ಗಂಡರೋ ಷಂಡರೋ ಎಂದು ಸ್ಫೋಟಗೊಳ್ಳುತ್ತಾಳೆ. ಕುಮಾರವ್ಯಾಸ ಕವಿಯ ದ್ರೌಪದಿಯ ಪ್ರತಿರೋಧಾತ್ಮಕ ರೂಪಕ ರಚನೆಗೆ ನಮ್ಮ ಸಮಾಜದಲ್ಲಿ 10ನೇ ಶತಮಾನದ ಪಂಪ ಮಹಾಕವಿಯ ಕಾಲದಿಂದಲೂ ಸಂಭವಿಸಿದ ಜನಪರ ಚಾರಿತ್ರಿಕ ಘಟನೆಗಳ ಒತ್ತಾಸೆಯೂ ಇರಬಹುದು. ಮನುಷ್ಯರೆಲ್ಲರೂ ಒಂದೇ ಜಾತಿಯೆಂಬ ಪಂಪನ ಆಶಯದ ಜೊತೆಗೆ 12ನೇ ಶತಮಾನದಲ್ಲಿ ಚಾರಿತ್ರಿಕ ಮಹತ್ವದ ವಚನ ಚಳವಳಿಯು ಸಂಭವಿಸಿತ್ತು. ಜಡ ಮೌಲ್ಯಗಳನ್ನು ಪ್ರಶ್ನಿಸುವ ಮಹಿಳೆಯರನ್ನು ಈ ವಚನ ಚಳವಳಿ ಮತ್ತು ಸಾಹಿತ್ಯವು ತೊಡಗಿಸಿಕೊಂಡಿತ್ತು, ಬೆಳೆಸಿತ್ತು. ಒಟ್ಟು ಸಮಾಜದಲ್ಲಿ ಕಾಣಿಸಿಕೊಳ್ಳುತ್ತಿದ್ದ ಇಂತಹ ಸಾಮಾಜಿಕ ಚಲನಶೀಲತೆಯ ಪ್ರೇರಣೆಯು ದ್ರೌಪದಿಯೆಂಬ ಪಾತ್ರಪ್ರತೀಕದ ಹಿಂದೆ ಇದ್ದಿರಬಹುದು.

ದ್ರೌಪದಿಯದು ಪಾತ್ರದ ವಿಷಯವಾದರೆ, ಅಕ್ಕಮಹಾದೇವಿಯದು ಚಾರಿತ್ರಿಕ ವ್ಯಕ್ತಿತ್ವದ ವಿಷಯ. ಅಕ್ಕಮಹಾದೇವಿಯ ವಚನಗಳಲ್ಲಿರುವ ತಳಸ್ಪರ್ಶಿ ತಳಮಳಗಳ ಸಂವೇದನೆಯು ಯಾವ ಆಧುನಿಕ ಕವಿಗೂ ಕಡಿಮೆಯಿಲ್ಲ. ತನ್ನ ಜೀವನದಲ್ಲಿ ರಾಜಕೌಶಿಕನ ಒತ್ತಡದಿಂದ ಆತನನ್ನು ವರಿಸಿ ಅರಮನೆ ಸೇರಿದ ಅಕ್ಕಮಹಾದೇವಿಯು ಕನ್ನಡ ಸಾಹಿತ್ಯದ ಮೊತ್ತಮೊದಲ ಮಹಿಳಾ ಪ್ರತಿರೋಧದ ಪ್ರತೀಕ. ರಾಜನನ್ನು ಧಿಕ್ಕರಿಸಿ ಹೊರನಡೆದ ಅಕ್ಕಮಹಾದೇವಿ ಏಕಕಾಲಕ್ಕೆ ರಾಜ ಪ್ರಭುತ್ವ, ಪುರುಷ ಪ್ರಧಾನ ಸಮಾಜ, ವಿವಾಹವೆಂಬ ಸಂಸ್ಥೆಗೆ ಎದುರಾಗಿ ನಿಂತ ಅಸಾಧಾರಣ ವ್ಯಕ್ತಿತ್ವವಾಗಿದ್ದರು. ಇದೇ ಸಂದರ್ಭದಲ್ಲಿ ಸೂಳೆ ಸಂಕವ್ವೆ, ಕಾಳವ್ವೆ ಮುಂತಾದ ವಚನಗಾರ್ತಿಯರನ್ನು ಕಾಯಕ ಸಮರ್ಥನೆ ಮತ್ತು ಪ್ರತಿಭಟನೆಗಾಗಿ ಉಲ್ಲೇಖಿಸಬಹುದು.

ಒಟ್ಟಿನಲ್ಲಿ ದೇಹರಾಜಕಾರಣವನ್ನು ಧಿಕ್ಕರಿಸಿದ ಪ್ರತೀಕವಾಗಿ ಅಕ್ಕಮಹಾದೇವಿ ಮತ್ತು ಕುಮಾರವ್ಯಾಸ ಕವಿಯ ಪ್ರಶ್ನಾರೂಪಕ, ದ್ರೌಪದಿ-ಇಂದಿಗೂ ಸ್ತ್ರೀಪರ ಸಂವೇದನೆಯ ಸಾಕ್ಷಿ ಪ್ರಜ್ಞೆಯಾಗಿದ್ದಾರೆ; ಪ್ರೇರಕ ಶಕ್ತಿಯಾಗಿದ್ದಾರೆ. ❖

ಪ್ರಕೃತಿಯಿಂದ ಹೊರಗಿರುವ ನರನಾರು ಸೃಷ್ಟಿಯಲಿ...

ಎಚ್.ಎ. ಪುರುಷೋತ್ತಮ ರಾವ್

ಡಿ.ವಿ. ಗುಂಡಪ್ಪ

> ಇದೇ 17ರಂದು ಡಿ.ವಿ.ಗುಂಡಪ್ಪನವರ ಜನ್ಮದಿನ. ಆ ನೆಪದಲ್ಲಿ ಅವರ ವೈಜ್ಞಾನಿಕ ಚಿಂತನೆಯ ಮೇಲೊಂದು ಹೊರಳು ನೋಟ

ಕನ್ನಡದ ಪ್ರಮುಖ ಸಾಹಿತಿಗಳಲ್ಲೊಬ್ಬರಾದ ಡಿ.ವಿ. ಗುಂಡಪ್ಪನವರ ಬದುಕು ಮತ್ತು ಬರವಣಿಗೆ ವೈವಿಧ್ಯಮಯ. ಇವರ ಮಂಕುತಿಮ್ಮನ ಕಗ್ಗ, ಮರುಳ ಮುನಿಯನ ಕಗ್ಗ, ಬಾಳಿಗೊಂದು ನಂಬಿಕೆ, ಜ್ಞಾಪಕ ಚಿತ್ರಶಾಲೆ, ಜೀವನ ಸೌಂದರ್ಯ ಮತ್ತು ಸಾಹಿತ್ಯ, ಸಂಸ್ಕೃತಿ ಮುಂತಾದ ಅನೇಕ ವಿಶಿಷ್ಟ ಕೃತಿಗಳು ಈ ನಾಡಿನ ಸಾಹಿತ್ಯಕ, ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಸಾಕಷ್ಟು ವಿಸ್ತರಿಸಿವೆ. ಗಾಂಧಿವಾದವನ್ನು ಮೈಗೂಡಿಸಿಕೊಂಡಿದ್ದ ಡಿವಿಜಿ ಪತ್ರಕರ್ತರಾಗಿಯೂ ಯಶಸ್ವಿಯಾದವರು. ವಿವಿಧ ಸಂಘ ಸಂಸ್ಥೆಗಳನ್ನು ಹುಟ್ಟುಹಾಕುವ ಮೂಲಕ ಸಮಾಜಮುಖಿಯಾಗಿದ್ದವರು.

ಸಮಾಜದ ಆರೋಗ್ಯಕರ ಬೆಳವಣಿಗೆಗೆ ಅಗತ್ಯವಾದ ವೈಚಾರಿಕ ಪ್ರಜ್ಞೆ, ವೈಜ್ಞಾನಿಕ ಚಿಂತನೆಗಳನ್ನೂ ಹೊಂದಿದ್ದವರು. ಪ್ರಾಯಶಃ ಈ ಗುಣವೇ ಬಿ.ಜಿ.ಎಲ್. ಸ್ವಾಮಿಯವರಂತಹ ಒಬ್ಬ ಸಮರ್ಥ ಪರಿಸರ, ವಿಜ್ಞಾನ ಸಾಹಿತಿಯನ್ನು ಸೃಷ್ಟಿಸಿರಲಿಕ್ಕೂ ಸಾಧ್ಯವಾಗಿದೆ. ಆದರೂ ಡಿವಿಜಿ ಅವರನ್ನು ಸಾಮಾನ್ಯ ದೃಷ್ಟಿಯಲ್ಲಿ ಜೀವನ ಧರ್ಮಯೋಗದ ಪ್ರತಿಪಾದಕರೆಂದಷ್ಟೇ ಬಿಂಬಿಸಲಾಗುತ್ತಿದೆ. ಅವರಲ್ಲಿನ ವೈಜ್ಞಾನಿಕ ಮನೋಭಾವ, ಸಾಮಾಜಿಕ ಪ್ರಜ್ಞೆ, ದೂರದೃಷ್ಟಿ ಕುರಿತಂತೆ ಅಗತ್ಯವಾದ ಚರ್ಚೆ ಆಗಿಲ್ಲವೆಂದೇ ಹೇಳಬಹುದು.

ನಾಡಿನ ಅನೇಕ ಕವಿಗಳು ಅನುಭವಿಸಿದಂತೆ ಡಿವಿಜಿ ಸಹ ಪ್ರಕೃತಿ ಸೌಂದರ್ಯವನ್ನು ಅನುಭವಿಸಿದ್ದಾರೆ. ವಿಜ್ಞಾನ, ಪ್ರಕೃತಿ, ಬದುಕು ಕುರಿತಂತೆ ಅವರ ಆಲೋಚನೆಗಳು ಗಂಭೀರವಾಗಿವೆ. ಆದರೆ ಈ ಅಂಶಗಳನ್ನು ಸೂಕ್ಷ್ಮವಾಗಿ ಗುರುತಿಸುವ ಅಗತ್ಯವಿದೆ. ಪ್ರಕೃತಿಯೇ ಸೌಂದರ್ಯದ ಗುರು ಎನ್ನುವ ಡಿವಿಜಿ ‘ಪ್ರಕೃತಿಯಿಂದ ಹೊರಗಿರುವ ನರನಾರು ಸೃಷ್ಟಿಯಲಿ’ ಎಂದು ಪ್ರಶ್ನಿಸುತ್ತಲೇ ಮನುಷ್ಯ ಈ ವಿಶ್ವ ವೃಕ್ಷವೊಂದರ ರೆಂಬೆ ಮಾತ್ರ ಎಂದು ಸ್ಪಷ್ಟಪಡಿಸುತ್ತಾರೆ. ಈ ಜಗತ್ತನ್ನೇ ತನ್ನ ಹತೋಟಿಯಲ್ಲಿ ಇರಿಸಿಕೊಳ್ಳುವ ಹುಂಬತನ ಮತ್ತು ಸ್ವಾರ್ಥದಿಂದ ಮೆರೆಯುತ್ತಿರುವ ಮನುಷ್ಯನಿಗೆ ಈ ಮೂಲಕ ಮನುಷ್ಯ ಮತ್ತು ಪರಿಸರದ ನಡುವೆ ಇರುವ ಸಂಬಂಧ, ಪರಿಸರ ಕುರಿತಂತೆ ಮನುಷ್ಯನಿಗೆ ಇರಬೇಕಾದ ಜವಾಬ್ದಾರಿಯ ಬಗ್ಗೆ ಸೂಕ್ಷ್ಮವಾಗಿ ಎಚ್ಚರಿಸುತ್ತಾರೆ.

‘ಪ್ರಕೃತಿಯನು ತಿಳಿ; ತಿಳಿವಿನಿಂ ಪ್ರಕೃತಿಯನು ದಾಟು’ ಎಂಬ ಮಾತಿನ ಮೂಲಕ ತಮ್ಮ ಪರಿಸರ ಪ್ರಜ್ಞೆಯನ್ನು ಮೆರೆಯುತ್ತಾರೆ. ‘ಈ ಸೃಷ್ಟಿ ವ್ಯವಸ್ಥೆಯೊಳ್ ವ್ಯರ್ಥಮಾವುದುಮಿರದು, ಬೆಟ್ಟ ನದಿ ಮರುಭೂಮಿ ಕಾಡು ಕಣಿವೆ, ವೃಷ್ಟಿಕಾರಕಗಳವು ವಾಯುಶೋಧಕಗಳವು ದಿಟ್ಟಸಾಳದಿ ನಿಜವ ಮರುಳ ಮುನಿಯ’ ಎನ್ನುವ ಮಾತಿನಲ್ಲಿ ಪ್ರಕೃತಿಯ ನಿಜ ತತ್ವವನ್ನು ಮುಂದಿಡುತ್ತಾರೆ. ಮತ್ತೊಂದು ಪದ್ಯದಲ್ಲಿ ಇವುಗಳನ್ನು ‘ಒಟ್ಟನಿಂ ನೋಡದನು’ ಎಂಬ ಮಾತಿನ ಮೂಲಕ ಪ್ರಕೃತಿಯನ್ನು ಸಮಗ್ರವಾಗಿ ನೋಡಿ ಅರಿಯುವ ದಾರಿಯನ್ನೂ ಕಾಣಿಸುತ್ತಾರೆ. ನಿಸರ್ಗದಲ್ಲಿ ವ್ಯರ್ಥ ಎಂಬ ಪದಕ್ಕೆ ಸ್ಥಳವೇ ಇಲ್ಲ. ಈ ಜೈವಿಕ ವ್ಯವಸ್ಥೆಯ ಪ್ರತಿಯೊಂದು ಘಟಕವೂ ಒಂದಕ್ಕೊಂದು ಪೂರಕ, ಎಲ್ಲವೂ ಚಕ್ರೀಯ ಚಲನೆಗೆ ಒಳಪಟ್ಟಿವೆ ಎಂಬ ಅಂಶವನ್ನು ಈ ಮಾತುಗಳು ಪ್ರತಿಪಾದಿಸುತ್ತವೆ.

ಈ ಜೀವಗೋಳದಲ್ಲಿ ಜೀವಿಗಳ ಹುಟ್ಟು, ಸಾವು ಸಹಜ ಪ್ರಕ್ರಿಯೆ; ನಿಸರ್ಗ ಚಕ್ರದ ಸಾಮಾನ್ಯ ವಿದ್ಯಮಾನ. ಖಗೋಳೀಯ ವಿದ್ಯಮಾನಗಳು, ಭೂ ಚಲನೆಯ ಪರಿಣಾಮಗಳ ನಡುವೆಯೇ ಬಾಳಬೇಕಾದ ನಮ್ಮಲ್ಲಿ ಸಹಜವಾದ ನೈಸರ್ಗಿಕ ಘಟನೆಗಳಿಗೂ ಇಲ್ಲಸಲ್ಲದ ಅರ್ಥ ಕಲ್ಪಿಸಲಾಗುತ್ತಿದೆ. ಈ ಘಟನೆಗಳ ಮೂಲಕವೇ ಜನರನ್ನು ದಿಕ್ಕುತಪ್ಪಿಸುವ ಮಹಾತ್ಮರ ಬಗ್ಗೆ ನಾವು ಎಚ್ಚರ ವಹಿಸಬೇಕಾಗಿದೆ. ಪ್ರಳಯದ ಬಗ್ಗೆ ಪುಸ್ತಕ ಮಾರಿದವರು ಹಣ ಮಾಡಿಕೊಂಡರು, ಕೊಂಡವರು ಹೆದರಿ ಜೀವ ಉಳಿಸಿಕೊಳ್ಳಲು ಪೂಜೆ ಪುನಸ್ಕಾರಗಳಿಗಾಗಿ ಹಣ ಕಳೆದುಕೊಂಡರು. ಆದರೆ ಈ ಜೀವಜಾಲದಲ್ಲಿ ನಿಸರ್ಗ ಯಾವುದೇ ಸಂದರ್ಭಗಳಲ್ಲಿ ತನ್ನನ್ನು ತಾನೇ ಸರಿಪಡಿಸಿಕೊಳ್ಳಬಲ್ಲುದು, ಈ ನಿಸರ್ಗದ ವ್ಯಾಪಾರದಲ್ಲಿ ಒಂದೆಡೆ ನಾಶವಿದ್ದಲ್ಲಿ ಮತ್ತೊಂದೆಡೆ ಸೃಷ್ಟಿ ಇದ್ದೇ ಇರುತ್ತದೆ ಎಂಬ ಸಮತೋಲನದ ಮಾತುಗಳನ್ನು ಡಿವಿಜಿ ಒಂದು ಪದ್ಯದ ಮೂಲಕ ಮಾರ್ಮಿಕವಾಗಿ ತಿಳಿಸುತ್ತಾರೆ. ‘ಹುಳು ಹುಟ್ಟಿ ಸಾಯುತಿರೆ, ನೆಲ ಸವೆದು ಕರಗುತಿರೆ, ಕಡಲೊಳೆತ್ತಲೊ ಹೊಸ ದ್ವೀಪವೇಳುವುದು; ಕಳೆಯಿತೊಂದಿರಲಿಲ್ಲಿ, ಬೆಳೆವುದಿನ್ನೊಂದೆಲ್ಲೊ, ಅಳಿವಿಲ್ಲ ವಿಶ್ವಕ್ಕೆ ಮಂಕುತಿಮ್ಮ’.

ಲೇಖನದ ವಿಸ್ತೃತ ರೂಪಕ್ಕೆ ನೋಡಿ www.prajavani.net

ಮುನ್ನೋಟ 14-03-2021 ರಿಂದ 20-03-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಮಾನಸಿಕ ಚಿಂತೆಗಳು ಹೆಚ್ಚಾಗಬಹುದು. ಬೆಂಕಿ ಮತ್ತು ಇತರೆ ಅಪಾಯಕಾರಿ ವಸ್ತುಗಳ ಜೊತೆ ಕೆಲಸ ಮಾಡುವವರು ಎಚ್ಚರವಾಗಿರಿ. ಹಣಕಾಸಿನ ವಿಚಾರದಲ್ಲಿ ವಂಚನೆಗೆ ಒಳಗಾಗಬಹುದು, ಆದ್ದರಿಂದ ಅಪರಿಚಿತರ ಜೊತೆ ವ್ಯವಹರಿಸುವಾಗ ಎಚ್ಚರ. ಆಕಸ್ಮಿಕ ಧನಪ್ರಾಪ್ತಿ ಇದೆ, ಕಳೆದಿದ್ದ ಆಸ್ತಿಯನ್ನು ಪುನಃ ಸಂಪಾದಿಸಬಹುದು. ಮಹಿಳೆಯರಿಗೆ ಬಿಡುವಿಲ್ಲದ ಕೆಲಸವಿರುತ್ತದೆ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ನಿಖರತೆ ಮೂಡುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಮಧ್ಯವರ್ತಿಗಳಿಂದ ವಿವಾಹ ಕಾರ್ಯಗಳಲ್ಲಿ ಮುನ್ನಡೆ ಇರುತ್ತದೆ. ಕೋರ್ಟ್ ಕಚೇರಿ ವ್ಯವಹಾರಗಳಲ್ಲಿ ಉತ್ತಮ ಫಲಿತಾಂಶದ ಸಾಧ್ಯತೆಗಳಿವೆ. ಮಾತನಾಡುವಾಗ ಎಚ್ಚರವಿರಲಿ. ಕೃಷಿ ಭೂಮಿಯನ್ನು ಹೊಂದುವ ಯೋಗವಿದೆ. ಕೆಲವು ಕೆಲಸಗಳು ಸರಾಗವಾಗಿ ಸಾಗುತ್ತವೆ. ಉದ್ಯೋಗ ಕ್ಷೇತ್ರದಲ್ಲಿನ ಸಮಸ್ಯೆಗಳು ತಹಬಂದಿಗೆ ಬರುತ್ತದೆ. ತಂದೆಯಿಂದ ಸ್ವಲ್ಪ ಧನ ಸಹಾಯವಿರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಲೇವಾದೇವಿ ಮಾಡುವವರಿಗೆ ಹೆಚ್ಚಿನ ಲಾಭದ ನಿರೀಕ್ಷೆ ಇರುತ್ತದೆ. ವೃತ್ತಿಯಲ್ಲಿದ್ದ ಎಲ್ಲಾ ರೀತಿಯ ಗೊಂದಲಗಳು ನಿವಾರಣೆಯಾಗುತ್ತವೆ. ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯುವ ಸಾಧ್ಯತೆಗಳಿವೆ. ನಿಮ್ಮ ಪಾಲುದಾರಿಕೆಯ ವ್ಯವಹಾರಗಳಲ್ಲಿ ನಿಷ್ಠೆ ಮತ್ತು ಪ್ರಾಮಾಣಿಕತೆ ಅತಿ ಅವಶ್ಯವಾಗಿರುತ್ತದೆ. ಹಣದ ಒಳಹರಿವು ಉತ್ತಮವೆನಿಸುವಷ್ಟಿರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಕ್ರೀಡಾಪಟುಗಳಿಗೆ ಗೌರವಾದರಗಳು ದೊರೆಯುವ ಸಾಧ್ಯತೆಗಳಿವೆ. ಬೇಜವಾಬ್ದಾರಿ ಹೇಳಿಕೆಗಳಿಂದ ರಾಜಕಾರಣಿಗಳು ಇಕ್ಕಟ್ಟಿಗೆ ಸಿಲುಕುವ ಸಾಧ್ಯತೆಗಳಿವೆ. ದೂರದೂರಿಗೆ ಪ್ರಯಾಣ ಮಾಡುವ ಅವಕಾಶವಿದೆ. ನಿರೀಕ್ಷಿತ ಮಟ್ಟದಲ್ಲಿ ವ್ಯವಹಾರಗಳಿದ್ದರೂ ಲಾಭದಲ್ಲಿ ಕೊಂಚ ಕಡಿಮೆಯಾಗಬಹುದು. ವಿದ್ಯಾರ್ಥಿಗಳ ಅಧ್ಯಯನದಲ್ಲಿ ಒತ್ತಡ ಕಡಿಮೆಯಾಗುತ್ತದೆ. ಕೀಲುನೋವು ಕಾಡಬಹುದು.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಅಮೂಲ್ಯ ವಸ್ತುಗಳನ್ನು ಕಾಪಾಡಿಕೊಳ್ಳಿ. ಸ್ವಂತ ಉದ್ದಿಮೆಗಳನ್ನು ನಡೆಸುತ್ತಿರುವವರು ಸ್ವಲ್ಪ ಹಿನ್ನಡೆಯನ್ನು ಅನುಭವಿಸಬೇಕಾಗಬಹುದು. ರಾಜಕೀಯ ವ್ಯಕ್ತಿಗಳಿಗೆ ರಾಜಕೀಯ ಜೀವನದಲ್ಲಿ ಮೇಲೇರುವ ಅವಕಾಶಗಳು ಬರುತ್ತವೆ, ಅವುಗಳನ್ನು ಸರಿಯಾಗಿ ಬಳಸಿಕೊಳ್ಳಿರಿ. ಶತ್ರುಗಳು ಮಿತ್ರರಾಗಲು ಬಯಸಿ ಬರುವರು. ಸರ್ಕಾರಿ ಕಚೇರಿಗಳಲ್ಲಿನ ಕೆಲಸಗಳು ಸರಾಗವಾಗಿ ಆಗುತ್ತವೆ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ರಾಜಕೀಯದಲ್ಲಿ ಇರುವವರೆಗೆ ಉತ್ತಮ ಸ್ಥಾನ ಪ್ರಾಪ್ತಿಯಾಗುವ ಯೋಗವಿದೆ. ಸಾಲದ ಹಣ ಈಗ ವಾಪಸ್ಸು ಬರಲಾರಂಭಿಸುತ್ತವೆ. ವಿದ್ಯಾರ್ಥಿಗಳು ಯಶಸ್ಸನ್ನು ಕಂಡುಕೊಳ್ಳಲು ಒಳ್ಳೆಯ ಅವಕಾಶ ದೊರೆಯುತ್ತದೆ. ಹಣಕಾಸಿನ ವಿಷಯದಲ್ಲಿ ಇದ್ದ ಆತಂಕಗಳು ದೂರವಾಗುತ್ತವೆ. ಗುತ್ತಿಗೆ ಕೆಲಸ ಮಾಡುವವರು ಒಪ್ಪಿಕೊಂಡ ಕೆಲಸಗಳನ್ನು ಶ್ರದ್ಧೆಯಿಂದ ಮಾಡಿದಲ್ಲಿ ಹೊಸ ಕೆಲಸಗಳು ದೊರೆಯುವ ಸಾಧ್ಯತೆಗಳಿವೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3
ಸ್ವಯಂ ಉದ್ಯೋಗಿಗಳಿಗೆ ಆದಾಯದಲ್ಲಿ ಏರಿಕೆಯಿದೆ. ಸ್ನೇಹಿತರಿಂದ ಒಂದು ಸಂತೋಷದ ಸುದ್ದಿ ತಲುಪುತ್ತದೆ. ಕಚೇರಿ ಕೆಲಸಗಳಲ್ಲಿ ಜಾಗರೂಕರಾಗಿ ವರ್ತಿಸಿರಿ, ಇಲ್ಲವಾದಲ್ಲಿ ನಿಮ್ಮ ವಿರುದ್ಧ ಷಡ್ಯಂತ್ರ ನಡೆಯಬಹುದು. ಬೇರೆಯವರ ಒತ್ತಡಕ್ಕೆ ಮಣಿದು ದುಂದು ವೆಚ್ಚ ಮಾಡಿದಲ್ಲಿ ಸಾಲ ಮಾಡಬೇಕಾದ ಸಂದರ್ಭ ಬರಬಹುದು. ಹಿರಿಯರ ಜೊತೆ ಮಾತನಾಡುವಾಗ ವಿವೇಚನೆಯಿಂದಿರಿ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ
ಭೂ ವಿವಾದದಲ್ಲಿ ಸಿಕ್ಕಿ ಹಾಕಿಕೊಳ್ಳುವ ಸಾಧ್ಯತೆಗಳಿವೆ. ಸರಿಯಾದ ನಿರ್ಧಾರಗಳಿಲ್ಲದೆ ಗೊಂದಲಮಯ ವಾತಾವರಣ ನಿರ್ಮಾಣ ಆಗಬಹುದು, ಸ್ವಲ್ಪ ಎಚ್ಚರವಿರಲಿ. ನೂತನ ಯಂತ್ರೋಪಕರಣಗಳನ್ನು ಮಾರುವವರಿಗೆ ವ್ಯಾಪಾರದಲ್ಲಿ ಅಭಿವೃದ್ಧಿ ಇರುತ್ತದೆ. ಹಿರಿಯರಿಂದ ಆಸ್ತಿ ದೊರೆಯುವ ಸೂಚನೆಯಿದೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ವಿದ್ಯಾರ್ಥಿಗಳ ಉನ್ನತ ವ್ಯಾಸಂಗಕ್ಕೆ ಹಾದಿ ಸುಗಮವಾಗುತ್ತದೆ. ವಿವಾಹ ಆಕಾಂಕ್ಷಿಗಳಿಗೆ ಕಂಕಣ ಭಾಗ್ಯ ಒದಗಿಬರಲಿದೆ. ಹಳೆಯ ಬಾಕಿ ಹಣ ಈಗ ವಾಪಸ್ ಬಂದು ನಿಮಗೆ ಅನುಕೂಲವಾಗುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಹಿರಿಯರ ಸಲಹೆಗಳಿಂದ ಹೊಸ ಆದಾಯದ ಮೂಲ ಸಿಗುತ್ತದೆ. ಕುಟುಂಬ ವರ್ಗದವರ ಸಹಕಾರದಿಂದ ವ್ಯವಹಾರದಲ್ಲಿ ಚೇತರಿಕೆ ಕಾಣಬಹುದು. ಉದ್ಯೋಗ ಕ್ಷೇತ್ರದಲ್ಲಿ ಸ್ವಲ್ಪ ಗೊಂದಲ ಇದ್ದರೂ ನಂತರ ಸರಿಯಾಗುತ್ತದೆ. ಹಿತಶತ್ರುಗಳಿಂದ ತೊಂದರೆಯನ್ನು ಎದುರಿಸಬೇಕಾಗಬಹುದು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಸ್ಥಿರಾಸ್ತಿಗಳು ಪ್ರಾಪ್ತವಾಗುವ ಸಂದರ್ಭವಿದೆ. ಹೊಸ ಭೂಮಿಯನ್ನು ಖರೀದಿಸುವಲ್ಲಿ ವಿಶೇಷ ಆಸಕ್ತಿ ಹೊಂದುವಿರಿ. ವಿದೇಶ ಪ್ರಯಾಣದ ಕನಸು ಗರಿಗೆದರುವ ಸಾಧ್ಯತೆಗಳಿವೆ. ಉದ್ಯೋಗದಲ್ಲಿ ಹೊಸ ಒತ್ತಡಗಳು ಬರಬಹುದು. ಗರ್ಭಿಣಿಯರು ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಲೇಬೇಕು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಹಿಂದಿನ ತಾಪತ್ರಯಗಳೆಲ್ಲವೂ ಕಾಣದಂತಾಗಿ ಮನಸ್ಸು ನಿರಾಳವಾಗುವುದು. ವಿದ್ಯಾರ್ಥಿಗಳ ಪ್ರಯತ್ನಕ್ಕೆ ಯಶಸ್ಸು ಇರುತ್ತದೆ. ವಕೀಲಿ ವೃತ್ತಿ ಮಾಡುವವರಿಗೆ ಕೈತುಂಬ ಕೆಲಸದ ಜೊತೆಗೆ ಆದಾಯದಲ್ಲಿ ಏರಿಕೆಯಾಗಲಿದೆ.

ಪದಬಂಧ 2678



ಮೇಲಿನಿಂದ ಕೆಳಕ್ಕೆ
1. ಪರ್ವತದ ತುದಿ 3
2. ಸಂಧ್ಯಾವಂದನೆಗೆ ಪ್ರಶಸ್ತವಾದ ಮೂರು ಮುಹೂರ್ತ 3
3. ದೂರದ ಜಿಗಿತ 3
4. ಪ್ರೇಮದಲ್ಲಿ ಹುಚ್ಚಾದ ಹಿಂದಿ ಬಾಲೆ 3
6. ಸ್ತ್ರೀ ರೂಪದ ಮದನನನ್ನು ಹೀಗೆನ್ನಬಹುದೆ? 3
8. ಮನಸ್ಸಿಗೆ ಹತ್ತಿರವಾದ ಮಾನಮಯಿಗೆ ಈ ಹೆಸರು ಸೂಕ್ತ 3
10. ರಾಜ ರಾಜಕಾರಣಿಗಳು ಆಗಾಗ್ಗೆ ಕೇಳ ಬಯಸುವ ಹೊಗಳಿಕೆಯ ಘೋಷ 3
11. ಮಾನದ ಜೊತೆ ಸರಿತೂಗುವ ಅಧಿಕಾರದ ಪಟ್ಟ 2
12. ಕತ್ತರಿಸುವ ಸಾಧನ ಒತ್ತರಿಸಿಕೊಂಡಿದೆ 2
13. ಮಿಡಿತವನ್ನು ಹೆಚ್ಚಿಸುವ ಆತಂಕ 3
14. ಹಲ್ಲಿಗೆ ಗಟ್ಟಿತನವನ್ನು ಕೊಡುವ ಅಡಿಪಾಯ 3
16. ಶಿವಸತಿ ಪಾರ್ವತಿಗೆ ಅನೇಕ ನಾಮಗಳು ಶಾರ್ವರೀ, 3
17. ತಿಮಿಂಗಲದಂತೆ ಆವರಿಸುವ ಕತ್ತಲು 3
19. ಮನೆಗೆ, ಊರಿಗೆ ವಯಸ್ಸು, ವಿವೇಕದಲ್ಲಿ ದೊಡ್ಡವ 3
20. ಕೈ ಬಿಡುವ ಸುಂಕ 2
21. ಪ್ರಾಮುಖ್ಯತೆಯನ್ನು ಕಳೆದುಕೊಂಡು ಲೆಕ್ಕಕ್ಕೆ ಬಾರದ್ದು 2
22. ಕೋವಿ ಹಿಡಿದು ಬೇಟೆಯಾಡುವವ 3
24. ಶ್ರವಣ, ಪಠನದ ನಂತರ ಮನದಲ್ಲಿ ಮೆಲಕು ಹಾಕುವ ಕ್ರಿಯೆ 3
25. ಉತ್ತರಕರ್ನಾಟಕದಲ್ಲಿ ದುಡಿಮೆಗೆ ಸಿಗುವ ಸಂಬಳ 3
26. ನಯವಾದ ಕಣ್ಣುಳ್ಳ ಚೆಲುವೆ 3
27. ಕುಣಿಯುವಾಗ ಬಳಕು ಮತ್ತು ಓಲಾಡು 3
28. ನಮ್ಮ ದೇಶದ ಆಡಳಿತವನ್ನು ಹಿಡಿದಿರುವ ರಾಜಧಾನಿ 3

ಎಡದಿಂದ ಬಲಕ್ಕೆ
1. ಈಶ್ವರನಿಗಾಗಿ ಕಾದಿಟ್ಟ ಇರುಳು 4
3. ಒಳಗೊಳಗೇ ನೆಂದು ಒದ್ದೆಯಾದ ದುಃಖ 4
5. ಕವಿಯ ಮಾತಿನಲ್ಲಿ ‘ಮುಡಿ ಏರದೆ ಗುಡಿ ಸೇರದೆ’ ವನವನ್ನು ಶೋಭಿಸುವ ಸುವಾಸಿತ ಹೂವು 5
7. ಅಮೂಲ್ಯ ಹರಳಿನ ಹಾರ 4
9. ಧ್ಯಾನದಲ್ಲಿ ಬಿಸಿಯಾಗಿ ಕುಪಿತಗೊಂಡ ಋಷಿ 4
11. ಸ್ವಯಂ ಸ್ಥಳಾಡಳಿತ 3
13. ಮನೆಯ ಮುಂದೆ ಶೋಭಿಸುವ ಗಿಡ ಕಾಡಾಗಿ ಹಬ್ಬಿದೆ 5
15. ಮೇಲೂ ಏರದ ಕೆಳಗೂ ಇಳಿಯದ ಮಧ್ಯದಲ್ಲಿ ತೂಗಿಬಿಟ್ಟ ವಾಸ್ತವತೆ 5
18. ಇವನು ಹಿಡಿಯುವುದೇ ಶಿರವನ್ನು 5
21. ಶಿವಪ್ರಿಯೆಯ ಹೆಸರಿನ ಪರ್ವತ 5
23. ರಮೆಯ ಪತಿ 3
25. ತಪ್ಪಿಸಿಕೊಂಡು ಓಡಿಹೋಗುವ ಸೂತ್ರ 4
27. ಬ್ಯಾ ಬ್ಯಾ ಎನ್ನುತ್ತಾ ತಲೆತಗ್ಗಿಸಿಕೊಂಡು ಸಾಗುವ ಗುಂಪು 4
29. ಸಾವಿತ್ರಿಯ ಮುಂದೆ ಕಾಲಧರ್ಮನ ಅಪಜಯ 5
30. ಶ್ರೇಷ್ಠವಾದ ನೆತ್ತರ ಕೊಡುಗೆ 4
31. ಜಿಗಿಯುತ್ತಾ ಸಂತೋಷಿಸು 4

ಪದಬಂಧ ಉತ್ತರ -2677

ಮೇಲಿಂದ ಕೆಳಕ್ಕೆ
1. ಮಾನವಧರ್ಮ 2.ನೆರೆಭಯ 3.ಹುರಿದು 4.ಷಣ್ಮುಖಪ್ರಿಯ 6.ದಾಸರಪದ 7.ಕುಣಿಗಲ್ 10.ಸಭಾಸದರು 11.ಗೂಬೆಕಣ್ಣು 12.ಪರಮಾನಂದ 13.ಸಹನಶೀಲ 15.ಮನೋರಮ 17.ಹರಡು

ಎಡದಿಂದ ಬಲಕ್ಕೆ
1. ಮಾವನಮನೆ 3.ಹುಲಿವೇಷ 5.ವರದಾ 7.ಕುದುರೆಮುಖ 8.ಸಹಾಯವಾಣಿ 9.ಗಡಿಸಮಯ 11.ಗೂಗಲ್ 12.ಪಟ್ಟದಗೊಂಬೆ 14.ಕರಮಚಂದ 16.ಮಾವಿನಹಣ್ಣು 18.ರುಜಿನ 19.ದಟ್ಟಕಾಡು 20.ಮಲಯಾಚಲ



ಆಕಾಶಗಂಗೆಯಲ್ಲಿನ ಕಪ್ಪುಕುಳಿ. ಅದು ತಿಳಿನೀಲಿ ಬಣ್ಣ ಹೊರಸೂಸುವಾಗ ಕಂಡ ಚಿತ್ತಾರ

ಓ ನಕ್ಷತ್ರವೇ ಓಡಿಹೋದೆ ಎಲ್ಲಿಗೆ?

ಗುರುರಾಜ್ ಎಸ್. ದಾವಣಗೆರೆ

ಅಗಣಿತ ತಾರಾಗಣಗಳ ನಡುವೆ
ನಿನ್ನನೆ ಮೆಚ್ಚಿದೆ ನಾನು
ನನ್ನೀ ಜೀವನ ಸಮುದ್ರಯಾನಕೆ
ಚಿರ ಧ್ರುವತಾರೆಯು ನೀನು
-ಕುವೆಂಪು

ಕೋಪಗೊಂಡ ಮಕ್ಕಳು ಮನೆ ಬಿಟ್ಟು ಓಡಿ ಹೋಗುವುದು, ಭಾರೀ ಬಿಸಿನೆಸ್ ಕುಳಗಳು ಸಾಲ ನೀಡಿದ ಬ್ಯಾಂಕುಗಳಿಗೆ ಪಂಗನಾಮ ಹಾಕಿ ದೇಶಬಿಟ್ಟು ಓಡಿ ಹೋಗುವುದು ಹೊಸದೇನೂ ಅಲ್ಲ. ಪ್ರೀತಿ ಮಾಡಿ ಮನೆಯವರ ವಿರೋಧ ಕಟ್ಟಿಕೊಂಡು ಊರು ತೊರೆಯುವ ಪ್ರೇಮಿಗಳ ಸಂಖ್ಯೆ ಕೂಡ ಕಡಿಮೆಯೇನಿಲ್ಲ. ಆದರೆ ತಾರಾಮಂಡಲದ ನಕ್ಷತ್ರ ಓಡಿ ಹೋಗುವುದೆಂದರೆ? ಮನುಷ್ಯರು ಒಂದು ಜಾಗದಿಂದ ಇನ್ನೊಂದಕ್ಕೆ, ಒಂದು ಊರಿನಿಂದ ಇನ್ನೊಂದೂರಿಗೆ, ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಓಡಿ ಹೋಗಿ ನೆಲೆಸುತ್ತಾರೆ. ಆದರೆ ನಭೋಮಂಡಲದ ನಕ್ಷತ್ರ ಓಡುವುದಾದರೂ ಎಲ್ಲಿಗೆ?

ನಮ್ಮ ಗ್ಯಾಲಕ್ಸಿ ಆಕಾಶ ಗಂಗೆಗೆ (ಮಿಲ್ಕೀವೇ) ಸೇರಿದ ನಕ್ಷತ್ರವೊಂದು ಗಂಟೆಗೆ ಆರು ಕೋಟಿ ಮೈಲಿ ವೇಗದಲ್ಲಿ ನಮ್ಮ ವಿಶ್ವದಿಂದ ಹೊರಕ್ಕೆ ಚಿಮ್ಮಿ ಬೇರೊಂದು ವಿಶ್ವದ ಗಮ್ಯ, ಗಾಢ ಕತ್ತಲಿನ, ತಳವಿರದ ಆಳಕ್ಕೆ ಹೊರಟು ಹೋಗಿದೆ. ಹೀಗೆ ಆಕಾಶ ಗಂಗೆಯ ತೆಕ್ಕೆ ಬಿಡಿಸಿಕೊಂಡು ರಚ್ಚೆ ಹಿಡಿದ ಮಗುವಿನಂತೆ ಓಡಿ ಹೋದ ನಕ್ಷತ್ರದ ಹೆಸರು ಎಸ್5 ಎಚ್‌ವಿಎಸ್ 1. ಖಗೋಳ ಭಾಷೆಯಲ್ಲಿ ಎಚ್‌ವಿಎಸ್ ಎಂದರೆ ಹೈಪರ್ ವೆಲಾಸಿಟಿ ಸ್ಟಾರ್ ಎಂದಾಗುತ್ತದೆ. ಅಮೆರಿಕದ ಕಾರ್ನೆಗಿ ಮೆಲ್ಲನ್ ವಿಶ್ವವಿದ್ಯಾಲಯದ ತಜ್ಞ ಸೆರ್ಗೈ ಕೊಪೋಸೋವ್ ನೇತೃತ್ವದ ವಿಜ್ಞಾನಿಗಳ ತಂಡ ಈ ನಕ್ಷತ್ರವನ್ನು ಭೂಮಿಯಿಂದ 29 ಸಾವಿರ ಜ್ಯೋತಿರ್ವರ್ಷಗಳ ದೂರದಲ್ಲಿ ಪತ್ತೆ ಮಾಡಿದೆ. ಕೊಕ್ಕರೆ ಆಕಾರದ ನಕ್ಷತ್ರಪುಂಜ ಗ್ರುಸ್‌ನಿಂದ ಓಡಿ ಹೋಗಿರುವ ನಕ್ಷತ್ರದ ವೇಗ ಅತ್ಯಧಿಕವಾದ್ದರಿಂದ ಅದು ಹಿಂತಿರುಗಿ ನಮ್ಮ ಗ್ಯಾಲಕ್ಸಿಗೆ ಬರುವ ಸಂಭವವೇ ಇಲ್ಲ ಎಂದಿರುವ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಖಭೌತವಿಜ್ಞಾನಿ ಡಗ್ಲಾಸ್ ಬೌಬರ್ಟ್ ಇಂಥ ವೇಗದ ನಕ್ಷತ್ರವನ್ನು ನಾನೆಂದೂ ಕಂಡಿರಲಿಲ್ಲ ಎಂದಿದ್ದಾರೆ.

ಈಗ ಗ್ಯಾಲಕ್ಸಿಯಿಂದ ಓಡಿ ಹೋಗಿರುವ ನಕ್ಷತ್ರವನ್ನು 3.9 ಮೀಟರ್ ಉದ್ದದ ಆಂಗ್ಲೋ–ಆಸ್ಟ್ರೇಲಿಯನ್ ಟೆಲಿಸ್ಕೋಪ್ (AAT) ಬಳಸಿ ಮತ್ತು ಯುರೋಪಿಯನ್ ಸ್ಪೇಸ್ ಏಜೆನ್ಸಿಯ ಗೇಯ ಕೃತಕ ಉಪಗ್ರಹದ ನೆರವಿನಿಂದ ಪತ್ತೆ ಮಾಡಲಾಗಿದೆ. ಅಮೆರಿಕ, ಯುರೋಪ್ ಮತ್ತು ಆಸ್ಟ್ರೇಲಿಯಾದ ತಜ್ಞರಿರುವ ತಂಡ ಜಂಟಿಯಾಗಿ ಕೈಗೊಂಡಿರುವ ಸದರನ್ ಸ್ಟೆಲ್ಲಾರ್ ಸ್ಟ್ರೀಮ್ ಸ್ಪೆಕ್ಟ್ರೋಸ್ಕೋಪಿಕ್ ಸರ್ವೆ ಪ್ರಕಾರ ನಮ್ಮ ಗ್ಯಾಲಕ್ಸಿಯಿಂದ ಓಡಿ ಹೋಗಿರುವ ನಕ್ಷತ್ರ 'ಓಬಿ' ಗುಂಪಿಗೆ ಸೇರಿದ್ದು ಸೂರ್ಯನಿಗಿಂತ ಎರಡು ಪಟ್ಟು ದೊಡ್ಡದಿದೆ ಮತ್ತು ಹತ್ತು ಪಟ್ಟು ಪ್ರಕಾಶಮಾನವಾಗಿದೆ. ಈ ನಕ್ಷತ್ರ ಸೂರ್ಯನಿಗಿಂತ ಅತ್ಯಂತ ಹೆಚ್ಚು ದ್ರವ್ಯರಾಶಿ ಇರುವ ನಲವತ್ತು ಲಕ್ಷ ಪಟ್ಟು ದೊಡ್ಡದಾದ ಸಗಿಟ್ಟೇರಿಯಸ್ A* ಕಪ್ಪುಕುಳಿಗೆ ಸೇರಿದ್ದು ಎಂಬುದನ್ನೂ ತಂಡ ದೃಢಪಡಿಸಿದೆ.

ತಾರಾ ಮಂಡಲಗಳಿಂದ ನಕ್ಷತ್ರಗಳು ಚಿಮ್ಮಿಹೋಗುವುದು ಇದೇ ಮೊದಲೇನಲ್ಲ. ಬ್ರಹ್ಮಾಂಡ ಉಗಮವಾದಾಗಿನಿಂದ ನಕ್ಷತ್ರಗಳು ತಾವಿದ್ದ ಜಾಗದಿಂದ ಓಡಿಹೋದ ಹಲವಾರು ಉದಾಹರಣೆಗಳಿವೆ. ನಕ್ಷತ್ರಗಳು ಹೀಗೆ ಹೋಗಲು ಕಾರಣವೇನು? ಎಂಥ ನಕ್ಷತ್ರಗಳು ಓಡಿ ಹೋಗುತ್ತವೆ? ಈವರೆಗೆ ಎಷ್ಟು ನಕ್ಷತ್ರಗಳು ಓಡಿಹೋಗಿ ತೆರೆಮರೆಗೆ ಸರಿದಿವೆ? ಸೂರ್ಯ ಸಹ ನಕ್ಷತ್ರವೇ ಆಗಿರುವುದರಿಂದ ಮುಂದೊಂದು ದಿನ ಅದೂ ಓಡಿ ಹೋಗುತ್ತದೆಯೇ? ಖಗೋಳ ವಿಜ್ಞಾನಿಗಳು ಕೆಲ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡಿದ್ದಾರೆ. ಅತ್ಯಂತ ಭಾರದ ಮತ್ತು ಎಳೆಪ್ರಾಯದ ನಕ್ಷತ್ರಗಳು ಅಂದರೆ ಸೂರ್ಯನಿಗಿಂತ ಹತ್ತಾರು ಪಟ್ಟು ಹೆಚ್ಚು ತೂಕದ ಮತ್ತು ಐದುಕೋಟಿ ವರ್ಷಗಳಿಗಿಂತ ಕಡಿಮೆ ವಯೋಮಾನದ ನಕ್ಷತ್ರಗಳು ಹೀಗೆ ಯರ್ರಾಬಿರ್ರಿಯಾಗಿ ಓಡಿ ಹೋಗುತ್ತವೆ ಎಂದು ಸಾಕ್ಷಿ ಒದಗಿಸಿದ್ದಾರೆ.

ಅವು ಸೂಸುವ ಬಣ್ಣಗಳ ಆಧಾರದ ಮೇಲೆ ನಕ್ಷತ್ರಗಳನ್ನು ಓ, ಬಿ, ಎ, ಎಫ್, ಜಿ, ಕೆ, ಎಂ, ಆರ್, ಎನ್ ಮತ್ತು ಎಸ್ ಎಂದು ವರ್ಗೀಕರಿಸಲಾಗುತ್ತದೆ. ಓ ನಕ್ಷತ್ರಗಳ ಮೇಲ್ಮೈ ಉಷ್ಣತೆ 30,500 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಿದ್ದರೆ ಬಿ ನಕ್ಷತ್ರಗಳ ಉಷ್ಣತೆ 20,000 ಡಿಗ್ರಿ ಸೆಂಟಿಗ್ರೇಡ್‌ನಷ್ಟಿರುತ್ತದೆ. ಎರಡೂ ತಿಳಿನೀಲಿ ಬಣ್ಣವನ್ನು ಸೂಸುತ್ತವೆ. ಬರಿಯ ಕಣ್ಣಿಗೆ ಒಂಟಿಯಂತೆ ಕಾಣುವ ನಕ್ಷತ್ರಗಳು ದೂರದರ್ಶಕದಲ್ಲಿ ನೋಡಿದಾಗ ಎರಡು ನಕ್ಷತ್ರಗಳಾಗಿ ಗೋಚರಿಸುತ್ತವೆ. ಹೀಗೆ ಎರಡಾಗಿ ಕಾಣುವ ನಕ್ಷತ್ರಗಳು ವಾಸ್ತವದಲ್ಲಿ ಪರಸ್ಪರ ಹತ್ತಿರವಿದ್ದು ಅವುಗಳ ನಡುವಿನ ಗುರುತ್ವಾಕರ್ಷಣೆಯ ಫಲವಾಗಿ ಒಂದರ ಸುತ್ತ ಇನ್ನೊಂದು ಪ್ರದಕ್ಷಿಣೆ ಮಾಡುತ್ತಿರುತ್ತವೆ. ಇವನ್ನು ಬೈನರಿ ಸ್ಟಾರ್ಸ್ ಅಥವಾ ನಕ್ಷತ್ರ ಯುಗ್ಮಗಳೆನ್ನುತ್ತಾರೆ. ಗ್ಯಾಲಕ್ಸಿಯಲ್ಲಿ ಶೇ 80ರಷ್ಟು ನಕ್ಷತ್ರಗಳಲ್ಲಿ ಅರ್ಧದಷ್ಟು ಜೋಡಿ ನಕ್ಷತ್ರಗಳೇ. ನಮ್ಮ ಗ್ಯಾಲಕ್ಸಿಯಲ್ಲಿ ಮೂರಕ್ಕಿಂತ ಹೆಚ್ಚು ನಕ್ಷತ್ರಗಳು ಗುಂಪಾಗಿರುವುದೂ ಇದೆ.

ಎರಡು ವಿಧಗಳಲ್ಲಿ ನಕ್ಷತ್ರಗಳು ಓಡಿ ಹೋಗುತ್ತವೆ. ನಕ್ಷತ್ರ ಜೋಡಿಯ ಒಂದರಲ್ಲಿ ಸೂಪರ್‌ನೋವಾ (ನಕ್ಷತ್ರ ಸ್ಫೋಟ) ಸಂಭವಿಸಿದಾಗ ಹತ್ತಿರದಲ್ಲೇ ಇರುವ ಇನ್ನೊಂದು ನಕ್ಷತ್ರ ಬಲವಾಗಿ ಒದೆಸಿಕೊಂಡ ಫುಟ್‌ಬಾಲಿನಂತೆ ಅತಿ ಹೆಚ್ಚು ವೇಗದಲ್ಲಿ ಚಿಮ್ಮುತ್ತದೆ. ಸೂರ್ಯನಿಗಿಂತ ಹೆಚ್ಚು ತೂಕದ ನಕ್ಷತ್ರಗಳ ಸ್ಫೋಟವಾದಾಗ ನಕ್ಷತ್ರಗಳ ಹೊಟ್ಟೆಯೊಳಗಿನ ಪರಮಾಣು ಇಂಧನ ಧಗಧಗನೆ ಉರಿದು ಅಪಾರ ಪ್ರಮಾಣದ ಶಾಖ ಬಿಡುಗಡೆಯಾಗುತ್ತದೆ. ನಕ್ಷತ್ರ ಎಂದರೆ ಎರಡು ಅಗಾಧ ಬಲಗಳ ನಿರಂತರ ಸೆಣಸಾಟ ಮತ್ತು ಸಮತೋಲನ. ಸ್ಫೋಟಗೊಂಡಾಗ ಒಳಗಿನ ಒತ್ತಡ ನಕ್ಷತ್ರವನ್ನು ಪುಡಿಪುಡಿಯಾಗಿಸಿದರೆ, ನಕ್ಷತ್ರದ ಅಗಾಧ ಗುರುತ್ವಶಕ್ತಿ ಒಡೆದು ಚೂರು ಚೂರಾಗುವ ನಕ್ಷತ್ರದ ಭಾಗಗಳನ್ನು ಒಟ್ಟಾಗಿಡಲು, ಗಟ್ಟಿಗೊಳಿಸಲು ಪ್ರಯತ್ನಿಸುತ್ತದೆ.

ಹೊರ ಮತ್ತು ಒಳಗಿನ ಹೋರಾಟ ನಿರಂತರ ನಡೆದು ಒಂದು ಹಂತದಲ್ಲಿ ಇಂಧನ ಖಾಲಿಯಾದಾಗ ನಕ್ಷತ್ರ ಕೆಲವೇ ಸೆಕೆಂಡುಗಳಲ್ಲಿ ಧುತ್ತೆಂದು ಕುಸಿದು ಬೀಳುತ್ತದೆ. ಭೂಮಿಯ ಹತ್ತು ಲಕ್ಷ ಪಟ್ಟುತೂಕದ ನಕ್ಷತ್ರವೊಂದು ಕೇವಲ 15 ಸೆಕೆಂಡುಗಳಲ್ಲಿ ನೆಲಕಚ್ಚುತ್ತದೆ. ಈ ಹಠಾತ್ ಕುಸಿತ ಉಂಟುಮಾಡುವ ಆಘಾತತರಂಗಗಳಿಂದ (Shockwave) ನಕ್ಷತ್ರದ ಹೊರಕವಚ ಸ್ಫೋಟಗೊಳ್ಳುತ್ತದೆ. ಕೊನೆಗೆ ನಮ್ಮ ಸೂರ್ಯನಿಗಿಂತ ಹತ್ತು ಪಟ್ಟುದೊಡ್ಡ ದಟ್ಟ ತಿರುಳು (ಕಪ್ಪುರಂಧ್ರ) ಮತ್ತು ಅದರ ಸುತ್ತ ಸದಾ ವಿಸ್ತಾರಗೊಳ್ಳುವ ಬಿಸಿ ಅನಿಲದ ಬೃಹತ್ ಮೋಡಗಳು (ನೈಬ್ಯೂಲ) ಸೃಷ್ಟಿಯಾಗುತ್ತವೆ. ಆಘಾತ ತರಂಗಗಳ ವೇಗ ಗಂಟೆಗೆ ಮೂರೂವರೆ ಕೋಟಿ ಕಿಲೊಮೀಟರ್‌ನಷ್ಟಿರುತ್ತದೆ.

ಸೂಪರ್ ನೋವಾ ಸಂಭವಿಸಿದಾಗ ಅಪಾರ ದ್ರವ್ಯ ಮತ್ತು ಬೆಳಕು ಬಾಹ್ಯಾಕಾಶಕ್ಕೆ ಚಿಮ್ಮುತ್ತದೆ. ಬೆಳಕು ಎಷ್ಟು ಪ್ರಖರವಾಗಿರುತ್ತದೆಂದರೆ ಒಮ್ಮೊಮ್ಮೆ ನಮ್ಮ ಆಕಾಶ ಗಂಗೆಯೇ ಕಾಣಿಸದಷ್ಟು ಸ್ಫೋಟದ ಹೊಗೆ ಆವರಿಸುತ್ತದೆ. ನೂರು ವರ್ಷಗಳಿಗೊಮ್ಮೆ ಸೂಪರ್‌ನೋವಾ ಸಂಭವಿಸುತ್ತದೆ ಎಂದು ವಿಜ್ಞಾನಿಗಳು ಲೆಕ್ಕ ಕೊಡುತ್ತಾರೆ. ಸೂಪರ್‌ನೋವಾ ಸಂಭವಿಸಿದಾಗ ನ್ಯೂಟ್ರಾನ್ ನಕ್ಷತ್ರ ಜನಿಸಿ ಕೊನೆಗೆ ತನ್ನದೇ ಗುರುತ್ವದಿಂದ ಕುಗ್ಗಿ ಚಿಕ್ಕ ಹಿಡಿಯಷ್ಟು ಪೊಟ್ಟಣದ ಗಾತ್ರ ಹೊಂದಿ ರಪ್ಪು ರಂಧ್ರವೆನ್ನಿಸಿಕೊಳ್ಳುತ್ತದೆ. ಇವುಗಳ ಸಾಂದ್ರತೆ ಎಷ್ಟಿರುತ್ತದೆ ಎಂದರೆ ಒಂದು ಟೀ ಸ್ಪೂನ್‌ನಷ್ಟು. ಕಪ್ಪುರಂಧ್ರದ ವಸ್ತುವನ್ನು ಭೂಮಿಯ ಮೇಲೆ ಅಳತೆ ಮಾಡಿದರೆ ಸುಮಾರು ನೂರಾರು ಕೋಟಿ ಟನ್‌ಗಳಿಗಿಂತ ಭಾರವಿರುತ್ತದೆ.

ಈಗ ಖಗೋಳತಜ್ಞರಿಗೆ ಕಂಡಿರುವ ನಕ್ಷತ್ರ ನಿನ್ನೆ ಮೊನ್ನೆ ಅಥವಾ ಕಳೆದ ತಿಂಗಳು ಚಿಮ್ಮಿ ಹೋದದ್ದಲ್ಲ. ಅದು ಮಹಾಯಾನ ಕೈಗೊಂಡಿದ್ದು 50 ಲಕ್ಷ ವರ್ಷಗಳ ಹಿಂದೆ. ಆಗತಾನೇ ನಮ್ಮ ಪೂರ್ವಜರು ಬೆನ್ನುಮೂಳೆ ನೆಟ್ಟಗೆ ಮಾಡಿಕೊಂಡು ನಡೆಯುವುದನ್ನು ಪ್ರಾಕ್ಟೀಸ್ ಮಾಡುತ್ತಿದ್ದರು. ಹಲವು ಓಡಿಹೋದ ನಕ್ಷತ್ರಗಳನ್ನು ಹಿಪಾರ್ಕೊಸ್ ಉಪಗ್ರಹದ ನೆರವಿನಿಂದ ಪತ್ತೆಮಾಡಿರುವ ಖಗೋಳತಜ್ಞ ರೋನಿ ವೂಗರ್ ವೀಫ್ ಮತ್ತು ತಂಡ ಓರಾಯನ್ ನಕ್ಷತ್ರ ಪುಂಜದ ಎಇ ಆರಿಗೆ (AE Aurigae) ಮತ್ತು ಎಮ್ ಕೋಲಂಬೆ (M Colambae) ಎಂಬ ನಕ್ಷತ್ರಗಳು 25 ಲಕ್ಷ ವರ್ಷಗಳ ಹಿಂದೆ ತಮ್ಮ ಸ್ಥಾನದಿಂದ ಓಡಿಹೋದದ್ದನ್ನು ಖಚಿತವಾಗಿ ಗುರುತಿಸಿದ್ದರು. ಈಗಾಗಲೇ ಇಂಥ 18 ವಿದ್ಯಮಾನಗಳು ಪತ್ತೆಯಾಗಿದ್ದು ಇದರಲ್ಲಿ 12 ಸೂಪರ್ ನೋವಾಗಳಿಂದ ಮತ್ತು ಉಳಿದವು ದೊಡ್ಡ ಕಪ್ಪು ಕುಳಿಗಳ ಬಳಿ ಹೋಗಿ ಚಿಮ್ಮಲ್ಪಟ್ಟವುಗಳಾಗಿವೆ. ಈಗ ಓಡಿ ಹೋಗಿರುವ ನಕ್ಷತ್ರ ಎರಡನೆಯ ವಿಧಕ್ಕೆ ಸೇರಿದೆ. ❖

ತ್ಯಾಗವೇ ಎಲ್ಲ, ಮತ್ತೇನಿಲ್ಲ...

ರಘುನಾಥ ಚ.ಹ.

ವಿಮರ್ಶೆ

ಎಪ್ಪತ್ತು ಎಂಬತ್ತರ ದಶಕದಲ್ಲಿ ರಾಜ್ಯದಲ್ಲಿ ರೂಪುಗೊಂಡ 'ದಲಿತ ಚಳವಳಿ' ದಲಿತರಿಗೆ ಆತ್ಮವಿಶ್ವಾಸದ ಬದುಕನ್ನು ದೊರಕಿಸಿಕೊಡಲು ಹಂಬಲಿಸುವುದರ ಜೊತೆಗೆ, ಆಧುನಿಕ ಕರ್ನಾಟಕದ ವೈಚಾರಿಕತೆಗೆ ಹೊಸ ಆಯಾಮವೊಂದನ್ನು ನೀಡಿತು ಹಾಗೂ ಸಮಾಜವನ್ನು ಹೆಚ್ಚು ಮಾನವೀಯಗೊಳಿಸಲು ಪ್ರಯತ್ನಿಸಿತು. ಈ ಚಳವಳಿಯ ಆಶಯಗಳನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ರೂಪುಗೊಂಡ 'ದಲಿತ ಸಂಘರ್ಷ ಸಮಿತಿ' (ಡಿಎಸ್‌ಎಸ್) ದಲಿತರ ಆಶೋತ್ತರಗಳಿಗೆ ಧ್ವನಿಯಾಗುವ ಪ್ರಯತ್ನ ನಡೆಸಿತು. 'ಡಿಎಸ್‌ಎಸ್' ಬೆಳವಣಿಗೆಯ ಹಿಂದೆ ಹಲವಾರು ನಾಯಕರ ಕನಸುಗಳಿವೆ, ಅವಿಶ್ರಾಂತ ದುಡಿಮೆಯಿದೆ. ಅಂಥ ನಾಯಕರಲ್ಲೊಬ್ಬರು ಬಿ.ವಿ. ಚಂದ್ರಪ್ರಸಾದ್ ತ್ಯಾಗಿ.

ದಲಿತ ಸಂಘಟನೆಗೆ ಮಹತ್ವದ ಕೊಡುಗೆ ನೀಡಿದ್ದರೂ, ಚಳವಳಿಯ ಆಚೆಗೆ ಹೆಚ್ಚೇನೂ ಪರಿಚಿತ ಮುಖವಲ್ಲದ ತ್ಯಾಗಿ ಅವರ ವ್ಯಕ್ತಿತ್ವ–ಸಾಧನೆಯನ್ನು ದಾಖಲಿಸುವ ಮಹತ್ವಾಕಾಂಕ್ಷೆಯ ಪ್ರಯತ್ನ 'ತ್ಯಾಗಿ' ಕೃತಿ. ಪ್ರೊ. ಎಂ.ಎಸ್. ಶೇಖರ್, ಎಸ್. ನರೇಂದ್ರಕುಮಾರ್, ಅಪ್ಪಗೆರೆ ಸೋಮಶೇಖರ್ ಸಂಪಾದಿಸಿರುವ ಈ ಪುಸ್ತಕವನ್ನು ತ್ಯಾಗಿ ಅವರ ಬದುಕಿನ ಜೊತೆಗೆ ದಲಿತ ಚಳವಳಿ ಸಾಗಿಬಂದ ಹಾದಿಯ ಅವಲೋಕನವಾಗಿಯೂ ನೋಡಲಿಕ್ಕೆ ಸಾಧ್ಯವಿದೆ.

ತ್ಯಾಗಿ ಅವರ ಬದುಕು ಹಾಗೂ ದಲಿತ ಚಳವಳಿಯನ್ನು ಪ್ರತ್ಯೇಕವಾಗಿ ನೋಡುವುದು ಸಾಧ್ಯವಿಲ್ಲ. ಆರ್ಥಿಕ ಭದ್ರತೆಯ ಕೆಲಸ ಹಾಗೂ ಕುಟುಂಬದ ನೆಮ್ಮದಿಗಿಂತ ಸಂಘಟನೆಯ ಕೆಲಸವೇ ಹೆಚ್ಚು ಮುಖ್ಯವಾದುದು ಎಂದು ನಂಬಿದವರು ತ್ಯಾಗಿ. ವೈಯಕ್ತಿಕ ಬದುಕಿಗಿಂತಲೂ ಸಾರ್ವಜನಿಕ ಕೆಲಸಗಳಿಗೆ ಹೆಚ್ಚಿನ ಆದ್ಯತೆ ನೀಡಿದ್ದರಿಂದಲೇ 'ತ್ಯಾಗಿ' ಎನ್ನುವ ಹೆಸರು ನಾಮಪದವಾಗಿಯಷ್ಟೇ ಉಳಿಯದೆ ಅನ್ವರ್ಥನಾಮವಾಗಿ ಪರಿಣಮಿಸಿದೆ ಹಾಗೂ ಚಳವಳಿಯೊಂದು ಅಪೇಕ್ಷಿಸುವ ಮೌಲ್ಯದ ಸಂಕೇತವಾಗಿದೆ.

ಬಡ ದಲಿತ ಕುಟುಂಬದಲ್ಲಿ ಜನಿಸಿದ ಚಂದ್ರಪ್ರಸಾದ್ ತ್ಯಾಗಿ, ಕುಟುಂಬದ ತ್ಯಾಗದ ಫಲವಾಗಿ ವಿದ್ಯಾವಂತರಾಗಿ ಭದ್ರಾವತಿಯ ಕಬ್ಬಿಣ ಕಾರ್ಖಾನೆಯಲ್ಲಿ ಕಾರ್ಮಿಕರಾಗಿ ಸೇರ್ಪಡೆಗೊಂಡರು. ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ



ಪು: 476 ₹380

ತ್ಯಾಗಿ
ಸಂ: ಪ್ರೊ. ಎಂ.ಎಸ್. ಶೇಖರ್, ಎಸ್. ನರೇಂದ್ರಕುಮಾರ್, ಅಪ್ಪಗೆರೆ ಸೋಮಶೇಖರ್
ಪ್ರ: ರೂಪ ಪ್ರಕಾಶನ, ಮೈಸೂರು.
ಫೋನ್: 93422 74331.

ಅಸ್ಪೃಶ್ಯತೆಯ ವಿರುದ್ಧದ ಹೋರಾಟಗಳಲ್ಲಿ ತೊಡಗಿಕೊಂಡಿದ್ದರೂ, ಅವರೊಳಗಿನ ನಾಯಕತ್ವದ ಶಕ್ತಿ ಪ್ರಕಟಗೊಳ್ಳಲು ಹಾಗೂ ದಲಿತ ಚಿಂತನೆಗಳಿಗೆ ತಾತ್ವಿಕ ಆಯಾಮ ದೊರೆಯಲು ಕಾರ್ಖಾನೆಯ ಪರಿಸರ ಅವಕಾಶ ಕಲ್ಪಿಸಿತು. ಕಾರ್ಖಾನೆಯ ಎಲ್ಲ ವಿಭಾಗಗಳಲ್ಲಿ ಆಚರಣೆಗೊಳ್ಳುತ್ತಿದ್ದ ಅಸ್ಪೃಶ್ಯತೆಯನ್ನು ವಿರೋಧಿಸುವ ದನಿಗಳೊಂದಿಗೆ ತ್ಯಾಗಿ ಸೇರಿಕೊಂಡರು.

ಬಿ. ಕೃಷ್ಣಪ್ಪನವರು ತ್ಯಾಗಿಯವರನ್ನು ಕಬ್ಬಿಣದ ಮನುಷ್ಯನನ್ನಾಗಿಸಿ ಭದ್ರಾವತಿಯಿಂದ ಹಾಸನಕ್ಕೆ ಕಳಿಸಿದರು ಎನ್ನುವುದು ತ್ಯಾಗಿಯವರ ಬಗ್ಗೆ ಅವರ ಸಹೋದ್ಯೋಗಿಯಾಗಿದ್ದ ಎನ್. ಗಿರಿಯಪ್ಪನವರು ಹೇಳುವ ಮಾತು. ಅಸ್ಪೃಶ್ಯತೆ ಸಮಾಜದಲ್ಲಿ ಸಹಜ ಹಾಗೂ ಅನಿವಾರ್ಯ ಎಂದು ನಂಬಿರುವವರು ಈಗಲೂ ಇರುವ ಸಂದರ್ಭದಲ್ಲಿ, ಐದು ದಶಕಗಳ ಹಿಂದೆ ದಲಿತರ ಹಕ್ಕುಗಳಿಗಾಗಿ ಧ್ವನಿ ಎತ್ತುವವರು ಕಬ್ಬಿಣದ ಮನುಷ್ಯರಾಗಿರಲೇಬೇಕು. ಜೀವಭಯದ ಸಂದರ್ಭದಲ್ಲೂ ಸಂಘಟನೆಯ ಕೆಲಸವನ್ನು ಕೈಬಿಡದ ಅವರು, ನಂಬಿ ನಡೆದದ್ದು ಮಾತ್ರ ಅಪ್ಪಟ ಮಾನವೀಯತೆಯನ್ನು. ದಲಿತರಿಂದ ಬೇರೆಯವರಿಗೆ ಅನ್ಯಾಯವಾದಾಗ ಅದರ ವಿರುದ್ಧವೂ ದನಿ ಎತ್ತುತ್ತಿದ್ದ ಅವರ ಮನೋಭಾವದಲ್ಲಿ ಎಲ್ಲರನ್ನೂ ಒಳಗೊಳ್ಳುವ ಆಶಯವನ್ನು ಗಮನಿಸಬಹುದು.

'ತ್ಯಾಗಿಯವರ ಜೊತೆ ಕೆಲಸ ಮಾಡಿರೋದೆ ನನ್ನ ಬದುಕಿನ ಅಮೂಲ್ಯ ಕ್ಷಣ' ಎನ್ನುವುದು ಕೆ.ಟಿ. ಶಿವಪ್ರಸಾದ್ ಅವರ ಉದ್ಗಾರ. ಸಮ ಸಮಾಜದ ಕಾಳಜಿಯುಳ್ಳ ಶಿವಪ್ರಸಾದ್‌ರಂಥ ಬೇರೆ ಬೇರೆ ಹಿನ್ನೆಲೆಯವರು ದಲಿತ ಚಳವಳಿಗೆ ಸೇರುವಲ್ಲಿ ತ್ಯಾಗಿ ಅವರ ಒತ್ತಾಸೆಯಿದೆ.

ದಲಿತರಿಗೆ ಭೂಮಿ ಕೊಡಿಸಲು ನಡೆಸಿದ ಹೋರಾಟಗಳನ್ನು ತ್ಯಾಗಿ ಅವರ ಪ್ರಮುಖ ಸಾಧನೆಯಾಗಿ ಗುರ್ತಿಸಲಾಗುತ್ತದೆ. ದಲಿತರ ಜೀವನದಲ್ಲಿ ಭೂಮಿ ಎಷ್ಟು ಮುಖ್ಯವಾದುದು ಎನ್ನುವುದಕ್ಕೆ ಅವರಿಗೆ ಅವರ ತಂದೆಯದೇ ಉದಾಹರಣೆಯಿತ್ತು. ಭೂಮಿ ಪಡೆಯಲು ಕಾನೂನು ಹೋರಾಟ ನಡೆಸಿದ್ದ ಅವರು, ತಮ್ಮ ಭೂಮಿಯಲ್ಲಿ ತರಕಾರಿ ಬೆಳೆಯುತ್ತಿದ್ದರು. ಅಪ್ಪನ ಭೂಮಿಯ ಹಂಬಲ, ದಲಿತರಿಗೆ ಶಾಪವಿಮೋಚನೆಯ ರೂಪದಲ್ಲಿ ತ್ಯಾಗಿಯವರಿಗೆ ಕಂಡಿರಬೇಕು. ಭೂಮಿಯಿಲ್ಲದ ಅನೇಕ ದಲಿತರಿಗೆ ಭೂಮಿಯನ್ನು ದೊರಕಿಸಿ ಕೊಡಲು ಅವರು ಪ್ರಯತ್ನಿಸಿದರು. ಸಿದ್ಲಿಪುರ, ಕಾಳನಕಟ್ಟೆ, ಬಿದರೆಕಾವಲು, ಗಂಗೂರು ಸೇರಿದಂತೆ ಹಲವೆಡೆ ಭೂ ಹೋರಾಟಗಳನ್ನು ಸಂಘಟಿಸಿದರು. ಕಾಫಿ ತೋಟದ ಕೂಲಿ ಕಾರ್ಮಿಕರ ಹಕ್ಕುಗಳಿಗೆ ದನಿಯಾಗಿ ಹೋರಾಟ ನಡೆಸಿದರು.

ಅತಂತ್ರ ಪರಿಸ್ಥಿತಿಯಲ್ಲಿ ಸಮಾಜದ ಓರೆಕೋರೆಗಳ ಬಗ್ಗೆ ಯೋಚಿಸಲು ಹಾಗೂ ಅವುಗಳನ್ನು ಸರಿಪಡಿಸಲು ಶ್ರಮಿಸಿದ ತ್ಯಾಗಿ, ತಮ್ಮ ಜೀವನದ ಕೊನೆಯ ದಿನಗಳನ್ನೂ ಸಂಕಷ್ಟದಲ್ಲಿಯೇ ಕಳೆದುದನ್ನು ಸ್ವಯಂಕೃತಾಪರಾಧ ಎನ್ನುವುದೋ ಚರಿತ್ರೆಯ ವ್ಯಂಗ್ಯ ಎನ್ನುವುದೋ? ಬದುಕಿನ ಕೊನೆಯ ವರ್ಷಗಳಲ್ಲಿ ಸ್ಲಂ ಬೋರ್ಡ್ ಅಧ್ಯಕ್ಷರಾಗಿ ತ್ಯಾಗಿ ಕಾರ್ಯ ನಿರ್ವಹಿಸಿದ್ದನ್ನು ಕೆಲವರು ಅವರ ಹೋರಾಟದ ಬದುಕಿನಲ್ಲಿನ ಹಿನ್ನಡೆ, ತಪ್ಪು ನಡೆ ಎಂದು ಸೂಚ್ಯವಾಗಿ ಅಭಿಪ್ರಾಯಪಟ್ಟಿದ್ದಾರೆ. ಆ ಟೀಕೆ ಎಷ್ಟರಮಟ್ಟಿಗೆ ಸರಿಯೆನ್ನುವುದು ಚರ್ಚಾಸ್ಪದ. ಚಳವಳಿಗಾಗಿ ಕೆಲಸವನ್ನೇ ಬಿಟ್ಟುಬಂದ ವ್ಯಕ್ತಿ, ಕೊನೆಗೊಮ್ಮೆ ಅಧಿಕಾರ ಕೇಂದ್ರವೊಂದನ್ನು ಒಪ್ಪಿಕೊಂಡಿದ್ದನ್ನು ತಪ್ಪೆಂದು ಹೇಳುವುದು ದುಬಾರಿ ನಿರೀಕ್ಷೆಯೆನ್ನಿಸುತ್ತದೆ ಹಾಗೂ ಹೀಗೆ ವಿಶ್ಲೇಷಿಸುವಾಗ ನಾವು ನಿಂತ ನೆಲವನ್ನೂ ವಿಮರ್ಶೆಗೊಡ್ಡುವುದು ಅನಿವಾರ್ಯವಾಗುತ್ತದೆ.

ತ್ಯಾಗಿ ಅವರನ್ನು 'ಜನಪದ ವ್ಯಕ್ತಿ' ಎನ್ನುವ ಎಚ್. ಗೋವಿಂದಯ್ಯನವರು, ನೋವನ್ನು ಸೃಜನಶೀಲಗೊಳಿಸುವ ಶಕ್ತಿ ಅವರಲ್ಲಿತ್ತು ಎಂದು ಗುರ್ತಿಸಿದ್ದಾರೆ. ಮಾತುಗಳಿಂದ, ಹಾಡುಗಳಿಂದ ಜನರನ್ನು ಸೆಳೆಯುತ್ತಿದ್ದ ಅವರೊಬ್ಬ ಅಪೂರ್ವ ಸಂಘಟಕರಾಗಿದ್ದರು ಎನ್ನುವುದಕ್ಕೆ 'ತ್ಯಾಗಿ' ಕೃತಿಯ ಬರಹಗಳು ಉದಾಹರಣೆಯಾಗಿವೆ. ಇನ್ನೂರು ವರ್ಷಗಳ ಹಿಂದೆ ತ್ಯಾಗಿ ಹುಟ್ಟಿದ್ದರೆ ಅವರು ಲೆಜೆಂಡ್ ಆಗುತ್ತಿದ್ದರು. ಅವರ ಬಗ್ಗೆ ದಂತಕಥೆಗಳು, ಲಾವಣಿಗಳು ಹುಟ್ಟಿಕೊಳ್ಳುತ್ತಿದ್ದವು ಎಂದು ದೇವನೂರ ಮಹಾದೇವ ಅಭಿಪ್ರಾಯಪಟ್ಟಿದ್ದಾರೆ. ಈ ಸಂಕಲನದ ಎಲ್ಲ ಬರಹಗಳೂ ದೇವನೂರರ ಮಾತನ್ನು ಸಮರ್ಥಿಸುವಂತಿವೆ. ಸಾಗಿ ಬಂದ ಹಾದಿಯ ಅವಲೋಕನದ ಬಗ್ಗೆ ಅಷ್ಟೇನೂ ಗೌರವವಿಲ್ಲದಂತೆ ಕಾಣಿಸುವ ಸಮಕಾಲೀನ ಸಂದರ್ಭದಲ್ಲಿ ತ್ಯಾಗಿ ಅವರ ವ್ಯಕ್ತಿತ್ವ–ಸಾಧನೆಯನ್ನು ಗುರ್ತಿಸುವ ಹಂಬಲದ ಈ ಕೃತಿ ನಾಡಿನ ಚಳವಳಿ ಪರಂಪರೆಯ ಪ್ರಮುಖ ಘಟ್ಟವೊಂದರ ದಾಖಲೆಯೂ ಹೌದು. ದಲಿತ ಚಳವಳಿಯನ್ನು ಪುನಶ್ಚೇತನಗೊಳಿಸುವ ಕನಸುಗಳು ನನಸಾಗುವುದಕ್ಕೆ ಇಂಥ ಕೃತಿಗಳು ಪ್ರೇರಣೆಯಾಗಬಲ್ಲವು.

ಪುಸ್ತಕದಲ್ಲಿ ಕಿಕ್ಕಿರಿದಿರುವ ಬರಹಗಳು ಸಂಪಾದಕರ ಶ್ರಮ ಹಾಗೂ ಬದ್ಧತೆಯನ್ನು ಸೂಚಿಸುವಂತಿವೆ. ತ್ಯಾಗಿ ಅವರ ಬದುಕಿನ ಅನುಕ್ರಮಣಿಕೆ ಇಲ್ಲದಿರುವುದು ಈ ಕೃತಿಯ ಕೊರತೆಗಳಲ್ಲೊಂದು. ಬಿಡಿ ಬಿಡಿ ಲೇಖನಗಳ ಮೂಲಕ ಜೀವನಕಥೆ ಕಟ್ಟಿಕೊಳ್ಳಬಹುದಾದರೂ, ಅವರ ಬದುಕಿನ ಕಥೆಯನ್ನು ಯಾರಾದರೊಬ್ಬರು ಸಂಕ್ಷಿಪ್ತವಾಗಿ ನಿರೂಪಿಸಬಹುದಿತ್ತು. ಛಾಯಾಚಿತ್ರಗಳ ಸಂಪುಟವನ್ನು ಪ್ರತ್ಯೇಕವಾಗಿ ರೂಪಿಸಬಹುದಿತ್ತು. 'ಇಲ್ಲ' ಎನ್ನುವ ಈ ಕೊರತೆಗಳು ತ್ಯಾಗಿ ಅವರ ಪುಸ್ತಕಕ್ಕೆ ಸಂಬಂಧಿಸಿದಂತೆ ಅರ್ಥಪೂರ್ಣವೂ ಆಗಿರಬಹುದೇನೊ? ಏಕೆಂದರೆ, ಸಂಘರ್ಷಗಳಲ್ಲೇ ಮುಳುಗಿಹೋದ ನಾಯಕರ ಬದುಕು ಅನುಕ್ರಮಣಿಕೆಯ ಸುವ್ಯವಸ್ಥೆಗೆ ದಕ್ಕುವಂತಿರಬೇಕು ಎಂದು ನಿರೀಕ್ಷಿಸುವುದೂ ಅಸಂಗತ ಅಪೇಕ್ಷೆಯಾಗಿರಬಹುದು. ❖

ದಿಟ್ಟ ಹೆಣ್ಣಿನ ಸಾಹಸಗಾಥೆ

ಎಚ್. ದಂಡಪ್ಪ

ಒಳನೋಟ

'ಅಲೆಮಾರಿಯೊಬ್ಬಳ ಆತ್ಮವೃತ್ತಾಂತ' ಅಜಿತ್ ಕೌರ್ ಅವರ ಆತ್ಮಕಥನ. ಮೊದಲು ನಿರಂಕುಶ ಸ್ವಭಾವದ ತಂದೆ, ನಂತರ ಮದುವೆಯಾಗಿ ಹನ್ನೆರಡು ವರ್ಷಗಳ ಕಾಲ ಗಂಡನ ದೌರ್ಜನ್ಯಕ್ಕೆ ಒಳಗಾಗಿ ತನ್ನ ಇಬ್ಬರು ಹೆಣ್ಣುಮಕ್ಕಳೊಂದಿಗೆ ಪುರುಷಾಧಿಕಾರವನ್ನು ಧಿಕ್ಕರಿಸಿ ಹೊರನಡೆದು, ನೋವು ಕಷ್ಟ ಪರಂಪರೆಗಳನ್ನು ಅನುಭವಿಸಿ ಸ್ವತಂತ್ರ ಬದುಕನ್ನು ಕಟ್ಟಿಕೊಂಡ ಪರಿಯನ್ನು ಈ ಕೃತಿ ಕಟ್ಟಿಕೊಡುತ್ತದೆ.

ಕೌರ್, ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸುವಾಗ ಪಂಜಾಬ್ ಸರ್ಕಾರದ ಅಧಿಕಾರಿಗಳ ಜಡಸ್ವಭಾವ, ರಾಜಕಾರಣಿಗಳ ಮಾನಸಿಕ ಸ್ವರೂಪ, ಮಧ್ಯವರ್ತಿಗಳ ಹಾವಳಿ, ನ್ಯಾಯ ವ್ಯವಸ್ಥೆ, ಬಾಡಿಗೆ ಮನೆಯ ಕಷ್ಟ, ಓಂಪ್ರಕಾಶ್ ಎಂಬಾತನೊಂದಿಗೆ ಇದ್ದ ಪ್ರೇಮ, ಆತನಿಂದ ವಂಚಿತಳಾಗಿ ನಡೆಸುವ ಏಕಾಂಗಿ ಹೋರಾಟ ಮುಂತಾದ ವಿವರಗಳು ಅನಾವರಣಗೊಳ್ಳುತ್ತವೆ.

ಆತ್ಮಕಥನಗಳಲ್ಲಿ ಸಾಮಾನ್ಯವಾಗಿ ವಂಶಾವಳಿ, ಜನನ, ಬಾಲ್ಯ, ಶಿಕ್ಷಣ, ಉದ್ಯೋಗ, ಮದುವೆ... ಮುದಿತನ ಇತ್ಯಾದಿ ಘಟನೆಗಳು ಉದ್ದಕ್ಕೆ ನೇರವಾಗಿ ಹರಿಯುತ್ತವೆ. ಆದರೆ, ಈ ಕೃತಿಯಲ್ಲಿ ನೇರವಾಗಿ ಬರದೆ ಕೌರ್ ಅವರ ಎರಡನೇ ಮಗಳಾದ ಕ್ಯಾಂಡಿಯು, ಪ್ಯಾರಿಸ್ಸಿನಲ್ಲಿ ಬೆಂಕಿಯಿಂದ ಸುಟ್ಟುಕೊಂಡು ಆಸ್ಪತ್ರೆ ಸೇರಿದ ಘಟನೆಯಿಂದ ಪ್ರಾರಂಭವಾಗುತ್ತದೆ. ಆದ್ದರಿಂದ ಈ ಕೃತಿಗೆ ಏಕತಾನತೆ ಬಂದಿಲ್ಲ. 'ಹಿಂದಿರುಗಿ ನೋಡುವಾಗ ನನ್ನ ಕಾಲಿನ ಹಿಮ್ಮಡಿಯಿಂದ ದೂರ ದಿಗಂತದವರೆಗೂ ಕೇವಲ ಬೆಂಕಿಯ ಕೆನ್ನಾಲಿಗೆ ಚಾಚಿಕೊಂಡಂತೆ ಕಾಣುತ್ತದೆ' ಎಂಬ ಸಾಲಿನೊಂದಿಗೆ ಆರಂಭವಾಗುತ್ತದೆ.

ಉದ್ದಕ್ಕೂ ಈ ಬೆಂಕಿ, ಬೇರೆ ಬೇರೆ ರೂಪಗಳಲ್ಲಿ ಆಕೆಯನ್ನು ಸುಡುತ್ತಾ ಕೊನೆಗೆ ಓಂಪ್ರಕಾಶನ ಗೆಳೆತನದವರೆಗೂ ಮುಂದುವರಿದು ಆ ಸಂಬಂಧವೂ ಮುರಿದುಬಿದ್ದು 'ಏಕಾಂಗಿ'ಯಾಗುವವರೆಗೆ ಮುಂದುವರಿಯುತ್ತದೆ. 'ಏಕಾಂಗಿ' ಎಂಬ ಮಾತಿನಿಂದಲೇ ಆತ್ಮಕಥನ ಮುಗಿಯುತ್ತದೆ. ಇಲ್ಲಿಯವರೆಗೂ ಅವರ ಬದುಕಿನಲ್ಲಿ 'ಬೆಂಕಿ' ಮೈಮನಗಳನ್ನು ಬೇರೆ ಬೇರೆ ರೂಪಗಳಲ್ಲಿ ಸುಡುತ್ತಿರುತ್ತದೆ. ಸುಡುವಿಕೆಯಲ್ಲಿಯೇ ಆಕೆ ತನ್ನ ಬದುಕನ್ನು ಕಟ್ಟಿಕೊಳ್ಳುವುದು ಆಕೆಯಲ್ಲಿದ್ದ ಸಂರಕ್ಷಿಸುವ ಕಾಳಜಿಯ ಭಾವವನ್ನು ಆಧರಿಸಿದ ನೈತಿಕತೆ.

ತನ್ನ ರಕ್ತ ಮಾಂಸವನ್ನು ಹಂಚಿಕೊಂಡು ಹುಟ್ಟಿರುವ ಮಕ್ಕಳು ಕಣ್ಣೆದುರೇ ಸಾಯುವುದು ಮನುಷ್ಯನ ಬದುಕಿನಲ್ಲಿ ಬರಬಹುದಾದ ಘೋರವಾದ ದುಃಖಗಳಲ್ಲೊಂದು. ಇದು ದುರ್ಬರವಾದ ಅನುಭವ. ಮಗಳು ವಿದಾಯವನ್ನು ಹೇಳುವಾಗ ಮಾತುಗಳೇ ಹೊರಬರುವುದಿಲ್ಲ. ತನ್ನ ತಾಯಿಯನ್ನು ಅಪ್ಪಿಕೊಳ್ಳಬೇಕೆಂದು ಬಯಸಿದರೂ ಆಗುವುದಿಲ್ಲ. ತಾಯಿಗೆ ಮಗಳು ಒಂದು ನಿಧಿ. ಅದನ್ನು ಉಳಿಸಿಕೊಳ್ಳುವುದಕ್ಕಾಗಿ ಪರಿಚಯವಿಲ್ಲದ ಪ್ಯಾರಿಸ್ಸಿನಲ್ಲಿ ಹಗಲುರಾತ್ರಿ ನಿದ್ದೆಯಿಲ್ಲದೆ ಆ ಮಗುವಿನ ನೆನಪುಗಳಲ್ಲಿ, ನಿಟ್ಟುಸಿರುಗಳಲ್ಲಿ ದಿನಗಳನ್ನು ಕಳೆಯುವುದರ ವಿವರಗಳು ಕಾವ್ಯಾತ್ಮಕ ಸ್ವರೂಪವನ್ನು ಪಡೆದುಕೊಂಡಿವೆ. ಇಲ್ಲಿ ಬರುವ ಹುಟ್ಟು, ಸಾವು, ಜೈವಿಕ ಪರಿಸರದ ಸಂಬಂಧಗಳ ಬಗೆಗಿನ ವಿವರಗಳು ರೂಪಕಾತ್ಮಕವಾಗಿ ಬದುಕಿನ ತಾತ್ವಿಕತೆಯನ್ನು ಕಟ್ಟಿಕೊಡುತ್ತವೆ. ಕೊನೆಗೆ ಮಗಳು ಚಿರನಿದ್ರೆಗೆ ಜಾರಿದಾಗ ಆಕೆಗೆ ಸಿಗುವುದು ಬರೀ ಶೂನ್ಯ.

ಜಗತ್ತಿನ ಅತ್ಯುತ್ತಮ ಕವಿತೆ, ಕಥೆ, ಕಾದಂಬರಿ, ಪುರಾಣ ಪ್ರಸಂಗಗಳಲ್ಲಿ ಪ್ರೀತಿಪಾತ್ರರನ್ನು ಕಳೆದುಕೊಂಡಾಗ ಆಗುವ ದುರ್ಬರ ಅನುಭವಗಳ ಕಲಾತ್ಮಕ ಅಭಿವ್ಯಕ್ತಿ ಇಲ್ಲಿ ನೆನಪಿಗೆ ಬರುತ್ತದೆ. ಈ ಕಥನದಲ್ಲಿ ತಾಯಿಯು ಅರ್ಥಪೂರ್ಣವಾಗಿ ಬರುತ್ತಾಳೆ. ತಾಯಿ ಭಾವದ ಚಿಂತನೆ, ತಾಯ್ತನದ ಪ್ರಕ್ರಿಯೆ, ಕೌರ್ ಅವರ ಸಾಮರ್ಥ್ಯ ಮತ್ತು ಸಾಧನೆಗಳನ್ನು ವ್ಯಕ್ತಪಡಿಸಲು ಸಾಧ್ಯವಾಗಿದೆ. ರಕ್ಷಣೆ, ಬದುಕಿನ ಪ್ರಗತಿ ಮತ್ತು ಒಪ್ಪಿಕೊಳ್ಳುವಿಕೆಗಳು ಇಲ್ಲಿ ಮುಖ್ಯವಾದ ಮೌಲ್ಯಗಳಾಗಿ ಬಂದಿವೆ. ಆದ್ದರಿಂದಲೇ ಇಲ್ಲಿ ಮಾತು ಕಡಿಮೆ, ಮೌನ ಹೆಚ್ಚು. ಆ ಮೌನದಿಂದಾಗಿ ಹೆಣ್ಣಿನ ಜಗತ್ತು ಒಂದು ಸ್ಪಷ್ಟವಾದ ಆಕಾರ ಪಡೆದು ಒಂದು ಸಂಕಥನ ಸೃಷ್ಟಿಯಾಗಲು ಸಾಧ್ಯವಾಗಿದೆ.



ಪು: 216 ₹210

ಅಲೆಮಾರಿಯೊಬ್ಬಳ ಆತ್ಮವೃತ್ತಾಂತ
ಲೇ: ಅಜಿತ್ ಕೌರ್
ಪ್ರ: ಅಹರ್ನಿಶಿ ಪ್ರಕಾಶನ
ಮೊ: 94491 74662

'ದುರ್ಘಟನೆಗಳ ಪರೀಕ್ಷೆ' ಎಂಬ ಭಾಗದಲ್ಲಿ ಪಂಜಾಬ್ ಸರ್ಕಾರದ ಜಡಗೊಂಡ ವ್ಯವಸ್ಥೆ, ಲಂಚಬಾಕತನ, ಗಂಡಸರ ಸ್ವಭಾವ, ಧರ್ಮ, ಜಾತಿ ಎಲ್ಲವೂ ಒಬ್ಬ ಸ್ತ್ರೀಯ ಬದುಕಿನ ಮೇಲೆ ಬೀರಬಹುದಾದ ಪರಿಣಾಮವನ್ನು ವಿವರಿಸಲಾಗಿದೆ. ಪ್ರಪಂಚದ ಎಲ್ಲವೂ ತನ್ನ ಆಶಯಕ್ಕಾಗಿ, ತನ್ನ ಶಕ್ತಿ ಸಾಮರ್ಥ್ಯಗಳ ಅಭಿವೃದ್ಧಿಗಾಗಿ ಇರಬೇಕೆಂದು ಪುರುಷ ಪ್ರಧಾನ ಮನಸ್ಸುಗಳು ಬಯಸುತ್ತವೆ. ಜ್ಞಾನ, ವಿಜ್ಞಾನಗಳು ತನ್ನ ಅಧೀನದಲ್ಲಿರಬೇಕೆಂದು ಪುರುಷ ಬಯಸುವುದು ತಪ್ಪಬೇಕು, ಪ್ರಗತಿಯು ಇಡೀ ಜನ ಸಮುದಾಯಗಳು ನೆಮ್ಮದಿಯಿಂದ ಬದುಕಲು ಅನುವು ಮಾಡಿಕೊಡಬೇಕು. ಆದರೆ, ಇಲ್ಲಿ ಆ ರೀತಿಯಾಗುತ್ತಿಲ್ಲ.

ಆರ್ಥಿಕ ಸವಲತ್ತುಗಳು ಹೆಣ್ಣಿಗೆ ದೊರೆಯದಂತೆ ಪುರುಷ ಪ್ರಧಾನ ವ್ಯವಸ್ಥೆ ವ್ಯವಸ್ಥಿತವಾಗಿ ಸಂಚು ರೂಪಿಸುತ್ತದೆ. ಹೆಣ್ಣು ಪ್ರಗತಿಯತ್ತ ಸಾಗದಂತೆ ನೋಡಿಕೊಳ್ಳುತ್ತದೆ. 'ಹೆಣ್ಣಾಗಿರುವುದು', 'ತನ್ನ ರೊಟ್ಟಿಯನ್ನು ತಾನೇ ಗಳಿಸುವುದು', 'ಬುದ್ಧಿವಂತೆ, ಸ್ವಾವಲಂಬಿ ಹೆಣ್ಣುಮಗಳು ದೇವತೆಗಳು ವಾಸಿಸುತ್ತಿರುವ ಈ ಭಾರತದಲ್ಲಿರುವುದು ಮಹಾಪರಾಧ' ಎಂದು ಕೌರ್ ಅವರು ಹೇಳಿರುವುದು ಅರ್ಥಪೂರ್ಣ. ಅವರು ಛಲ ಬಿಡದಂತೆ ಪತ್ರಿಕೋದ್ಯಮ, ಸಾಹಿತ್ಯ, ಬರವಣಿಗೆ ಮಾತ್ರವಲ್ಲದೆ ವೃತ್ತಿಪರ ಕಲಾಶಾಲೆಯ ಸ್ಥಾಪನೆಯಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಇದು ಪುರುಷಾಧಿಕಾರದ ನಿರಾಕರಣೆಯನ್ನು ಸೂಚಿಸುತ್ತದೆ.

ಸಾಂಸ್ಕೃತಿಕ ಸ್ತ್ರೀವಾದದ ಕೆಲವು ಲಕ್ಷಣಗಳನ್ನೊಳಗೊಂಡಿರುವ ಈ ಕೃತಿಯಲ್ಲಿ ಸ್ತ್ರೀಯರ ವಿಶಿಷ್ಟವಾದ ಭಾಷೆಯನ್ನು ರೂಪಿಸಿಕೊಳ್ಳಲಾಗಿದೆ. ಅವರ ಅನುಭವ, ಬದುಕಿನ ಕ್ರಮ, ಕಲೆ, ಸಂಗೀತ, ಸಾಹಿತ್ಯ ಎಲ್ಲವೂ ಮೌಲಿಕಗೊಂಡು ಸ್ತ್ರೀ ಸಂಸ್ಕೃತಿಯನ್ನು ಕಟ್ಟುವ ಪ್ರಯತ್ನ ಇಲ್ಲಿದೆ. ತಾಯಿ ಮತ್ತು ಹೆಣ್ಣು ಮಕ್ಕಳ ಜೈವಿಕವಾದ, ಭಾವನಾತ್ಮಕವಾದ ಸಂಬಂಧಗಳು ಇಲ್ಲಿ ಮುಖ್ಯವಾಗಿರುವುದರ ಜೊತೆಗೆ ಹೆಣ್ತನದ ನೆಲೆಯಲ್ಲಿಯೇ ಸ್ವಾತಂತ್ರ್ಯ ಮತ್ತು ಸ್ವಂತಿಕೆಯನ್ನು ಕಂಡುಕೊಂಡು ಪುರುಷಾಧಿಕಾರದ ಪಂಜರದಿಂದ ಹೊರಬಂದು ವಿಮೋಚನೆ ಕಂಡುಕೊಳ್ಳಬಹುದು ಎಂಬ ಧ್ವನಿ ಈ ಕೃತಿಯಲ್ಲಿದೆ. ಹಾಗೆಯೇ ಎಲ್ಲಾ ಕ್ಷೇತ್ರಗಳು ಆಧುನೀಕರಣಗೊಂಡು ಮಾನವೀಯವಾಗಬೇಕು ಎಂಬ ಆಶಯವನ್ನೂ ಪ್ರಕಟಿಸುತ್ತದೆ.

ಆತ್ಮಕಥೆ ಬರೆಯುವುದು ಸುಲಭವೇನಲ್ಲ. ತನ್ನ ಬೇಕು ಬೇಡಗಳಿಂದ ಪ್ರಭಾವಿತರಾಗದೆ, ವಿಶೇಷ ಭಾವೋದ್ರೇಕಕ್ಕೆ ಒಳಗಾಗದೆ ಜೀವನಕ್ಕೆ ಸಂಬಂಧಿಸಿದ ಘಟನೆಗಳನ್ನು ನಿರೂಪಿಸುವ ಸಂಯಮ ರೂಢಿಸಿಕೊಳ್ಳಬೇಕು. ಸತ್ಯನಿಷ್ಠ ವಿಮರ್ಶಾ ದೃಷ್ಟಿಗಳನ್ನು ರೂಢಿಸಿಕೊಂಡಿರಬೇಕು. ಹೀಗಾದಾಗ ಆತ್ಮಕಥೆಯು ಸಾಂಸ್ಕೃತಿಕ ಚರಿತ್ರೆಯಾಗುತ್ತದೆ. ಅಜಿತ್ ಕೌರ್ ಅವರ ಆತ್ಮಕಥೆಯನ್ನು ರೇಣುಕಾ ನಿಡಗುಂದಿ ಅವರು ಸರಾಗವಾಗಿ ಓದಿಸಿಕೊಳ್ಳುವಂತೆ ಅನುವಾದಿಸಿದ್ದಾರೆ. ❖

ಕಥೆ

ಮುನವ್ವರ್ ಜೋಗಿಬೆಟ್ಟು ಅವರು ಬರೆದ ಕಥೆ

ಹೊಲಿಯದವನು

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/short-story

ಕವಿತೆ

ಸ್ಮಿತಾ ಅಮೃತರಾಜ್ ಅವರು ಬರೆದ ಕವಿತೆ

ಪಾರಿಜಾತ

ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/poetry

ಸಾರ್ವಜನಿಕ ಸಂಪರ್ಕಾಧಿಕಾರಿ ವೃತ್ತಿಗೊಂದು ಮಾರ್ಗದರ್ಶಿ

ಮೊದಲ ಓದು

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿ (ಡಿಆರ್‌ಡಿಒ) ಸಾರ್ವಜನಿಕ ಸಂಪರ್ಕಾಧಿಕಾರಿ ಆಗಿದ್ದ ಜಯಪ್ರಕಾಶ ಪುತ್ತೂರು ಅವರು, ತಮ್ಮ ವೃತ್ತಿ ಅನುಭವಗಳನ್ನು ದಾಖಲಿಸಿದ ಕೃತಿ 'ಹಮಾರಾ ಪಿಆರ್‌ಒ'. ಸದಾ ಹುಳುಕುಗಳನ್ನು ಹುಡುಕಲು ಹಾತೊರೆಯುವ ಮಾಧ್ಯಮ, ಸಂಸ್ಥೆಯ ಕುರಿತು ಒಂದೇ ಒಂದು ನಕಾರಾತ್ಮಕ ಸುದ್ದಿ ಪ್ರಕಟವಾಗುವುದನ್ನೂ ಸಹಿಸದ ಆಡಳಿತ ಮಧ್ಯೆ ನಾಜೂಕಿನಿಂದ ಕೆಲಸ ಮಾಡಬೇಕಾಗಿದ್ದ ಲೇಖಕರ ಅನುಭವಗಳು ರಸವತ್ತಾಗಿವೆ.

ಡಿಆರ್‌ಡಿಒದಲ್ಲಿ ಎಪಿಜೆ ಅಬ್ದುಲ್ ಕಲಾಂ ಅವರು ಮುಖ್ಯಸ್ಥರಾಗಿದ್ದಾಗ ಅವರೊಂದಿಗೆ ಕೆಲಸ ಮಾಡುವ ಅದೃಷ್ಟ ಗಿಟ್ಟಿಸಿದ್ದ ಜಯಪ್ರಕಾಶ ಅವರು, ಕಲಾಂ ಒಡನಾಟದ ನೆನಪುಗಳನ್ನೂ ಇಲ್ಲಿ ದಾಖಲಿಸಿದ್ದಾರೆ. ಪ್ರೋಟೋಕಾಲ್ ಅಧಿಕಾರಿಯ ಮೈಮರೆವಿನಿಂದ ಆಗಲಿದ್ದ ಮುಜುಗರ ತಪ್ಪಿಸಲು ಕಲಾಂ ವಿಮಾನಕ್ಕೆ ಜಯಪ್ರಕಾಶ ಅವರು ಏಣಿ ಹಿಡಿದ ಪ್ರಸಂಗ, ರಕ್ಷಣಾ ಸಚಿವರನ್ನು ಮಾಧ್ಯಮದವರು ಭೇಟಿಯಾಗಲು ಸಾಧ್ಯವಾಗದ್ದನ್ನ ಅವರು ನಿಭಾಯಿಸಿದ ರೀತಿ ಗಮನ ಸೆಳೆಯುತ್ತವೆ.

ಕೆಲಸದ ತಾಣದಲ್ಲಿ ಸಿಹಿ–ಕಹಿ ಎರಡೂ ಲೇಖಕರಿಗೆ ಎದುರಾಗಿದ್ದಿದೆ. ವೃತ್ತಿಯ ಸವಾಲನ್ನು, ಮೇಲಧಿಕಾರಿಗಳ ಕೀಟಲೆಯನ್ನು ಎದುರಿಸಿ ಮುನ್ನುಗ್ಗುವ ಛಾತಿಯನ್ನು ಪ್ರದರ್ಶಿಸಿದ ಅವರು, ಸಂಕಷ್ಟದಲ್ಲೂ ಎದ್ದು ನಿಲ್ಲುವಂತಹ ಪ್ರೇರಣೆದಾಯಕ ಕಥೆಗಳನ್ನು ಹೆಕ್ಕಿ ಕೊಟ್ಟಿದ್ದಾರೆ. ಪಿಆರ್‌ಒ ಆಗಿ ವೃತ್ತಿ ಜೀವನ ಕಟ್ಟಿಕೊಳ್ಳಲು ಬಯಸುವವರಿಗೆ ಈ ಕೃತಿ ಒಂದು ಮಾರ್ಗದರ್ಶಿಯಂತಿದೆ. ❖



ಪು: 228 ₹180

ಹಮಾರಾ ಪಿಆರ್‌ಒ
ಲೇ:ಜಯಪ್ರಕಾಶ ಪುತ್ತೂರು
ಪ್ರ: ಸಪ್ನ
ಸಂ: 080 40114455

ಪ್ರೇಮಕ್ಕೆ ಸಿಕ್ಕ ಚಂದಿರ

ಗೌರಿ

ಪ್ರೇಮಿಗಳ ಪಾಲಿಗೆ ಚಂದಿರ ಸದಾಕಾಲದ ಸ್ನೇಹಿತ. ಚಂದಿರನ ನೋಡಿ ತಮ್ಮ ಪ್ರಿಯತಮೆ ನೆನಪಿಸಿಕೊಳ್ಳುವುದು, ಬೆಳದಿಂಗಳಲ್ಲಿ ವಿರಹದಿಂದ ಬೇಯುವುದು ಸಾಹಿತ್ಯದಲ್ಲಿ ಪದೇ ಪದೇ ಬರುವ ಸಂಗತಿಗಳು. ಆದರೆ, ಐಪಿಎಸ್ ಅಧಿಕಾರಿಯೂ ಆಗಿರುವ ಲೇಖಕಿ ಸವಿತಾ ಶ್ರೀನಿವಾಸ ಅವರು ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ 'ಪ್ರೇಮ ಚಂದ್ರಮ'ನ ನೆತ್ತಿಯ ಮೇಲೆಯೇ ಪ್ರೇಮಕಥೆಯನ್ನು ಸೃಷ್ಟಿಸಿದ್ದಾರೆ!

'ಗಾಳಕ್ಕೆ ಸಿಕ್ಕ ಚಂದಿರ' ಸವಿತಾ ಶ್ರೀನಿವಾಸ ಅವರ ನಾಲ್ಕನೇ ಕಾದಂಬರಿ. ಎರಡನೇ ವೈಜ್ಞಾನಿಕ ಕಾದಂಬರಿ. ಹಾಗೆ ನೋಡಿದರೆ ಅವರ ಹಿಂದಿನ ಕಾದಂಬರಿ 'ತ್ರಿಲೋಕ ಸಂಚಾರಿ ನೀರೆ' ಕಾದಂಬರಿಯ ಸಿಕ್ವೆಲ್‌ನಂತೆಯೂ ಈ ಕಾದಂಬರಿಯನ್ನು ಓದಿಕೊಳ್ಳಬಹುದು. ಹಿಂದಿನ ಕಾದಂಬರಿಯಲ್ಲಿ ಚಂದ್ರನ ಕಡೆಗೆ ತಮ್ಮ ಪಾತ್ರವನ್ನು ಹರಿಬಿಟ್ಟಿದ್ದ ಅವರು ಇಲ್ಲಿ ಚಂದ್ರನ ಮೇಲೆ ಕಾಲೊನಿಗಳನ್ನೇ ನಿರ್ಮಿಸಿದ್ದಾರೆ. ಅಷ್ಟೇ ಅಲ್ಲ, ಚಂದ್ರನ ಮೇಲೆ ಪ್ರೇಮದ ಮೊಗ್ಗನ್ನೂ ಅರಳಿಸಿದ್ದಾರೆ.

ಈ ಕಾದಂಬರಿ ಶುರುವಾಗುವುದೇ ಚಂದ್ರನ ಮೇಲಿನ ವೀಕ್ಷಣಾಲಯದಲ್ಲಿ. ಭೂಮಿಯಿಂದ ಒಂದಿಷ್ಟು ಜನರನ್ನು ಚಂದ್ರನಲ್ಲಿಗೆ ಕಳಿಸಲಾಗಿದೆ. ಅಲ್ಲಿ ಮಾನವ ಜೀವಿತಕ್ಕೆ ಅನುಕೂಲಕರವಾದ ಕೃತಕ ವಾತಾವರಣವನ್ನು ನಿರ್ಮಿಸಲಾಗಿದೆ. ಅಲ್ಲಿನ ತಂಡದ ಮುಖ್ಯಸ್ಥೆ ಇರಾ. ಅವರೆಲ್ಲರೂ ಭೂಮಿಯ ಒಳಿತಿಗಾಗಿ ಚಂದ್ರನ ಮೇಲೆ ವಾಸಿಸುತ್ತಿರುವವರು. ಭೂಮಿಯ ಒಳಿತಿಗೆ ಸಲಕರಣೆಗಳಂತೆ ಬಳಕೆಯಾಗುತ್ತಿರುವವರು.

ಅಂತರಿಕ್ಷದಲ್ಲಿ ಭೂಮಿಯಂತೆಯೇ ಮನುಷ್ಯವಾಸಕ್ಕೆ ಯೋಗ್ಯವಿರುವ ಗ್ರಹ ಇನ್ನೆಲ್ಲಾದರೂ ಇರಬಹುದೇ ಎಂಬ ಕುತೂಹಲದ ಬೆನ್ನುಹತ್ತಿ ಸಾಕಷ್ಟು ಶೋಧನೆಗಳು ನಡೆಯುತ್ತಿವೆ. ಆಗೀಗ ಅನ್ಯಗ್ರಹಜೀವಿಗಳ ಕುರಿತೂ ಸಾಕಷ್ಟು ಸುದ್ದಿ, ಚರ್ಚೆಗಳು ನಡೆಯುತ್ತಿರುತ್ತವೆ. ಅನ್ಯಗ್ರಹದಲ್ಲಿ ಜೀವಿಗಳು ಇರುವುದು ಎಷ್ಟು ನಿಜವೋ ಹೇಳುವುದು ಕಷ್ಟ. ಆದರೆ ಮನುಷ್ಯ ಅನ್ಯಗ್ರಹದ ಮೇಲೆ ಮನೆಕಟ್ಟಿಕೊಂಡು ವಾಸ್ತವ್ಯ ಹೂಡುವ ದಿನಗಳಂತೂ ತುಂಬ ದೂರ ಇದ್ದಂತಿಲ್ಲ.

ಇಂಥದ್ದೇ ಒಂದು ಕಲ್ಪನೆಯ ಎಳೆ ಹಿಡಿದುಕೊಂಡು 'ಗಾಳಕ್ಕೆ ಸಿಕ್ಕ ಚಂದಿರ' ಕಾದಂಬರಿ ತನ್ನ ಗರಿಗಳನ್ನು ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಚಂದ್ರನ ಮೇಲೆ ಸಂಶೋಧನೆಗೆಂದು ಹೋದವರು ಅಲ್ಲಿಯೇ ವಾಸ್ತವ್ಯ ಹೂಡಿ, ಕೊನೆಗೆ ಭೂಮಿಯ ನಿಯಂತ್ರಕರ ವಿರುದ್ಧ ಬಂಡೇಳುವ ತಿರುವೂ ಇಲ್ಲಿದೆ. ಆದರೆ ಎಷ್ಟೇ ಹಾರಾಡಿದರೂ, ಎಲ್ಲಿಯೇ ಓಡಾಡಿದರೂ ನೆಮ್ಮದಿ ಕೊಡುವುದು ನಮ್ಮ ಮನೆಯೇ ತಾನೆ? ಹಾಗೆಯೇ ಇಲ್ಲಿ ಕಾದಂಬರಿಯ ಉದ್ದಕ್ಕೂ ಅಂತರ್ಗತವಾಗಿ ನಾಯಕ ಅವಧೂತ್ ಮತ್ತು ನಾಯಕಿ ಇರಾ ನಡುವೆ ಪ್ರೇಮದ ಪರಿಮಳ ಪಸರಿಸುತ್ತಿದ್ದರೂ ಅದು ನಿವೇದನೆಯ ರೂಪ ತಳೆಯುವುದು ಭೂಮಿಯ ಪರಿಧಿಯೊಳಗೇ.

ಕನ್ನಡದಲ್ಲಿ ವೈಜ್ಞಾನಿಕ ಕಾದಂಬರಿ ಪ್ರಕಾರ ಹುಲುಸಾಗಿಯೇನೂ ಬೆಳೆದಿಲ್ಲ. ಈ ದೃಷ್ಟಿಯಲ್ಲಿ ಸವಿತಾ ಶ್ರೀನಿವಾಸ್ ಅವರು ಆಯ್ದುಕೊಂಡಿರುವ ದಾರಿ ಕುತೂಹಲ ಹುಟ್ಟಿಸುತ್ತದೆ. ಆದರೆ ವಸ್ತುವಷ್ಟೇ ಮಹತ್ವವಾದುದನ್ನು ಸೃಷ್ಟಿಸುವುದಿಲ್ಲ. ಅದಕ್ಕೆ ಭಾಷೆಯ ಬೆಂಬಲ, ಶಿಲ್ಪದ ಬೆನ್ನೆಲುಬು ಎರಡೂ ಬೇಕಾಗುತ್ತದೆ. ಲೇಖಕಿ ಈ ಎರಡು ವಿಷಯಗಳಲ್ಲಿ ಇನ್ನಷ್ಟು ಮುತುವರ್ಜಿ ವಹಿಸಿದರೆ, (ಬಹುಶಃ ಮಂಗಳನ ಮೇಲೆ ಘಟಿಸಬಹುದಾದ!) ಅವರ ಮುಂದಿನ ಕಾದಂಬರಿಗಳು ಇನ್ನಷ್ಟು ಸತ್ವಶಾಲಿಯಾಗುವುದರಲ್ಲಿ ಸಂಶಯವಿಲ್ಲ. ❖



ಪು: 210 ₹170

ಗಾಳಕ್ಕೆ ಸಿಕ್ಕ ಚಂದಿರ
ಲೇ: ಸವಿತಾ ಶ್ರೀನಿವಾಸ
ಪ್ರಕಾಶನ: ಟೋಟಲ್ ಕನ್ನಡ.
ಮೊ: 9686152902
080-26676003

ರೋನು–ರಾಜೇಶ್ ರಾಗ ಅನುರಾಗ

ಮೊನ್ನೆಯಷ್ಟೇ ಬೆಂಗಳೂರಿಗೆ ಬಂದಿದ್ದ ಕೊಳಲುವಾದಕ ರೋನು ಮಜುಂದಾರ್ ಹಾಗೂ ಮ್ಯಾಂಡೊಲಿನ್ ವಾದಕ ಯು.ರಾಜೇಶ್ 'ಭಾನುವಾರದ ಪುರವಣಿ'ಯೊಂದಿಗೆ ಮಾತಿಗೆ ಸಿಕ್ಕರು. ಹೌದು, ಅವರ ಸಂಗೀತದ ಜುಗಲ್‌ಬಂದಿಯಂತೆಯೇ ಸಂವಾದದ ಜುಗಲ್‌ಬಂದಿಯೂ ಕೇಳುಗರಿಗೆ ಮುದ ನೀಡಿತು. ಅದರ ಒಂದು ಝಲಕ್ ಇಲ್ಲಿದೆ...

ರವೀಂದ್ರ ಭಟ್ಟ

ಮ್ಯಾಂಡೊಲಿನ್ ವಾದಕ ಯು.ರಾಜೇಶ್ ಹಾಗೂ ಕೊಳಲು ವಾದಕ ರೋನು ಮಜುಂದಾರ್ ಆಪ್ತ ಸಂವಾದ –ಪ್ರಜಾವಾಣಿ ಚಿತ್ರ/ಇರ್ಷಾದ್ ಮಹಮ್ಮದ್

ಪಂಡಿತ್ ರೋನು ಮಜುಂದಾರ್ ಭಾರತೀಯ ಸಂಗೀತ ಲೋಕದ ದೊಡ್ಡತಾರೆ. ಕೈಯಲ್ಲಿ ಕೊಳಲು ಹಿಡಿದುಕೊಂಡು ದೇಶ ವಿದೇಶ ಸುತ್ತುತ್ತಲೇ ಇರುತ್ತಾರೆ. ಹುಟ್ಟಿದ್ದು ವಾರಾಣಸಿಯಲ್ಲಿಯಾದರೂ ಬದುಕು ಕಂಡುಕೊಂಡಿದ್ದು ಮುಂಬೈಯಲ್ಲಿ. ತಂದೆಯಿಂದ ಸಂಗೀತದ ಓಂಕಾರ ಹೇಳಿಸಿಕೊಂಡರೂ ಪಂಡಿತ್ ರವಿಶಂಕರ್ ಶಿಷ್ಯತ್ವ ಪಡೆದ ಅದೃಷ್ಟವಂತ. ಹಾಲಿವುಡ್, ಬಾಲಿವುಡ್‌ಗಳಲ್ಲಿಯೂ ಕೊಳಲಿನ ನಿನಾದ ಹರಿಸಿದ ಗಟ್ಟಿಗ. ಹಾಡುಗಾರಿಕೆಯಿಂದ ಕೊಳಲು ವಾದನಕ್ಕೆ, ಹಿಂದೂಸ್ತಾನಿಯಿಂದ ಕರ್ನಾಟಕಿ ಸಂಗೀತಕ್ಕೆ, ಮತ್ತೆ ಹಿಂದೂಸ್ತಾನಿಗೆ ಜಿಗಿಯುತ್ತ ಎತ್ತರಕ್ಕೆ ಬೆಳೆದವರು. ಕೊರಳಿನ ನರಗಳನ್ನು ಉಬ್ಬಿಸಿ ಕೊಳಲು ನುಡಿಸಿದರೆ ಕೇಳುಗರ ಮನದಲ್ಲಿ ಆನಂದದ ಅಲೆ. ತಮ್ಮ ಕೊಳಲಿನ ಜೊತೆಗೆ ಇತರ ಎಲ್ಲ ವಾದನಗಳ ಜುಗಲ್ಬಂದಿಗೆ ಸದಾ ಮುಂದು. ಕೇಳುಗರಿಗೆ ಕರ್ನಾಟಕಿ, ಸಿನೆಮಾ ಸಂಗೀತದ ರುಚಿಯನ್ನೂ ಹತ್ತಿಸಿ ತಾವೂ ಖುಷಿಪಡುವವರು.

ರೋನು ಕೊಳಲಿನಲ್ಲಿ ಆಟವಾಡಿದರೆ ವಿದ್ವಾನ್ ಯು.ರಾಜೇಶ್ ಬೆರಳಿನಲ್ಲಿ ಆಟವಾಡುತ್ತಾರೆ. ಅವರದ್ದು ಕೊಳಲಾದರೆ ಇವರದ್ದು ಮ್ಯಾಂಡೊಲಿನ್. ಅವರು ರಾಗ, ಇವರು ಅನುರಾಗ. ರಾಜೇಶ್ ಮೂಲತಃ ಆಂಧ್ರಪ್ರದೇಶದವರಾದರೂ ಈಗ ಚೆನ್ನೈ ನಿವಾಸಿ. ಅಣ್ಣ ಯು.ಶ್ರೀನಿವಾಸ್ ಅವರಿಂದ ಸಂಗೀತ ಕಲಿತವರು. ಸಂಗೀತದಲ್ಲೂ, ಬದುಕಿನಲ್ಲೂ ರಾಜೇಶ್ ಅವರಿಗೆ ಅಣ್ಣನೇ ಮಾರ್ಗದರ್ಶಿ. ಶಾಸ್ತ್ರೀಯ ಸಂಗೀತದಿಂದ ಹಿಡಿದು ಸಿನೆಮಾ ಸಂಗೀತದವರೆಗೆ ಎಲ್ಲ ಕಡೆ ವಿಜಯ ಸಾಧಿಸಿದ್ದಾರೆ. ಚೆನ್ನೈಯಲ್ಲಿ ಸಂಗೀತ ಶಾಲೆ ನಡೆಸುತ್ತಾ ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ಕಛೇರಿ ನೀಡುತ್ತಾ ಬೆಳೆದವರು.

ವಿವಿಡ್ ಆರ್ಟ್ಸ್ ಅಂಡ್ ಎಂಟರ್‌ಟೇನ್‌ಮೆಂಟ್ ಹಾಗೂ ದಿ ಪಯನೀರ್ ಆರ್ಟ್ಸ್ ಎಜುಕೇಷನ್ ಸೊಸೈಟಿ ನಡೆಸುತ್ತಿರುವ 'ಉತ್ತರ ದಕ್ಷಿಣ' ಜುಗಲ್ಬಂದಿ ಸರಣಿಯ ಕಾರ್ಯಕ್ರಮದಲ್ಲಿ ಪಂಡಿತ್ ರೋನು ಮಜುಂದಾರ್ ಮತ್ತು ವಿದ್ವಾನ್ ರಾಜೇಶ್ ಅವರು ಬೆಂಗಳೂರಿನಲ್ಲಿ ಕಳೆದ ವಾರ ಕೊಳಲು–ಮ್ಯಾಂಡೊಲಿನ್ ಜುಗಲ್ಬಂದಿ ನಡೆಸಿದರು. ಇದಕ್ಕೂ ಮುನ್ನ ಅವರು 'ಪ್ರಜಾವಾಣಿ'ಗೆ ಜುಗಲ್ಬಂದಿ ಸಂದರ್ಶನವನ್ನೂ ನೀಡಿದರು.

ಯು.ರಾಜೇಶ್

ಇಬ್ಬರು ಕಲಾವಿದರಿಗೂ ಬೆಂಗಳೂರಿನ ಜೊತೆ ಭಾವನಾತ್ಮಕ ಸಂಬಂಧ ಇದೆ. 'ನಾನು ಸುಮಾರು 37 ವರ್ಷಗಳ ಹಿಂದೆ ಗುರು ಪಂಡಿತ್ ವಿಜಯ ರಾಘವ್ ಜೊತೆ ಬೆಂಗಳೂರಿಗೆ ಮೊದಲ ಬಾರಿ ಬಂದೆ. ಪ್ರಭಾತ್ ಕಲಾವಿದರ ಜೊತೆಗೆ ಕೆಲಕಾಲ ಇದ್ದೆ. ಇಲ್ಲಿಯೇ ಕರ್ನಾಟಕಿ ಕೊಳಲು ವಾದಕ ನಟರಾಜನ್, ತಬಲಾ ವಾದಕ ರವೀಂದ್ರ ಯಾವಗಲ್ ಜೊತೆಗೆ ಕೊಳಲು ನುಡಿಸಿದೆ. ಮೈಸೂರು ಮಂಜುನಾಥ್ ಅವರ ಜೊತೆಗೆ ಮೊದಲ ಜುಗಲ್ಬಂದಿ ನಡೆದಿದ್ದೂ ಇಲ್ಲೇ. ಕದ್ರಿ ಅವರ ಜೊತೆ ಜುಗಲ್ಬಂದಿ ಕೂಡಾ ಇಲ್ಲೇ ನಡೆದಿತ್ತು. ಬೆಂಗಳೂರು ಜನ, ಆಹಾರ ಎಲ್ಲವೂ ನನಗೆ ಇಷ್ಟ' ಎಂದು ಪಂಡಿತ್ ರೋನು ಮಾತಿನ ಮಾಲೆ ಪೋಣಿಸಿದರು. ಅದನ್ನು ರಾಜೇಶ್ ಮುಂದುವರಿಸುತ್ತಾ, 'ನನಗೆ ಬೆಂಗಳೂರು ಎರಡನೇ ತವರು ಮನೆ. ಒಂದು ಕಾಲದಲ್ಲಿ ವಾರಕ್ಕೆ ಒಮ್ಮೆ ಅಥವಾ ಎರಡು ಬಾರಿ ಇಲ್ಲಿಗೆ ಬರುತ್ತಿದ್ದೆವು. ಜಾಕಿರ್ ಹುಸೇನ್, ಶಂಕರ್ ಮಹದೇವನ್ ಮುಂತಾದವರ ಜೊತೆ ಇಲ್ಲಿ ಕಛೇರಿ ನೀಡಿದ್ದೇನೆ. ಬೆಂಗಳೂರಿನ ಜನ ಬಹುಶ್ರುತರು, ತೆರೆದ ಮನಸ್ಸಿನವರು, ಸಂಗೀತದ ಬಗ್ಗೆ ನಿಜವಾದ ಪ್ರೀತಿಯನ್ನು ಇಟ್ಟುಕೊಂಡವರು. ಅದಕ್ಕೇ ಅವರ ಎದುರಿಗೆ ಕಛೇರಿ ನೀಡಲು ಕೊಂಚ ಭಯ' ಎಂದು ಹುಸಿ ಹೆದರಿಕೆ ವ್ಯಕ್ತಪಡಿಸಿದರು.

ಇಬ್ಬರಿಗೂ ತಮ್ಮ ಗುರುಗಳ ಬಗ್ಗೆ ಅಪಾರ ಗೌರವ. ಸಂಗೀತದ ಜೊತೆಗೆ ಬದುಕನ್ನೂ ಕಲಿಸಿದ ಗುರುಗಳೂ ತಮಗೆ ಸಿಕ್ಕಿದ್ದು ತಮ್ಮ ಅದೃಷ್ಟ ಎಂಬ ಭಾವ. 'ನನ್ನ ತಂದೆಯ ಗುರುಗಳಾಗಿದ್ದ ಪಂಡಿತ್ ಪನ್ನಾಲಾಲ್ ಅವರೇ ನನಗೂ ಆರಂಭದಲ್ಲಿ ಗುರುಗಳಾಗಿದ್ದರು. ನಂತರ ಪಂಡಿತ್ ಲಕ್ಷ್ಮಣ ಪ್ರಸಾದ್ ಅವರಲ್ಲಿ ಹಾಡುಗಾರಿಕೆ ಕಲಿಯಲು ಆರಂಭಿಸಿದೆ. ಅಲ್ಲಿಂದ ಪಂಡಿತ್ ವಿಜಯರಾಘವ್ ರಾವ್ ಅವರ ಶಿಷ್ಯನಾದೆ. ಅವರದ್ದು ವಾದ್ಯವೃಂದವಿತ್ತು. ಅವರ ಗುರುಗಳು ಪಂಡಿತ್ ರವಿಶಂಕರ್. ಹಾಗಾಗಿ ನನಗೆ ರವಿಶಂಕರ್ ಅವರ ಪರಿಚಯವಾಯಿತು. ಜೊತೆಗೆ ಶಿಷ್ಯತ್ವವೂ ಲಭಿಸಿತು' ಎಂದು ನೆನಪಿನಾಳಕ್ಕೆ ಇಳಿದರು ರೋನು.

'ರವಿಶಂಕರ್ ಅವರೊಂದಿಗೆ ತಿರುಗಾಡುತ್ತಾ ನಾನು ಸಂಗೀತವನ್ನೂ ಕಲಿತೆ. ಜೊತೆಗೆ ಬದುಕನ್ನೂ ಕಲಿತೆ. ಆರ್. ಡಿ.ಬರ್ಮನ್ ಅವರ ಶಿಷ್ಯತ್ವ ಕೂಡ ಲಭಿಸಿತು. ಅದಕ್ಕಾಗಿಯೇ ನಾನು ಹೇಳಿದ್ದು ಸಂಗೀತ ಕಲಿಸುವವರು ಬೇಕಾದಷ್ಟು ಜನ ಸಿಗುತ್ತಾರೆ. ಸಂಗೀತದ ಜೊತೆಗೆ ಬದುಕನ್ನೂ ಕಲಿಸುವವರು ಸಿಗುವುದು ಕಷ್ಟ. ಆದರೆ ಅಂತಹ ಗುರುಗಳು ಸಿಕ್ಕಿದ್ದು ನನ್ನ ಅದೃಷ್ಟ' ಎಂದು ರೋನು ಭಾವುಕರಾದರೆ, ರಾಜೇಶ್ ತಮ್ಮ ಗುರು, ಅಣ್ಣ ಯು.ಶ್ರೀನಿವಾಸ್ ವ್ಯಕ್ತಿತ್ವವನ್ನು ಬಿಚ್ಚಿಟ್ಟರು. 'ನನ್ನ ಅಣ್ಣ ನನಗೆ ಸಂಗೀತ ಮಾತ್ರ ಕಲಿಸಲಿಲ್ಲ, ಬದುಕಿನ ಕೌಶಲವನ್ನೂ ಕಲಿಸಿದ. ತಂತ್ರದ ಬಗ್ಗೆ ತಲೆ ಕೆಡಿಸಿಕೊಳ್ಳಬೇಡ. ಹೃದಯಕ್ಕೆ ಹತ್ತಿರವಾದದ್ದನ್ನು ನುಡಿಸು. ಅದು ಸರಿಯೋ ತಪ್ಪೋ ಎಂದು ಆಲೋಚಿಸಬೇಡ. ಹೃದಯಕ್ಕೆ ತಟ್ಟುವುದು ಎಲ್ಲವೂ ಸರಿಯಾಗಿಯೇ ಇರುತ್ತದೆ ಎಂದು ಅವರು ಹೇಳುತ್ತಿದ್ದರು. ಅವರು ಎಲ್ಲವನ್ನೂ ಹೇಳಿಕೊಡಲಿಲ್ಲ. ನಾನು ಹೇಗಿರಬೇಕೋ ಹಾಗೆ ಅವರು ನಡೆದುಕೊಂಡರು. ಅವರು ನಡೆದ ಹಾದಿಯಲ್ಲಿ ನಾನು ನಡೆದೆ. ನಡೆಯುತ್ತಲೇ ಇದ್ದೇನೆ' ಎಂದು ಅಣ್ಣನನ್ನು ಬಣ್ಣಿಸಿದರು.

ಕೇಳುಗರೂ ಗುರುವಾಗುತ್ತಾರಾ ಎಂದು ಕೇಳಿದರೆ ರಾಜೇಶ್ 'ಕೇಳುಗರ ಚಪ್ಪಾಳೆಯೇ ದೊಡ್ಡ ಪ್ರಶಸ್ತಿ. ಅದಕ್ಕಿಂತ ದೊಡ್ಡದು ಯಾವುದೂ ಇಲ್ಲ. ಅದಕ್ಕೇ ನಾನು ಯಾವುದೇ ಕಛೇರಿಯಲ್ಲಿ ನನ್ನ ಆಯ್ಕೆಗೆ ಆದ್ಯತೆ ನೀಡುವುದಿಲ್ಲ. ಕೇಳುಗರು ಏನನ್ನು ಬಯಸುತ್ತಾರೋ ಅದನ್ನು ನುಡಿಸುತ್ತೇನೆ. ಕೇಳುಗರ ಬಗ್ಗೆ ನಮಗೆ ಗೌರವ ಇರಬೇಕು. ಮನೆಯಲ್ಲಿ ಏನೇನೋ ತಾಪತ್ರಯ ಇದ್ದರೂ, ರಸ್ತೆಯಲ್ಲಿ ವಾಹನದಟ್ಟಣೆ ಹೇಗಿದ್ದರೂ ಕಷ್ಟಪಟ್ಟು ಅವರು ನಮ್ಮ ಸಂಗೀತವನ್ನು ಅರಸಿ ಬಂದಿರುತ್ತಾರೆ. ಆ ಪ್ರಜ್ಞೆ ಕಲಾವಿದನಿಗೆ ಇರಬೇಕು. ಆಗ ಕಛೇರಿ ಚೆನ್ನಾಗಿರುತ್ತದೆ. ಕಲಾಭಿಮಾನಿಗಳೂ ಸಂತೃಪ್ತರಾಗುತ್ತಾರೆ' ಎಂದರು. ಇದಕ್ಕೆ ಸಂಪೂರ್ಣ ಸಹಮತ ವ್ಯಕ್ತಪಡಿಸಿದ ರೋನು, ಕಛೇರಿಯಲ್ಲಿ ತಮ್ಮ ವೈಖರಿಯನ್ನು ನೋಡಿ ಹಿರಿಯ ಕಲಾವಿದರೊಬ್ಬರು 'ಯಾರಿಂದ ಕಲಿತೆ ಇದನ್ನೆಲ್ಲಾ' ಎಂದು ಕೇಳಿದರು. 'ನಾನು ಪಂಡಿತ್ ರವಿಶಂಕರ್ ಶಿಷ್ಯ' ಎಂದೆ. 'ಓಹೋ ಭಾರತ ರತ್ನ ರವಿಶಂಕರ್. ಆದರೂ ಅವರು ಭಾರತ ರತ್ನ ಏನಲ್ಲ' ಎಂದರು. ಆ ಮಾತನ್ನು ಕೇಳಿ ನನಗೆ ಬಹಳ ಬೇಸರವಾಯಿತು. 'ಏನಿದು ನಮ್ಮ ಗುರುಗಳ ಬಗ್ಗೆ ಹೀಗೆ ಆಡಿದರಲ್ಲ' ಎಂದು. ಆದರೆ ಅವರು ತಮ್ಮ ಮಾತನ್ನು ಅಷ್ಟಕ್ಕೇ ನಿಲ್ಲಿಸಲಿಲ್ಲ. ಮಾತು ಮುಂದುವರಿಸಿ 'ರವಿಶಂಕರ್ ಭಾರತ ರತ್ನ ಅಲ್ಲ. ಅವರೊಬ್ಬ ವಿಶ್ವ ರತ್ನ' ಎಂದರು. ಅದನ್ನು ಕೇಳಿ ನನ್ನ ಹೃದಯ ತುಂಬಿ ಬಂತು ಎಂದು ಅವರು ನೆನಪಿಸಿಕೊಂಡರು.

ರೋನು ಮಜುಂದಾರ್

ವಾದ್ಯವನ್ನು ಯಾರು ಬೇಕಾದರೂ ನುಡಿಸಬಹುದು. ಆದರೆ ಅದರ ಹಿಂದೆ ಒಂದು ಅಧ್ಯಾತ್ಮ ಇರಬೇಕು. ಆ ಶಕ್ತಿಯನ್ನು ಗುರು ತುಂಬುತ್ತಾನೆ ಎಂದು ರೋನು ಮಜುಂದಾರ್ ಹೇಳಿದರೆ, ಸಂಗೀತ ಇರುವುದು ಶಾಂತಿಗಾಗಿಯೇ ವಿನಾ ಯುದ್ಧಕ್ಕಾಗಿ ಅಲ್ಲ. ಜುಗಲ್ಬಂದಿ ಎಂದರೆ ಸಂಗೀತದ ಜಗಳ ಅಲ್ಲ. ಎಲ್ಲವೂ ಒಂದಾಗುವುದೇ ಜುಗಲ್ಬಂದಿ ಎಂದರು ರಾಜೇಶ್. ಭಾರತೀಯ ಸಂಗೀತದ ಶಕ್ತಿಯೇ ಅದು. ಎಲ್ಲರನ್ನೂ ಒಂದುಗೂಡಿಸುತ್ತದೆ. ಅದಕ್ಕೇ ಎಲ್ಲಿ ಹೋದರೂ ಅದಕ್ಕೆ ಗೌರವ ಇದ್ದೇ ಇರುತ್ತದೆ. ಫ್ಯೂಜನ್ ಕೂಡಾ ಒಳ್ಳೆಯದೆ. ಆದರೆ ಫ್ಯೂಜನ್ ನಿಜವಾದ ಸಂಗೀತದ ಆಸಕ್ತಿಯನ್ನು ಕೆರಳಿಸಬೇಕು ಎಂದರು ರಾಜೇಶ್.

ರೋನು–ರಾಜೇಶ್ ರಾಗ ಅನುರಾಗದ ಸಂಗೀತದ ಸಮಾರಾಧನೆಗೆ ಸಮಯದ ಹಂಗಿರಲಿಲ್ಲ. ಇಬ್ಬರ ಅನುಭವವೂ ದೊಡ್ಡದು. ಸಂಗೀತದಂತೆ ಸಾಗುತ್ತಲೇ ಇತ್ತು ಅಲೆಅಲೆಯಾಗಿ.

ಲೈಂಗಿಕ ಹಗರಣ...

8ನೇ ಪುಟದಿಂದ...

2015ರ ಈ ಪ್ರಕರಣದ ನಂತರ 2016ರಲ್ಲಿ ಬೆಳಕಿಗೆ ಬಂದಿದ್ದು ಇನ್ನೊಂದು ಪ್ರಕರಣ. ಈ ಪ್ರಕರಣದ ಆರೋಪಿ 71 ವರ್ಷ ವಯಸ್ಸಿನ ಸಚಿವರಾಗಿದ್ದ ಎಚ್.ವೈ. ಮೇಟಿ. ಅವರು ಮಹಿಳೆಯೊಬ್ಬರ ಜೊತೆಗಿದ್ದ ಕ್ಲಿಪಿಂಗ್ ಎಲ್ಲ ವಾಹಿನಿಗಳನ್ನು ತಲುಪಿ ಪ್ರಸಾರವಾಯಿತು. ವರ್ಗಾವಣೆ ಬಯಸಿದ ಮಹಿಳೆಯ ಜೊತೆ ಲೈಂಗಿಕ ಚಟುವಟಿಕೆ ನಡೆಸಿದ ಆರೋಪ ಅವರ ಮೇಲಿತ್ತು. 2017ರಲ್ಲಿ ಸಿಐಡಿ ಈ ಬಗ್ಗೆ ತನಿಖೆ ನಡೆಸಿ ಮೇಟಿ ಅವರನ್ನು ದೋಷಮುಕ್ತರನ್ನಾಗಿ ಮಾಡಿತು. ಇದಾದ ಮೇಲೆ ಬಹಿರಂಗವಾಗಿದ್ದು ರಮೇಶ್ ಜಾರಕಿಹೊಳಿ ಅವರ ಪ್ರಕರಣ.

ಸ್ವಾತಂತ್ರ್ಯೋತ್ತರ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಬಹಿರಂಗಗೊಂಡ ಲೈಂಗಿಕ ಹಗರಣಗಳ ದಾಖಲಿತ ವಿವರಗಳು ಇವಾದರೆ ರಾಜಕೀಯ ನಾಯಕರ ಲೈಂಗಿಕ ಚಟುವಟಿಕೆಗಳ ಬಗ್ಗೆ ಬಹಳಷ್ಟು ಸುದ್ದಿಗಳು ವೈರಲ್ ಆದದ್ದಿದೆ.

ಕೆಲವು ರಾಜಕೀಯ ನಾಯಕರ ಮದುವೆಯೇತರ ಸಂಬಂಧಗಳು ಸಾರ್ವಜನಿಕ ಚರ್ಚೆಗೆ ಕಾರಣವೂ ಆಗಿದ್ದವು. ಆದರೆ ಅವುಗಳು ಯಾವುವೂ ಈಗ ಪ್ರಸ್ತಾಪಿಸಿರುವ ಪ್ರಕರಣಗಳಂತೆ ಹಗರಣ ಆಗಿರಲಿಲ್ಲ. ಅಲ್ಲಿ ಅಧಿಕಾರ ದುರುಪಯೋಗ, ವಂಚನೆಯಂತಹ ಆರೋಪಗಳೂ ಕೇಳಿಬಂದಿರಲಿಲ್ಲ. ಅದು ಗಂಡು ಹೆಣ್ಣಿನ ಒಪ್ಪಿತ ಲೈಂಗಿಕ ಚಟುವಟಿಕೆ ಮಾತ್ರ ಆಗಿತ್ತು.

ಇಂತಹ ಮದುವೆಯೇತರ ಸಂಬಂಧ ಅಥವಾ ಸ್ನೇಹಿತೆಯರನ್ನು ಹೊಂದಿದ್ದಾರೆ ಎಂದು ಹೇಳಲಾಗಿದ್ದ ದೇವರಾಜ ಅರಸು, ರಾಮಕೃಷ್ಣ ಹೆಗಡೆ, ಆರ್. ಗುಂಡೂರಾವ್, ಜೆ.ಎಚ್. ಪಟೇಲರ ಸುತ್ತ ಸಾಕಷ್ಟು ರಂಜನೀಯ ಕಥೆಗಳು ಕೇಳಿ ಬಂದಿದ್ದವು. ಜೊತೆಗೆ ಈ ಸಂಬಂಧಗಳನ್ನು ಒಪ್ಪಿಕೊಂಡ ಈ ಹಿರಿಯ ರಾಜಕಾರಣಿಗಳು ತಾವು ಶ್ರೀರಾಮಚಂದ್ರ ಅಲ್ಲ ಎಂದು ಜನರ ಎದುರು ಸ್ಪಷ್ಟಪಡಿಸಿದ್ದರು. ಜೊತೆಗೆ ಇವರ ಈ ಮದುವೆಯೇತರ ಸಂಬಂಧಗಳು ಅಸಹ್ಯ ಹುಟ್ಟಿಸುವಂತೆ ಇರಲಿಲ್ಲ. ಅದು ಸಭ್ಯತೆಯ ಎಲ್ಲೆಯನ್ನೂ ಮೀರಿರಲಿಲ್ಲ. ಅಧಿಕಾರ ದುರುಪಯೋಗ ಮಾಡಿ ಲೈಂಗಿಕ ಸುಖ ಪಡೆಯಲು ಯತ್ನಿಸಿದ ದೂರು ಕೂಡ ಇವರ ಮೇಲಿರಲಿಲ್ಲ. ಅವು ರಂಜನೀಯ ಕಥೆಗಳಾಗಿ ಮಾತ್ರ ಕನ್ನಡಿಗರ ಮನಸ್ಸಿನಲ್ಲಿ ಉಳಿದುಕೊಂಡವು.

ಆದರೆ 1973ರ ಆರ್.ಡಿ. ಕಿತ್ತೂರ್ ಅವರ ಪ್ರಕರಣದಿಂದ ಈಗಿನ ರಮೇಶ್ ಜಾರಕಿಹೊಳಿವರೆಗಿನ ಲೈಂಗಿಕ ಹಗರಣ ಪ್ರಕರಣಗಳಲ್ಲಿ ಕೇಳಿಬಂದ ಆರೋಪಗಳ ಸ್ವರೂಪ ಒಪ್ಪಿತ ಲೈಂಗಿಕ ಚಟುವಟಿಕೆಗಳ ವ್ಯಾಪ್ತಿಯಲ್ಲಿ ಇಲ್ಲ. ಅವುಗಳು ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡು ಮಹಿಳೆಯರನ್ನು ಬಳಸಿಕೊಂಡ ಆರೋಪಗಳಾಗಿವೆ. ಹೀಗಾಗಿ ಗಂಡು ಹೆಣ್ಣಿನ ಸಂಬಂಧಕ್ಕೆ ಮಾತ್ರ ಅದು ಸೀಮಿತವಾಗದೇ ಸಾಮಾಜಿಕ ಆಯಾಮವನ್ನು ಪಡೆಯುತ್ತಿದೆ. ಈ ಕಾರಣದಿಂದ ಸಾಮಾಜಿಕ ಬದುಕು ಮತ್ತು ನೈತಿಕತೆ ಕುರಿತು ಚರ್ಚೆ ನಡೆಸಲೇಬೇಕಾದ ಅನಿವಾರ್ಯ ಈಗ ಎದುರಾಗಿದೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಣ್ಣ ಚಿಕ್ಕು ಶ್ರೀಕೃಷ್ಣ ಕಥೆಯ ಅಜ್ಜಯ್ಯನ ಅಭ್ಯಂಜನ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ರಾಷ್ಟ್ರಕವಿ ಕುವೆಂಪು ಅವರು ತಮ್ಮ ಬಾಲ್ಯದ ದಿನಗಳ ಕುರಿತು 'ಮಲೆನಾಡಿನ ಚಿತ್ರಗಳು' ಕೃತಿಯಲ್ಲಿ ಮೆಲುಕು ಹಾಕಿದ್ದಾರೆ. ಮಲೆನಾಡಿನ ಸೊಬಗನ್ನು ಅವರು ಅಸಾಧಾರಣವಾಗಿ ವರ್ಣಿಸಿದ್ದಾರೆ



ಗೆಳೆಯರೊಂದಿಗೆ ಹಣ್ಣು ಗಿಣ್ಣು ಕಿತ್ತು, ಮರ ಗಿರ ಹತ್ತಿ, ಕಲ್ಲು ಗಿಲ್ಲು ಹೊಡೆದು ಏನಾದರೂ ಸಾಹಸ ಗೀಹಸ ಮಾಡುವುದು ಬಾಲಕ ಪುಟ್ಟಪ್ಪ ಅವರ ಭಾನುವಾರದ ನೆಚ್ಚಿನ ಹವ್ಯಾಸವಾಗಿತ್ತಂತೆ!

ಭಾನುವಾರ ಬಂತೆಂದರೆ ಐಗಳ ಮನೆಪಾಠಕ್ಕೆ ರಜೆ. ಆದರೆ, ಮುಕ್ತವಾಗಿ ಓಡಾಡಿಕೊಂಡಿರುವ ಮಕ್ಕಳ ಆಸೆಗೆ ಅಭ್ಯಂಜನದ ಕಾಟ. ಹಂಡೆಯಲ್ಲಿ ಕುದಿಯುತ್ತಿದ್ದ ನೀರಿನಿಂದ ಭರ್ಜರಿ ಸ್ನಾನ

ಅಭ್ಯಂಜನ ಎಂದರೆ ಮೈಯೆಲ್ಲ ಪೂರ್ಣವಾಗಿ ಎಣ್ಣೆ ಹಚ್ಚಿ ಸ್ನಾನ ಮಾಡಿಸುವುದು. ಮನೆಯಲ್ಲಿ ಅಜ್ಜಯ್ಯ, ಮಕ್ಕಳು ಸೇರಿದಂತೆ ಎಲ್ಲರಿಗೂ ವಾರಕ್ಕೊಮ್ಮೆ ಅಭ್ಯಂಜನ ಇದ್ದೇ ಇರುತ್ತಿತ್ತು

ಕುವೆಂಪು ಬಾಲಕರಿದ್ದಾಗ ಮಲೆನಾಡಿನಲ್ಲೂ ಆಗಾಗ ಜಗಳಗಳು ನಡೆಯುತ್ತಿದ್ದವಂತೆ. ಬೇಟೆಯಾಡುವುದಂತೂ ಇದ್ದದ್ದೇ. ಆಗಾಗ ಪೊಲೀಸರ ಕಾಟ ಕೂಡ ಇರುತ್ತಿತ್ತು ಎಂದು ಅವರು ಬರೆಯುತ್ತಾರೆ



ಅಭ್ಯಂಜನ ಮಾಡಿದ ಅಜ್ಜಯ್ಯನೂ ಸೇರಿದಂತೆ ಎಲ್ಲರೂ ಆ ದಿನ ವಿರಾಮವಾಗಿ ಕಾಲ ಕಳೆಯುತ್ತಿದ್ದರಂತೆ. ರಾತ್ರಿ ಊಟವನ್ನು ಮಾಡದೆ ಹಾಲು ಕುಡಿದು ಮಲಗಿ ಬಿಡುತ್ತಿದ್ದರಂತೆ

ಮಜ ಮಜ ಮಜಕೂರದ ಮಾರ್ಚ್ 7ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಗಣಿತದಲ್ಲಿ ಗರ್ದಿ ಗಮ್ಮತ್ತು

ಭಾಗಿಸದೇ ಶೇಷ ಹೇಳುವ ಜಾದೂ

ನೀನು ಒಂದು ಸಂಖ್ಯೆ ಬರೆದುಕೋ. ಅದನ್ನು 9ರಿಂದ ಭಾಗಿಸು. ನೀನು ಭಾಗಿಸುವ ಮೊದಲೇ ಉಳಿಯುವ ಶೇಷವನ್ನು ನಾನು ಹೇಳಿಬಿಡುತ್ತೇನೆ. ಅದು ಹೇಗೆ?

ಹೀಗೆ: ನೀನು ಬರೆದುಕೊಂಡ ಎಲ್ಲ ಅಂಕಿಗಳನ್ನು ಕೂಡುತ್ತಾ ಕೂಡುತ್ತಾ ಒಂದೇ ಅಂಕಿ ಮಾಡುತ್ತೇನೆ. ಆ ಅಂಕಿಯೇ ಉಳಿಯುವ ಶೇಷ ಆಗಿರುತ್ತದೆ.

ಉದಾಹರಣೆಗೆ:

```
9) 9628 (1069
   9
   062
    54
     88
     81
      7
```

ಇಲ್ಲಿ ಮೊದಲು ಎಲ್ಲ ಅಂಕಿಗಳನ್ನು ಕೂಡಿಸಬೇಕು $9+6+2+8 = 25$ ಮುಂದುವರಿದು ಕೂಡಿಸಿದಾಗ $2+5 =$ 7 ಆಗುತ್ತದೆ. ಆದ್ದರಿಂದ ನಾನು ಮೊದಲೇ ಶೇಷ 7 ಎಂದು ಹೇಳಿಬಿಡುತ್ತೇನೆ.



ನೀನು ಯಾವ ಸಂಖ್ಯೆ ಹಚ್ಚಿಕೊಂಡರೂ ಸರಿಯೇ ಆದರೆ, ಭಾಜಕದ ಸಂಖ್ಯೆ 9 ಕಡ್ಡಾಯ. ಇನ್ನೊಂದು ಮಾತು. ನೀನು ಸಂಖ್ಯೆಯ ಎಲ್ಲ ಅಂಕಿಗಳನ್ನು ಕೂಡಿಸಿದಾಗ 9 ಆದರೆ, ಆಗ ಶೇಷ 0 ಎಂದು ಹೇಳು. ಇದು ನೆನಪಿರಲಿ.

ಶಬ್ದಗಳಲ್ಲಿ ಸರಸ...

ಕನ್ನಡ ಲಿಪಿ

ಇಲ್ಲಿ ಆರಂಭದ ಅಕ್ಷರದಿಂದ ಮುಂದಿರುವ ಎಲ್ಲ ಅಕ್ಷರಗಳಿಗೂ ಜೋಡಿಸುತ್ತಾ ಹೋದರೆ ಎಲ್ಲವೂ ಅರ್ಥಬದ್ಧ ಪದಗಳೇ

ಟ್ವೆಂಟಿ – 20 ಮ್ಯಾಚ್

ಶಬ್ದಕ್ಕೂ ಅರ್ಥಕ್ಕೂ ಹೊಂದಿಸಿ

1	ಧರೆ	A	ಕುಲ
2	ಹುಸಿ	B	ಭೂಮಿ
3	ಅಗ್ನಿ	C	ಸೊಕ್ಕು
4	ಮಿಂಚು	D	ಬೆಂಕಿ
5	ಫಲ	E	ಗುರಿ
6	ದೊರೆ	F	ಸುಳ್ಳು
7	ಧ್ಯೇಯ	G	ಜೋಡಿ
8	ವಂಶ	H	ಹಣ
9	ಶರ	I	ತಗ್ಗು
10	ಜತೆ	J	ಸದ್ದು
11	ದರ್ಪ	K	ಸಣ್ಣ
12	ಸುಮ	L	ಹಣ್ಣು
13	ಪುಟ್ಟ	M	ಹೊಳೆ
14	ಕಾಸು	N	ರಾಜ
15	ಗಡಿ	O	ಹದ್ದು
16	ಅಕ್ಷಿ	P	ಹೂವು
17	ಗುಂಡಿ	Q	ಸಿಟ್ಟು
18	ದರ	R	ಕಣ್ಣು
19	ಕ್ರೋಧ	S	ಬೆಲೆ
20	ದನಿ	T	ಬಾಣ

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಅನುಸ್ವಾರದ ಆಚೀಚೆ ಸುಳಿವು ಆಧರಿಸಿ, ಅಕ್ಷರ ಪಟ್ಟಿಯಿಂದ ಎರಡಕ್ಷರ ತುಂಬಿ ಪದ ರಚಿಸಿ.

ಪದ ಪಟ್ಟಿ

ತು ಹೊ ಹ ಗು ಜ

ಡ ಡು ಗು ಪು ಸ

◯	ಂ	◯	ತುಕ್ಕು
◯	ಂ	◯	ಸಮೂಹ
◯	ಂ	◯	ಒಂದು ಪಕ್ಷಿ
◯	ಂ	◯	ಕೆರೆ
◯	ಂ	◯	ತುಣುಕು

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ

1 ಹಂಚು, 2 ದಂಡ, 3 ದುಂದು, 4 ಇಂದು, 5 ಮಂದಿ

ಟ್ವೆಂಟಿ–20 ಮ್ಯಾಚ್

1–Q, 2-S, 3-P, 4-G, 5-O, 6-F, 7-T, 8-R, 9-N, 10-K, 11-M, 12-E, 13-D, 14-C, 15-H, 16-I, 17-B, 18-J, 19-L, 20-A

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು

ಅಪ್ಸನಾ ಬೇಗಂ ಪಟೇಲ್
ಅಹಾಲ್ (ಗಂಗಾವತಿ)

ದೈವಿಕ್
ಪಾವಗಡ



ಗಹನ್ ಪಿ
ಚಿಕ್ಕಮಗಳೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

2ನೇ ವರ್ಷದ ಸವಿನೆನಪು



ಶ್ರೀಮತಿ ಜಯಲಕ್ಷ್ಮಮ್ಮ
ದಿ. ವೈ ನಂಜಪ್ಪ ರೆಡ್ಡಿ
(ಪಾಳ್ಯದ ಕೃಷ್ಣಪ್ಪ) ನವರ ಧರ್ಮಪತ್ನಿ
ನಂ. 84, ಕೋರಮಂಗಲ,
ಬೆಂಗಳೂರು–560095
ನೀವು ನಮ್ಮನ್ನು ಅಗಲಿ ಎರಡು ವರ್ಷ ಕಳೆದರೂ ನಿಮ್ಮ ಸವಿನೆನಪು ನಮ್ಮಲ್ಲಿ ಚಿರಸ್ಮರಣೀಯವಾಗಿ ಉಳಿದಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುವ
ಮಕ್ಕಳು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು.

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ವಿಮಾನನಿಲ್ದಾಣಗಳಲ್ಲಿ ಮತ್ತು ಪ್ರಯಾಣದ ವೇಳೆ ಮಾಸ್ಕ್ ಧಾರಣೆ, ಅಂತರ ಪಾಲನೆ ಕಡ್ಡಾಯ

ಕೋವಿಡ್: ವಿಮಾನ ಪ್ರಯಾಣಿಕರಿಗೆ ಕಟ್ಟುನಿಟ್ಟಿನ ಸೂಚನೆ

ನವದೆಹಲಿ (ಪಿಟಿಐ): ಪುನರಾವರ್ತಿತ ಎಚ್ಚರಿಕೆಗಳ ನಂತರವೂ ಸರಿಯಾಗಿ ಮಾಸ್ಕ್ ಧರಿಸದ ಪ್ರಯಾಣಿಕರನ್ನು ವಿಮಾನದಿಂದ ಕೆಳಗಿಳಿಸಬೇಕು ಎಂದು ವಿಮಾನಸೇವೆ ನಿಯಂತ್ರಣ ಪ್ರಾಧಿಕಾರ ಡಿಜಿಸಿಎ ಸ್ಪಷ್ಟ ಸೂಚನೆ ನೀಡಿದೆ. ಈ ಮೂಲಕ ಕೋವಿಡ್ ನಿಯಂತ್ರಣ ಮಾರ್ಗಸೂಚಿ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಸಂಬಂಧಿತ ಅಧಿಕಾರಿಗಳಿಗೆ ಸೂಚಿಸಿದೆ.

ಮಾರ್ಗಸೂಚಿ ನಿಯಮಗಳನ್ನು ಪಾಲಿಸದಿರುವ ಪ್ರಯಾಣಿಕರನ್ನು ಅನುಚಿತ ವರ್ತನೆಯ ಪ್ರಯಾಣಿಕ ಎಂದು ಪರಿಗಣಿಸಬೇಕು ಎಂದು ತಾಕೀತು ಮಾಡಿದೆ. ನಿಯಮದ ಪ್ರಕಾರ, ಇಂಥ ಪ್ರಯಾಣಿಕರಿಗೆ ಕನಿಷ್ಠ 3 ತಿಂಗಳಿಂದ ವಿವಿಧ ಅವಧಿವರೆಗೆ ವಿಮಾನದಲ್ಲಿ ಪ್ರಯಾಣಿಸದಂತೆ ನಿರ್ಬಂಧ ಹೇರಬಹುದಾಗಿದೆ.

ಇದು, ಸೇರಿದಂತೆ ಸೋಂಕು ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ವಿಮಾನನಿಲ್ದಾಣ ಮತ್ತು ವಿಮಾನ ಪ್ರಯಾಣದ ವೇಳೆ ಅನುಸರಿಸಬೇಕಾದ ಕ್ರಮಗಳನ್ನು ಕುರಿತಂತೆ ಡಿಜಿಸಿಎ ಮಾರ್ಗಸೂಚಿ ಪ್ರಕಟಿಸಿದೆ.

ಕೆಲ ಪ್ರಯಾಣಿಕರು ಮಾಸ್ಕ್ ಧರಿಸುತ್ತಿಲ್ಲ, ಕೆಲವರು ಮೂಗು, ಬಾಯಿ ಮುಚ್ಚುವಂತೆ ಧರಿಸುವುದಿಲ್ಲ. ಕೆಲವರು ವಿಮಾನನಿಲ್ದಾಣ ಪ್ರವೇಶಿಸಿದಂತೆ ಮಾಸ್ಕ್ ತೆಗೆದುಬಿಡುತ್ತಾರೆ. ಅಂತರ ಕಾಯ್ದುಕೊಳ್ಳುತ್ತಿಲ್ಲ ಎಂಬ ಹಿನ್ನೆಲೆಯಲ್ಲಿ ಈ ಸೂಚನೆ ನೀಡಲಾಗಿದೆ.

ವಿಮಾನ ನಿಲ್ದಾಣವನ್ನು ಪ್ರವೇಶಿಸುವುದರಿಂದ ನಿರ್ಗಮನದವರೆಗೆ ಮಾಸ್ಕ್ ಅನ್ನು ಧರಿಸುವುದು ಸೇರಿದಂತೆ ಕಟ್ಟುನಿಟ್ಟಾಗಿ ಸೂಚನೆಗಳನ್ನು ಪಾಲಿಸಬೇಕು. ಪ್ರಯಾಣದುದ್ದಕ್ಕೂ ಪರಸ್ಪರ ಅಂತರ ಕಾಯ್ದುಕೊಳ್ಳಬೇಕು. ಕೆಲ ನಿರ್ದಿಷ್ಟ ಸಂದರ್ಭಗಳನ್ನು ಹೊರತುಪಡಿಸಿ ಮೂಗು, ಬಾಯಿ ಮುಚ್ಚುವಂತೆಯೇ ಮಾಸ್ಕ್ ಧರಿಸಬೇಕು ಎಂದು ನಿರ್ದೇಶನ ನೀಡಲಾಗಿದೆ.

ಪ್ರಯಾಣಿಕರು ನಿಲ್ದಾಣ ಪ್ರವೇಶಿಸುವಾಗಲೇ ಮಾಸ್ಕ್ ಧರಿಸಿದ್ದಾರೆ ಎಂಬುದನ್ನು ಭದ್ರತಾ ಸಿಬ್ಬಂದಿ ಗಮನಿಸಿ, ಕ್ರಮವಹಿಸಬೇಕು. ಯಾವುದೇ ಪ್ರಯಾಣಿಕ ಮಾರ್ಗಸೂಚಿಯನ್ನು ಪಾಲಿಸದೇ ಇದ್ದಲ್ಲಿ ಕಟ್ಟೆಚ್ಚರ ನೀಡಬೇಕು ಎಂದು ಕೇಂದ್ರ ವೈಮಾನಿಕ ನಿರ್ದೇಶನಾಲಯದ ಪ್ರಧಾನ ನಿರ್ದೇಶಕರು ಹೇಳಿಕೆಯಲ್ಲಿ ಸೂಚಿಸಿದ್ದಾರೆ.

ಕೋವಿಡ್ 2ನೇ ಅಲೆ ಸ್ಪಷ್ಟತೆ ಇಲ್ಲ –ವಿಜ್ಞಾನಿಗಳು

ನವದೆಹಲಿ: 'ದೇಶದಲ್ಲಿ ಪ್ರಸ್ತುತ ಕೋವಿಡ್‌ನ ಎರಡನೇ ಅಲೆ ಆರಂಭವಾಗಿದೆಯೇ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ. ಆದರೆ, ಏನೋ ಆಗುತ್ತಿದೆ ಎಂಬುದು ನಿಜ. ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ವರದಿಯಾಗಲು ಮಾರ್ಗಸೂಚಿ ನಿಯಮ ಪಾಲಿಸುವಲ್ಲಿ ಜನರ ನಿರ್ಲಕ್ಷ್ಯವೇ ಕಾರಣ' ಎಂದು ಸಿಎಸ್ಐಆರ್‌ನ ಜೀವವಿಜ್ಞಾನ ವಿಭಾಗದ ನಿರ್ದೇಶಕ ಅನುರಾಗ್ ಅಗರವಾಲ್ ಹೇಳಿದರು.

ಕೋವಿಡ್ ತಡೆಯಲು ಅಗತ್ಯ ಮುಂಜಾಗ್ರತೆಯನ್ನು ವಹಿಸುವುದು ಮತ್ತು ಲಸಿಕೆ ನೀಡುವುದೇ ಈಗಿರುವ ಮಾರ್ಗ. ಸದ್ಯ, ಕೋವಿಡ್ ನಿಯಂತ್ರಣ ಮತ್ತು ಎರಡನೇ ಅಲೆ ಆತಂಕದ ನಡುವೆ ತೆಳುವಾದ ಗೆರೆಯಂತೂ ಇದೆ ಎಂದು ಹೇಳಿದರು.

ಲವ್ಲಿ ಪ್ರೊಫೆಷನಲ್ ಯೂನಿವರ್ಸಿಟಿಯ ಅನ್ವಯಿಕ ವೈದ್ಯವಿಜ್ಞಾನ ವಿಭಾಗದ ಮುಖ್ಯಸ್ಥ, ಡೀನ್ ಮೋನಿಕಾ ಗುಲಾಟಿ ಅವರ ಪ್ರಕಾರ, ಕೋವಿಡ್‌ನ ಹೊಸ ರೂಪದ ಸೋಂಕು ಕಾಣಿಸಿರುವ ಇತರ ದೇಶಗಳ ಪರಿಸ್ಥಿತಿ ಭಾರತದಲ್ಲಿ ಇಲ್ಲ. ಹಾಲಿ ಕಾಣಿಸಿಕೊಂಡಿರುವ ಮಾದರಿಯ ಸೋಂಕು ಕೂಡಾ ಸಾಂಕ್ರಾಮಿಕವಲ್ಲ ಎಂದು ಹೇಳಿದರು.

ಮಾರ್ಗಸೂಚಿ ಪಾಲನೆ ಕುರಿತ ಜನರ ವರ್ತನೆ ಹಾಗೂ ಹೊಸ ಮಾದರಿ ಸೋಂಕು ಪ್ರಕರಣಗಳು ಹೆಚ್ಚಾಗಲು ಕಾರಣ ಇರಬಹುದು. ಹಿಂದಿನ ಸ್ಥಿತಿಗೆ ಹೋಲಿಸಿದರೆ ಈಗ ಏರಿಕೆ ಪ್ರಮಾಣವು ಮಂದಗತಿಯಲ್ಲಿದೆ ಎಂದು ಅಭಿಪ್ರಾಯಪಟ್ಟರು.

'150 ದೇಶಗಳಿಗೆ ಭಾರತ ನೆರವು'

ಪೀಯೂಷ್ ಗೋಯಲ್

ತಿರುಪತಿ (ಪಿಟಿಐ): 'ಕೋವಿಡ್–19 ಬಿಕ್ಕಟ್ಟಿನ ಸಂದರ್ಭದಲ್ಲಿ ಭಾರತವು ಪ್ರಧಾನಿ ಮೋದಿ ಅವರ ನಾಯಕತ್ವದಲ್ಲಿ ಜಗತ್ತಿಗೆ ತನ್ನಿಂದಾದ ಎಲ್ಲ ರೀತಿಯ ನೆರವನ್ನು ನೀಡಿದೆ' ಎಂದು ರೈಲ್ವೆ ಸಚಿವ ಪೀಯೂಷ್ ಗೋಯಲ್ ಶನಿವಾರ ಹೇಳಿದರು.

ತಿರುಮಲದಲ್ಲಿರುವ ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

'130 ಕೋಟಿ ಜನಸಂಖ್ಯೆಯುಳ್ಳ ನಮ್ಮ ದೇಶವು ಕೋವಿಡ್ ಸೋಂಕಿನಿಂದ ಬೇಗ ಗುಣಮುಖರಾಗುವ ಮೂಲಕ ತನ್ನ ಶಕ್ತಿಯನ್ನು ಪ್ರದರ್ಶಿಸಿದೆ' ಎಂದರು.

'ಭಾರತ ಸಾಂಕ್ರಾಮಿಕದ ಸಂದರ್ಭದಲ್ಲಿ ಬೇರೆ ದೇಶಗಳ ಮೇಲೆ ಅವಲಂಬಿತವಾಗಿರಲಿಲ್ಲ, ಬದಲಿಗೆ ಬೇರೆ ದೇಶಗಳಿಗೆ ಸೋಂಕಿನ ವಿರುದ್ಧ ಹೋರಾಡಲು ಬೆಂಬಲವನ್ನು ನೀಡಿದೆ. ಪ್ರಧಾನಿ ಮೋದಿ ಅವರ 'ವಸುಧೈವ ಕುಟುಂಬಕಂ' ಎಂಬ ತತ್ವದೊಂದಿಗೆ 150 ದೇಶಗಳಿಗೆ ಔಷಧಿಯನ್ನು ಪೂರೈಸಿದರು. ಅಲ್ಲದೆ 75 ದೇಶಗಳಿಗೆ ಲಸಿಕೆಯನ್ನು ಕೂಡ ರವಾನಿಸಿದರು' ಎಂದರು.

'ಇದು ಭಾರತೀಯರ ಶಕ್ತಿ ಮತ್ತು ವಸುಧೈವಭಾವನೆಯನ್ನು ಪ್ರತಿಬಿಂಬಿಸುತ್ತದೆ. ಭಾರತೀಯರು ತಮ್ಮ ಸಂಕಷ್ಟದೊಂದಿಗೆ ವಿಶ್ವದ ಬಗ್ಗೆಯೂ ಕಾಳಜಿ ವಹಿಸಿದ್ದಾರೆ. ಕೋವಿಡ್ ಇನ್ನೂ ಅಂತ್ಯವಾಗಿಲ್ಲ, ಹಾಗಾಗಿ ಜನರು ವೈಯಕ್ತಿಕ ಅಂತರ ಪಾಲಿಸಬೇಕು ಮತ್ತು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು' ಎಂದು ಮನವಿ ಮಾಡಿದರು.

'ಲಾಕ್‌ಡೌನ್ ತೆರವುಗೊಳಿಸಿದ ಬಳಿಕ ಭಾರತದ ಆರ್ಥಿಕತೆ ಸರಿಯಾದ ಹಾದಿಗೆ ಬಂದಿದೆ. ಭಾರತೀಯ ರೈಲ್ವೆ ಇಲಾಖೆಯು ಕಳೆದ ವರ್ಷಕ್ಕಿಂತ ಈ ಬಾರಿ ಹೆಚ್ಚಿನ ಯೋಜನೆಗಳನ್ನು ಕೈಗೊಂಡಿದೆ. ತಿರುಪತಿಯಲ್ಲಿ ರೈಲ್ವೆ ವಿಸ್ತರಣೆ ಕಾರ್ಯವು ಮುಕ್ತಾಯದ ಹಂತ ತಲುಪಿದೆ' ಎಂದು ಹೇಳಿದರು.

ಒಂದೇ ದಿನ 20 ಲಕ್ಷಕ್ಕೂ ಹೆಚ್ಚು ಜನರಿಗೆ ಲಸಿಕೆ

ನವದೆಹಲಿ (ಪಿಟಿಐ): 'ದೇಶದಾದ್ಯಂತ ಶುಕ್ರವಾರ ಒಂದೇ ದಿನ 20 ಲಕ್ಷಕ್ಕೂ ಹೆಚ್ಚು ಜನರಿಗೆ ಕೋವಿಡ್ ಲಸಿಕೆ ನೀಡಲಾಗಿದೆ' ಎಂದು ಆರೋಗ್ಯ ಸಚಿವಾಲಯ ಶನಿವಾರ ತಿಳಿಸಿದೆ.

ಇದರಲ್ಲಿ 16,39,663 ಜನರಿಗೆ ಮೊದಲ ಡೋಸ್ ನೀಡಲಾಗಿದೆ. 4,13,874 ಕಾರ್ಯಕರ್ತರಿಗೆ ಎರಡನೇ ಡೋಸ್ ನೀಡಲಾಗಿದೆ. ಜನವರಿ 16 ರಂದು ಆರಂಭಿಸಿದ ಕೋವಿಡ್–19 ವಿರುದ್ಧದ ಲಸಿಕೆ ಅಭಿಯಾನದಲ್ಲಿ ಭಾರತವು ಮಹತ್ತರದ ಮೈಲಿಗಲ್ಲು ಸಾಧಿಸಿದೆ. ಲಸಿಕೆ ಅಭಿಯಾನದ 56ನೇ ದಿನ 20 ಲಕ್ಷಕ್ಕೂ ಹೆಚ್ಚು (20,53,537) ಲಸಿಕೆಯ ಡೋಸ್‌ಗಳನ್ನು ನೀಡಲಾಗಿದೆ. ಇದು ಈವರೆಗಿನ ಅತಿ ಹೆಚ್ಚು ದೈನಂದಿನ ಲಸಿಕೆ ಪ್ರಮಾಣವಾಗಿದೆ' ಎಂದು ಸಚಿವಾಲಯ ತಿಳಿಸಿದೆ.

ಕಳೆದ 24 ಗಂಟೆಗಳಲ್ಲಿ ನೀಡಲಾದ 20.54 ಲಕ್ಷ ಡೋಸ್‌ಗಳಲ್ಲಿ 8 ರಾಜ್ಯಗಳು ಶೇ 74ರಷ್ಟು ಲಸಿಕೆಯನ್ನು ನೀಡಿವೆ. ಇದರಲ್ಲಿ 3.3 ಲಕ್ಷ ಲಸಿಕೆ ಡೋಸ್‌ಗಳೊಂದಿಗೆ ಉತ್ತರ ಪ್ರದೇಶ ಮೊದಲ ಸ್ಥಾನದಲ್ಲಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್
Water Proofing Materials
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್
Agricultural Land
Out-Station
ಜಮೀನು ಮಾರಾಟಕ್ಕೆ
❖ ಸುಂದರವಾದ 24 ಎಕರೆ ಜಮೀನು
❖ ಕೊಪ್ಪಳದಿಂದ ಸುಲಭ ದಾರಿ.
❖ ಯಲಬುರ್ಗಾದಿಂದ ಕೇವಲ 7 ಕಿ.ಮೀ. ದೂರ, ಕುಷ್ಟಗಿ ಕಡೆಗಿನ ಮುಖ್ಯ ರಸ್ತೆಯಲ್ಲಿ, ಹಗೆದಾಳ ಗ್ರಾಮ.
❖ ನಿವೇಶನಗಳಾಗಿ ಅಭಿವೃದ್ಧಿಗೊಳಿಸಲು ಮತ್ತು ವಾಣಿಜ್ಯಕ ಉದ್ದೇಶಗಳಿಗೆ ಸೂಕ್ತವಾಗಿದೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9902878204
9820604845

Commerical
Rajajinagar
COMMERCIALLY CONVERTIBLE Land for sale on Dr.Rajkumar Road, Near Rajajinagar 6th Block 3700 Sqft at 6.50 Cr. Negotiable Contact - 9742937714.

Sites
Out-Station
ಜಮೀನು ಮಾರುವುದಿದೆ
ಬೆಳಗಾವಿ ಜಿಲ್ಲೆ, ಕಿತ್ತೂರು ಸಮೀಪ ವಾರ್ಷಿಕ ಆದಾಯ ರೂ. 20 ಲಕ್ಷ ಇರುವ, ಮಾವು, ಗೋಡಂಬಿ ಮತ್ತು ಅಡಿಕೆ ಬೆಳೆದಿರುವ ಹಾಗೂ ವಾಸಕ್ಕೆ ಯೋಗ್ಯವಾಗಿರುವ 2 ಫಾರ್ಮ್‌ಹೌಸ್ ಸಹಿತ 20 ಎಕರೆ ನೀರಾವರಿ ಜಮೀನು ಮಾರುವುದಿದೆ. ಆಸಕ್ತರು ಸಂಪರ್ಕಿಸಿರಿ:
9449836343

ಉದ್ಯೋಗಾವಕಾಶ
Multiple Vacancy
WANTED
1) M.Sc. Hydrogeology with MIS & GIS with 3 years Experience - 15 Nos.
2) BE Civil with MIS & GIS 3 years Experience-15 Nos.
3) MSW with 3 years Experience - 15 Nos.
4) M.Sc. Computer or BE Computer Science with 3 years Experience - 15 Nos
5) MA in Mass communication with 2 years Exp.-15 Nos
Accountant cum Data Entry Operator -B.Com./ Any degree with 2 years Exp. - 2 Nos.
Send Your CV with all Marks card & convocation certificate to the above mail ID. Place of Work : Devanahalli, Hoskote and Nelamangala Project under Minor Irrigation Department.
Interview held on : 16, 17, 18th March 2021 @ 2:00 pm to 5:00 pm
Mahathma Gandhi Trust (R)
Email: mahatmagandhitrust@gmail.com
0821-2420374
93438 28203
www.mahatmagandhitrust.com

Teachers/ Professors
ಸುವರ್ಣಮುಖಿ ಸಂಸ್ಕೃತಿ ಧಾಮ (ರಿ).ವಡೇರಹಳ್ಳಿ,ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ-562112. ಸುವರ್ಣಮುಖಿ ಹಿರಿಯ ಮತ್ತು ಪ್ರೌಢಶಾಲೆ (ವಸತಿ) ರೇಣುಕಾನಾಗರಾಜು ಸಂಸ್ಕೃತ ಪಾಠಶಾಲೆ.ಕೆಳಕಂಡ ಹುದ್ದೆಗಳಿಗೆ ಬೇಕಾಗಿದ್ದಾರೆ. ಹೆಡ್ ಮಾಸ್ಟರ್- ಡಿಗ್ರಿ, ಬಿ.ಎಡ್. (ಅನುಭವಿ). ಇಂಗ್ಲೀಷ್ ಶಿಕ್ಷಕರು- ಬಿ.ಎ.ಬಿಎಡ್, (ಇಂಗ್ಲೀಷ್) ದೈಹಿಕ ಶಿಕ್ಷಣ ಶಿಕ್ಷಕರು - ಬಿ.ಎ.ಬಿಪಿಎಡ್, -ಸಂಸ್ಕೃತ ಶಿಕ್ಷಕರು-ವಿದ್ವತ್, ವಾರ್ಡನ್/ಪಿಇ ಟೀಚರ್. ವಸತಿ ಸೌಲಭ್ಯವಿರುತ್ತದೆ.ಸಂಪರ್ಕಿಸಿ: 9886128699, 9972970502 E-Mail: suvarnamukhisamskritidhama@gmail.com

General
ತಕ್ಷಣ ಬೇಕಾಗಿದ್ದಾರೆ ಸರ್ಕಾರದಿಂದ ಮಾನ್ಯತೆ ಪಡೆದಿರುವ ಸಂಸ್ಥೆಗೆ ಕೆಲಸ ಮಾಡಲು ಯುವಕ ಯುವತಿಯರು ಬೇಕಾಗಿದ್ದಾರೆ ವಯಸ್ಸು: 18 ರಿಂದ 27 ರವರೆಗೆ ವಿದ್ಯಾರ್ಹತೆ SSLC, PUC Any Degree Pass/Fail ಸಂಬಳ: 15 ಸಾವಿರದಿಂದ 18000 ವರೆಗೆ ವಸತಿ ಸೌಲಭ್ಯವಿರುತ್ತದೆ: 7975784278/ 9916361106

Accounts & Finance
ಎಂ.ಎನ್.ಸಿಗೆ ರಿಸೆಪ್ಷನಿಸ್ಟ್, ಅಕೌಂಟೆಂಟ್ಸ್, ಆಫೀಸ್/ಅಕೌಂಟ್ಸ್, ಅಸಿಸ್ಟೆಂಟ್ಸ್, ಕಂಪ್ಯೂಟರ್ ಆಪರೇಟರ್ಸ್, ಕ್ಲಾರ್ಕ್ಸ್,ಟೆಲಿಕಾಲರ್ಸ್, ಪರ್ಚೇಸ್/ ಸ್ಟೋರ್ ಕೀಪರ್ಸ್"ಮೋನಿಕಾ": 9845379900/ 9902807713

Part-Time Jobs
ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted
ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ. 9916016092, 9739993386,

ಒಳ್ಳೆಯ ಮನೆ ಕೆಲಸದವರು ಹೆಂಗಸರು ಫ್ಯಾಮಿಲಿ ಸಹಿತ ಬೇಕಾಗಿದ್ದಾರೆ. ವಾಸವಿರಲು ಮನೆಯನ್ನು ಕೊಡುತ್ತೇವೆ. ಸಂಪರ್ಕಿಸಿರಿ : ಶಶಿಧರ್ 9886092877 .

ಉದ್ಯೋಗಾವಕಾಶ ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಮನೆಗೆಲಸ, ಮಕ್ಕಳನ್ನು ನೋಡಿಕೊಳ್ಳಲು ವಯಸ್ಸಾದವರನ್ನು, ವೃದ್ಧರನ್ನು ನೋಡಿಕೊಳ್ಳಲು ಹೋಂ ನರ್ಸಿಂಗ್ ಕೆಲಸ ಮಾಡಲು ಯುವಕರು-ಯುವತಿಯರು ಬೇಕಾಗಿದ್ದಾರೆ.ಉಚಿತ ಊಟ, ವಸತಿಯೊಂದಿಗೆ 12,000 - 17,000/- ಫೋನ್: 9663189777, 8792666115

FREELANCE WORK AT A SITE IN PERUNGUDI, CHENNAI. WANTED TYPESETTER, PROOF READER AND TRANSLATOR FOR TELUGU, KANNADA, MALAYALAM & TAMIL WITH RELEVANT EXPERIENCE. ATTRACTIVE REMUNERATION. APPLY:AMRA1947@GMAIL.COM

ಬೆಂಗಳೂರಿನಲ್ಲಿರುವ ಟೈರ್ ಅಂಗಡಿಗೆ ಸಹಾಯಕರು ಬೇಕಾಗಿದ್ದಾರೆ. ಸಂಬಳ 12,000/- ಜೊತೆಗೆ ಊಟ ಮತ್ತು ವಸತಿ ಕೊಡಲಾಗುವುದು. ಕೂಡಲೇ ಸಂಪರ್ಕಿಸಿ: 9900902109

ಫೀಲ್ಡ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಕೆಲಸ ಬೆಂಗಳೂರಿನಲ್ಲಿ. ಎಸ್.ಎಸ್.ಎಲ್.ಸಿ ಆದವರು ಊಟ ವಸತಿ ಸೌಲಭ್ಯವಿದೆ. 9513668615, 8073250084

ವ್ಯಾಪಾರ
Business to Business
Business
ಜೋವರ್ ರೊಟ್ಟಿ, ರಾಗಿ ರೊಟ್ಟಿ, ಚಪಾತಿ, ಪುರಿ ಇತ್ಯಾದಿಗಳನ್ನು ತಯಾರಿಸಲು ಬೇಕಾದ ಯಂತ್ರಗಳಿಗೆ ಕರೆ ಮಾಡಿ. B K Engineers, Marathahalli, Bangalore, Ph:7676212917

ಭವಿಷ್ಯ
Astrology
★||ಕೊಳ್ಳೇಗಾಲದ ಪ್ರಖ್ಯಾತ ಮೋಡಿಮಾಂತ್ರಿಕರು||★ ನಿಮ್ಮ ಸಮಸ್ಯೆ ಯಾವುದೇಯಿದ್ದರೂ ಶ್ರೀ ಭದ್ರಕಾಳಿದೇವಿಯ ಬಲಿಷ್ಠ ಪೂಜೆಯಿಂದ ಗ್ಯಾರಂಟಿ ಪರಿಹಾರ. ವಿಶೇಷ ಸೂಚನೆ: ನಮ್ಮ ಮೋಡಿ ಸಿದ್ಧಾಂತ ತಪ್ಪದು. ಸ್ತ್ರೀ ಮೋಡಿ, ಪುರುಷ ಮೋಡಿಗಾರರು. ಮೋಡಿ ಕೃಷ್ಣಪ್ಪ. 9880877747

★ಕೊಳ್ಳೇಗಾಲದಿಂದ★ ನೇರಪರಿಹಾರ.ಕೊಳ್ಳೇಗಾಲದ ನಂ.1ಸ್ಪೆಷಲಿಸ್ಟ್ ಪಂಡಿತ್.ಕಾಳಿಪ್ರಸಾದ್ ಗುರೂಜಿ.9740286807 ವಿದ್ಯೆ,ಉದ್ಯೋಗ,ಸ್ತ್ರೀಪುರುಷ ಪ್ರೇಮ,ಸಂತಾನ,ವಿವಾಹ, ಶತ್ರುದೋಷ,ಸಾಲಬಾಧೆ, ವ್ಯಾಪಾರ,ಪ್ರೇತಬಾಧೆ, ದೈವದೋಷ,ನಾಗದೋಷ, ದಾಂಪತ್ಯ ಸಮಸ್ಯೆ ಇನ್ನೂ ಅನೇಕ ಕಠಿಣವಾದ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ತಿಳಿಸುತ್ತಾರೆ.#12,ಅಂಬೇಡ್ಕರ್ ಮುಖ್ಯರಸ್ತೆ,ಗೀತಭವನ,ಕೊಳ್ಳೇಗಾಲ

ನಂ.1 ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ನಂಬಿಮೋಸ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ 2ದಿನಗಳಲ್ಲಿ ಪರಿಹಾರ. 8792564467

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★ಚೌಡೇಶ್ವರಿದೇವಿ★ ಆರಾಧಕರು ಪ್ರಧಾನ ತಾಂತ್ರಿಕ್ ಮಂಜುನಾಥ್. ಪ್ರೀತಿಪ್ರೇಮ, ದಾಂಪತ್ಯ ಸಮಸ್ಯೆ, ವಶೀಕರಣ ಫೋನಿನ ಮುಖಾಂತರ ಕೆಲವೇ ನಿಮಿಷಗಳಲ್ಲಿ ಪರಿಹಾರ. 8050498041

ವಾಹನ
Four Wheelers Selling
Others
INTRA V10 ವಾಹನ ಈಗ 3.99% ಬಡ್ಡಿದರ ಲಾಭದ ಭರವಸೆಯೊಂದಿಗೆ
TATA INTRA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

3.99%* ಬಡ್ಡಿದರ / 47 ತಿಂಗಳು
₹30,000/-* ದವರೆಗೆ ಗ್ರಾಹಕರ ಕೊಡುಗೆಗಳು
ಎಕ್ಸ್‌ಚೇಂಜ್ ₹25,000/-* ದವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore -7259784441
Bangalore/Mysore 95389 35533
Tumkur/Davanagere/ Chitradurga-7829055525
Mangalore/Shivamogga/ Udupi/Hassan/ Chikkamagalur/Karwar 96208 63338
Hubli/Haveri/Gadag/Bellary/ Raichur - 9620955858
Bagalkot/Bijapur/Gulbarga/ Belgaum/Bidar 8095202223
* ಷರತ್ತುಗಳು ಅನ್ವಯಿಸುತ್ತದೆ.

ವೈವಾಹಿಕ
Brides Wanted
Second Marriage
ಉತ್ತಮ ವರಮಾನ ಇರುವ ಬಿಸಿನೆಸ್ ಮಾಡುತ್ತಿರುವ ವರನಿಗೆ ಎರಡನೇ ವಿವಾಹಕ್ಕಾಗಿ ವಧು ಬೇಕಾಗಿದೆ. PH: 8296595088

ವೈಯಕ್ತಿಕ
Announcements
ROYAL CONSULTATION by Qualified Ayurveda Specialist. Contact: 76195 53245 For VIP's & VVIP's

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH ಪ್ರಜಾವಾಣಿ
Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

24 ಗಂಟೆ: 921 ಮಂದಿಗೆ ಕೋವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳ ಸಂಖ್ಯೆ ಶನಿವಾರ ಮತ್ತಷ್ಟು ಏರಿಕೆ ಕಂಡಿದ್ದು, 921 ಪ್ರಕರಣಗಳು ವರದಿಯಾಗಿವೆ. ಎರಡು ತಿಂಗಳಲ್ಲಿ 24 ಗಂಟೆಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ.

ರಾಜ್ಯದಲ್ಲಿ ಜ.8ರಂದು 970 ಪ್ರಕರಣಗಳು ದೃಢಪಟ್ಟಿದ್ದವು. ಬಳಿಕ ಪ್ರಕರಣಗಳ ಸಂಖ್ಯೆ ಇಳಿಮುಖವಾಗಿತ್ತು. ಎರಡು ವಾರಗಳಿಂದ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದುಕೊಂಡಿದೆ. ನಾಲ್ಕು ದಿನಗಳ ಅವಧಿಯಲ್ಲಿ 3,297 ಪ್ರಕರಣಗಳು ವರದಿಯಾಗಿವೆ. ಈ ತಿಂಗಳ 13 ದಿನಗಳ ಅವಧಿಯಲ್ಲಿ 8,087 ಮಂದಿ ಕೊರೊನಾ ಸೋಂಕಿತರಾಗಿರುವುದು ಖಚಿತಪಟ್ಟಿದೆ. ಈ ಅವಧಿಯಲ್ಲಿ ಪ್ರತಿನಿತ್ಯ ಸರಾಸರಿ 622 ಪ್ರಕರಣಗಳು ದೃಢಪಟ್ಟಿವೆ.

ಸೋಂಕಿತರಲ್ಲಿ 992 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಸಂಖ್ಯೆ 9.38 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 8,042ಕ್ಕೆ ತಲುಪಿದೆ. ಸೋಂಕಿತರಲ್ಲಿ 123 ಮಂದಿ ತೀವ್ರ ನಿಗಾ ಘಟಕದಲ್ಲಿ ಇದ್ದಾರೆ. ಒಂದು ದಿನದ ಅವಧಿಯಲ್ಲಿ 72 ಸಾವಿರ ಮಂದಿಗೆ ಕೋವಿಡ್ ಪರೀಕ್ಷೆ ಮಾಡಲಾಗಿದೆ. ಈವರೆಗೆ 1.97 ಕೋಟಿ ಪರೀಕ್ಷೆಗಳನ್ನು ನಡೆಸಲಾಗಿದೆ.

ಒಂದು ಸಾವು ದೃಢ: ರಾಜ್ಯದಲ್ಲಿ ಶನಿವಾರ ಒಂದೇ ಒಂದು ಸಾವಿನ ಪ್ರಕರಣ ವರದಿಯಾಗಿರುವುದು ಸಮಾಧಾನಕರ ಸಂಗತಿ. ಮೈಸೂರಿನಲ್ಲಿ 40 ವರ್ಷದ ಮಹಿಳೆಯೊಬ್ಬರು ಸಾವಿಗೀಡಾಗಿದ್ದಾರೆ. ಜ.10ರ ಬಳಿಕ ಇದೇ ಮೊದಲ ಬಾರಿಗೆ ಬೆಂಗಳೂರಿನಲ್ಲಿ 24 ಗಂಟೆಯ ಅವಧಿಯಲ್ಲಿ ಯಾವುದೇ ಸಾವಿನ ಪ್ರಕರಣ ವರದಿಯಾಗಿಲ್ಲ. ಆದರೆ, ಸೋಂಕಿತರ ಸಂಖ್ಯೆ ಹೆಚ್ಚಳವಾಗಿದೆ. 630 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 4.10 ಲಕ್ಷ ದಾಟಿದೆ. ಮೈಸೂರಿನಲ್ಲಿ ಮತ್ತೆ 47 ಪ್ರಕರಣಗಳು ದೃಢಪಟ್ಟಿವೆ. ಅಲ್ಲಿ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 54,414ಕ್ಕೆ ತಲುಪಿದೆ. ದಕ್ಷಿಣ ಕನ್ನಡದಲ್ಲಿ 43, ತುಮಕೂರಿನಲ್ಲಿ 38, ಕಲಬುರ್ಗಿಯಲ್ಲಿ 35 ಪ್ರಕರಣಗಳು ಹೊಸದಾಗಿ ದೃಢಪಟ್ಟಿವೆ.

ರಾಜ್ಯದಲ್ಲಿ ಶನಿವಾರ 1,093 ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ವಿತರಣೆ ಅಭಿಯಾನ ನಡೆದಿದ್ದು, 39,253 ಮಂದಿಗೆ ಲಸಿಕೆ ವಿತರಣೆ ಮಾಡಲಾಗಿದೆ. ಇವರಲ್ಲಿ 24,824 ಮಂದಿ ಹಿರಿಯ ನಾಗರಿಕರು ಸೇರಿದ್ದಾರೆ.

ಈವರೆಗೆ 13.40 ಲಕ್ಷ ಡೋಸ್ ಲಸಿಕೆಯನ್ನು ಫಲಾನುಭವಿಗಳಿಗೆ ನೀಡಲಾಗಿದೆ. 4.83 ಲಕ್ಷ ಆರೋಗ್ಯ ಕಾರ್ಯಕರ್ತರು ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಇವರಲ್ಲಿ 2.86 ಲಕ್ಷ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ. 60 ವರ್ಷ ಮೇಲ್ಪಟ್ಟವರಲ್ಲಿ 3.17 ಲಕ್ಷ ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. 45ರಿಂದ 60 ವರ್ಷದೊಳಗಿನ ಕೋವಿಡೇತರ ಕಾಯಿಲೆ ಎದುರಿಸುತ್ತಿರುವವರಲ್ಲಿ 62,203 ಮಂದಿ ಲಸಿಕೆ ಪಡೆದುಕೊಂಡಿದ್ದಾರೆ.

ವಲಸೆ ವೀಸಾ ನೀತಿ ವಿರುದ್ಧ ಆಕ್ಷೇಪಣೆ: ಮರುಪರಿಶೀಲನೆಗೆ ನಿರ್ಧಾರ

ವಾಷಿಂಗ್ಟನ್ (ಪಿಟಿಐ): ವಿದೇಶಿ ಉದ್ಯೋಗಿಗಳಿಗೆ ನೀಡುವ ಎಚ್–1ಬಿ ವೀಸಾ ಸೇರಿದಂತೆ ಡೊನಾಲ್ಡ್ ಟ್ರಂಪ್ ಆಡಳಿತದಲ್ಲಿ ರದ್ದುಗೊಳಿಸಿದ್ದ ಮೂರು ನೀತಿಗಳ ಕುರಿತು ಸಲ್ಲಿಸುವ ಆಕ್ಷೇಪಣೆಗಳು ಮತ್ತು ಪ್ರತಿಕೂಲ ನಿರ್ಧಾರಗಳನ್ನು ಮರುಪರಿಶೀಲಿಸಲು ಸಿದ್ಧವಿರುವುದಾಗಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಆಡಳಿತ ತಿಳಿಸಿದೆ.

ಬೈಡನ್ ಆಡಳಿತದ ಈ ನಡೆಯಿಂದಾಗಿ ಎಚ್1ಬಿ ವೀಸಾ ವಿಚಾರದಲ್ಲಿ ಕಠಿಣ ಪರಿಸ್ಥಿತಿ ಎದುರಿಸುತ್ತಿದ್ದ ಭಾರತೀಯ ಐಟಿ ವೃತ್ತಿಪರರಿಗೆ ರಕ್ಷಣೆ ದೊರೆಯುವ ಸಾಧ್ಯತೆ ಇದೆ.

'ವಲಸೆ ನೀತಿ ಸೇರಿದಂತೆ ಈ ಹಿಂದೆ ರದ್ದುಗೊಳಿಸಲಾದ ನೀತಿಗಳ ಕುರಿತು ಆಕ್ಷೇಪಣೆಗಳನ್ನು ಸಲ್ಲಿಸಬಹುದು. ಅದನ್ನು ಮರುಪರಿಶೀಲಿಸಲಾಗುತ್ತದೆ' ಎಂದು ಅಮೆರಿಕ ಪೌರತ್ವ ಮತ್ತು ವಲಸೆ ಸೇವೆಗಳ (ಯುಎಸ್‌ಸಿಐಎಸ್) ಇಲಾಖೆ ಶುಕ್ರವಾರ ಪ್ರಕಟಿಸಿದೆ.

ಉತ್ತರಪ್ರದೇಶದ ಲಖನೌದ ಟಿ.ಎಸ್. ಮಿಶ್ರಾ ವೈದ್ಯಕೀಯ ಕೇಂದ್ರದಲ್ಲಿ ಶನಿವಾರ ಬಿಎಸ್‌ಪಿ ಅಧ್ಯಕ್ಷೆ ಮಾಯಾವತಿ ಕೋವಿಡ್–19 ಲಸಿಕೆಯ ಮೊದಲ ಡೋಸ್ ಪಡೆದರು (ಪಿಟಿಐ ಚಿತ್ರ)

ಲಸಿಕೆ ಹಾಕಿಸಿಕೊಳ್ಳುವಂತೆ ಜಾಗೃತಿ, ಪ್ರಧಾನಿಗೆ ವಿಡಿಯೊ ಟ್ಯಾಗ್ ಮಾಡಿದ ಸಚಿವ

ಡಂಗುರ ಪ್ರಚಾರಕ್ಕೆ ಆರೋಗ್ಯ ಸಚಿವ ಮೆಚ್ಚುಗೆ

ಪ್ರಜಾವಾಣಿ ವಾರ್ತೆ

ನರೇಗಲ್: ಸಮೀಪದ ಜಕ್ಕಲಿ ಗ್ರಾಮದ ಜಾನಪದ ಕಲಾವಿದ ವೀರಪ್ಪ ಕಾಳಿ ಕೋವಿಡ್ ಲಸಿಕೆ ಪಡೆಯುವಂತೆ ಶನಿವಾರ ಮಧ್ಯಾಹ್ನ ಗ್ರಾಮದ ತುಂಬಾ ಡಂಗುರ ಬಾರಿಸಿ ಕೂಗಿ ಹೇಳುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದ್ದಾರೆ.

ಆ ವಿಡಿಯೊವನ್ನು ಆರೋಗ್ಯ ಸಚಿವ ಡಾ. ಸುಧಾಕರ್ ಕೆ. ಅವರು ತಮ್ಮ ಟ್ವಿಟರ್ ಹಾಗೂ ಫೇಸ್‌ಬುಕ್ ಖಾತೆಯಲ್ಲಿ ಅಪ್ಲೋಡ್ ಮಾಡುವ ಮೂಲಕ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಅಷ್ಟೇ ಅಲ್ಲದೆ ವಿಡಿಯೊವನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಟ್ಯಾಗ್ ಮಾಡಿದ್ದಾರೆ.

ಡಂಗುರ ಬಾರಿಸುತ್ತಿರುವ ಜಾನಪದ ಕಲಾವಿದ ವೀರಪ್ಪ ಕಾಳಿ

ಗದಗ ಜಿಲ್ಲೆಯ ಜಕ್ಕಲಿ ಗ್ರಾಮದ ಹಳ್ಳಿಯಲ್ಲಿ ಲಸಿಕೆ ಪಡೆಯುವುದರ ಬಗ್ಗೆ ಗ್ರಾಮೀಣ ಸಾಂಪ್ರದಾಯಕ ಪದ್ಧತಿ ಮೂಲಕ ಡಂಗುರ ಬಾರಿಸಿ ಜಾಗೃತಿ ಮೂಡಿಸುತ್ತಿರುವ ದೃಶ್ಯ ಪ್ರೇರಣಾದಾಯಕವಾಗಿದೆ. ಇದೇ ಮಾದರಿಯಲ್ಲಿ ಕೋವಿಡ್–19 ಲಸಿಕೆಯ ಕುರಿತು ಜನಾಂದೋಲನ ದೇಶಾದ್ಯಂತ ಆಗಬೇಕು ಎಂದು ಅವರು ಬರೆದುಕೊಂಡಿದ್ದಾರೆ.

'ನರೇಗಲ್ ಆರೋಗ್ಯ ಕೇಂದ್ರದ ಸಿಬ್ಬಂದಿ ಹಾಗೂ ನಮ್ಮೂರಿನ ಗ್ರಾಮ ಪಂಚಾಯ್ತಿ ಸಿಬ್ಬಂದಿ ಕೋವಿಡ್ ಲಸಿಕೆ ಹಾಕಿಸಿಕೊಳ್ಳುವಂತೆ ಡಂಗುರ ಬಾರಿಸಿ ಜಾಗೃತಿ ಮೂಡಿಸು ಎಂದು ಹೇಳಿದರು. ಅದರಂತೆ ನಾನು ಮಾಡಿದೆ. ಆದರೆ ರಾಜ್ಯ ಆರೋಗ್ಯ ಸಚಿವರು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ, ನನ್ನ ವಿಡಿಯೊ ಪ್ರಧಾನಿಯವರಿಗೆ ಟ್ಯಾಗ್ ಆಗುತ್ತದೆ ಎಂದು ಊಹಿಸಿರಲಿಲ್ಲ. ಸದ್ಯದಲ್ಲೇ ನಾನು ನರೇಗಲ್ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಲಸಿಕೆ ಪಡೆಯುತ್ತೇನೆ' ಎಂದು ವೀರಪ್ಪ ಕಾಳಿ aವರು ಹೇಳಿದರು.

ವರ್ಚುವಲ್ 'ಕ್ವಾಡ್' ಶೃಂಗ ಸಭೆಯಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ, ಜಪಾನ್ ಪ್ರಧಾನಿ ಯೋಶಿಹಿಡಿ ಸುಗಾ, ಆಸ್ಟ್ರೇಲಿಯಾದ ಪ್ರಧಾನಿ ಸ್ಕಾಟ್ ಮಾರಿಸನ್ ಭಾಗವಹಿಸಿದ್ದರು —ಎಪಿ ಚಿತ್ರ

'ಕ್ವಾಡ್' ರಾಷ್ಟ್ರಗಳ ಸಭೆಯಲ್ಲಿ ಚೀನಾ ಸವಾಲು ಕುರಿತ ಚರ್ಚೆ

ವಾಷಿಂಗ್ಟನ್ (ಪಿಟಿಐ): ಭಾರತ, ಅಮೆರಿಕ, ಆಸ್ಟ್ರೇಲಿಯಾ ಮತ್ತು ಜಪಾನ್ ದೇಶಗಳನ್ನೊಳಗೊಂಡ 'ಕ್ವಾಡ್' ರಾಷ್ಟ್ರಗಳ ಮುಖ್ಯಸ್ಥರ ಸಭೆಯಲ್ಲಿ, ಚೀನಾದಿಂದ ಎದುರಾಗಿರುವ ಸವಾಲುಗಳ ಬಗ್ಗೆ ಚರ್ಚೆ ನಡೆದಿದೆ.

ಕೋವಿಡ್ 19 ಹಿನ್ನೆಲೆಯಲ್ಲಿ ಶುಕ್ರವಾರ ನಡೆದ ವರ್ಚುವಲ್ ಸಭೆಯಲ್ಲಿ ಅಮೆರಿಕ ಅಧ್ಯಕ್ಷ ಜೋ ಬಿಡೆನ್, ಭಾರತದ ಪ್ರಧಾನಿ ನರೇಂದ್ರ ಮೋದಿ, ಆಸ್ಟ್ರೇಲಿಯಾದ ಪ್ರಧಾನಿ ಸ್ಕಾಟ್ ಮಾರಿಸನ್ ಮತ್ತು ಜಪಾನಿನ ಪ್ರಧಾನಿ ಯೋಶಿಹಿಡೆ ಸುಗಾ ಭಾಗವಹಿಸಿದ್ದರು.

ಇದನ್ನು ಐತಿಹಾಸಿಕ ವರ್ಚುವಲ್ 'ಕ್ವಾಡ್' ಶೃಂಗಸಭೆ ಎಂದು ಬಣ್ಣಿಸಲಾಗಿದೆ.

ಸಭೆ ನಂತರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸುಲ್ಲಿವಾನ್, 'ಸಭೆಯಲ್ಲಿ ದಕ್ಷಿಣ ಮತ್ತು ಪೂರ್ವ ಚೀನಾ ಸಮುದ್ರ ಮಾರ್ಗಗಳಲ್ಲಿ ಸಂಚಾರ, ಉತ್ತರ ಕೊರಿಯಾದ ಪರಮಾಣು ಸಮಸ್ಯೆ ಮತ್ತು ಮ್ಯಾನ್ಮಾರ್‌ನಲ್ಲಿ ನಡೆದ ಸೇನಾ ದಂಗೆ ಮತ್ತು ಹಿಂಸಾಚಾರ ಸೇರಿದಂತೆ ಪ್ರಮುಖ ಪ್ರಾದೇಶಿಕ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು' ಎಂದರು.

'ಪ್ರಸ್ತುತ ಎದುರಿಸುತ್ತಿರುವ ಕಠಿಣ ಪರಿಸ್ಥಿತಿಯ ಹೊರತಾಗಿಯೂ ಭವಿಷ್ಯದ ಆಶಾವಾದದೊಂದಿಗೆ ಒಂದಷ್ಟು ಮಹತ್ವದ ಮಾತುಕತೆಗಳು ನಡೆದವು' ಎಂದು ಸುಲ್ಲಿವಾನ್ ಹೇಳಿದರು.

'ನಾಲ್ಕು ರಾಷ್ಟ್ರಗಳ ನಾಯಕರು ಚೀನಾ ಒಡ್ಡುತ್ತಿರುವ ಸವಾಲುಗಳ ಕುರಿತು ಚರ್ಚಿಸಿದರು. ಚೀನಾದ ಬಗ್ಗೆ ಯಾರಲ್ಲೂ ಯಾವುದೇ ರೀತಿಯ ಭ್ರಮೆ ಇಲ್ಲ ಎಂಬುದು ಸಭೆಯಲ್ಲಿ ಸ್ಪಷ್ಟವಾಗಿತ್ತು' ಎಂದು ಅವರು ತಿಳಿಸಿದರು.

ಭಾರತದಿಂದ 100 ಕೋಟಿ ಲಸಿಕೆ ಉತ್ಪಾದನೆ –ಅಮೆರಿಕ

ವಾಷಿಂಗ್ಟನ್ (ಪಿಟಿಐ): ಇಂಡೊ–ಪೆಸಿಫಿಕ್ ವಲಯಕ್ಕೆ ಕೋವಿಡ್ ಲಸಿಕೆಯ ಬಲ ಸಿಗಲಿದ್ದು 2022ರ ಅಂತ್ಯಕ್ಕೆ ಅಮೆರಿಕ, ಜಪಾನ್, ಆಸ್ಟ್ರೇಲಿಯಾ ದೇಶಗಳ ಜಂಟಿ ಉಪಕ್ರಮದಲ್ಲಿ ಭಾರತ 100 ಕೋಟಿಗೂ ಹೆಚ್ಚು ಕೋವಿಡ್ ಲಸಿಕೆಯನ್ನು ಉತ್ಪಾದನೆ ಮಾಡಲಿದೆ. ಕ್ವಾಡ್ ಸಭೆಯಲ್ಲಿ ಭಾರತದ ಲಸಿಕೆ ಜಾಗತಿಕವಾಗಿ ಹೊಸ ಆಯಾಮ ಪಡೆದಿದೆ ಎಂದು ಅಮೆರಿಕ ತಿಳಿಸಿದೆ.



ಕೋವಿಡ್ ಕಾಲದಲ್ಲೂ ಅದಾನಿ ಸಂಪತ್ತು ವೃದ್ಧಿ ಹೇಗೆ: ರಾಹುಲ್

ರಾಹುಲ್

ನವದೆಹಲಿ (ಪಿಟಿಐ): ಕೋವಿಡ್-19 ಸಾಂಕ್ರಾಮಿಕದ ಸಂದರ್ಭದಲ್ಲಿ ಎಲ್ಲರೂ ಜೀವನ ಸಾಗಿಸಲು ಹೆಣಗಾಡುತ್ತಿರುವಾಗ ಉದ್ಯಮಿ ಗೌತಮ್ ಅದಾನಿ ಅವರು ತಮ್ಮ ಸಂಪತ್ತನ್ನು ಹೇಗೆ ಶೇ 50ರಷ್ಟು ಹೆಚ್ಚಿಸಿಕೊಂಡರು ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಪ್ರಶ್ನಿಸಿದ್ದಾರೆ.

ಅದಾನಿ ಅವರ ಸಂಪತ್ತು ₹ 1.18 ಲಕ್ಷ ಕೋಟಿಗಳಷ್ಟು ಹೆಚ್ಚಾಗಿದ್ದು, ಒಟ್ಟಾರೆ ನಿವ್ವಳ ಸಂಪತ್ತು 2021ರಲ್ಲಿ ₹ 3.65 ಲಕ್ಷ ಕೋಟಿಗಳಿಗೆ ಏರಿಕೆಯಾಗಿದೆ. ಜಗತ್ತಿನಲ್ಲಿ ಬೇರಾರ ಸಂಪತ್ತೂ ಇಷ್ಟು ಹೆಚ್ಚಾಗಿಲ್ಲ ಎನ್ನುವ ಬ್ಲೂಮ್‌ಬರ್ಗ್ ವರದಿಯೊಂದನ್ನು ಉಲ್ಲೇಖಿಸಿ ರಾಹುಲ್ ಗಾಂಧಿ ಈ ರೀತಿ ಟೀಕಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ರಾಹುಲ್, 2020ರಲ್ಲಿ ನಿಮ್ಮ ಸಂಪತ್ತು ಎಷ್ಟು ಹೆಚ್ಚಾಗಿದೆ? ಎಂದು ಜನರನ್ನು ಪ್ರಶ್ನಿಸಿದ್ದು, 'ಶೂನ್ಯ' ಎಂದು ಅವರೇ ಉತ್ತರ ನೀಡಿದ್ದಾರೆ. ಜೀವನ ಸಾಗಿಸಲು ನೀವು ಕಷ್ಟಪಡುತ್ತಿರುವಾಗ ಅದಾನಿ, ಅವರ ಸಂಪತ್ತು ಶೇ 50ರಷ್ಟು ಹೆಚ್ಚಾಗಿದೆ. ಇದು ಏಕೆ ಎಂದು ಹೇಳುವಿರಾ ಎಂದು ಪ್ರಶ್ನೆ ಮಾಡಿದ್ದಾರೆ.

ವರದಿಯ ಪ್ರಕಾರ, ಅದಾನಿ ಅವರ ಸಂಪತ್ತು ಗರಿಷ್ಠ ಏರಿಕೆ ಕಾಣುವ ಮೂಲಕ ಅಮೆಜಾನ್ ಸ್ಥಾಪಕ ಜೆಫ್ ಬೆಜೋಸ್ ಮತ್ತು ಟೆಸ್ಲಾ ಕಂಪನಿಯ ಸಿಇಒ ಎಲನ್ ಮಸ್ಕ್ ಅವರನ್ನೂ ಹಿಂದಿಕ್ಕಿದ್ದಾರೆ.

66 ಹೊಸ ವಿಮಾನ: ಸ್ಪೈಸ್‌ಜೆಟ್

ಮುಂಬೈ (ಪಿಟಿಐ): ಸ್ಪೈಸ್‌ಜೆಟ್ ಕಂಪನಿಯು ದೇಶಿ ಕಾರ್ಯಾಚರಣೆ ವಿಸ್ತರಿಸಲು ಉದ್ದೇಶಿಸಿದೆ. ಇದೇ ತಿಂಗಳ 28ರಿಂದ ಹೊಸ 66 ವಿಮಾನಗಳು ಹಾರಾಟ ಆರಂಭಿಸಲಿವೆ. ಇದರಲ್ಲಿ ನಿರ್ದಿಷ್ಟ ಮಾರ್ಗಗಳಲ್ಲಿ ಹೆಚ್ಚುವರಿ ಸೇವೆಗಳೂ ಇರಲಿವೆ ಎಂದು ತಿಳಿಸಿದೆ.

'ಆರ್ಥಿಕ ಬೆಳವಣಿಗೆ: ನಿರೀಕ್ಷೆಗಿಂತಲೂ ವೇಗ'

ಮುಂಬೈ (ಪಿಟಿಐ): ಆರ್ಥಿಕತೆಯ ಹಲವು ವಲಯಗಳಲ್ಲಿ ಸಕಾರಾತ್ಮಕ ಬೆಳವಣಿಗೆ ಗೋಚರಿಸುತ್ತಿದ್ದು, ದೇಶವು ಈಗಾಗಲೇ ನಿರೀಕ್ಷೆಗಿಂತಲೂ ವೇಗವಾಗಿ ಚೇತರಿಕೆ ಕಾಣಲು ಆರಂಭಿಸಿದೆ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಅನುರಾಗ್ ಠಾಕೂರ್ ಶನಿವಾರ ಹೇಳಿದ್ದಾರೆ.

ಇನ್‌ಸ್ಟಿಟ್ಯೂಟ್ ಆಫ್ ಆಕ್ಚುಯರೀಸ್ ಆಫ್ ಇಂಡಿಯಾ ಆಯೋಜಿಸಿದ್ದ ಆನ್‌ಲೈನ್ ಸಮಾವೇಶದಲ್ಲಿ ಮಾತನಾಡಿದ ಅವರು,ವಿವಿಧ ವಲಯಗಳಲ್ಲಿ ಬೆಳವಣಿಗೆ ಕಾಣುವ ಜೊತೆಗೆ ಫೆಬ್ರುವರಿಯಲ್ಲಿ ವಿದೇಶಿ ಬಂಡವಾಳ ಒಳಹರಿವು ₹ 25,787 ಕೋಟಿಗಳಷ್ಟಾಗಿದೆ ಎಂದು ಅವರು ತಿಳಿಸಿದ್ದಾರೆ.

ಸತತವಾಗಿ ಎರಡು ತ್ರೈಮಾಸಿಕಗಳಲ್ಲಿ ನಕಾರಾತ್ಮಕ ಬೆಳವಣಿಗೆ ಕಂಡಿದ್ದ ಜಿಡಿಪಿಯು ಅಕ್ಟೋಬರ್–ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 0.4ರಷ್ಟು ಸಕಾರಾತ್ಮಕ ಬೆಳವಣಿಗೆ ಕಂಡಿದೆ ಎನ್ನುವ ಮಾಹಿತಿಯು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಮಾಹಿತಿಯಲ್ಲಿದೆ.

'ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಕಳೆದ ಕೆಲವು ತಿಂಗಳುಗಳಿಂದ ಏರಿಕೆಯಾಗುತ್ತಲೇ ಇದೆ. 2021ರ ಜನವರಿಯಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟವಾದ ₹ 43.07 ಲಕ್ಷ ಕೋಟಿಗಳಿಗೆ ತಲುಪಿತ್ತು.

'ಕಳೆದ ಎಂಟು ತಿಂಗಳಿನಲ್ಲಿಯೇ ವಿದೇಶಿ ವಿನಿಮಯ ಮೀಸಲು ಸಂಗ್ರಹವು ₹ 7.30 ಲಕ್ಷ ಕೋಟಿಗಳಷ್ಟಾಗಿದೆ' ಎಂದು ಅವರು ಹೇಳಿದ್ದಾರೆ.

'ಜಾಗತಿಕ ನಿಧಿಗಳು ಮತ್ತು ಹೂಡಿಕೆದಾರರು ಭಾರತವನ್ನು ಹೂಡಿಕೆ ತಾಣವನ್ನಾಗಿ ನೋಡುತ್ತಿದ್ದಾರೆ ಎನ್ನುವುದಕ್ಕೆ ಹಾಗೂ ಭಾರತದ ಬೆಳವಣಿಗೆಯ ಬಗ್ಗೆ ಆಶಾವಾದಿಗಳಾಗಿದ್ದಾರೆ ಎನ್ನುವುದಕ್ಕೆ ಇವು ಸೂಚನೆಗಳಾಗಿವೆ' ಎಂದು ಅವರು ವಿವರಿಸಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹400
12 ಮೊಟ್ಟೆಗೆ	₹54

ಮೈಸೂರು

100 ಮೊಟ್ಟೆಗೆ	₹403

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1540 (1535)
ಸೋಯಾ (ರಿಫೈನ್ಡ್)	₹1280 (1280)
ಸೂರ್ಯಕಾಂತಿ (ರಿಫೈನ್ಡ್)	₹1810 (1810)
ಪಾಮೋಲಿನ್	₹1235 (1235)

ಮುಂಬೈ ಧಾರಣೆ

ಶೇಂಗಾ

13-3-2021

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1545)
ಒಂದು ವಾರದ ಡೆಲಿವರಿ	1545 (1540)
ಸೋಯಾ ಕಚ್ಚಾ	1260 (1260)
ಪಾಮ್ ವಾರದ ಡೆಲಿವರಿ	1233 (1233)
ಸೂರ್ಯಕಾಂತಿ ಎಣ್ಣೆ ಕಚ್ಚಾ	1770 (1770)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 44,730 (44,300)

ಬೆಳ್ಳಿ ಕೆ.ಜಿ 66,500 (65,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	900-950
ನಡುಗೋಲು	1000-1050
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	340

ಅಡಿಕೆ

ಸಿದ್ದಾಪುರ

ಬಿಳಿಗೋಟು	16099-28809
ಚಾಲಿ	33499-35599
ಕೋಕ	13369-26889
ಕೆಂಪುಗೋಟು	16699-26089
ರಾಶಿ	39889-41569
ತಟ್ಟಿಬೆಟ್ಟೆ	30899-36899

ರಾಮನಗರ ರೇಷ್ಮೆ

ಮಿಶ್ರತಳಿ (ಸಿ.ಬಿ)	285-396
ದ್ವಿತಳಿ (ಬಿ.ವಿ)	296-670

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ		ಹಾಸನ	
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	10000	9950	133.50 ಸೆಂಟ್ಸ್
ಎಸಿ	---	3900	3925	
ಆರ್‌ಪಿ	---	5200	5200	
ಆರ್‌ಸಿ	---	3050	2950	1403 ಡಾಲರ್ಸ್

ಸಂಕ್ಷಿಪ್ತ ಸುದ್ದಿ

ಪತ್ರಕರ್ತರ ಮೇಲೆ ಹಲ್ಲೆ: ಅಖಿಲೇಶ್ ಯಾದವ್ ವಿರುದ್ಧ ಪ್ರಕರಣ

ಲಖನೌ (ಪಿಟಿಐ): ಪತ್ರಕರ್ತರ ಮೇಲೆ ಹಲ್ಲೆ ಮಾಡಿದ ಆರೋಪದ ಮೇಲೆ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಮತ್ತು ಪಕ್ಷದ 20 ಕಾರ್ಯಕರ್ತರು, ಬೆಂಬಲಿಗರ ಮೇಲೆ ಪೊಲೀಸರು ಮೊಕದ್ದಮೆ ದಾಖಲಿಸಿದ್ದಾರೆ.

ಪತ್ರಕರ್ತ ನೀಡಿದ ದೂರು ಆಧರಿಸಿ ಪಕ್ವಾರಾ ಠಾಣೆಯಲ್ಲಿ ಶುಕ್ರವಾರ ರಾತ್ರಿ ಪ್ರಕರಣ ದಾಖಲಿಸಲಾಗಿದೆ. ದೂರಿನ ಪ್ರಕಾರ, ಮಾರ್ಚ್ 11ರ ಸುದ್ದಿಗೋಷ್ಠಿಯಲ್ಲಿ ಪತ್ರಕರ್ತರ ಕೆಲ ಪ್ರಶ್ನೆಗಳಿಂದ ಅಖಿಲೇಶ್ ಯಾದವ್ ಇರಿಸುಮುರಿಸಿಗೆ ಒಳಗಾದರು. ಇದರಿಂದ ವಿಚಲಿತರಾದ ಅವರ ಬೆಂಬಲಿಗರು, ಭದ್ರತಾ ಸಿಬ್ಬಂದಿ ಹಲ್ಲೆ ಮಾಡಿದರು ಎಂದು ಆರೋಪಿಸಲಾಗಿದೆ. ಹಲ್ಲೆಯಿಂದ ಗಂಭೀರವಾಗಿ ಗಾಯಗೊಂಡಿರುವ ಕೆಲ ಪತ್ರಕರ್ತರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ನವೀಕರಿಸಬಲ್ಲ ಇಂಧನ ಬಳಕೆಗೆ ಉತ್ತೇಜನ: ಗಡ್ಕರಿ

ನವದೆಹಲಿ (ಪಿಟಿಐ): 'ನವೀಕರಿಸಬಲ್ಲ ಇಂಧನ ಮೂಲಗಳಿಗೆ ಉತ್ತೇಜನ ನೀಡಲು ಸರ್ಕಾರ ಬದ್ಧವಾಗಿದ್ದೆ. ಅದರಲ್ಲಿಯೂ ಮುಖ್ಯವಾಗಿ ಎಂಎಸ್‌ಎಂಇಗಳಲ್ಲಿ ಇಂತಹ ಇಂಧನ ಬಳಕೆಗೆ ಹೆಚ್ಚು ಆದ್ಯತೆ ನೀಡಲಾಗುವುದು' ಎಂದು ಎಂಎಸ್‌ಎಂಇ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

'ಆತ್ಮನಿರ್ಭರ ಭಾರತ–ಸೌರಶಕ್ತಿ ಮತ್ತು ಎಂಎಸ್‌ಎಂಇ'ಗಳಲ್ಲಿನ ಅವಕಾಶಗಳು ವಿಷಯದ ಕುರಿತು ವೆಬಿನಾರ್‌ನಲ್ಲಿ ಮಾತನಾಡಿದ ಅವರು, 'ನವೀಕರಿಸಬಲ್ಲ ಇಂಧನಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಮಹತ್ವದ ಗುರಿ ಇಟ್ಟುಕೊಂಡಿದೆ. 2030ರ ಒಳಗಾಗಿ 450 ಗಿಗಾ ವಾಟ್ ಸಾಮರ್ಥ್ಯದ ನವೀಕರಿಸಬಲ್ಲ ಇಂಧನ ಅವಳವಡಿಕೆಗೆ ನಿರ್ಧರಿಸಲಾಗಿದೆ.

ಎಂಎಸ್‌ಎಂಇಗಳಲ್ಲಿ ಹೂಡಿಕೆ ಮಾಡುವಂತೆ ವಿದೇಶಿ ಬಂಡವಳ ಹೂಡಿಕೆದಾರರನ್ನು ಆಹ್ವಾನಿಸಿದ ಅವರು, ವಿಶ್ವದ ಅತಿದೊಡ್ಡ ತಯಾರಿಕಾ ಕೇಂದ್ರವಾಗಿ ಬೆಳೆಯಲು ಹೆಚ್ಚಿನ ಅವಕಾಶಗಳನ್ನು ಇದು ಎಂಎಸ್‌ಎಂಇಗಳಿಗೆ ಒದಗಿಸಲಿದೆ ಎನ್ನುವ ಭರವಸೆ ವ್ಯಕ್ತಪಡಿಸಿದರು. ಐದು ವರ್ಷಗಳೊಳಗಾಗಿ ಆಟೊಮೊಬೈಲ್ ಕ್ಷೇತ್ರದಲ್ಲಿ ಭಾರತವು ವಿಶ್ವದಲ್ಲಿಯೇ ಪ್ರಮುಖ ತಯಾರಿಕಾ ಕೇಂದ್ರವಾಗುವ ವಿಶ್ವಾಸವನ್ನೂ ಅವರು ಹೊಂದಿದ್ದಾರೆ.

ಮಹಿಳಾ ಕ್ರಿಕೆಟ್: ಭಾರತ–ದಕ್ಷಿಣ ಆಫ್ರಿಕಾ ನಾಲ್ಕನೇ ಏಕದಿನ ಪಂದ್ಯ ಇಂದು

ಮಿಥಾಲಿ ಬಳಗಕ್ಕೆ ಜಯದ ನಿರೀಕ್ಷೆ

ಮಿಥಾಲಿ ರಾಜ್ ಹಾಗೂ ಪೂನಂ ರಾವತ್ —ಪಿಟಿಐ ಚಿತ್ರ

ಲಖನೌ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡಕ್ಕೆ ದೀರ್ಘಕಾಲದಿಂದ ಬಿರುಸಿನ ಬ್ಯಾಟರ್‌ಗಳ ಕೊರತೆ ಎದ್ದು ಕಾಣುತ್ತಿದೆ. ಆಲ್‌ರೌಂಡರ್ ದೀಪ್ತಿ ಶರ್ಮಾ ಹಾಗೂ ವಿಕೆಟ್ ಕೀಪರ್ ಬ್ಯಾಟರ್ ಸುಷ್ಮಾ ವರ್ಮಾ ಅವರಿಂದ ಈ ಸ್ಥಾನವನ್ನು ತುಂಬಿಕೊಳ್ಳುವ ನಿರೀಕ್ಷೆಯೊಂದಿಗೆ ತಂಡವು ಭಾನುವಾರ ದಕ್ಷಿಣ ಆಫ್ರಿಕಾ ವಿರುದ್ಧದ ನಾಲ್ಕನೇ ಏಕದಿನ ಪಂದ್ಯಕ್ಕೆ ಸಜ್ಜಾಗಿದೆ.

ಸರಣಿ ಜಯದ ಆಸೆಯನ್ನು ಜೀವಂತವಾಗಿರಿಸಿಕೊಳ್ಳಲು ಭಾರತಕ್ಕೆ ಈ ಪಂದ್ಯ ಗೆಲ್ಲುವುದು ಅನಿವಾರ್ಯವಾಗಿದೆ.

ಸರಣಿಯ ಮೊದಲ ಪಂದ್ಯದಲ್ಲಿ ಸೋತಿದ್ದ ಮಿಥಾಲಿ ರಾಜ್ ಬಳಗವು ಎರಡನೇ ಪಂದ್ಯದಲ್ಲಿ ಪುಟಿದೆದ್ದಿತ್ತು. ಆದರೆ ಶುಕ್ರವಾರ ನಡೆದ ಮೂರನೇ ಹಣಾಹಣಿಯಲ್ಲಿ ಆರು ರನ್‌ಗಳಿಂದ (ಡಕ್ವರ್ಥ್–ಲೂಯಿಸ್ ನಿಯಮದಡಿ) ಪ್ರವಾಸಿ ತಂಡದ ಎದುರು ನಿರಾಸೆ ಅನುಭವಿಸಿತ್ತು. ಐದು ಪಂದ್ಯಗಳ ಸರಣಿಯಲ್ಲಿ 2–1ರಿಂದ ದಕ್ಷಿಣ ಆಫ್ರಿಕಾ ಮುನ್ನಡೆ ಸಾಧಿಸಿತ್ತು. ತಿರುಗೇಟು ನೀಡುವ ವಿಶ್ವಾಸದಲ್ಲಿ ಈ ಪಂದ್ಯದಲ್ಲಿ ಭಾರತ ಕಣಕ್ಕಿಳಿಯಲಿದೆ.

ಮೂರನೇ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಆತಿಥೇಯ ತಂಡ 5 ವಿಕೆಟ್‌ಗಳಿಗೆ 248 ರನ್‌ಗಳ ಸವಾಲಿನ ಮೊತ್ತ ಕಲೆಹಾಕಿತ್ತು. ಪ್ರವಾಸಿ ತಂಡವು ಆರಂಭಿಕ ಬ್ಯಾಟರ್ ಲಿಜೆಲಿ ಲೀ ಅವರ ಅಮೋಘ ಶತಕದ(132) ನೆರವಿನಿಂದ ಜಯಿಸಿತ್ತು.

ಭಾರತದ ಇನಿಂಗ್ಸ್‌ನ ವೇಳೆ ಉಪನಾಯಕಿ ಹರ್ಮನ್‌ಪ್ರೀತ್ ಕೌರ್ ಔಟಾದ ಬಳಿಕ, ಕೊನೆಯ 30 ಎಸೆತಗಳಲ್ಲಿ ಕೇವಲ 27 ರನ್‌ಗಳು ದಾಖಲಾಗಿದ್ದವು. ಈ 'ಡೆತ್' ಓವರ್‌ಗಳಲ್ಲಿ ಉತ್ತಮ ಆಟವಾಡುವ ಸಾಮರ್ಥ್ಯವನ್ನು ತಂಡ ವೃದ್ಧಿಸಿಕೊಳ್ಳಬೇಕಿದೆ. ಇನ್ನು ಒಂದು ವರ್ಷಕ್ಕಿಂತ ಕಡಿಮೆ ಅವಧಿಯಲ್ಲಿ ವಿಶ್ವಕಪ್ ಟೂರ್ನಿ ಇರುವುದರಿಂದ ತಂಡಕ್ಕೆ ಇದು ಅಗತ್ಯವೂ ಆಗಿದೆ.

'ಪಂದ್ಯದ ಕೊನೆಯ ಹತ್ತು ಓವರ್‌ಗಳಲ್ಲಿ ಉತ್ತಮವಾಗಿ ಬ್ಯಾಟ್ ಬೀಸುವ ಆಟಗಾರ್ತಿಯರ ಅಗತ್ಯ ನಮಗಿದೆ. ಈ ಹಂತದಲ್ಲಿ ನಾವು ಇನ್ನಷ್ಟು ಸುಧಾರಣೆ ಕಾಣಬೇಕಿದೆ. ಹರ್ಮನ್‌ಪ್ರೀತ್ ಕೌರ್ ಹಾಗೂ ದೀಪ್ತಿ ಶರ್ಮಾ ಆ ಸ್ಥಾನಗಳನ್ನು ನಿಭಾಯಿಸಬಲ್ಲರು' ಎಂದು ಮಿಥಾಲಿ ರಾಜ್ ಶುಕ್ರವಾರ ಹೇಳಿದ್ದರು.

ದೀಪ್ತಿ ಶರ್ಮಾ ಅವರು ಭಾರತ ತಂಡದ ಪ್ರಮುಖ ಆಟಗಾರ್ತಿಯರಲ್ಲಿ ಒಬ್ಬರು. ಆದರೆ ಸ್ಫೋಟಕ ಆಟವಾಡುವುದರಲ್ಲಿ ಅವರು ಇನ್ನಷ್ಟು ಪಳಗಬೇಕಿದೆ. ಯುವ ಆಟಗಾರ್ತಿ ಶೆಫಾಲಿ ವರ್ಮಾ ಅವರನ್ನು ಏಕದಿನ ಸರಣಿಯಿಂದ ಆಯ್ಕೆ ಸಮಿತಿಯು ಹೊರಗಿಟ್ಟಿರುವುದು ಕಳವಳದ ಸಂಗತಿಯಾಗಿದೆ.

ಮಿಥಾಲಿ ರಾಜ್ ಬ್ಯಾಟಿಂಗ್‌ನಲ್ಲಿ ಹಾಗೂ ಜೂಲನ್ ಗೋಸ್ವಾಮಿ (ಇದುವರೆಗೆ ಎಂಟು ವಿಕೆಟ್) ಬೌಲಿಂಗ್‌ನಲ್ಲಿ ಕೊಡುಗೆ ನೀಡುತ್ತಿದ್ದಾರೆ. ಜೂಲನ್ ಅವರಿಗೆ ಕರ್ನಾಟಕದ ಸ್ಪಿನ್ನರ್ ರಾಜೇಶ್ವರಿ ಗಾಯಕವಾಡ್ ಹಾಗೂ ಮಾನಸಿ ಜೋಷಿ ಸಹಕಾರ ನೀಡುತ್ತಿದ್ದಾರೆ.

ಐದು ಪಂದ್ಯಗಳ ಸರಣಿಯಲ್ಲಿ 2–1ರಿಂದ ಮುನ್ನಡೆ ಸಾಧಿಸಿರುವ ದಕ್ಷಿಣ ಆಫ್ರಿಕಾ ಆತ್ಮವಿಶ್ವಾಸದಲ್ಲಿದ್ದು, ಸರಣಿ ಜಯದ ಕನಸು ಕಾಣುತ್ತಿದೆ.

ಪಂದ್ಯ ಆರಂಭ: ಬೆಳಿಗ್ಗೆ 9 ಗಂಟೆ
ಸ್ಥಳ: ಏಕಾನ ಕ್ರೀಡಾಂಗಣ, ಲಖನೌ
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಪಂಜಾಬ್ ಕಿಂಗ್ಸ್‌ಗೆ ಡೆಮಿಯನ್ ಬೌಲಿಂಗ್ ಕೋಚ್

ಮುಂಬೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಫ್ರಾಂಚೈಸ್ ಪಂಜಾಬ್ ಕಿಂಗ್ಸ್ ತಂಡವು ಆಸ್ಟ್ರೇಲಿಯಾದ ಡೆಮಿಯನ್ ರೈಟ್ ಅವರನ್ನು ಬೌಲಿಂಗ್ ಕೋಚ್ ಆಗಿ ನೇಮಿಸಿದೆ.

ರೈಟ್ ಅವರು ಆಸ್ಟ್ರೇಲಿಯಾದಲ್ಲಿ ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ ಅನುಭವ ಹೊಂದಿದ್ದಾರೆ. ಬಾಂಗ್ಲಾದೇಶದ 19 ವರ್ಷದೊಳಗಿನವರ ತಂಡಕ್ಕೂ ತರಬೇತಿ ನೀಡಿದ್ದಾರೆ. ಏಪ್ರಿಲ್ ಒಂಬತ್ತರಿಂದ ಆರಂಭವಾಗುವ ಐಪಿಎಲ್ ಟೂರ್ನಿಗಾಗಿ, ಪಂಜಾಬ್ ತಂಡದ ಮುಖ್ಯ ಕೋಚ್, ಕನ್ನಡಿಗ ಅನಿಲ್ ಕುಂಬ್ಳೆ ಮಾರ್ಗದರ್ಶನದಲ್ಲಿ ಅವರು ಕಾರ್ಯನಿರ್ವಹಿಸಲಿದ್ದಾರೆ.

ಆಸ್ಟ್ರೇಲಿಯಾದ ಬಿಗ್ ಬ್ಯಾಷ್ ಲೀಗ್‌ನಲ್ಲಿ ಆಡುವ ಹೋಬರ್ಟ್ ಹರಿಕೇನ್ಸ್, ಮೆಲ್ಬರ್ನ್ ಸ್ಟಾರ್ಸ್ ಅಲ್ಲದೆ ನ್ಯೂಜಿಲೆಂಡ್ ತಂಡದ ಬೌಲಿಂಗ್ ಕೋಚ್ ಆಗಿಯೂ ಅವರು ಕಾರ್ಯನಿರ್ವಹಿಸಿದ್ದಾರೆ. ಪಂಜಾಬ್ ತಂಡದ ನೆರವು ಸಿಬ್ಬಂದಿಯಾಗಿ ಸಹಾಯಕ ಕೋಚ್ ಆ್ಯಂಡಿ ಫ್ಲಾವರ್, ಬ್ಯಾಟಿಂಗ್ ಕೋಚ್ ವಾಸೀಂ ಜಾಫರ್ ಹಾಗೂ ಫೀಲ್ಡಿಂಗ್ ಕೋಚ್ ಜಾಂಟಿ ರೋಡ್ಸ್ ಇದ್ದಾರೆ.

ಟೆನಿಸ್: ಪ್ರಜ್ಞೇಶ್‌ಗೆ ಸೋಲುಣಿಸಿದ ಯೂಕಿ

ಯೂಕಿ ಭಾಂಬ್ರಿ–ಪಿಟಿಐ ಚಿತ್ರ

ದುಬೈ (ಪಿಟಿಐ): ಪ್ರಜ್ಞೇಶ್ ಗುಣೇಶ್ವರನ್ ಅವರನ್ನು ಮಣಿಸುವ ಮೂಲಕ ಭಾರತದ ಯೂಕಿ ಭಾಂಬ್ರಿ ದುಬೈ ಡ್ಯೂಟಿ ಫ್ರಿ ಟೆನಿಸ್ ಚಾಂಪಿಯನ್‌ಷಿಪ್‌ನ ಅರ್ಹತಾ ಸುತ್ತಿನಲ್ಲಿ ಶುಭಾರಂಭ ಮಾಡಿದರು. ಇಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಅವರು ಶನಿವಾರ 6–1, 6–4ರಿಂದ ಗೆದ್ದರು.

ಭಾರತದವರೇ ಆದ ಪ್ರಜ್ಞೇಶ್ ಎದುರು ಆಡಿದ ಈ ಹಿಂದಿನ ಮೂರೂ ಪಂದ್ಯಗಳಲ್ಲಿ ಯೂಕಿ ಸೋಲು ಕಂಡಿಲ್ಲ. 2017ರಲ್ಲಿ ಎರಡು ಬಾರಿ (ಬೆಂಗಳೂರು ಹಾಗೂ ಉಜ್ಬೆಕಿಸ್ತಾನದ ಕರ್ಷಿಯಲ್ಲಿ) ಎಡಗೈ ಆಟಗಾರ ಪ್ರಜ್ಞೇಶ್, ಯೂಕಿ ಎದುರು ನಿರಾಸೆ ಅನುಭವಿಸಿದ್ದರು.

ಗಾಯದ ಹಿನ್ನೆಲೆಯಲ್ಲಿ ಎರಡು ವರ್ಷಗಳಿಂದ ಯೂಕಿ ಸ್ಪರ್ಧಾತ್ಮಕ ಟೆನಿಸ್ ಆಡಿರಲಿಲ್ಲ. ಇತ್ತೀಚೆಗೆ ನಡೆದ ಸಿಂಗಪುರ ಓಪನ್ ಟೂರ್ನಿಯಲ್ಲಿ ಆಡುವ ಮೂಲಕ ಕಣಕ್ಕೆ ಮರಳಿದ್ದರು.

ಯೂಕಿ ಅವರು ಮುಂದಿನ ಪಂದ್ಯದಲ್ಲಿ ಭಾರತದ ರಾಮ್‌ಕುಮಾರ್ ರಾಮನಾಥನ್ ಎದುರು ಸೆಣಸಲಿದ್ದಾರೆ.

ಮೊದಲ ಸುತ್ತಿನ ಮತ್ತೊಂದು ಪಂದ್ಯದಲ್ಲಿ ರಾಮ್‌ಕುಮಾರ್ 6-4-6-4ರಿಂದ ಆರನೇ ಶ್ರೇಯಾಂಕದ, ರಷ್ಯಾ ಆಟಗಾರ ಎವಜೆನಿ ಡಾನ್‌ಸ್ಕೊಯ್ ಅವರನ್ನು ಮಣಿಸಿದರು.

ಎರಡನೇ ಸುತ್ತಿನ ಪಂದ್ಯದಲ್ಲಿ ಇಬ್ಬರೂ ಭಾರತದ ಆಟಗಾರರೇ ಮುಖಾಮುಖಿಯಾಗುತ್ತಿರುವುದರಿಂದ ಕನಿಷ್ಠ ಒಬ್ಬರು ಟೂರ್ನಿಯ ಮುಖ್ಯ ಸುತ್ತು ಪ್ರವೇಶಿಸುವುದು ಖಚಿತವಾಗಿದೆ.

ಮಹಿಳಾ ಕ್ರಿಕೆಟ್: ಕರ್ನಾಟಕಕ್ಕೆ ಮಣಿದ ದೆಹಲಿ

ಬೆಂಗಳೂರು: ಸವಾಲಿನ ಮೊತ್ತವನ್ನು ದಿಟ್ಟವಾಗಿ ಬೆನ್ನಟ್ಟಿದ ಕರ್ನಾಟಕ ಮಹಿಳಾ ತಂಡದವರು ಬಿಸಿಸಿಐ ಮಹಿಳಾ ಏಕದಿನ ಕ್ರಿಕೆಟ್ ಟ್ರೋಫಿಯ ಪಂದ್ಯದಲ್ಲಿ ದೆಹಲಿ ತಂಡವನ್ನು ನಾಲ್ಕು ವಿಕೆಟ್‌ಗಳಿಂದ ಮಣಿಸಿದರು.

ಚೆನ್ನೈನ ಟಿ.ಐ.ಮುರುಗಪ್ಪ ಮೈದಾನದಲ್ಲಿ ಶನಿವಾರ ನಡೆದ ಹಣಾಹಣಿಯಲ್ಲಿ ಮೊದಲ ಬ್ಯಾಟಿಂಗ್ ಮಾಡಿದ ದೆಹಲಿ ತಂಡ ಶ್ವೇತಾ ಶೆರಾವತ್ (57; 98 ಎಸೆತ, 10 ಬೌಂಡರಿ) ಅರ್ಧಶತಕದ ನೆರವಿನಿಂದ 184 ರನ್ ಕಲೆ ಹಾಕಿತು. ಕರ್ನಾಟಕ 47.3 ಓವರ್‌ಗಳಲ್ಲಿ ಗುರಿ ಮುಟ್ಟಿತು.

ದಿವ್ಯಾ ಜಿ (40; 56 ಎ, 7 ಬೌಂ) ಮತ್ತು ರಕ್ಷಿತಾ (ಔಟಾಗದೆ 35; 74 ಎ, 3 ಬೌಂ) ಉತ್ತಮ ಬ್ಯಾಟಿಂಗ್ ಪ್ರದರ್ಶಿಸಿದರು.

ಸಂಕ್ಷಿಪ್ತ ಸ್ಕೋರು: ದೆಹಲಿ: 50 ಓವರ್‌ಗಳಲ್ಲಿ 184 (ಶ್ವೇತಾ ಶೆರಾವತ್ 57, ವಂದನಾ ಚತುರ್ವೇದಿ 35, ನೇಹಾ ಚಿಲ್ಲಾರ್ ಔಟಾಗದೆ 22; ಸಹನಾ ಪವಾರ್ 29ಕ್ಕೆ2, ಚಂದು ವಿ 23ಕ್ಕೆ3); ಕರ್ನಾಟಕ: 47.3 ಓವರ್‌ಗಳಲ್ಲಿ 6ಕ್ಕೆ 186 (ಶುಭಾ ಎಸ್ 36, ದಿವ್ಯಾ ಜಿ 40, ರಕ್ಷಿತಾ ಔಟಾಗದೆ 35, ನಿಕ್ಕಿ ಪ್ರಸಾದ್ 25; ಲಲಿತಾ ಶರ್ಮಾ 25ಕ್ಕೆ3).

ಸಚಿನ್, ಯುವಿ ಭರ್ಜರಿ ಬ್ಯಾಟಿಂಗ್

ರಾಯಪುರ: ಸಚಿನ್ ತೆಂಡೂಲ್ಕರ್ ಹಾಗೂ ಯುವರಾಜ್ ಸಿಂಗ್ ಬಿರುಸಿನ ಬ್ಯಾಟಿಂಗ್ ನೆರವಿನಿಂದ ಭಾರತ ಲೆಜೆಂಡ್ಸ್ ತಂಡವು ರಸ್ತೆ ಸುರಕ್ಷತಾ ಜಾಗೃತಿಗಾಗಿ ನಡೆಯುತ್ತಿರುವ ವಿಶ್ವ ಸಿರೀಸ್ ಟ್ವೆಂಟಿ-20 ಟೂರ್ನಿಯಲ್ಲಿ ಶನಿವಾರ ದಕ್ಷಿಣ ಆಫ್ರಿಕಾ ಲೆಜೆಂಡ್ಸ್ ತಂಡವನ್ನು 56 ರನ್‌ಗಳಿಂದ ಸೋಲಿಸಿತು.

ಭಾರತಕ್ಕೆ ಆರಂಭದಲ್ಲೇ ವೀರೇಂದ್ರ ಸೆಹ್ವಾಗ್ (6) ವಿಕೆಟ್ ಕಳೆದುಕೊಂಡಿತು. ಎಸ್. ಬದರಿನಾಥ್ (42) ಜೊತೆ ಸೇರಿದ ಸಚಿನ್ ತೆಂಡೂಲ್ಕರ್ ಇನ್ನಿಂಗ್ಸ್ ಕಟ್ಟಿದರು. 47ರ ಹರೆಯದಲ್ಲೂ ಬಹಳ ಸಲೀಸಾಗಿ ಮೈದಾನದ ಎಲ್ಲ ದಿಕ್ಕಿಗೂ ಚೆಂಡನ್ನು ಅಟ್ಟಿದ ಸಚಿನ್ ತೆಂಡೂಲ್ಕರ್ 37 ಎಸೆತಗಳಲ್ಲಿ 60 ರನ್ ಬಾರಿಸಿದರು. ಇದರಲ್ಲಿ 9 ಬೌಂಡರಿ ಹಾಗೂ 1 ಸಿಕ್ಸರ್ ಇದ್ದವು. ಕೊನೆಯ ಹಂತದಲ್ಲಿ ಸಿಡಿಲಬ್ಬರದ ಬ್ಯಾಟಿಂಗ್ ಪ್ರದರ್ಶಿಸಿದ ಯುವಿ ಕೇವಲ 22 ಎಸೆತಗಳಲ್ಲಿ 52 ರನ್ ಗಳಿಸಿದರು. ಇದರಲ್ಲಿ ಆರು ಮನಮೋಹಕ ಸಿಕ್ಸರ್‌ಗಳು ಮತ್ತು ಎರಡು ಬೌಂಡರಿಗಳು ಸೇರಿದ್ದವು.

ಸಂಕ್ಷಿಪ್ತ ಸ್ಕೋರು: ಭಾರತ ಲೆಜೆಂಡ್ಸ್: 20 ಓವರ್‌ಗಳಲ್ಲಿ 3ಕ್ಕೆ 204 (ಸಚಿನ್ ತೆಂಡೂಲ್ಕರ್ 60, ಯುವರಾಜ್ ಸಿಂಗ್ ಔಟಾಗದೆ 52, ಎಸ್. ಬದರಿನಾಥ್ 42, ಮೊಂಡೆ ಜೊಂಡೆಕಿ 35ಕ್ಕೆ 2). **ದಕ್ಷಿಣ ಆಫ್ರಿಕಾ ಲೆಜೆಂಡ್ಸ್:** 20 ಓವರ್‌ಗಳಲ್ಲಿ 7 ವಿಕೆಟ್‌ಗೆ 148 (ಮೊರ್ನ್ ವ್ಯಾನ್ ವಿಕ್ 48, ಆ್ಯಂಡ್ರ್ಯೂ ಪುಟಿಕ್ 41.

ಮುಯ್ಯಿ ತೀರಿಸುವತ್ತ ವಿರಾಟ್ ಬಳಗದ ಚಿತ್ತ

ಭಾರತ–ಇಂಗ್ಲೆಂಡ್ ನಡುವಿನ ಟಿ20 ಕ್ರಿಕೆಟ್ ಸರಣಿಯ ಎರಡನೇ ಹಣಾಹಣಿ ಇಂದು

ಅಹಮದಾಬಾದ್ (ಪಿಟಿಐ): ಏಯಾನ್ ಮಾರ್ಗನ್ ನಾಯಕತ್ವದ ಇಂಗ್ಲೆಂಡ್ ಬಳಗ ಈಗ ಆತ್ಮವಿಶ್ವಾಸದ ಆಗಸದಲ್ಲಿ ತೇಲಾಡುತ್ತಿದೆ.

ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶುಕ್ರವಾರ ಭಾರತ ತಂಡವನ್ನು ಟಿ20 ಸರಣಿಯ ಮೊದಲ ಪಂದ್ಯದಲ್ಲಿಯೇ ಮಣಿಸಿರುವ ಖುಷಿಯಲ್ಲಿ ಮಾರ್ಗನ್ ಪಡೆ ಇದೆ. ಅದೇ ಭರದಲ್ಲಿ ಭಾನುವಾರ ನಡೆಯಲಿರುವ ಎರಡನೇ ಪಂದ್ಯದಲ್ಲಿಯೂ ಜಯದ ಕೇಕೆ ಹಾಕುವ ಉತ್ಸಾಹದಲ್ಲಿದೆ.

ಇತ್ತ ಆತಿಥೇಯರ ಬಳಗದಲ್ಲಿ ಬ್ಯಾಟಿಂಗ್ ವಿಭಾಗವನ್ನು ಬಲಪಡಿಸುವ ಕುರಿತು ಚಿಂತನ–ಮಂಥನಗಳು ನಡೆದಿವೆ. ಮೊದಲ ಪಂದ್ಯದಲ್ಲಿ ಆಡಿದ ಬ್ಯಾಟ್ಸ್‌ಮನ್‌ಗಳಿಗೆ ಮತ್ತೊಂದು ಅವಕಾಶ ಕೊಡುವ ಸಾಧ್ಯತೆ ಇದೆ. ಕೆ.ಎಲ್.ರಾಹುಲ್ ಮತ್ತು ಶಿಖರ್ ಧವನ್ ಈ ಪಂದ್ಯದಲ್ಲಿಯೂ ಇನಿಂಗ್ಸ್ ಆರಂಭಿಸಬಹುದು.

ಮೊದಲ ಪಂದ್ಯದಲ್ಲಿ ಸೊನ್ನೆ ಸುತ್ತಿದ್ದ ವಿರಾಟ್ ತಮ್ಮ ಲಯಕ್ಕೆ ಮರಳಿದರೆ ತಂಡದ ಗೆಲುವಿನ ಸಾಧ್ಯತೆ ಹೆಚ್ಚಾಗುತ್ತದೆ. ಮಧ್ಯಮ ಕ್ರಮಾಂಕದಲ್ಲಿ ರಿಷಭ್ ಪಂತ್, ಶ್ರೇಯಸ್ ಅಯ್ಯರ್ ಮತ್ತು ಹಾರ್ದಿಕ್ ಪಾಂಡ್ಯ ಉತ್ತಮ ಲಯದಲ್ಲಿದ್ದಾರೆ.

ಭಾರತ ತಂಡದ ಆಟಗಾರರು ತಾಲೀಮು ನಡೆಸಿದರು –ಪಿಟಿಐ ಚಿತ್ರ

ಜೋಫ್ರಾ ಬೌಲಿಂಗ್‌ನಲ್ಲಿ ರಿವರ್ಸ್ ಸ್ಕೂಪ್ ಶಾಟ್‌ನಲ್ಲಿ ಸಿಕ್ಸರ್ ಬಾರಿಸಿ ಗಮನ ಸೆಳೆದ ರಿಷಭ್ ಮತ್ತು ಅರ್ಧಶತಕ ಬಾರಿಸಿದ ಶ್ರೇಯಸ್ ಅವರಿಂದಾಗಿ ತಂಡವು ಸಾಧಾರಣ ಮೊತ್ತ ಗಳಿಸಿತ್ತು. ಹಾರ್ದಿಕ್ ಕೂಡ 19 ರನ್ ಗಳಿಸಿದರು. ಆದರೆ ಉಳಿದ ಬ್ಯಾಟ್ಸ್‌ಮನ್‌ಗಳು 'ಸ್ಪಿನ್ ಪಿಚ್'ನಲ್ಲಿ ಇಂಗ್ಲೆಂಡ್ ಬೌಲರ್‌ಗಳನ್ನು ಎದುರಿಸುವಲ್ಲಿ ಎಡವಿದ್ದರು. ಮೊದಲ ಪಂದ್ಯದಲ್ಲಿ ಈ ಅಂಗಳದಲ್ಲಿ ವೇಗಿ ಜೋಫ್ರಾ ಆರ್ಚರ್ ಮಿಂಚಿದ್ದರು. ತಮ್ಮ ಸ್ಲೋ ಎಸೆತಗಳ ಮೂಲಕವೇ ಮೂರು ವಿಕೆಟ್ ಕಿತ್ತು ಆತಿಥೇಯರಿಗೆ ಆಘಾತ ನೀಡಿದ್ದರು.

ಮಾರ್ಕ್ ವುಡ್ ಮತ್ತು ಸ್ಪಿನ್ನರ್ ರಶೀದ್ ಕೂಡ ಅವರಿಗೆ ತಕ್ಕ ಜೊತೆ ನೀಡಿದ್ದರು. ಹೊಸ ಚೆಂಡಿನ ಹೊಳಪು ಮಾಸುವಂತೆ ಬ್ಯಾಟ್ ಬೀಸುವ ಲಯಕ್ಕೆ ಭಾರತದ ಆರಂಭಿಕ ಜೋಡಿ ಮರಳಿದರೆ ನಂತರದ ಬ್ಯಾಟಿಂಗ್ ಕ್ರಮಾಂಕದ ಆಟ ಕಳೆಗಟ್ಟಬಹುದು.

ಬೌಲಿಂಗ್ ಪಡೆಯಲ್ಲಿ ಬದಲಾವಣೆಯ ಸಾಧ್ಯತೆ ಕಡಿಮೆ ಇದೆ. ಅಕ್ಷರ್ ಪಟೇಲ್, ಶಾರ್ದೂಲ್, ಭುವನೇಶ್ವರ್ ಮತ್ತು ವಾಷಿಂಗ್ಟನ್ ಸುಂದರ್ ಅವರು ಬ್ಯಾಟಿಂಗ್ ಕೂಡ ಚೆನ್ನಾಗಿ ಮಾಡುವ ಸಾಮರ್ಥ್ಯ ಹೊಂದಿದ್ದಾರೆ. ಯಜುವೇಂದ್ರ ಚಾಹಲ್ ಮಾತ್ರ ಬೌಲಿಂಗ್‌ನಲ್ಲಿ ಲಯಕ್ಕೆ ಮರಳುವ ಅಗತ್ಯವಿದೆ.

ಆದರೆ ಭಾರತದ ಬೌಲಿಂಗ್ ಪಡೆಗೆ ಪ್ರವಾಸಿ ಬಳಗದ ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ನಿಯಂತ್ರಿಸುವ ಸವಾಲೂ ಇದೆ.

ಟಾಸ್ ಗೆಲುವು ಕೂಡ ಪ್ರಮುಖ ಪಾತ್ರ ವಹಿಸಲಿದೆ. ರಾತ್ರಿ 8 ಗಂಟೆಯ ನಂತರ ಇಬ್ಬನಿ ಹನಿಗಳಿಂದಾಗಿ ಹಸಿಯಾಗುವ ಚೆಂಡಿನ ಮೇಲೆ ಹಿಡಿತ ಸಾಧಿಸುವ ಸವಾಲು ಬೌಲರ್‌ಗಳಿಗೆ ಇರುತ್ತದೆ. ಆದ್ದರಿಂದ ಟಾಸ್ ಗೆದ್ದವರು ಮೊದಲು ಫೀಲ್ಡಿಂಗ್ ಮಾಡುವ ಸಾಧ್ಯತೆಯೇ ಹೆಚ್ಚು. ಮಾರ್ಗನ್ ಬಳಗವು ಪ್ರಥಮ ಪಂದ್ಯದಲ್ಲಿ ಇದೇ ತಂತ್ರ ಅನುಸರಿಸಿ ಯಶಸ್ವಿಯಾಗಿತ್ತು.

ಪಂದ್ಯ ಆರಂಭ: ರಾತ್ರಿ 7.00
ನೇರಪ್ರಸಾರ: ಸ್ಟಾರ್ ನೆಟ್‌ವರ್ಕ್

ಮುಖ್ಯಾಂಶಗಳು

- 1–0ಯಿಂದ ಮುನ್ನಡೆ ಸಾಧಿಸಿರುವ ಇಂಗ್ಲೆಂಡ್
- ಮೊದಲ ಪಂದ್ಯದಲ್ಲಿ ಅರ್ಧಶತಕ ಗಳಿಸಿದ್ದ ಶ್ರೇಯಸ್ ಅಯ್ಯರ್
- ಎರಡನೇ ಪಂದ್ಯದಲ್ಲಿಯೂ ರೋಹಿತ್‌ಗೆ ವಿಶ್ರಾಂತಿ?

ಈ ಪಿಚ್‌ನಲ್ಲಿ ಹೇಗೆ ಬ್ಯಾಟಿಂಗ್ ಮಾಡಬೇಕು ಎಂಬುದನ್ನು ಶ್ರೇಯಸ್ ಅಯ್ಯರ್ ತೋರಿಸಿಕೊಟ್ಟಿದ್ದಾರೆ. ಫುಟ್‌ವರ್ಕ್ ಪ್ರಮುಖ ಪಾತ್ರ ವಹಿಸುತ್ತದೆ
ವಿರಾಟ್ ಕೊಹ್ಲಿ ಭಾರತ ತಂಡದ ನಾಯಕ

ಸುದ್ದಿ 2 ನಿಮಿಷ

ಉದ್ದೀಪನಾ ಮದ್ದು ಸೇವಿಸಿದ ಅಥ್ಲೀಟ್

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಟಿಕೆಟ್ ಗಿಟ್ಟಿಸಲು ಸ್ಪರ್ಧೆಯಲ್ಲಿರುವ ಇಬ್ಬರು ಅಥ್ಲೀಟ್‌ಗಳು, ಪಟಿಯಾಲದಲ್ಲಿ ನಡೆದ ಇಂಡಿಯನ್ ಗ್ರ್ಯಾನ್ ಪ್ರಿ ವೇಳೆ ನಿಷೇಧಿತ ಉದ್ದೀಪನ ಮದ್ದು ಸೇವಿಸಿದ್ದರು ಎಂದು ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕದ (ನಾಡಾ) ಮಹಾನಿರ್ದೇಶಕ ನವೀನ್ ಅಗರವಾಲ್ ಶನಿವಾರ ಬಹಿರಂಗಪಡಿಸಿದ್ದಾರೆ.

4x400 ಮೀಟರ್ ರಿಲೇಯಲ್ಲಿ ಹಲವು ಚಿನ್ನದ ಪದಕಗಳನ್ನು ಗೆದ್ದುಕೊಂಡಿರುವ ಪ್ರಮುಖ ಮಹಿಳಾ ಅಥ್ಲೀಟ್ ಒಬ್ಬರು ಇದರಲ್ಲಿ ಸೇರಿದ್ದಾರೆ ಎಂದು ತಿಳಿದುಬಂದಿದೆ. ಆದಾಗ್ಯೂ ನಾಡಾ ಅಥವಾ ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಈ ಇಬ್ಬರು ಅಥ್ಲೀಟ್‌ಗಳ ಹೆಸರನ್ನು ಬಹಿರಂಗಪಡಿಸಿಲ್ಲ.

ಈ ಅಥ್ಲೀಟ್‌ಗಳ ಮೇಲೆ ಸದ್ಯ ತಾತ್ಕಾಲಿಕ ನಿಷೇಧವನ್ನು ಹೇರಿಲ್ಲ. ಆದರೆ ಈ ಇಬ್ಬರು ನಾಡಾದ ಶಿಸ್ತು ಸಮಿತಿ (ಎಡಿಡಿಪಿ) ಎದುರು ಹಾಜರಾಗಿ ತಾವು ಉದ್ದೇಶಪೂರ್ವಕವಾಗಿ ಮದ್ದು ಸೇವಿಸಿಲ್ಲ ಎಂದು ಸಾಬೀತುಪಡಿಸಬೇಕಾಗಿದೆ.

'ಉದ್ದೀಪನ ಮದ್ದು ಸೇವಿಸಿರುವ ಅಥ್ಲೀಟ್‌ಗಳ ಹೆಸರುಗಳನ್ನು ನಾನು ಹೇಳುವುದಿಲ್ಲ. ಪಟಿಯಾಲದಲ್ಲಿ ನಡೆದ ಗ್ರ್ಯಾನ್ ಪ್ರಿ ವೇಳೆ ಪರೀಕ್ಷೆಗಾಗಿ ಅಥ್ಲೀಟ್‌ಗಳ ಮಾದರಿಯನ್ನು ಸಂಗ್ರಹಿಸಲಾಗಿತ್ತು. ಎರಡು ಪ್ರಕರಣಗಳು ಪತ್ತೆಯಾಗಿವೆ. ಅದರಾಚೆ ನಾನು ಪ್ರತಿಕ್ರಿಯಿಸಲಾರೆ' ಎಂದು ಅಗರವಾಲ್ ಹೇಳಿದ್ದಾರೆ.

ಫ್ಲಾರೆನ್ಸ್‌ಗೆ ಸಮಾಜ ಸೇವೆಯ 'ಶಿಕ್ಷೆ'

ನೈರೋಬಿ (ಎಎಫ್‌ಪಿ): ಉದ್ದೀಪನ ಮದ್ದು ಸೇವನೆಗೆ ಸಂಬಂಧಿಸಿದ ಪ್ರಮಾಣಪತ್ರಗಳನ್ನು ತಿದ್ದಿದ ಆರೋಪದಡಿ ದೂರ ಅಂತರದ ಓಟಗಾರ್ತಿ ಫ್ಲಾರೆನ್ಸ್ ಜೆಕೊಸ್ಗಿ ಚೆಪ್ರೋಸಿ ಅವರಿಗೆ ಒಂದು ವರ್ಷ ಸಮಾಜಸೇವೆಯ ಶಿಕ್ಷೆ ವಿಧಿಸಲಾಗಿದೆ. ಕೆನ್ಯಾದ ಉದ್ದೀಪನ ಮದ್ದು ನಿಷೇಧ ಸಂಸ್ಥೆ (ಎಡಿಎಕೆ) ಶನಿವಾರ ಈ ವಿಷಯವನ್ನು ತಿಳಿಸಿದೆ.

2017ರಲ್ಲಿ, ಸಾಮರ್ಥ್ಯ ವೃದ್ಧಿಗಾಗಿ ಪ್ರೆಡ್ನಿಸೊಲೊನ್ ಎಂಬ ಔಷಧವನ್ನು ಬಳಸಿದ ಆರೋಪ 36 ವರ್ಷದ ಫ್ಲಾರೆನ್ಸ್ ಮೇಲೆ ಇತ್ತು. ನಾಲ್ಕು ವರ್ಷಗಳ ವಿಚಾರಣೆಯ ನಂತರ ಈ ತೀರ್ಪು ಪ್ರಕಟವಾಗಿದ್ದು ಫ್ಲಾರೆನ್ಸ್, ಕ್ರೀಡಾ ನ್ಯಾಯಾಲಯದಿಂದ ದಂಡನೆಗೆ ಒಳಗಾದ ಕೆನ್ಯಾದ ಮೊದಲ ಅಥ್ಲೀಟ್ ಆಗಿದ್ದಾರೆ.

ಆರೋಪದಿಂದ ಮುಕ್ತಗೊಳ್ಳಲು ಅವರು ಎಲ್ಡೊರೆಟ್ ಉವಾಸಿನ್ ಗಿಶು ಆಸ್ಪತ್ರೆಯಿಂದ ನಕಲಿ ಪ್ರಮಾಣಪತ್ರಗಳನ್ನು ಪಡೆದುಕೊಂಡಿದ್ದರು. ಆದರೆ ಅಲ್ಲಿನ ಜಿಲ್ಲಾ ಆಸ್ಪತ್ರೆಯು ದಾಖಲೆಗಳು ನಕಲಿ ಎಂದೂ ಆ ಆಸ್ಪತ್ರೆಯಲ್ಲಿ ಫ್ಲಾರೆನ್ಸ್ ಚಿಕಿತ್ಸೆ ಪಡೆದುಕೊಂಡಿರಲಿಲ್ಲ ಎಂದೂ ತಿಳಿಸಿತ್ತು.

ಉದ್ದೀಪನ ಮದ್ದು ಸೇವಿಸಿದ ಆರೋಪದ ಹಿನ್ನೆಲೆಯಲ್ಲಿ ಕಳೆದ ಐದು ವರ್ಷಗಳಲ್ಲಿ 60ಕ್ಕೂ ಹೆಚ್ಚು ಅಥ್ಲೀಟ್‌ಗಳ ಮೇಲೆ ನಿಷೇಧ ಹೇರಲಾಗಿದೆ. ನಕಲಿ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿದ ಆರೋಪದಡಿ ಜೆಮಿಮಾ ಸುಮ್ಗಾಂಗ್ ಮೇಲೆ ಸುದೀರ್ಘ ಅವಧಿಯ ನಿಷೇಧ ಹೇರಲಾಗಿದೆ.

ಎಟಿಕೆ ಮೋಹನ್ ಬಾಗನ್ ತಂಡಕ್ಕೆ ನಿರಾಸೆ; ಕೊನೆಯ ಕ್ಷಣದಲ್ಲಿ ಬಿಪಿನ್ ಮಿಂಚು

ಮುಂಬೈ ಸಿಟಿಗೆ ಐಎಸ್‌ಎಲ್ ಕಿರೀಟ

ಮಡಗಾಂವ್: ಮುಂಬೈ ಸಿಟಿ ತಂಡವು ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯ 7ನೇ ಆವೃತ್ತಿಯ ಪ್ರಶಸ್ತಿ ಗೆದ್ದುಕೊಂಡಿತು.

ಫತೋರ್ಡಾ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ನಡೆದ ಫೈನಲ್‌ನಲ್ಲಿ ಮುಂಬೈ ತಂಡವು 2–1 ಗೋಲುಗಳಿಂದ ಎಟಿಕೆ ಮೋಹನ್ ಬಾಗನ್ ತಂಡದ ವಿರುದ್ಧ ಜಯಿಸಿತು.

ಎಟಿಕೆ ತಂಡದ ಡೇವಿಡ್ ವಿಲಿಯಮ್ಸ್ 18ನೇ ನಿಮಿಷದಲ್ಲಿಯೇ ತಂಡಕ್ಕೆ 1–0 ಮುನ್ನಡೆ ಒದಗಿಸಿಕೊಟ್ಟರು. ಆದರೆ ತಂಡದ ಸಂಭ್ರಮ ಹೆಚ್ಚು ಹೊತ್ತು ಉಳಿಯಲಿಲ್ಲ. ಅವರದ್ದೇ ತಂಡದ ಜೋಸ್ ಲೂಯಿಸ್ ಎಸ್ಪಾನ್ಯೊ ಅರೊಯೊ 29ನೇ ನಿಮಿಷದಲ್ಲಿ ಮುಂಬೈ ತಂಡಕ್ಕೆ ಗೋಲಿನ 'ಉಡುಗೊರೆ' ಕೊಟ್ಟರು.

ಇದರ ನಂತರದ ಆಟವು ಹೆಚ್ಚು ತುರುಸು–ಬಿರುಸಿನಿಂದ ಕೂಡಿತ್ತು. ಉಭಯ ತಂಡಗಳ ಆಟಗಾರರ ನಡುವೆ ಜಿದ್ದಾಜಿದ್ದಿ ನಡೆಯಿತು.

ಆದರೆ 90ನೇ ನಿಮಿಷದಲ್ಲಿ ಕೊನೆಗೂ ಮುಂಬೈ ಸಿಟಿಯ ಬಿಪಿನ್ ಸಿಂಗ್ ಗೋಲು ಹೊಡೆದರು. ತಂಡ ಇದೇ ಮೊದಲ ಸಲ ಚಾಂಪಿಯನ್ ಪಟ್ಟವನ್ನು ಅಲಂಕರಿಸಿಕೊಂಡಿದೆ.

ಇಗರ್ ಅಂಗುಲೊಗೆ ಚಿನ್ನದ ಬೂಟು: ಎಫ್‌ಸಿ ಗೋವಾದ ಫಾರ್ವರ್ಡ್ ಆಟಗಾರ ಇಗರ್ ಅಂಗುಲೊ ಚಿನ್ನದ ಬೂಟು ಪ್ರಶಸ್ತಿಗೆ ಆಯ್ಕೆಯಾದರೆ ಮುಂಬೈ ಸಿಟಿ ಎಫ್‌ಸಿಯ ಗೋಲ್‌ಕೀಪರ್ ಅಮರಿಂದರ್ ಸಿಂಗ್ ಚಿನ್ನದ ಕೈಗವಸು ಗಳಿಸಿದರು. ಎಟಿಕೆ ಮೋಹನ್ ಬಾಗನ್ ತಂಡದ ರಾಯ್ ಕೃಷ್ಣ ಟೂರ್ನಿಯ 'ಹೀರೊ' ಎನಿಸಿಕೊಂಡರು.

ಲೀಗ್‌ನ ವಿನ್ನಿಂಗ್ ಪಾಸ್ ಪ್ರಶಸ್ತಿ ಎಫ್‌ಸಿ ಗೋವಾದ ಆಲ್ಬರ್ಟೊ ನೊಗುವೆರಾ ಪಾಲಾಯಿತು. ನಾರ್ತ್ ಈಸ್ಟ್ ಯುನೈಟೆಡ್ ತಂಡದ ಲಾಲೆಂಗಾಮಿಯಾ ಉದಯೋನ್ಮುಖ ಆಟಗಾರ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಪ್ರಶಸ್ತಿ ಗಳಿಸಿದ ಮುಂಬೈ ಸಿಟಿ ಎಫ್‌ಸಿ ತಂಡದ ಆಟಗಾರರ ಸಂಭ್ರಮ –ಐಎಸ್‌ಎಲ್ ಮೀಡಿಯಾ ಚಿತ್ರ

ಕೋವಿಡ್ ಕಾಲದಲ್ಲಿ ನಿರಾತಂಕವಾಗಿ ನಡೆದ ಟೂರ್ನಿಯ ಏಳನೇ ಆವೃತ್ತಿ ಕ್ರೀಡಾಶಕ್ತಿಯ ಹಿರಿಮೆಯನ್ನು ತೋರಿಸಿದೆ. ಫುಟ್‌ಬಾಲ್ ಆಟದ ನಿಜವಾದ ವೈಭವ ಇಲ್ಲಿ ಮೇಳೈಸಿದೆ.
ನೀತಾ ಅಂಬಾನಿ
ಎಫ್‌ಎಸ್‌ಡಿಎಲ್ ಮುಖ್ಯಸ್ಥೆ

ಅಮೆಯ್ ರಣವಾಡೆಗೆ ತೀವ್ರ ಗಾಯ

ಫೈನಲ್ ಪಂದ್ಯದ ಮೊದಲಾರ್ಧದ ಆಟದಲ್ಲಿ ಮುಂಬೈ ತಂಡದ ಡಿಫೆಂಡರ್ ಅಮೆಯ್ ರಣ ವಾಡೆ ಗಂಭೀರವಾಗಿ ಗಾಯಗೊಂಡರು.

ಅವರನ್ನು ಕೂಡಲೇ ಅಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದೊಯ್ಯಲಾಯಿತು.

ಪಂದ್ಯದಲ್ಲಿ ಎಟಿಕೆ ಮೋಹನ್ ಬಾಗನ್ ತಂಡದ ಶುಭಾಶೀಶ್ ಬೋಸ್ ಅವರಿಂದ ಚೆಂಡನ್ನು ತಮ್ಮ ನಿಯಂತ್ರಕ್ಕೆ ಪಡೆಯಲು ರಣವಾಡೆ ತುರುಸಿನ ಪೈಪೋಟಿ ನಡೆಸಿದ್ದರು. ಈ ಸಂದರ್ಭಧಲ್ಲಿ ಇಬ್ಬರೂ ರಭಸದಿಂದ ಡಿಕ್ಕಿ ಹೊಡೆದಾಗ, ರಣವಾಡೆ ನೆಲಕ್ಕೆ ಕುಸಿದರು. ತಂಡದ ವೈದ್ಯರು ಕೂಡಲೇ ರಣವಾಡೆ ಬಳಿ ತೆರಳಿ ಪ್ರಥಮ ಚಿಕಿತ್ಸೆ ನೀಡಿದರು. ಆದರೂ ರಣವಾಡೆ ಎದ್ದು ನಿಲ್ಲಲಿಲ್ಲ. ಇದರಿಂದಾಗಿ ಕೂಡಲೇ ಅವರನ್ನು ಆಸ್ಪತ್ರೆಗೆ ರವಾನಿಸಲಾಯಿತು.

'ಅಮೆಯ್ ರಣವಾಡೆ ಅವರು ವೈದ್ಯ ಕೀಯ ನಿಗಾದಲ್ಲಿದ್ದಾರೆ. ಅವರ ಆರೋಗ್ಯ ಸ್ಥಿತಿಯ ಕುರಿತು ತಿಳಿಸಲಾಗುವುದು' ಎಂದು ಐಎಸ್‌ಎಲ್ ಟ್ವೀಟ್ ಮಾಡಿದೆ. ಈ ಸಂದರ್ಭದಲ್ಲಿ ಐದು ನಿಮಿಷಗಳ ಕಾಲ ಆಟ ಸ್ಥಗಿತವಾಗಿತ್ತು. ಮೈದಾನದಲ್ಲಿದ್ದ ಆಟಗಾರರು ಒಂದೆಡೆ ಸೇರಿ, ರಣವಾಡೆ ಬೇಗ ಗುಣಮುಖರಾಗಲಿ ಎಂದು ಪ್ರಾರ್ಥನೆ ಮಾಡಿ ಮತ್ತೆ ಆಟ ಆರಂಭಿಸಿದರು.

ದ್ವಿತೀಯಾರ್ಧದಲ್ಲಿ ರಣವಾಡೆ ಬದಲಿಗೆ ಮೊಹಮ್ಮದ್ ರಕೀಪ್ ಕಣಕ್ಕಿಳಿದರು.

ವಿಜಯ್ ಹಜಾರೆ: ಉತ್ತರ ಪ್ರದೇಶಕ್ಕೆ 'ಪೃಥ್ವಿ' ಸವಾಲು

ನವದೆಹಲಿ (ಪಿಟಿಐ): ವಿಜಯ್ ಹಜಾರೆ ಏಕದಿನ ಟ್ರೋಫಿ ಟೂರ್ನಿಯಲ್ಲಿ ನಾಲ್ಕನೇ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಮುಂಬೈ ತಂಡಕ್ಕೆ ಭಾನುವಾರ ನಡೆಯುವ ಫೈನಲ್ ಪಂದ್ಯದಲ್ಲಿ ಉತ್ತರ ಪ್ರದೇಶದ ಸವಾಲು ಎದುರಾಗಿದೆ.

ಟೂರ್ನಿಯಲ್ಲಿ ಭರ್ಜರಿ ಬ್ಯಾಟಿಂಗ್ ಮೂಲಕ ರಾಷ್ಟ್ರೀಯ ತಂಡದ ಆಯ್ಕೆಗಾರರ ಗಮನ ಸೆಳೆಯುವಲ್ಲಿ ಬಹುತೇಕ ಯಶಸ್ವಿಯಾಗಿರುವ ಮುಂಬೈ ನಾಯಕ ಪೃಥ್ವಿ ಶಾ, ತಂಡವನ್ನು ಚಾಂಪಿಯನ್ ಆಗಿಸುವ ಹಂಬಲದಲ್ಲಿದ್ದಾರೆ.

ಪೃಥ್ವಿ ಅವರ ಭರ್ಜರಿ ಬ್ಯಾಟಿಂಗ್ ನೆರಳಿನಲ್ಲಿ ಮರೆಯಾದಂತಿರುವ ಮುಂಬೈನ ಇನ್ನುಳಿದ ಬ್ಯಾಟ್ಸ್‌ಮನ್‌ಗಳೂ ತಂಡಕ್ಕೆ ಕಾಣಿಕೆ ನೀಡಬೇಕಿದೆ. ಯಶಸ್ವಿ ಜೈಸ್ವಾಲ್, ಸರ್ಫರಾಜ್ ಖಾನ್, ವಿಕೆಟ್ ಕೀಪರ್ ಆದಿತ್ಯ ತಾರೆ ಹಾಗೂ ಆಲ್‌ರೌಂಡರ್‌ಗಳಾದ ಶಮ್ಸ್ ಮಲಾನಿ, ಶಿವಂ ದುಬೆ ಮಿಂಚುವ ಅಗತ್ಯವಿದೆ.

ಅನುಭವಿ ಮಧ್ಯಮವೇಗಿ ಧವಳ್ ಕುಲಕರ್ಣಿ (ಒಟ್ಟು 14 ವಿಕೆಟ್) ಮುಂದಾಳತ್ವದ ಮುಂಬೈ ಬೌಲಿಂಗ್ ಪಡೆಯಲ್ಲಿ ತುಷಾರ್ ದೇಶಪಾಂಡೆ, ಸ್ಪಿನ್ ತ್ರಿವಳಿಗಳಾದ ಪ್ರಶಾಂತ್ ಸೋಳಂಕಿ, ತನುಷ್, ಶಮ್ಸ್ ಮಲಾನಿ ಇದ್ದಾರೆ.

ಕೋಚ್ ಜ್ಞಾನೇಂದ್ರ ಪಾಂಡೆ ಅವರ ತರಬೇತಿಯಲ್ಲಿ ಪಳಗಿರುವ ಉತ್ತರ ಪ್ರದೇಶ ತಂಡವೂ ಟೂರ್ನಿಯಲ್ಲಿ ಉತ್ತಮ ಸಾಮರ್ಥ್ಯ ತೋರಿದೆ. ತಂಡದ ಯಶಸ್ಸಿನಲ್ಲಿ ನಾಯಕ, ಯುವ ಪ್ರತಿಭೆ ಕರಣ್ ಶರ್ಮಾ ಅವರ ಪಾತ್ರ ಅಪಾರ. ಎಡಗೈ ಮಧ್ಯಮವೇಗಿ ಯಶ್ ದಯಾಳ್ ಬೌಲಿಂಗ್ ಬಲವಿದೆ. ಅಕ್ಷದೀಪ್ ನಾಥ್ (332), ನಾಯಕ ಕರಣ್ (225 ರನ್) ಹಾಗೂ ವಿಕೆಟ್ ಕೀಪರ್ ಉಪೇಂದ್ರ ಯಾದವ್ (276) ಬ್ಯಾಟಿಂಗ್‌ನಲ್ಲಿ ಬೆಳಗಿದ್ದಾರೆ. ಗುಜರಾತ್ ತಂಡವನ್ನು ಐದು ವಿಕೆಟ್‌ಗಳಿಂದ ಮಣಿಸಿ ಉತ್ತರ ಪ್ರದೇಶ ಫೈನಲ್‌ಗೆ ಕಾಲಿಟ್ಟಿದೆ.

ಟೂರ್ನಿಯಲ್ಲಿ ಮೂರನೇ ಬಾರಿ ಅದು ಪ್ರಶಸ್ತಿ ಸುತ್ತಿನಲ್ಲಿ ಸೆಣಸಲಿದೆ. ನಾಲ್ಕರ ಘಟ್ಟದಲ್ಲಿ ಮುಂಬೈ ತಂಡವು ಹಾಲಿ ಚಾಂಪಿಯನ್ ಕರ್ನಾಟಕವನ್ನು ಮಣಿಸಿತ್ತು.

ಪಂದ್ಯ ಆರಂಭ: ಬೆಳಿಗ್ಗೆ 9 ಗಂಟೆ
ಸ್ಥಳ: ಅರುಣ್ ಜೇಟ್ಲಿ ಕ್ರೀಡಾಂಗಣ, ನವದೆಹಲಿ

ಲೂಯಿಸ್ ಶತಕ: ವಿಂಡೀಸ್‌ಗೆ ಜಯ

ನಾರ್ತ್ ಪಾಯಿಂಟ್(ಎಪಿ): ಎವಿನ್ ಲೂಯಿಸ್ ಮತ್ತು ಶಾಯ್ ಹೋಪ್ ಅವರ ಶತಕದ ಜೊತೆಯಾಟದ ಬಲದಿಂದ ವೆಸ್ಟ್ ಇಂಡೀಸ್ ತಂಡವು 5 ವಿಕೆಟ್‌ಗಳಿಂದ ಶ್ರೀಲಂಕಾವನ್ನು ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಮಣಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ ತಂಡ ಗುಣತಿಲಕ (96 ರನ್) ಮತ್ತು ಚಾಂಡಿಮಲ್ (71 ರನ್) ಅವರಿಂದಾಗಿ 8ಕ್ಕೆ 273 ರನ್ ಗಳಿಸಿತು. ವಿಂಡೀಸ್ ತಂಡದ ಆರಂಭಿಕ ಜೋಡಿ ಎವಿನ್ ಲೂಯಿಸ್ (103; 121ಎ) ಮತ್ತು ಶಾಯ್ ಹೋಪ್ (84; 108ಎ) ಮೊದಲ ವಿಕೆಟ್‌ಗೆ 192 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 50 ಓವರ್‌ಗಳಲ್ಲಿ 8ಕ್ಕೆ 273 (ಗುಣತಿಲಕ 96, ಚಾಂಡಿಮಲ್ 71, ವಾಣಿಂದು ಹಸರಂಗಾ 47, ಅಲ್ಜರಿ ಜೋಸೆಫ್ 42ಕ್ಕೆ2, ಜೇಸನ್ ಮೊಹಮ್ಮದ್ 47ಕ್ಕೆ3) **ವೆಸ್ಟ್ ಇಂಡೀಸ್:** 49.4 ಓವರ್‌ಗಳಲ್ಲಿ 5ಕ್ಕೆ 274 (ಎವಿನ್ ಲೂಯಿಸ್ 103, ಶಾಯ್ ಹೋಪ್ 84; ನೂವಾನ ಪ್ರದೀಪ್ 66ಕ್ಕೆ2, ತಿಸಾರ ಪೆರೆರಾ 45ಕ್ಕೆ2) **ಫಲಿತಾಂಶ:** ವೆಸ್ಟ್ ಇಂಡೀಸ್ ತಂಡಕ್ಕೆ 5 ವಿಕೆಟ್‌ಗಳ ಜಯ.

ಸ್ನೂಕರ್: ಪಂಕಜ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನುಭವಿ ಪಂಕಜ್ ಅಡ್ವಾಣಿ ಅವರು ಬ್ರಿಜೇಶ್ ದಮಾನಿ ಅವರಿಗೆ ಸೋಲುಣಿಸುವ ಮೂಲಕ ಬೆಂಗಳೂರು ಸ್ನೂಕರ್ ಅಕಾಡೆಮಿ ಆಯೋಜಿಸಿದ್ದ ಅಖಿಲ ಭಾರತ 15 ರೆಡ್ ಓಪನ್ ಸ್ನೂಕರ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿದರು.

ಶನಿವಾರ ಇಲ್ಲಿ ನಡೆದ ಫೈನಲ್ ಹಣಾಹಣಿಯಲ್ಲಿ 23 ಬಾರಿಯ ವಿಶ್ವ ಚಾಂಪಿಯನ್ ಪಂಕಜ್ ಅವರಿಗೆ 72–13, 67–71, 61–39, 78–0, 90–34, 53–32, 83–48 ಫ್ರೇಮ್‌ಗಳಿಂದ ಗೆಲುವು ಒಲಿಯಿತು.

ಸೆಮಿಫೈನಲ್‌ನಲ್ಲಿ ಪಂಕಜ್ 68–50, 50–60, 73–19, 51–66, 62–13, 120–01, 59–63, 75–47ರಿಂದ ಸೌರವ್ ಕೊಠಾರಿ ಅವರನ್ನು ಸೋಲಿಸಿದ್ದರು. ನಾಲ್ಕರ ಘಟ್ಟದ ಮತ್ತೊಂದು ಪಂದ್ಯದಲ್ಲಿ ಬ್ರಿಜೇಶ್ ದಮಾನಿ 70–57, 61–23, 63–01, 75–40, 54–02ರಿಂದ ಯೋಗೇಶ್ ಕುಮಾರ್ ಸವಾಲು ಮೀರಿದ್ದರು.

ಪ್ರಶಸ್ತಿಯೊಂದಿಗೆ ಪಂಕಜ್ ಅಡ್ವಾಣಿ

ಮುಂಬೈ ರೇಸ್

ಅಸ್ಕೊವಾಲ್, ಅಲಮಂಡ ನಡುವೆ ಪೈಪೋಟಿಯ ಸಾಧ್ಯತೆ

ಪೂನಾವಾಲ ಬ್ರೀಡರ್ಸ್ ಮಲ್ಟಿ ಮಿಲಿಯನ್ ಮೂರು ವರ್ಷದ ಕುದುರೆಗಳಿಗಾಗಿ ಮೀಸಲಿಟ್ಟಿರುವ ದೇಶದ ಶ್ರೀಮಂತ ರೇಸ್. ₹ 1.5 ಕೋಟಿಗೂ ಹೆಚ್ಚಿನ ಬಹುಮಾನ ಮೊತ್ತದ ರೇಸ್‌ನಲ್ಲಿ ಗೆಲ್ಲುವ ಕುದುರೆಗೆ ₹ 90.65 ಲಕ್ಷ ಮೊತ್ತ ಲಭಿಸಲಿದೆ. ಬೆಂಗಳೂರಿನಲ್ಲಿ ಅಮೋಘ ಪ್ರದರ್ಶನ ನೀಡಿರುವ ಅಸ್ಕೊವಾಲ್ ಮತ್ತು ಅಲಮಂಡ ಕುದುರೆಗಳ ನಡುವೆ ಈ ರೇಸ್‌ನಲ್ಲಿ ಬಾರಿ ಪೈಪೋಟಿ ನಡೆಯುವ ಸಾಧ್ಯತೆ ಇದೆ. ಮಧ್ಯಾಹ್ನ 1.30ಕ್ಕೆ ಆರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸೂಪರ್ ಗರ್ಲ್ 2, ಪರ್ಫೆಕ್ಟೊ ಪರ್ಫೆಕ್ಟೊ 1, ಡೌಸಬೆಲ್ 9
2ನೇ ರೇಸ್: ಟ್ರೂಲಿ ಎಪಿಕ್ 6, ಲೈಟ್ನಿಂಗ್ ಬೋಲ್ಟ್ 2, ಬ್ರಾಂಕ್ಸ್ 1
3ನೇ ರೇಸ್: ನೋಬಲ್ ಕಿಂಗ್ 2, ಡೆಸರ್ಟ್ ಫೈರ್ 5, ವೇವ್ ರನ್ನರ್ 3
4ನೇ ರೇಸ್: ಮ್ಯಾಂಡೆವಿಲ್ 3, ಮಲ್ಟಿ ಸ್ಟಾರರ್ 4, ಮೆಮೋರಬಲ್ ಮೊಮೆಂಟ್ಸ್ 7
5ನೇ ರೇಸ್: ಎಗಾನ್ 2, ಎಕ್ಸ್ಟಾಟಿಕ್ ಕ್ವೀನ್ 3, ಮೆನಿಲ್ಲಿ 5
6ನೇ ರೇಸ್: ಪೆಟ್ರೋನಿಯಾ 13, ರಿವರ್ ಸಾಂಗ್ 14, ಅಲೈಸ್ಟೇರ್ 2
7ನೇ ರೇಸ್: ಅಸ್ಕೊವಾಲ್ 1, ಅಲಮಂಡ 9, ನೈಟ್ ಇನ್ ಹೂವ್ಸ್ 3
8ನೇ ರೇಸ್: ಪಾರಿಸಿಯನ್ 6, ಜೂಲಿಯೆಟ್ 5, ಅನೀಜ್ 4
9ನೇ ರೇಸ್: ಡ್ರೀಮ್ಸ್ 1, ಡಿವೈನ್ ಹಂಟ್ 2, ವೈಟ್ ರಿವರ್ 6

ಉತ್ತಮ ಬೆಟ್: ಸೂಪರ್ ಗರ್ಲ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	2,3,4	6,7,8	7,8,9